
ಗೌರಿ


ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


11 ಮೇ 2016 ಪುಟ 20 ರೂ. 15/-




ಹಾಲಂಬಿ ಸಾಮಾನ್ಯನೊಬ್ಬ ಅಸಾಮಾನ್ಯನಾದ ಬಗೆ



ಸಿಗರನಹಳ್ಳಿ ಬೂದಿ ಮುಚ್ಚಿದ ಕೆಂಡ



ಗಣಿ ಸಗಣಿ ತಿಂದದ್ದೆಷ್ಟು?



ಜ್ಯೋತಿ ಮರೀಗೌಡ ಎಂಬ ಕಪ್ಪು ಚುಕ್ಕೆ



ಹೂವಿನಂಥ ಹುಡುಗಿ ರನ್ನದಂಥ ರಾಜ

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್

ಅಳು ತರಿಸುವ ರಾಂಪನ ಜೋಕುಗಳು


ನೀವು ಕರಾವಳಿಯ ಯಾರಲ್ಲಾದರೂ "ರಾಮಪ್ಪ ಪೂಜಾರಿ ನಿಮಗೆ ಗೊತ್ತಾ?" ಎಂದು ಕೇಳಿ. "ಯಾವ ರಾಮಪ್ಪ?" ಎಂದು ನಿಮ್ಮನ್ನು ಮರು ಪ್ರಶ್ನಿಸುತ್ತಾರೆ. ಈಗ ನಿಮ್ಮ ಪ್ರಶ್ನೆಯನ್ನು ತುಸು ಬದಲಿಸಿ "ರಾಂಪ ನಿಮಗೆ ಗೊತ್ತಾ?" ಎಂದು ಕೇಳಿ. ಆತನ ಮುಖ ಒಮ್ಮೆಲೇ ಅರಳುತ್ತದೆ. ಅದಷ್ಟೇ ಸಾಕು ರಾಂಪ ಎನ್ನುವ ಹೆಸರಿನ ಜನಪ್ರಿಯತೆಯನ್ನು ಊಹಿಸಲು.


ಕರಾವಳಿಯ ಪುಟ್ಟ ಮಗುವಿನಿಂದ ಹಿಡಿದು, ಹಣ್ಣು ಹಣ್ಣು ಮುದುಕನವರೆಗೂ ರಾಂಪ ಎಂದರೆ ಗೊತ್ತು. ಇವರೆಲ್ಲರೂ ಒಂದಲ್ಲ ಒಂದು ಬಾರಿ ರಾಂಪನ ಜೋಕುಗಳನ್ನು ಹೇಳಿಕೊಂಡು ನಕ್ಕವರೇ. ಆದರೆ ಇವರಾರಿಗೂ ರಾಮಪ್ಪ ಪೂಜಾರಿ ಗೊತ್ತಿಲ್ಲ, ಎಲ್ಲಕ್ಕಿಂತ ಮುಖ್ಯವಾಗಿ ಈ ರಾಂಪ ಮತ್ತು ರಾಮಪ್ಪ ಪೂಜಾರಿ ಒಂದೇ ವ್ಯಕ್ತಿಯ ಹೆಸರುಗಳು ಎನ್ನುವುದೂ ಗೊತ್ತಿಲ್ಲ, ಇವರು ತಮಾಷೆ ಮಾಡಿ ನಕ್ಕಿರುವುದು ಸ್ವತಃ ತಮ್ಮನ್ನೇ ತಾವು ಅಣಕಿಸಿ ಎನ್ನುವುದು ಕೂಡ ಗೊತ್ತಿಲ್ಲ.

ಕರಾವಳಿಯಲ್ಲಿ ಮೇಲ್ವರ್ಣೀಯ ಮತ್ತು ಮೇಲ್ವರ್ಗದ ಜಾತಿರಾಜಕಾರಣಕ್ಕೆ ಬಲಿಯಾದ ಹತ್ತು ಹಲವು ಗಣ್ಯರಲ್ಲಿ ಈ ರಾಮಪ್ಪಣ್ಣರೂ ಒಬ್ಬರು. ಒಂದು ವೇಳೆ ರಾಮಪ್ಪ ಪೂಜಾರಿಯವರು ಮೇಲ್ವರ್ಣೀಯನಾಗಿ ಹುಟ್ಟಿದ್ದಿದ್ದರೆ ಇಂದು ಮಂಗಳೂರಿನಲ್ಲಿ ಅವರ ಹೆಸರಿನಲ್ಲೊಂದು ಸ್ಮಾರಕ ಇರುತ್ತಿತ್ತೋ ಏನೋ. ಒಂದು ಕಾಲದಲ್ಲಿ ಉಡುಪಿ ಹೊಟೇಲ್ ಮಾಡಿ ಹೆಸರು ಪಡೆದ ಅದೆಷ್ಟೋ ಮೇಲ್ಜಾತಿ ಜನರನ್ನು ಕರಾವಳಿಯ ಜನರು ನೆನಪಿಸಿಕೊಳ್ಳುತ್ತಾರೆ; ಅವರು ಯಾವ ಸಮಾಜಸೇವೆ ಮಾಡದಿದ್ದರೂ ಕೂಡ. ಆದರೆ ಹೊಟೇಲ್ ಉದ್ಯಮದಲ್ಲಿ, ಸಾಮಾಜಿಕ ಚಟುವಟಿಕೆಗಳಲ್ಲಿ, ರಾಜಕೀಯದಲ್ಲಿ ಒಬ್ಬ ಅನಕ್ಷರಸ್ಥ ಶೂದ್ರ ವರ್ಗದ ಬಿಲ್ಲವನೊಬ್ಬ ಮಾಡಿದ ಸಾಧನೆಯನ್ನು ಸಹಿಸದ ಶಕ್ತಿಗಳು ಆತನ ಒಳ್ಳೆಯತನವನ್ನು, ಸಮಾಜಸೇವೆಯನ್ನು ತಮಾಷೆಯ ವಸ್ತುವಾಗಿಸಿ, ಆತನನ್ನು ಸಂಪೂರ್ಣ ಮುಗಿಸಿ ಬಿಡಲು ಹವಣಿಸಿದವು. ಹೊಟೇಲ್ ಉದ್ಯಮದಲ್ಲಿ ಒಳ್ಳೆಯತನ, ಸಮಾಜಸೇವೆ, ಮಾನವೀಯತೆ ಇತ್ಯಾದಿ ಮೌಲ್ಯಗಳನ್ನು ಬಿತ್ತಲು ರಾಮಪ್ಪ ಪೂಜಾರಿಯವರು ನಡೆಸಿದ ವಿಫಲ ಯತ್ನದ ಕಾರಣಕ್ಕಾಗಿ ಇಂದು ಅವರು ರಾಂಪನಾಗಿ ಜನರಿಂದ ತಮಾಷೆಗೊಳಪಡಬೇಕಾಯಿತು. ಈ ಹುನ್ನಾರಗಳನ್ನು, ರಾಜಕೀಯವನ್ನು ಅರಿಯದ ಶೂದ್ರ ತರುಣರೇ ಅವರ ಹೆಸರಿನಲ್ಲಿ ಜೋಕುಗಳನ್ನು ಹೇಳಿಕೊಂಡು ಇಂದು ಮೇಲ್ವರ್ಗದ ಜನರನ್ನು ನಗಿಸುತ್ತಿದ್ದಾರೆ.

ರಾಮಪ್ಪ ಪೂಜಾರಿಯವರನ್ನು ಮೇಲೆತ್ತಿದ್ದು ಯಾವ ಮೀಸಲಾತಿಯೂ ಅಲ್ಲ, ಮೇಲ್ವರ್ಗದ ಜನರ ಅನುಕಂಪವೂ ಅಲ್ಲ. ನಾಲ್ಕಕ್ಷರವೂ ಗೊತ್ತಿಲ್ಲದ ರಾಮಪ್ಪ ಪೂಜಾರಿ ಎರಡು ದೊಡ್ಡ ಮಾಂಸಾಹಾರಿ ಹೊಟೇಲ್‌ಗಳನ್ನು ಆರಂಭಿಸಿ ಮಂಗಳೂರಿನ ಹೊಟೇಲ್ ಉದ್ಯಮವನ್ನು ಅಲ್ಲಾಡಿಸಿದವರು.

ರಾಮಪ್ಪನವರು ಹುಟ್ಟಿದ್ದು 1925ರಲ್ಲಿ, ಸೋಂಪ ಪೂಜಾರಿ ಮತ್ತು ದುಗ್ಗೆ ಪೂಜಾರಿಯವರ ಮಗನಾಗಿ. ಆಗ ದಕ್ಷಿಣ ಕನ್ನಡದಲ್ಲಿ ಬಿಲ್ಲವ ಸಮುದಾಯ ಅದೆಷ್ಟು ಕೆಟ್ಟ ಪರಿಸ್ಥಿತಿಯಲ್ಲಿತ್ತೆಂದರೆ, ಅಕ್ಷರವೆನ್ನುವುದು ಅವರ ಪಾಲಿಗೆ ಕನಸಾಗಿತ್ತು. ಊರಿಗೆ ಉಣಿಸಲು ಹೊಟೇಲು ಇಡುವುದಿರಲಿ, ಒಂದು ಹೊತ್ತಿನ ಊಟ ಸಿಕ್ಕಿದರೆ ಅದವರ ಭಾಗ್ಯವಾಗಿತ್ತು. ಮನೆಯ ಪರಿಸ್ಥಿತಿ ತೀರ ಕೆಟ್ಟಾಗ ರಾಮಪ್ಪನವರು ತಮ್ಮ 14ನೇ ವಯಸ್ಸಿನಲ್ಲಿ ಮನೆಬಿಟ್ಟು ಓಡಿ ಮಂಗಳೂರಿಗೆ ಬಂದರು. ಕಂಕನಾಡಿಯ ರೆಸ್ಟೋರೆಂಟೊಂದರಲ್ಲಿ ಲೋಟ ತೊಳೆಯುವ ಮೂಲಕ ಹೊಟೇಲ್ ಬದುಕನ್ನು ಆರಂಭಿಸಿದರು. ಅಲ್ಲಿಂದ ಅವರ ಬದುಕು ಚಿಗುರತೊಡಗಿತು. ತನ್ನ ಶ್ರಮದಿಂದಲೇ ಹೊಟೇಲ್ ಮಾಲಕರ ಹೃದಯಗೆದ್ದ ರಾಮಪ್ಪ ವರ್ಷಗಳ ಬಳಿಕ ತನ್ನದೇ ಆದ ಒಂದು ಹೊಟೇಲನ್ನು ಕಂಕನಾಡಿಯಲ್ಲಿ ಆರಂಭಿಸಿದರು. ಆಮೇಲೆ ಅದು 'ಕಂಕನಾಡಿ ರೆಸ್ಟೋರೆಂಟ್' ಎಂದೇ ಹೆಸರು ಪಡೆದು ಜನಪ್ರಿಯವಾಯಿತು. ಬಳಿಕ





ಹಂಪನಕಟ್ಟೆಯಲ್ಲಿ 'ರಾಜ್‌ಕಮಲ್' ಎಂಬ ಹೊಟೇಲ್ ಆರಂಭಿಸಿದರು. ಅವರು ಸುತ್ತಲಿನ ಹೊಟೇಲ್ ಉದ್ಯಮಿಗಳು ಅಚ್ಚರಿ ಪಡೆಯುವ ವೇಗದಲ್ಲಿ ಬೆಳೆಯತೊಡಗಿದರು. ಜಪ್ಪಿನ ಮೊಗರಿನಲ್ಲಿ ಬೃಹತ್ ಬಂಗಲೆಯನ್ನು ಕಟ್ಟಿದರು. ಮಾತ್ರವಲ್ಲ ಪರಿಸರದಲ್ಲಿ ಮೊತ್ತ ಮೊದಲು ವಿದ್ಯುತ್, ದೂರವಾಣಿ ಭಾಗ್ಯ ಕಂಡ ಮನೆ ಅವರದಾಗಿತ್ತು.

ಹಸಿವಿನ ಕುರಿತು ಅವರಿಗೆ ಚೆನ್ನಾಗಿ ಪರಿಚಯವಿತ್ತು. ಆದುದರಿಂದಲೇ ಅವರಿಗೆ ಹೊಟೇಲ್ ಎನ್ನುವುದು ಬರೇ ಒಂದು ದಂಧೆಯಾಗಿರಲಿಲ್ಲ. ಮಂಗಳೂರಿನ ಹೊಟೇಲ್ ಉದ್ಯಮದಲ್ಲೇ ಮೊತ್ತ ಮೊದಲ ಬಾರಿಗೆ '5 ರೂಪಾಯಿಗೆ ಹೊಟ್ಟೆ ತುಂಬಾ ಊಟ' ಎಂದು ಘೋಷಿಸಿದರು. ಯಾವನೇ ಬಂದು 5 ರೂ. ಕೊಟ್ಟು ಎಷ್ಟು ಬೇಕಾದರೂ ಉಣ್ಣಬಹುದು. ಎಕ್ಸ್‌ಟ್ರಾ ಊಟಕ್ಕೆ ಚಾರ್ಜಿಲ್ಲ ಎಂಬ ನಿಯಮವನ್ನು ತಮ್ಮ ಹೊಟೇಲ್‌ನಲ್ಲಿ ಜಾರಿಗೆ ತಂದರು. ಇದು ಕರಾವಳಿಯಾದ್ಯಂತ ಭಾರೀ ಜನಪ್ರಿಯತೆಯನ್ನು ಪಡೆಯಿತು. ಇದೇ ಸಂದರ್ಭದಲ್ಲಿ ಊಟ ಮಾಡಿದವರು ಹೊಟ್ಟೆ ತುಂಬಾ ಉಂಡು ಅನ್ನವನ್ನು ತಟ್ಟೆಯಲ್ಲಿ ಉಳಿಸಿ ಹೋಗುವುದನ್ನು ರಾಮಪ್ಪರು ಗಮನಿಸಿದರು. ಇದನ್ನು ಸಹಿಸದ ಅವರು 'ತಟ್ಟೆಯಲ್ಲಿ ಊಟ ಬಿಟ್ಟರೆ 50 ಪೈಸೆ ದಂಡ' ಎಂಬ ನೋಟಿಸನ್ನು ಹೊಟೇಲ್‌ನೊಳಗೆ ಹಾಕಿದರು. ಮಂಗಳೂರಿಗೆ ಬರುವ ಹಳ್ಳಿಯ, ದೂರದ ಕೇರಳದ ಜನರಿಗೆ ರಾಮಪ್ಪ ಪೂಜಾರಿಯವರ ಹೊಟೇಲ್ ಅಚ್ಚುಮೆಚ್ಚಿನ ಹೊಟೇಲಾಗಿತ್ತು. ತನ್ನ ಹೊಟೇಲ್‌ನಲ್ಲಿ ಬಡವರಿಗೆ ರಿಯಾಯಿತಿಯಲ್ಲಿ ಅನ್ನವನ್ನು ನೀಡುತ್ತಿದ್ದರು. ಸ್ಥಳೀಯ ಮಿಲಾಗ್ರಿಸ್ ಶಾಲೆಯ ವಿದ್ಯಾರ್ಥಿಗಳಿಗೂ ಊಟದಲ್ಲಿ ರಿಯಾಯಿತಿ ಇರುತ್ತಿತ್ತು. ಮಕ್ಕಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ರಾಮಪ್ಪ ಪೂಜಾರಿ ಮಕ್ಕಳ ದಿನಾಚರಣೆ, ಗಣರಾಜ್ಯೋತ್ಸವ ಸಂದರ್ಭಗಳಲ್ಲಿ ಸಿಹಿ ಹಂಚುವುದನ್ನು ಒಂದು ಸಂಪ್ರದಾಯವನ್ನಾಗಿ ಮಾಡಿಕೊಂಡಿದ್ದರು. ಶಾಲೆಗಳಿಗೆ ಅಪಾರ ಧನಸಹಾಯವನ್ನು ಮಾಡುತ್ತಿದ್ದರು. ಗೋಕರ್ಣನಾಥ ಶಾಲೆಗೆ ಆ ಕಾಲದಲ್ಲೇ ಒಂದು ಲಕ್ಷ ರೂಪಾಯಿ ದಾನವಾಗಿ ನೀಡಿದ್ದರು. ಕೋಳಿಅಂಕ, ಕಂಬಳ ಇವರ ಪ್ರೀತಿಯ ತುಳು ಕ್ರೀಡೆಗಳಾಗಿದ್ದವು. ಇದಕ್ಕಾಗಿ ಅಪಾರ ಹಣ ವೆಚ್ಚ ಮಾಡುತ್ತಿದ್ದರು. ನೇಮ, ತುಳು ದೈವಗಳಿಗಾಗಿಯೂ ಅಪಾರ ಹಣವನ್ನು ಚೆಲ್ಲುತ್ತಿದ್ದರು.

ರಾಮಪ್ಪ ಪೂಜಾರಿ ಮಂಗಳೂರಿನ ಉಳಿದ ಉಡುಪಿ ಹೊಟೇಲ್ ಸೇರಿದಂತೆ ಗಣ್ಯ ಹೊಟೇಲ್ ಉದ್ಯಮಿಗಳಿಗೆ ತಲೆನೋವಾಗಿ ಪರಿಣಮಿಸಿತು. ಇಂತಹ ಸಂದರ್ಭದಲ್ಲೇ ಹೊಟೇಲ್‌ನಲ್ಲಿ 5 ರೂಪಾಯಿಗೆ ಹೊಟ್ಟೆ ತುಂಬಾ ಊಟ, ಅನ್ನ ಬಿಟ್ಟರೆ ಅದಕ್ಕೆ ದಂಡ ಇತ್ಯಾದಿ ಕ್ರಮವನ್ನು ತಮಾಷೆ ಮಾಡಲು ಆರಂಭಿಸಿದರು. ರಾಮಪ್ಪ ಪೂಜಾರಿ ಅದೆಷ್ಟು ದೊಡ್ಡ ಉದ್ಯಮಿಯಾಗಿ ಬೆಳೆದಿದ್ದರೂ, ಅವರ ಅನಕ್ಷರತೆ ಮತ್ತು ಜಾತಿ ತಮಾಷೆಗೆ ವಸ್ತುವಾಯಿತು. ಅವರ ಒಳ್ಳೆಯತನ, ಮಾನವೀಯತೆಗಳೆಲ್ಲ ಇವರಿಗೆ ಹಾಸ್ಯಾಸ್ಪದ ಎನ್ನಿಸತೊಡಗಿತ್ತು. ಹೀಗೆ ರಾಮಪ್ಪ ಪೂಜಾರಿಯನ್ನು ಮಟ್ಟ ಹಾಕಲು ಒಂದು ಸಂಚಿನ ರೂಪದಲ್ಲಿಯೇ ಅವರ ವಿರುದ್ಧ ಜೋಕುಗಳು ಹುಟ್ಟಿಕೊಂಡವು. ಅವು ಎಷ್ಟು ವ್ಯಾಪಕವಾಗಿ ಹರಡತೊಡಗಿದವು ಎಂದರೆ, ಕೆಲ ಜನರು ರಾಮಪ್ಪ ಪೂಜಾರಿಯವರ ಹೊಟೇಲ್‌ನಲ್ಲೇ ಕುಳಿತು, ಅವರ ರಿಯಾಯಿತಿ ಊಟವನ್ನೇ ಉಣ್ಣುತ್ತಾ ಅವರ ವಿರುದ್ಧ ಜೋಕುಗಳನ್ನು ಹೇಳತೊಡಗಿದರು. ಆದರೆ ಇದಕ್ಕೆ ರಾಮಪ್ಪ ಪೂಜಾರಿ ಮಾತ್ರ ಕಿವುಡಾಗಿದ್ದರು. ಪತ್ರಿಕೆಯೊಂದು ಅವರ ಕುರಿತ ಜೋಕುಗಳನ್ನು ಪ್ರತಿ ವಾರ ತನ್ನ ಪತ್ರಿಕೆಯಲ್ಲಿ ಛಾಪಿಸತೊಡಗಿತ್ತು; ಆದರೆ ರಾಮಪ್ಪ ಆ ಕಡೆ ತಲೆಯೆತ್ತಿಯೂ ನೋಡಲಿಲ್ಲ. ಈ ದಾಳಿ ಅದೆಷ್ಟು ತೀವ್ರವಾಗಿತ್ತೆಂದರೆ, ಅವರ ಪತ್ನಿಯ ಮೇಲೂ ಜೋಕುಗಳು ಹರಿದಾಡತೊಡಗಿದವು. ಆದರೂ ಈ ಕುರಿತು ಆಕ್ರೋಶದ ಮಾತನ್ನು ಆಡಿದವರಲ್ಲ ರಾಮಪ್ಪ ಪೂಜಾರಿ. "ಅಕ್ಲೆನ್ ದೇವೆರ್ ತೂಪೆರ್" (ಅವರನ್ನು ದೇವರು ನೋಡಿಕೊಳ್ಳುತ್ತಾರೆ) ಎಂದಷ್ಟೇ ಪ್ರತಿಕ್ರಿಯಿಸುತ್ತಿದ್ದರು.

ಇಂದು ಬಿಲ್ಲವ ನಾಯಕ, ರಾಷ್ಟ್ರಮಟ್ಟದ ರಾಜಕಾರಣಿ ಎಂದು ಗುರುತಿಸಿಕೊಳ್ಳುವ ಮಾಜಿ ಸಚಿವ ಜನಾರ್ದನ ಪೂಜಾರಿ ಈ ಮಟ್ಟಕ್ಕೆ ಏರಿದ್ದರೆ ಅದರ ಹಿಂದೆ ರಾಮಪ್ಪ ಪೂಜಾರಿಯವರಿದ್ದಾರೆ. ಜನಾರ್ದನ ಪೂಜಾರಿಯವರ ಆರಂಭದ ರಾಜಕೀಯ ನಡೆಗಳಲ್ಲಿ ಜೊತೆ ನೀಡಿದವರು ರಾಮಪ್ಪ ಪೂಜಾರಿ. ಮುಂದೆ ಜನಾರ್ದನ ಪೂಜಾರಿ ಕೇಂದ್ರದಲ್ಲಿ ಸಚಿವರಾದರು. ಅನಕ್ಷರಸ್ಥ ಶೂದ್ರ ರಾಮಪ್ಪ ಪೂಜಾರಿ ಈ ಮೂಲಕ ತನ್ನ ರಾಜಕೀಯ ವರ್ಚಸ್ಸನ್ನು ದಿಲ್ಲಿಯವರೆಗೂ ಬೆಳೆಸಿದರು. ತಮಾಷೆಯೆಂದರೆ, ಜನಾರ್ದನ

ಪೂಜಾರಿ ರಾಜಕೀಯವಾಗಿ ರಾಷ್ಟ್ರಮಟ್ಟದಲ್ಲಿ ಬೆಳೆ
ಮೇಲ್ವರ್ಗದ ಜನ ರಾಮಪ್ಪ ಪೂಜಾರಿಯ
ಜನಾರ್ದನ ಪೂಜಾರಿಯ ಹೆಸರನ್ನೂ ಜೋಕಿನ
ತಮಾಷೆ ಮಾಡತೊಡಗಿದರು.

ಕರಾವಳಿಯ ರಾಂಪನ ಹೆಚ್ಚಿನ ಜೋಕುಗಳಲ್ಲಿ
ಗೆಳೆಯ ಜನಾರ್ದನ ಪೂಜಾರಿಯವರೂ ಬರುತ್ತಾ
ಮೊಯ್ಲಿ, ಗುಂಡೂರಾವ್ ಸೇರಿದಂತೆ ಹಲವು
ನಾಯಕರು ರಾಮಪ್ಪ ಪೂಜಾರಿಯವರಿಗೆ ಹತ್ತಿರ
ಬಂಗಾರಪ್ಪ ಹತ್ತಿರವಾದಾಗ ಜನಾರ್ದನ
ದೂರವಾದರು. ಆದರೂ ಹೆಚ್ಚಿನ ರಾಜಕೀಯ
ರಾಮಪ್ಪ ಪೂಜಾರಿಯ ಆರ್ಥಿಕ ಬೆಂಬಲದೊಂದಿ
ಬಂದಿದ್ದರು.

ಕರಾವಳಿಯಲ್ಲಿ 'ಮುಂಗಾರು' ಪತ್ರಿಕೆ ಹುಟ್ಟಿ
ಅದರ ಬೆನ್ನಿಗೆ ಬಲವಾಗಿ ನಿಂತವರು ರಾ
ಉದ್ಯಮಿಗಳನ್ನೂ, ರಾಜಕಾರಣಿಗಳನ್ನೂ
ದೂರವಿಡುತ್ತಲೇ ಬಂದಿದ್ದ ವಡ್ಡರ್ಸೆ ರಘುರಾಮ
ರಾಮಪ್ಪಣ್ಣರಿಗೆ ಮಾತ್ರ ಹತ್ತಿರದ ವ್ಯಕ್ತಿಯಾಗಿದ್ದರ
ರಾಮಪ್ಪಣ್ಣರ ಮನೆಯಲ್ಲಿ ನಡೆದ ಭೂತದ
ಸುದ್ದಿಯೊಂದು 'ಮುಂಗಾರು' ಪತ್ರಿಕೆಯ ಸಂಪಾ
ಬಳಗದೊಳಗೆ ಬಿರುಕು ತಂದಿತು ಎನ್ನು
ಪತ್ರಕರ್ತರೊಬ್ಬರು ನೆನಪಿಸಿಕೊಳ್ಳುತ್ತಾರೆ.

ಇಂತಹ ರಾಮಪ್ಪ ಪೂಜಾರಿಯವರಿಗೆ ಒ
ಹೆಣ್ಣು ಮಗಳಿದ್ದಳು. ಐದನೇ ವರ್ಷಕ್ಕೆ ಆ
ಕಾಯಿಲೆಯಿಂದ ತೀರಿಹೋಯಿತು. ಮುಂದೆ ಮ
ತಮ್ಮ ನೆಂಟರಿಷ್ಟರನ್ನು, ಅನಾಥರನ್ನು ಮಕ್ಕಳೆಂದು
ಸಾಕಿದರು. ಮಕ್ಕಳೇ ಇಲ್ಲದಿದ್ದರೂ ಅವರ ಮನೆ
ಕುಟುಂಬವಾಗಿತ್ತು. ಸುಮಾರು 70 ಜನರು ಆ ಕು
ಸದಸ್ಯರಾಗಿದ್ದರು. ಬಡವರನ್ನು ಹುಡುಕಿ ಅವರನ್ನು
ಕರೆದು ಊಟ ಹಾಕುತ್ತಿದ್ದರು. ಇಂತಹ ಬಿಲ್ಲವ ನಾ
ಬಿಲ್ಲವರೇ ಮರೆತುಬಿಟ್ಟಿದ್ದಾರೆ. ಬಿಲ್ಲವ ತರುಣರೇ
ಜೋಕುಗಳನ್ನು ಹಬ್ಬಿಸಿದ್ದಾರೆ. ತಾವು ತ
ಅಣಕಿಸುತ್ತಿದ್ದೇವೆ ಎನ್ನುವ ಸಂಗತಿ ಅವರಿಗೆ ತಿಳ


ಇಂದು ರಾಮಪ್ಪ ಪೂಜಾರಿ ನಮ್ಮ ನೆನ
ಅಳಿದುಹೋಗುತ್ತಿದ್ದಾರೆ. ಆದರೆ ರಾಂಪ ಜೀವಂತವಾ
ಇದಲ್ಲವೇ ದುರಂತ!

ಈ ಕಾರಣಕ್ಕಾಗಿಯೇ, ರಾಂಪನ ಜೋಕು
ಕೇಳುವಾಗ ನನಗೆ ಸಿಟ್ಟು ಉಕ್ಕಿ ಬರುತ್ತದೆ. ಒಬ್ಬ
ಅನಕ್ಷರಸ್ಥ ಮಾನವೀಯ ವ್ಯಕ್ತಿಯನ್ನು ನೆನೆದು ಯ
ಕಣ್ಣಾಲಿ ತುಂಬುತ್ತದೆ.

- ದಿತೇಶ್ ಪೂಜಾರಿ, ಮಂ



ಹಾಲಂಬಿ: ಸಾಮಾನ್ಯನೊಬ್ಬ ಅಸಾಮಾನ್ಯನಾದ ಬ



ದಿನಾಂಕ 24.04.2016ರ ಬೆಳಗ್ಗೆ 8.00 ಗಂಟೆಯಹೊತ್ತಿಗೆ ಪ್ರೊ.ಕೆ. ಮರುಳಸಿದ್ಧಪ್ಪನವರು ಫೋನ್ ಮಾಡಿ ಪುಂಡಲೀಕ ಹಾಲಂಬಿ ಇನ್ನಿಲ್ಲವೆಂದು ತಿಳಿಸಿದಾಗ ಎದೆಯಲ್ಲಿ ತೀವ್ರ ನೋವಾಗಿ ತಕ್ಷಣ ಮಾತು ಹೊರಡದೆ ಕಣ್ಣೀರು ಬಸಿಯತೊಡಗಿತು. ಕಳೆದ ಕೆಲವರ್ಷಗಳಿಂದ ಅವರ ಆರೋಗ್ಯ ಹದಗೆಟ್ಟಿದ್ದು, ಅದನ್ನು ಅವರು ಲೆಕ್ಕಿಸದೇ ಕೆಲಸ ಮಾಡಿದ್ದು ಎಲ್ಲ ನೆನಪಾಗಿ ದುಃಖ ಉಮ್ಮಳಿಸಿ ಬಂತು. ತಕ್ಷಣ ಬನ್ನೇರುಘಟ್ಟ ರಸ್ತೆಯಲ್ಲಿರುವ ಫೋರ್ಟಿಸ್ ಆಸ್ಪತ್ರೆಗೆ ಧಾವಿಸಿ, ಅಲ್ಲಿ ಅವರ ಒಂದಿಷ್ಟು ಅಭಿಮಾನಿಗಳ ದಯನೀಯ ಮುಖ ನೋಡಿ, ಪಾರ್ಥಿವ ಶರೀರವಿದ್ದೆಡೆ ನಡೆದೆ. ಆಸ್ಪತ್ರೆಯ ನಾಲ್ಕೈದು ಸಿಬ್ಬಂದಿಯ ಸುತ್ತುವರೆಸಿಕೊಂಡು ಮೇಜಿನ ಮೇಲೆ ಅಂಗಾತವಾಗಿ ಮಲಗಿ ಚಿರನಿದ್ರೆಗೆ ಜಾರಿದ, ಆ ಬರಿಮೈ ದೇಹ ನೋಡುತ್ತಲೆ ಏನೀ ವಿಚಿತ್ರಭಾವ ನನ್ನನ್ನು ಆವರಿಸಿದೆ ಎಂದು ನನಗೇ ಅನಿಸತೊಡಗಿತು, **"The most intimate relationships are far beyond & above the scope of the law"** ಎಂಬ ಮಾತಿನ ಋಜು ಅರ್ಥದ ಅರಿವಾಯಿತು. ಯಾವ ಜನ್ಮದ ಋಣಾನು ಬಂಧವೊ ಈ ಮನುಷ್ಯ ನನಗೆ ಬಂಧುವಿನಂತೆ ಒದಗಿ ಬಂದನಲ್ಲಾ!

ಇದು ಕೇವಲ ನನ್ನೊಬ್ಬನ ಮಾತಲ್ಲ. ಪುಂಡಲೀಕ ಹಾಲಂಬಿ ಯಾರನ್ನೇ ಆಗಲಿ ಒಮ್ಮೆ ಹಚ್ಚಿಕೊಂಡು ಬಿಟ್ಟರೆ ಅವರು ಮೆಚ್ಚುವಂತೆಯೇ ಒಂದು ಕರುಳಬಳ್ಳಿಯ ಸಂಬಂಧ ಬಂಧಿಸಿಕೊಂಡು ಬಿಡುತ್ತದೆ. ನನಗಾಗಿ ಅವರು ಮಾಡಿದ ಕೆಲಸ ಒಂದು ಕಡೆಯಾದರೆ ಕನ್ನಡಕ್ಕಾಗಿ ಅವರು ಮಾಡಿದ ತ್ಯಾಗ, ಹೋರಾಟ ಮತ್ತೊಂದು ಕಡೆ. ಆ ಕೃಶ ದೇಹದಲ್ಲಿ ಅಡಗಿಕೊಂಡು ಪ್ರಸಂಗ ಬಂದಾಗ ಹೊರಬೀಳುವ ಕಂಚಿನ ಕಂಠದ ಕನ್ನಡಪರ ಧ್ವನಿ ಬಹುಕಾಲ ನಮ್ಮೆಲ್ಲರ ಕಿವಿಯಲ್ಲಿ ಗುನುಗುಣಿಸುತ್ತಲೇ ಇರುತ್ತದೆ. ಆರೋಗ್ಯ ಸರಿಯಿಲ್ಲ, ಸ್ವಲ್ಪ ಕಾಳಜಿ ತೆಗೆದುಕೊಳ್ಳಿ ಎಂಬ ಅವರ ಮನೆಯವರ, ನನ್ನ ಹಾಗೂ ನನ್ನಂತ ಮಿತ್ರನ ಸಲಹೆಗೆ ಕ್ಯಾರೆ ಅನ್ನದೆ ದುಡಿದ ಪರಿಣಾಮವೊ ಏನೋ ಇಷ್ಟು ಬೇಗನೆ ಜೀವನ ಪಯಣ ಮುಗಿಸಿಬಿಟ್ಟರು.

ಹಾಲಂಬಿ ಏನನ್ನಾದರೂ ಹೇಳಿದರೆ ಆ ಮೊದಲು ಅದನ್ನು ಮಾಡಿ ತೋರಿಸುವವರು. ಇಂದು ಕೇವಲ ಸಾರ್ವಜನಿಕರನ್ನು ಮೆಚ್ಚಿಸಲು ಆಡುವ-ಪ್ರಾಮಾಣಿಕತೆ, ಜಾತ್ಯತೀತತೆ, ಅಂತರಂಗ ಶುದ್ಧಿ ಇತ್ಯಾದಿ ಮಾತುಗಳು, ಹಾಲಂಬಿ ಅನುಷ್ಠಾನ ಮಾಡಿತೋರಿಸಿದ ಸಂಗತಿಗಳೆ. ಕಸಾಪ ಅಧ್ಯಕ್ಷರಾಗಿ, ಕೋಶಾಧ್ಯಕ್ಷರಾಗಿ, ಗೌರವ ಕಾರ್ಯದರ್ಶಿಯಾಗಿ, ಇದೀಗ ನಿಕಟಪೂರ್ವ ಅಧ್ಯಕ್ಷನಾಚೆಯಿಂದಾಗಿ ಕಾರ್ಯಕಾರಿ ಸದಸ್ಯರಾಗಿ ಅವರು ತೋರಿದ ಕನ್ನಡಪ್ರೇಮ, ಯಾವ ಗೌರವ ಧನವನ್ನೂ ಪಡೆಯದೆ ಮಾಡಿದ ನಿಷ್ಕ್ರಿಯ ಸೇವೆ, ಸಾಮಾಜಿಕ ನ್ಯಾಯ ಪರಿಪಾಲನೆ, ಪಾರದರ್ಶಕ ಆಡಳಿತ- ಮುಂದೆ ಬಂದ/ಬರುವ ನನ್ನಂತಹವರಿಗೆ ಮಾದರಿಯೇ ಸರಿ. ತಾವು ನಂಬಿದ ತತ್ವ ಸಿದ್ಧಾಂತಗಳಿಗೆ ಕಟಿಬದ್ಧರಾಗಿ

ಅದಕ್ಕಾಗಿ ಯಾವ ಹೋರಾಟ ಅಥವಾ ಪ್ರಸಂಗ ಬ
ಜಗಳಕ್ಕೂ ಅವರು ಸದಾ ಸನ್ನದ್ಧರಾಗಿರುತ್ತಿದ್ದರು. ಹ
ಜಗಳವೆಂಬುದು ಆಗ ಸಾತ್ವಿಕ ಜಗಳ ಆಗು
ಕೋಪವೆಂಬುದು ಸರಿಯಾದ ಅಭಿವ್ಯಕ್ತಿ ಎನಿಸು
ಇದು ಹಾಲಂಬಿಯವರ ವೈಶಿಷ್ಟ್ಯವೇ ಆಗಿತ್ತು.

ಇತ್ತೀಚೆಗೆ ಅವರಿಗೆ 'ಸಹಕಾರ ರತ್ನ' ಪ್ರಶಸ್ತಿ
ಬಂದಿತ್ತು. ಹೋಟೆಲ್ ಉದ್ದಿಮೆದಾರರ ಸಹಕಾರ ಬ್ಯಾ
ಅಧ್ಯಕ್ಷರಾಗಿ ಇಪ್ಪತ್ತು ವರ್ಷಗಳ ಕಾಲ ಅನುಪಮ
ಪರಿಗಣಿಸಿ ಸಹಕಾರ ಮಹಾಮಂಡಳವು ನೀ
ರಾಜ್ಯಮಟ್ಟದ ಮನ್ನಣೆಯಿದು. ಅವರು ಕೇವಲ ಆ
ಅಲ್ಲ, ಕನ್ನಡದ ಕರ್ನಾಟಕದ ಅನರ್ಘ್ಯ ರತ್ನವೂ ಹ

ಸಾಮಾನ್ಯ ಹಿನ್ನೆಲೆಯಿಂದ ಬಂದು, ತಮ್ಮ
ಕೆಲಸದಲ್ಲಿನ ಶ್ರದ್ಧೆ, ಪ್ರಾಮಾಣಿಕ ಮನೋ
ತರತಮವಿಲ್ಲದ ವಿಶಾಲನಿಲುವು, ಹೋರಾಟದ
ವಿಶೇಷ ಗುಣಗಳಿಂದಲೇ ಅಸಾಮಾನ್ಯ ಸಾಧನೆಗೈದ
ಹಿರಿಯಣ್ಣನ ನೆನೆದು ಈ ಅಶ್ರುತರ್ಪಣ, ಈ ನುಡಿನ

■ ಡಾ. ಮನು ಬಳಿಗಾ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿ

ಕನ್ನಡದ ನಮ್ರ ಸೇವಕನಿಗೆ ವಿದಾಯ



• ಗೌರಿ ಲಂಕೇಶ್

editorlankesh@gmail.com

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಪುಂಡಲೀಕ ಹಾಲಂಬಿ ಇಹಲೋಕವನ್ನು ತೊರೆದು ಹೋಗಿದ್ದಾರೆ. ಗಟ್ಟಿದನಿಯ, ಗಟ್ಟಿ ಮನಸ್ಸಿನ ಹಾಲಂಬಿ ಅವರು ಇಷ್ಟು ಬೇಗನೆ ಹೋಗುತ್ತಾರೆಂಬ ನಿರೀಕ್ಷೆ ಯಾರಿಗೂ ಇರಲಿಲ್ಲ, ಸ್ವತಃ ಹಾಲಂಬಿ ಅವರಿಗೂ ಕೂಡ. ಯಾಕೆಂದರೆ ಹೃದಯದ ಶಸ್ತ್ರಚಿಕಿತ್ಸೆ ನಂತರ ಅವರು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಳ್ಳಬೇಕೆಂಬ ಆಶೆ ಹೊಂದಿದ್ದರು.

ಹಾಲಂಬಿ ಅವರು ಅಪ್ಪನ ಶಿಷ್ಯರಾಗಿದ್ದವರು. ಅವರು ಒಮ್ಮೆ ನನಗೆ ಹೇಳಿದಂತೆ ನಾವು ಗೋವಿಂದಪ್ಪ ರಸ್ತೆಯಲ್ಲಿ ವಾಸಿಸುತ್ತಿದ್ದಾಗ ಹಾಲಂಬಿ ಅವರು ಹತ್ತಿರದ ಹೋಟೇಲ್ ಒಂದರಲ್ಲಿ ಕೆಲಸ ಮಾಡುತ್ತಿದ್ದರಂತೆ. ಆ ಹೋಟೇಲ್‌ಗೆ ಅಪ್ಪ ಮತ್ತು ಇತರೆ ಸಾಹಿತಿಗಳು ಕಾಫಿ ಕುಡಿಯಲೆಂದು ಹೋಗುತ್ತಿದ್ದರಿಂದ ಅಲ್ಲಿ ಅವರಿಗೆ ಸಾಹಿತ್ಯ ಲೋಕದ ಜನರ ಪರಿಚಯವಾಗಿ ಸಾಹಿತ್ಯದ ಬಗ್ಗೆ ಆಸಕ್ತಿ ಮೂಡಿತಂತೆ.

ಆದರೆ ನನಗೆ ಹಾಲಂಬಿ ಅವರ ಪರಿಚಯವಾದದ್ದು ನಾನು ಪತ್ರಿಕೆಗೆ ಬಂದ ನಂತರವೇ. ಒಮ್ಮೆ ಅವರ ಬಗ್ಗೆ ಪತ್ರಿಕೆಯಲ್ಲಿ ಟೀಕೆಯೊಂದು ಪ್ರಕಟಗೊಂಡಿತ್ತು. ಒಂದು ದಿನ ಅದ್ಯಾರೋ ದೊಡ್ಡ ಗಂಟಲಿನಲ್ಲಿ "ಗೌರಿ ಎಲ್ಲಿ ಕೂರುತ್ತಾರೆ" ಎಂದು ಕೇಳಿದ್ದು ಕೆಳಗಿನಿಂದಲೇ ಮೊದಲನೆ ಮಹಡಿಯಲ್ಲಿದ್ದ ನನಗೆ ಹೇಳಿಸಿತು. ಕೆಲವು ಕ್ಷಣಗಳ ನಂತರ ಅವರು ನನ್ನ ಕೊಠಡಿಯಲ್ಲಿ ಪ್ರತ್ಯಕ್ಷರಾದರು. "ನಾನು ಲಂಕೇಶ್ ಅಭಿಮಾನಿ, ಅವರ ಶಿಷ್ಯ. ಹಾಗಿರುವಾಗ ನಾನು ಅದು ಹೇಗೆ ಜಾತಿವಾದಿ ಆಗುತ್ತೇನೆ?" ಎಂದು ಗುಟುರು ಹಾಕಿದ ಹಾಲಂಬಿಯವರು ತಮ್ಮ ಸೈದ್ಧಾಂತಿಕ ನಿಲುವನ್ನು ವಿವರಿಸಿದರು. "ಆಯ್ತು. ಇನ್ನು ಮುಂದೆ ನಿಮ್ಮ ಸುತ್ತ ಯಾವುದೇ ವಿವಾದ ಎದ್ದರೆ ನಿಮ್ಮ ಸ್ಪಷ್ಟನೆಯನ್ನು ಕೇಳಿಯೇ ಪ್ರಕಟಿಸುತ್ತೇನೆ" ಎಂದು ಹೇಳಿ ಅವರನ್ನು ಸಮಾಧಾನಪಡಿಸಿದ್ದೆ.


ಆಮೇಲೆ ಅವರು ನಿಜವಾಗಲೂ ಎಂತಹ ಸೂಕ್ಷ್ಮ ಮನಸ್ಸಿನ ವ್ಯಕ್ತಿ ಎಂದು ನನಗೆ ಅರ್ಥವಾಗುತ್ತಾ ಹೋಯಿತು. ಆಗೀಗ ಅವರಿಗೆ ಪುರುಸೊತ್ತು ಸಿಕ್ಕಾಗ ಅಕಸ್ಮಾತ್ ಅವರು ಗಾಂಧಿಬಜಾರ್ ಏರಿಯಾದಲ್ಲಿದ್ದರೆ ಕೆಳಗಡೆ ನನ್ನ ಕಾರ್ ಇದೆಯೇ ಎಂದು ನೋಡಿ ನನ್ನ ಕಚೇರಿಗೆ ಬಂದು ಮಾತನಾಡಿಸಿ ಹೋಗುತ್ತಿದ್ದರು. ಕೆಲಸದ ಒತ್ತಡ ಇಲ್ಲದಿದ್ದಾಗ ನಾನು ಅವರೊಂದಿಗೆ ಹರಟೆ ಕೊಚ್ಚುತ್ತಾ ಕೂರುತ್ತಿದ್ದೆ. ಅಕಸ್ಮಾತ್ ನನಗೆ ಪುರುಸೊತ್ತು ಇಲ್ಲದಿದ್ದರೆ ಹಾಲಂಬಿ ಅವರು ಅದನ್ನು ಅರ್ಥ ಮಾಡಿಕೊಂಡು ಆದಷ್ಟು ಬೇಗ ಹೊರಟುಹೋಗುತ್ತಿದ್ದರು.

14 ವರ್ಷಗಳ ಕಾಲ ಕನ್ನಡ ಸಾಹಿತ್ಯ ಪರಿಷತ್ತಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ್ದ ಹಾಲಂಬಿಯವರು ಹರಿಕೃಷ್ಣ ಪುನರೂರು ಮತ್ತು ಚಂದ್ರಶೇಖರ ಪಾಟೀಲರು ಪರಿಷತ್ತಿನ ಅಧ್ಯಕ್ಷರಾಗಲು ಅಪಾರ ನೆರವು ನೀಡಿದ್ದರು. ನಾಲ್ಕು ವರ್ಷಗಳ ಹಿಂದೆ ಅವರೇ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದಾಗ ಅನಾಯಾಸವಾಗಿ ಗೆದ್ದು ಬಂದಿದ್ದರು. ಆಗ ಅವರೇ ಫೋನ್ ಮಾಡಿ "ನಿಮ್ಮ ತಂಡದ ಬೆಂಬಲ ಮತ್ತು ಸಲಹೆಗಳು ನನಗೆ ಬೇಕು" ಎಂದು ಕೋರಿದ್ದರು. ಹಾಲಂಬಿ ಅವರು ಸಾಹಿತಿ ಅಲ್ಲದಿದ್ದರೂ ಅವರು ನಿಜವಾಗಲೂ ಕನ್ನಡ ಸೇವೆ ಮಾಡುತ್ತಿದ್ದರಿಂದ ನಮ್ಮ ಬೆಂಬಲ ಅವರಿಗೆ ಇದ್ದೇ ಇತ್ತು. ಅವರು ಕೊಡಗಿನಲ್ಲಿ 80ನೇ ಸಾಹಿತ್ಯ ಸಮ್ಮೇಳನವನ್ನು ನಡೆಸಿದಾಗ ಅದಕ್ಕೆ ನಾ. ಡಿಸೋಜ ಅವರನ್ನು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಮಾಡಿದರು. ಒಮ್ಮೆ ನಮ್ಮ ಆಫೀಸಿಗೆ ಬಂದಾಗ "ಮೊದಲ ಬಾರಿಗೆ ಓರ್ವ ಕ್ರಿಶ್ಚಿಯನ್ ಸಮ್ಮೇಳನಾಧ್ಯಕ್ಷರಾಗುತ್ತಿರುವುದು ನನಗೆ ಹೆಮ್ಮೆಯ ವಿಚಾರ" ಎಂದಿದ್ದರು. ಹಾಗೆಯೇ ಅದರ ಮುಂದಿನ ಸಮ್ಮೇಳನಕ್ಕೂ ಅವರು ದಲಿತ ಕವಿ ಡಾ. ಸಿದ್ದಲಿಂಗಯ್ಯನವರನ್ನು ಅಧ್ಯಕ್ಷರಾಗುವಂತೆ ಮಾಡಿದ್ದರು. ಅದರ ಬಗ್ಗೆಯೂ ಅವರಿಗೆ ಹೆಮ್ಮೆ ಇತ್ತು. ಅಷ್ಟೇ ಅಲ್ಲ, ಜ್ಞಾನಪೀಠಕ್ಕಿಂತಲೂ ಹೆಚ್ಚು ಹಣವನ್ನು ನೀಡುವ ನೃಪತುಂಗ ಪ್ರಶಸ್ತಿಗೆ ಅವರು ಆಯ್ಕೆ ಮಾಡಿಕೊಂಡದ್ದು ನಮ್ಮ ಸಾರಾ ಅಬೂಬಕ್ಕರ್ ಅವರನ್ನು. ಹೀಗೆ ದಮನಿತ, ನಿರ್ಲಕ್ಷಿತ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಪ್ರತಿಭೆಗಳನ್ನು ಗುರುತಿಸಿ ಗೌರವಿಸುವ ಹಾಲಂಬಿ ಅವರ ಗುಣ ಎಲ್ಲರೂ ಮೆಚ್ಚುವಂತಹದ್ದಾಗಿತ್ತು.

ಅಪ್ಪನ ಜತೆಗಿನ ಜೀವನದ ಕುರಿತು ಅಮ್ಮ ಇಂದಿರಾ ಅವರು ಬರೆದಿರುವ 'ಹುಳಿಮಾವು ಮತ್ತು ನಾನು' ಪುಸ್ತಕಕ್ಕೆ ಡಾ. ಸರೋಜಾದೇವಿ ಪ್ರಶಸ್ತಿ ಬಂದಾಗ ನಮ್ಮಷ್ಟೇ ಸಂತೋಷ ಹಾಲಂಬಿ ಅವರಿಗೂ ಆಗಿತ್ತು. ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ನಮ್ಮ ಇಡೀ ಕುಟುಂಬ ಮತ್ತು ಸ್ನೇಹಿತರು ಹಾಜರಾಗಿದ್ದು ಹಾಲಂಬಿಯವರಿಗೆ ಅಚ್ಚರಿ ಮೂಡಿಸಿತ್ತು. "ಸಾಮಾನ್ಯವಾಗಿ ಈ ಹಾಲ್ ಭರ್ತಿ ಆಗುವುದೇ ಇಲ್ಲ. ಇವತ್ತು ಇಷ್ಟೊಂದು ಜನ ಬಂದಿರುವುದು ಪರಿಷತ್ತಿನ ಅಧ್ಯಕ್ಷನಾದ ನನಗೆ ಸಂತೋಷ ನೀಡಿದೆ" ಎಂದಿದ್ದರು.

ಹಾಗೆಯೇ ನನ್ನ ತಂಗಿ ಕವಿತಾ ನಿರ್ದೇಶಿಸಿರುವ 'ಕರಿಯ ಕಣ್ಬಿಟ್ಟ' ಸಿನಿಮಾ ಹಾಲಂಬಿ ಅವರಿಗೆ ಇಷ್ಟವಾಗಿತ್ತು. ಆ ಕಾರಣಕ್ಕಾಗಿಯೇ ಅವರು ವಿವಿಧ ಜಿಲ್ಲೆಗಳಲ್ಲಿ ಪರಿಷತ್ತಿನ ವತಿಯಿಂದ ಆಯೋಜಿಸಿದ್ದ ದಲಿತ ಸಾಹಿತ್ಯ ಸಮ್ಮೇಳನಗಳಲ್ಲಿ ಆ ಚಿತ್ರ ಪ್ರದರ್ಶನವಾಗುವಂತೆ ಏರ್ಪಾಡು ಮಾಡುತ್ತಿದ್ದರು.

ಬಿಜಾಪುರದಲ್ಲಿ ಹಾಲಂಬಿ ಅವರು ನಡೆಸಿದ ಸಾಹಿತ್ಯ ಸಮ್ಮೇಳನದ ಒಂದು ಗೋಷ್ಠಿಯಲ್ಲಿ ನಾನು ಭಾಗವಹಿಸಿದ್ದೆ. ಅದಾದ ಎರಡು ವರ್ಷಗಳ ನಂತರ ಶ್ರವಣಬೆಳಗೊಳದಲ್ಲಿ ಸಮ್ಮೇಳನವನ್ನು ಹಮ್ಮಿಕೊಂಡಾಗಲೂ ಮತ್ತೆ ನನ್ನನ್ನು ಆಹ್ವಾನಿಸಿದರು. "ಮತ್ತೆ ನಾನು ಯಾಕೆ? ಬೇರೆಯವನ್ನು ಕರೆಯಿರಿ" ಎಂದಿದ್ದೆ. ಆಗ ಹಾಲಂಬಿ ಅವರು "ಪರಿಷತ್ತಿನ ಅಧ್ಯಕ್ಷನಾಗಿ ನಾನು ನಡೆಸುತ್ತಿರುವ ಕೊನೆ ಸಮ್ಮೇಳನ ಇದು. ಆದರಿಂದ ನೀವು ಬರಲೇಬೇಕು" ಎಂದಿದ್ದರಿಂದ ಒಪ್ಪಿಕೊಂಡೆ. ಆ ಸಮ್ಮೇಳನದಲ್ಲಿ ಡಾ. ಎಂ.ಎಸ್.ಆಶಾದೇವಿ, ಕೆ.ಎಸ್.ವಿಮಲಾ, ಕೆ.ಷರೀಫಾ ಮತ್ತು ನಾನು ಎಸ್.ಎಲ್.ಭೈರಪ್ಪನವರನ್ನು 'ಬೈದದ್ದು' ದೊಡ್ಡ ಸುದ್ದಿ ಆದದ್ದು ನಿಮಗೆ ನೆನಪಿರಬಹುದು. ಭೈರಪ್ಪನ ಟೀಕಾಕಾರರಾದ ನಮ್ಮಂತಹ ಮಹಿಳೆಯರನ್ನು ಆಹ್ವಾನಿಸಿದ್ದಕ್ಕೆ ಹಾಲಂಬಿಯವರೂ ಚೆಡ್ಡಿಗಳ ಕೆಂಗಣ್ಣಿಗೆ ಗುರಿಯಾಗಿದ್ದರು.



ಎಲ್ಲಾ ಮುಗಿದ ನಂತರ ಒಮ್ಮೆ ನಮ್ಮ ಆಫೀಸಿಗೆ ಬಂದ ಹಾಲಂಬಿಯವರು ಹೀಗೆ ಹೇಳಿದರು: "ಒಂದು ಪತ್ರಿಕೆಯ ಸಂಪಾದಕ ನಾನು ಸಾಹಿತ್ಯ ಸಮ್ಮೇಳನಕ್ಕೇ ಶ್ರಾದ್ಧ ಮಾಡಿದೆ ಎಂದು ತನ್ನ ಪತ್ರಿಕೆಯಲ್ಲಿ ಕುಟುಕಿದ್ದ. ನಾನು ಆತನಿಗೆ ಫೋನ್ ಮಾಡಿ 'ನೋಡಪ್ಪ, ಶ್ರಾದ್ಧ ಮಾಡುವುದು ಎಂದರೆ ನೀನು ಏನಂತ ತಿಳಿದುಕೊಂಡಿದೆಯೋ ಗೊತ್ತಿಲ್ಲ. ಆದರೆ ನನ್ನ ಪ್ರಕಾರ ಶ್ರಾದ್ಧ ಮಾಡುವುದು ಎಂದರೆ ನಾವು ಏನೇ ಮಾಡಿದರೂ ಶ್ರದ್ಧೆಯಿಂದ ಮಾಡಬೇಕು ಎಂಬುದು. ಆ ನಿಟ್ಟಿನಲ್ಲಿ ನಾನು ಸಮ್ಮೇಳನವನ್ನು ಶ್ರದ್ಧೆಯಿಂದ ಮಾಡಿಮುಗಿಸಿದ್ದೇನೆ' ಎಂದು ಹೇಳಿ ಫೋನ್ ಇಟ್ಟೆ" ಎಂದು ಹೇಳಿ ಜೋರಾಗಿ ನಕ್ಕರು.

ಅವರ ಮೂತ್ರಪಿಂಡಗಳು ವಿಫಲವಾದರೂ ಅವರು ತಮ್ಮ ಕನ್ನಡಸೇವೆಯನ್ನು ನಿಲ್ಲಿಸಲಿಲ್ಲ. ತಮ್ಮ ಎಲ್ಲ ಕೆಲಸಗಳನ್ನು ತಮ್ಮ ಡಯಾಲಿಸಿಸ್ ಸುತ್ತಲೇ ಹಮ್ಮಿಕೊಳ್ಳುತ್ತಿದ್ದರು. ಅದರ ಬಗ್ಗೆ ಒಂದು ಸಾರಿ ಹೇಳುತ್ತಾ "ನಾನು ಹೀಗೆ ಸುತ್ತಾಡುವುದನ್ನು ನನ್ನ ಮನೆಯವರು, ಸಹೋದರಿಯರು ಮತ್ತು ಮಿತ್ರರು ಟೀಕಿಸುತ್ತಾರೆ. ನಾನು ಹೀಗೆ ಓಡಾಡುವ ಬದಲು ಸುಮ್ಮನೆ ಮನೆಯಲ್ಲಿ ಯಾಕಿರಬಾರದು ಎನ್ನುತ್ತಾರೆ. ಆದರೆ ಹಾಗೆ ಬದುಕಿರುವುದಕ್ಕಿಂತ ಸಾಯುವುದೇ ಮೇಲು" ಎಂದಿದ್ದರು ಹಾಲಂಬಿ.

ಕಳೆದ ಬಾರಿಯ ಪರಿಷತ್ತಿನ ಚುನಾವಣೆ ಎದುರಾದಾಗ ಹಾಲಂಬಿಯವರು ಬಂದು "ಹಲವಾರು ಸ್ಪರ್ಧಿಗಳು ನನ್ನ ಬೆಂಬಲವನ್ನು ಕೇಳಿದರು. ಆದರೆ ನನಗೆ ಮನು ಬಳಿಗಾರ್ ಅವರೇ ಪರಿಷತ್ತನ್ನು ಮುನ್ನಡೆಸಲು ಸೂಕ್ತ ವ್ಯಕ್ತಿ ಅನ್ನಿಸಿತು. ಆದ್ದರಿಂದ ಅವರನ್ನು ಬೆಂಬಲಿಸಲು ನಿರ್ಧರಿಸಿದ್ದೇನೆ. ನಿಮಗೆ ಏನನ್ನಿಸುತ್ತೆ?" ಎಂದು ಕೇಳಿದರು. ಅವರು ಕನ್ನಡದ ಹಿತಾಸಕ್ತಿಯ ಹೊರತು ಬೇರೆ ಯಾವ ಕಾರಣಕ್ಕೂ ಬಳಿಗಾರ್ ಅವರನ್ನು ಬೆಂಬಲಿಸುವುದಿಲ್ಲ ಎಂಬುದು ನನಗೆ ಮನದಟ್ಟಾಗಿದ್ದರಿಂದ "ಸರ್, ನೀವು ಯಾವ ಅಭ್ಯರ್ಥಿಯನ್ನು ಬೆಂಬಲಿಸುತ್ತೀರೋ, ಆ ವ್ಯಕ್ತಿಗೆ ನಮ್ಮ ತಂಡದ ಬೆಂಬಲ ಇದ್ದೇ ಇರುತ್ತೆ. ಹಾಗಾಗಿ ಯಾಕೆ ಬಳಿಗಾರ್ ಅವರನ್ನು ಬೆಂಬಲಿಸುತ್ತಿದ್ದೀರಿ ಎಂಬ ಲೇಖನವನ್ನು ನೀವೇ ಬರೆದು ಕೊಡಿ. ಅದನ್ನು ಪ್ರಕಟಿಸುತ್ತೇವೆ. ಹಾಗೆಯೇ ಅದರ ಮುಂದಿನ ವಾರ ಬಳಿಗಾರ್ ಅವರ ಸಂದರ್ಶನವನ್ನೂ ಪ್ರಕಟಿಸುತ್ತೇವೆ. ಇದನ್ನು ನಿಮ್ಮ ಕನ್ನಡ ಸೇವೆಗೆ ನಮ್ಮ ತಂಡದ ನೆರವು ಎಂದು ಭಾವಿಸಿ" ಎಂದು ಉತ್ತರಿಸಿದ್ದೆ. ಹಾಗೆಯೇ ಮಾಡಿದರು. ಬಳಿಗಾರ್ ಅವರನ್ನು ಕುರಿತು ಹಾಲಂಬಿಯವರು ಲೇಖನವನ್ನು ಬರೆದು ಅದನ್ನು ಕೊಡಲೆಂದು ನಮ್ಮ ಆಫೀಸಿಗೆ ಬಂದಾಗ ನಾನು ಅವರನ್ನು ಕೊನೆಯ ಬಾರಿಗೆ ಭೇಟಿ ಆದದ್ದು. ಆಮೇಲೆ ಬಳಿಗಾರ್ ಅವರು ಬಹುಮತದಿಂದ ಗೆದ್ದದ್ದೂ ಆಯಿತು. ಅದಾದ ನಂತರ ಹಾಲಂಬಿಯವರ ಆರೋಗ್ಯ ವಿಚಾರಿಸಲು ಅವರಿಗೆ ಒಂದೆರಡು ಬಾರಿ ಫೋನ್ ಮಾಡಿದ್ದೆ. "ಆರೋಗ್ಯ ಪರವಾಗಿಲ್ಲ. ಹೃದಯ ಚಿಕಿತ್ಸೆ ಆದನಂತರ ನಿಮ್ಮನ್ನು ಭೇಟಿ ಆಗುತ್ತೇನೆ. ಅಂದಹಾಗೆ, ಪರಿಷತ್ತು ಪ್ರಕಟಿಸಿರುವ ನೂರು ಪುಸ್ತಕಗಳನ್ನು ನಾನು ಇನ್ನೂ ನಿಮಗೆ ಕೊಟ್ಟಿಲ್ಲ. ಅವುಗಳ ಜೊತೆಯೇ ಬರುತ್ತೇನೆ" ಎಂದಿದ್ದರು.

ಆದರೆ ಹಾಲಂಬಿ ಅವರು ಮತ್ತೆಂದೂ ನಮ್ಮ ಕಚೇರಿಗೆ ಬರುವುದಿಲ್ಲ.

ಕನ್ನಡದ ಬಗ್ಗೆ, ಕನ್ನಡದ ಪ್ರಗತಿಪರ ಸಾಹಿತಿಗಳ ಬಗ್ಗೆ ಅಪಾರ ಕಾಳಜಿ, ಗೌರವ ಮತ್ತು ಹೆಮ್ಮೆ ಹೊಂದಿದ್ದ ಕನ್ನಡದ ಈ ನಮ್ರ ಸೇವಕನಿಗೆ ವಿದಾಯ...

*****

ಇತ್ತೀಚೆಗೆ ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಾದ ಕನ್ಹಯ್ಯ ಕುಮಾರ್, ಉಮರ್ ಮತ್ತು ಅನಿರ್ಬನ್ ಭಟ್ಟಾಚಾರ್ಯ ಸೇರಿದಂತೆ ಹಲವರ ವಿರುದ್ಧ ವಿವಿಧ ಶಿಕ್ಷೆಯನ್ನು ವಿಧಿಸಿದೆ. ಅದರಲ್ಲೂ ಅನಿರ್ಬನ್‌ನನ್ನು ಐದು ವರ್ಷಗಳ ಕಾಲ ವಿಶ್ವವಿದ್ಯಾಲಯದಿಂದಲೇ ಹೊರದಬ್ಬಿದೆ. ಇದರ ಬಗ್ಗೆ ಅನಿರ್ಬನ್ ಹಂಚಿಕೊಂಡಿರುವ ಅಭಿಪ್ರಾಯದ ಅನುವಾದವನ್ನು ಇಲ್ಲಿ ನೀಡಿದ್ದೇನೆ. ಯಾಕೆಂದರೆ ಮೋದಿಯ ಸರ್ಕಾರ ಅದೆಷ್ಟು ದುಷ್ಟತನದ್ದು ಮತ್ತು ಈ ವಿದ್ಯಾರ್ಥಿ ಮುಖಂಡರ ದಿಟ್ಟತನ ಎಂತಹದ್ದು ಎಂದು ಎಲ್ಲರಿಗೂ ಗೊತ್ತಾಗಲಿ ಎಂದು.

"ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ 10,000 ರೂ. 20,000 ರೂ. ಅಥವಾ ಒಂದು ರೂಪಾಯಿ ಎಂದು ಬೆಲೆ ನಿಗದಿಪಡಿಸಲಾಗುವುದಿಲ್ಲ!

ಅಸಮ್ಮತಿಯನ್ನು ಹೊರಕಳುಹಿಸುವುದು ಸಾಧ್ಯವಿಲ್ಲ!

ವಿಚಾರಗಳನ್ನು ಗಡಿಪಾರು ಮಾಡಲಾಗುವುದಿಲ್ಲ!

ವಾದಗಳನ್ನು ಹೊರಹಾಕಲಾಗುವುದಿಲ್ಲ!

ಅಧಿಕಾರ ಹೊಂದಿರುವ ಮೇಲಿನವರ ಹಠಮಾರಿ ಹೇಡಿತನ ಒಂದು ಅಂಶವನ್ನು ಈಗ ಖಾತರಿಪಡಿಸಿದೆ. ಯಾವುದು ವಿದ್ಯಾರ್ಥಿಗಳ ವಸಂತ ಎಂದು ಪ್ರಾರಂಭವಾಯಿತೋ ಅದೀಗ ಸುಡುವ ಬೇಸಿಗೆಯಾಗಿ ಮಾರ್ಪಾಡಾಗಿದೆ. ಪ್ರತಿರೋಧದ, ದೃಢವಾದ, ಕ್ರೋಧದ, ಕೆಚ್ಚೆದೆಯ ಬೇಸಿಗೆಯಾಗಿಸಿದೆ! ನಾಗಪುರದಲ್ಲಿರುವವರ ಸೂತ್ರದ ಬೊಂಬೆಗಳಾಗಿರುವ ಅಪ್ಪಾರಾವ್ ಮತ್ತು ಜಗದೀಶ್ ಕುಮಾರ್ ಅವರಿಗೆ ನಾವು ಒಂದನ್ನು ಸ್ಪಷ್ಟಪಡಿಸಬೇಕಿದೆ. ಅದೇನೆಂದರೆ ನಿಮ್ಮ ಹೈಲೆವೆಲ್ ನಾಟಕಕ್ಕಿಂತಲೂ ತೀವ್ರವಾದ ಪ್ರತಿರೋಧವನ್ನು ನಾವು ನಿಮಗೆ ಒಡ್ಡುತ್ತೇವೆ. ಹೈದರಾಬಾದಿನ ಕೇಂದ್ರ ವಿಶ್ವವಿದ್ಯಾಲಯದ ರೋಹಿತ್‌ನಿಂದ, ಇಂಗ್ಲಿಷ್ ಮತ್ತು ವಿದೇಶ ಭಾಷಾ ವಿವಿಯ ಕೂನಲ್‌ತನಕ, ನಮ್ಮ ಜೆಎನ್‌ಯುದಿಂದ ಪುಣೆಯ ಎಫ್‌ಟಿಐಐ, ಚೆನ್ನೈನ ಐಐಟಿ, ಅಹಮದಾಬಾದ್, ಜಾದವಪುರ, ಪಾಟ್ನಾ, ಚಂಡೀಗಡ, ಮುಂಬೈನ ಟಿಐಎಸ್‌ಎಸ್ - ಎಲ್ಲೆಲ್ಲೂ ಈ ಬೇಸಿಗೆಯಲ್ಲಿ ಕ್ರೋಧಾವೇಶ ಪಾದರಸದಂತೆ ಏರಲಿ!

ಅವರು ಭ್ರಮೆಯಲ್ಲಿದ್ದಾರೆ. ಸೆಮಿಸ್ಟರ್ ಮುಕ್ತಾಯವಾಗಿ ಇನ್ನೇನು ಪರೀಕ್ಷೆಗಳು ಪ್ರಾರಂಭವಾಗಬೇಕು ಎನ್ನುವ ಹಂತದಲ್ಲೇ ಅಪ್ಪಾರಾವ್ ಕ್ಯಾಂಪಸ್ ಪ್ರವೇಶಿಸಿದ. ಹಾಗೆಯೇ ಜೆಎನ್‌ಯುವಿನ ಹೈಲೆವೆಲ್ ವಿಚಾರಣಾ ಸಮಿತಿಯು (ಹಲವಾರು ವರ್ಷಗಳಿಂದ ಅವರು ಪ್ರದರ್ಶಿಸಿರುವ ಹೇಡಿತನದ ಅಭ್ಯಾಸದಂತೆ) ಇಲ್ಲಿಯೂ ಸೆಮಿಸ್ಟರ್ ಪರೀಕ್ಷೆಗಳು ಮುಗಿದು ಇನ್ನೇನು ರಜಾದಿನಗಳು ಪ್ರಾರಂಭವಾಗಬೇಕು ಎನ್ನುವ ಹಂತದಲ್ಲೇ ತಾನು ನೀಡಿರುವ ಶಿಕ್ಷೆಯನ್ನು ಘೋಷಿಸಿದೆ. ನಾವು ದುರ್ಬಲರಾಗಿರುವಾಗಲೇ ನಮ್ಮನ್ನೆಲ್ಲ ತಾವು ಹಿಡಿದು ಹಾಕಿದ್ದೇವೆ ಎಂದು ಸಮಿತಿ ಭಾವಿಸಿರಬಹುದು. ಆದರೆ ಆ ಭಾವನೆ ಖಂಡಿತವಾಗಿಯೂ ತಪ್ಪು. ಈ ಹಿಂದೆ ಪರೀಕ್ಷೆ ಮತ್ತು ರಜಾದಿನಗಳಲ್ಲೂ ಜೆಎನ್‌ಯು ನೌಕರರಿಗೆ ಕನಿಷ್ಠ ವೇತನಕ್ಕಾಗಿ ಮತ್ತು ಆಪರೇಶನ್ ಗ್ರೀನ್‌ಹಂಟ್ ವಿರೋಧಿ ಮಂಚ್ ಮೇಲೆ ವಿಧಿಸಿದ್ದ ನಿಷೇಧವನ್ನು ವಿರೋಧಿಸಿ ನಡೆಸಿದ ಐತಿಹಾಸಿಕ ಹೋರಾಟಗಳು ಯಶಸ್ವಿ ಆಗಿದ್ದನ್ನು ನೋಡಿದ್ದೇವೆ. ಆದ್ದರಿಂದ ಚಂಡಮಾರುತ ಅಂತ್ಯಗೊಂಡಿತು ಎಂದು ಸೂತ್ರದ ಬೊಂಬೆಗಳು ಮತ್ತು ಅವರ ಸೂತ್ರಧಾರರು ಪರಸ್ಪರ ಬೆನ್ನು ತಟ್ಟಿಕೊಳ್ಳುತ್ತಿರಬಹುದಾದರೂ ಅವರಿಗೆ ನಾವು ಹೇಳುತ್ತೇವೆ... ತಡೆಯಿರಿ ಮಿತ್ರರೇ. ಸಿನಿಮಾ ಇನ್ನೂ ಮುಗಿದಿಲ್ಲ ಎಂದು!


ಒಂದು ಹೆಜ್ಜೆಯೂ ಹಿಮ್ಮೆಟ್ಟುವುದಿಲ್ಲ ಎಂಬುದು ನಮ್ಮ ಧ್ಯೇಯ! ಈಗಾಗಲೇ ಅಭೂತಪೂರ್ವ ಹೊಡೆತವು ಅದೆಂತಹ ಪ್ರತಿಕ್ರಿಯೆ ಮತ್ತು ಐಕ್ಯತೆಯನ್ನು ಸೃಷ್ಟಿಸುತ್ತದೆ ಎಂಬುದನ್ನು ಕಂಡಿದ್ದೇವೆ. ನಮ್ಮ ಕಾಲದ ಬೇಡಿಕೆಗಳೇ ಹಾಗಿವೆ. ಆದ್ದರಿಂದ, ಈ ಬೇಸಿಗೆಯ ರಜೆಯ ಸಮಯದಲ್ಲಿ ನಾವು ಮನೆಗೆ ಹೋಗದೆ ಇಲ್ಲೇ ಇದ್ದು ವಿವಿಯ ಸ್ವಾತಂತ್ರ್ಯ ಚೌಕದಲ್ಲಿ ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ. ನಮ್ಮ ಸಂದೇಶ ಗಟ್ಟಿಯಾಗಿಯೂ ಸ್ಪಷ್ಟವಾಗಿಯೂ ಅವರಿಗೆ ಕೇಳಿಸಬೇಕಿದೆ. ಹೈ ಲೆವೆಲ್ ವಿಚಾರಣಾ ಸಮಿತಿ ಎಂಬ ಪ್ರಹಸನವನ್ನು ನಾವೆಂದೂ ಒಪ್ಪಿಕೊಂಡಿಲ್ಲ. ಜೊತೆಗೆ ನಿಯಮಗಳ ಪ್ರಕಾರ ಈ ಸಮಿತಿಯಿಂದ ಹರಿದು ಬರುತ್ತಿರುವ ಎಲ್ಲಾ ವರದಿಗಳು ಅಸ್ವೀಕಾರಾರ್ಹ. ಕೆಲವರಿಗೆ ಹೆಚ್ಚು ಶಿಕ್ಷೆಯನ್ನು ವಿಧಿಸಲಾಗಿದೆ, ಕೆಲವರಿಗೆ ಕಡಿಮೆ ಶಿಕ್ಷೆಯನ್ನು ಕೊಡಲಾಗಿದೆ ಎಂಬ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಲ್ಲಿ, ಇಲ್ಲಿ ಒಂದಷ್ಟು ಅಡ್ಜಸ್ಟ್ ಮಾಡಿಕೊಳ್ಳುವುದಕ್ಕೆ ಇದು ಸಂಬಂಧಿಸಿದ್ದೂ ಅಲ್ಲ. ಯಾವುದೇ 'ಅಪರಾಧ'ವನ್ನು ಎಸಗಿರದಿರುವವರಿಗೆ ಕೊಟ್ಟ ಯಾವ ಶಿಕ್ಷೆಯನ್ನು ಯಾವ ಕಾರಣಕ್ಕೂ ನಾವು ಒಪ್ಪುವುದಿಲ್ಲ!

ಉದಾಹರಣೆಗೆ, ಇವತ್ತು ಬೆಳಗ್ಗೆ ನಾನು ಸ್ವೀಕರಿಸಿದ ಆದೇಶದಲ್ಲಿ "ಯಾರಾದರೂ ಇವನಿಗೆ ಕ್ಯಾಂಪಸ್‌ನಲ್ಲಿ ಆಶ್ರಯ ಕೊಟ್ಟರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು" ಎಂದು ಹೇಳಲಾಗಿದೆ. ಕಳೆದ ಒಂದು ದಶಕವನ್ನು ಇದೇ ಕ್ಯಾಂಪಸ್‌ನಲ್ಲಿ ಕಳೆದಿರುವ ನಾನು, ಇದನ್ನು ನನ್ನ ಎರಡನೆ ಮನೆ ಎಂದು ಭಾವಿಸಿರುವ ನಾನು, ಇಲ್ಲೇ ಬೆಳೆದಿರುವ ನಾನು ಇಲ್ಲಿ ರಹಸ್ಯವಾಗಿ ಆಶ್ರಯ ಪಡೆಯುವ ಅಗತ್ಯತೆಯಾದರೂ ಎಲ್ಲಿದೆ? ಹಾಲಿ ವಿದ್ಯಾರ್ಥಿಯೋ, ಮಾಜಿ ವಿದ್ಯಾರ್ಥಿಯೋ ಅಥವಾ ವಿದ್ಯಾರ್ಥಿ ಅಲ್ಲದವರೋ, ಯಾರೇ ಆಗಲಿ ಯಾವ ಕಾರಣಕ್ಕೆ ನಮ್ಮ ಮೇಲೆ ದಂಡ ವಿಧಿಸಿ ನಮ್ಮನ್ನು ಕ್ಯಾಂಪಸ್‌ನಿಂದ ಹೊರಹಾಕಲಾಗಿದೆ? ನಾವು ಎಸಗಿದ ಅಪರಾಧವಾದರೂ ಯಾವುದು? ಅಸಮ್ಮತಿಯನ್ನೇ ಅಪರಾಧ ಎಂದು ಬಗೆಯುವ ಅಸಂಸ್ಕೃತ ಮನೋಭಾವವನ್ನು ನಾವು ಪ್ರತಿರೋಧಿಸಿ ಸೋಲಿಸಬೇಕಿದೆ. ಯಾಕೆಂದರೆ ಕ್ಯಾಂಪಸ್‌ನಲ್ಲಿರುವ ಪ್ರಜಾತಾಂತ್ರಿಕ ಜಾಗೆಯನ್ನು ಉಳಿಸಿಕೊಳ್ಳುವ ಯುದ್ಧ ಇದಾಗಿದೆ. ಭವಿಷ್ಯದಲ್ಲೂ ಪ್ರಜಾತಾಂತ್ರಿಕ ಜಾಗೆಯನ್ನು ಕುಲಗೆಡಿಸದಂತೆ ಅದನ್ನು ಒಂದಿಂಚೂ ಬಿಟ್ಟುಕೊಡದೆ ರಕ್ಷಿಸಬೇಕಾದ ಅವಶ್ಯಕತೆ ಇದೆ. ಬಸ್ತರ್‌ನ ಆದಿವಾಸಿಗಳ ಜೊತೆಗೆ, ಮಾರುತಿ ಕಾರ್ಖಾನೆಯ ಕಾರ್ಮಿಕರ ಜೊತೆಗೆ, ರೋಹಿತ್ ವೇಮುಲನಿಗೆ ಸಾಮಾಜಿಕ ನ್ಯಾಯ ಒದಗಿಸುವ ಹೋರಾಟದ ಜೊತೆಗೆ, ದಾದ್ರಿಯಲ್ಲಿ ಆಹುತಿಯಾದವರ ಜೊತೆಗೆ, ಪುರುಷಪ್ರಾಧಾನ್ಯತೆ ವಿರುದ್ಧದ ಹೋರಾಟದ ಜೊತೆಗೆ ನಿಲ್ಲುವುದಕ್ಕಾಗಿ ಈ ಪ್ರಜಾಸತ್ತೀಯ ಜಾಗವನ್ನು ಉಳಿಸಿಕೊಳ್ಳಬೇಕಿದೆ.

ನಾವು ಸಜ್ಜಾಗಬೇಕಿದೆ. ನಮ್ಮೆದುರು ಸುದೀರ್ಘ ಪಯಣ ಇದೆ. ಜೈಲು ಮತ್ತು ಬೇಲ್‌ನೊಂದಿಗೆ ಇದು ಮುಗಿಯುತ್ತದೆ ಎಂದು ನಾವೇನೂ ಭಾವಿಸಿರಲಿಲ್ಲ, ಹೌದೋ? ನಮ್ಮ ಭಿನ್ನಮತೀಯ ಜಾಗವನ್ನು ಕಾಪಾಡಿಕೊಳ್ಳಲು ನಾವು ನಮ್ಮ ಹೋರಾಟವನ್ನು ಮುಂದುವರಿಸಲೇಬೇಕಿದೆ..."

ಈ ಯುವಕರ ಜೊತೆ ಎಲ್ಲರೂ ದನಿಗೂಡಿಸಿ ಅವರಿಗೆ ನ್ಯಾಯ ಸಿಗಲಿ ಎಂಬುದು ಎಲ್ಲಾ ಪ್ರಜ್ಞಾವಂತರ ಆಶಯವಾಗಿದೆ. ■

'ದೇಶಭ್ರೋಕ್ತ' ಸಂಸದ ಅನಂತ್ಮಾಣಿ ಗಣಿ ಸಗಣಿ ತಿಂದದ್ದೆಷ್ಟು?



ಕೆನರಾ ಕ್ಷೇತ್ರದ ಸ್ವಯಂಘೋಷಿತ ದೇಶಭ್ರೋಕ್ತ ಸಂಸದ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿ ಗಣಿ ಸಗಣಿ ಲಕ್ಷ-ಲಕ್ಷದ ಲೆಕ್ಕದಲ್ಲೇ ಬಗೆಬಗೆದು ಮುಕ್ಕಿದ್ದಾನೆ! ಇದು ಮಾಣಿ ಕಂಡರಾಗದವರ ಪುಕಾರಲ್ಲ; ರಾಜಕೀಯ ಮೇಲಾಟದ ವದಂತಿ-ಊಹಾಪೋಹವೂ ಅಲ್ಲ. ಲೋಕಾಯುಕ್ತ ಸಂಸ್ಥೆಯ ವಿಶೇಷ ತನಿಖಾ ತಂಡ (ಎಸ್‌ಐಟಿ) ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಥಮ ತನಿಖಾ ವರ್ತಮಾನದಲ್ಲಿ ಅನಂತ್ಮಾಣಿ ಗಣಿ ಕಳ್ಳರಿಂದ ಹಫ್ತಾ ಪಡೆದಿದ್ದಾನೆಂದು ಸ್ಪಷ್ಟವಾಗಿ ನಮೂದಿಸಲಾಗಿದೆ! ಅಲ್ಲಿಗೆ ಈ ಸಂಘ ಸರದಾರನ ಅಸಲಿ ದೇಶದ್ರೋಹ ಮತ್ತು ನಕಲಿ ಹಿಂದೂತ್ವ ಎರಡೂ ಒಮ್ಮೆಗೇ ಬಟ್ಟಂಬಯಲಲ್ಲಿ ಬೆತ್ತಲಾಗಿ ನಿಂತಾಗಿದೆ!!


ಹುಸಿ ಹಿಂದೂತ್ವದ ಬೊಬ್ಬೆ ಹೊಡೆಯುತ್ತ ಮುಗ್ಧ ಮಂದಿಯ ಕಣ್ಣಿಗೆ ಮಣ್ಣೆರಚುವ ಕುಕಲೆ ಕರಗತ ಮಾಡಿಕೊಂಡಿರುವ ಅನಂತ್ಮಾಣಿಗೆ ದೇಶಭಕ್ತಿ ಪ್ರಹಸನ ದುಡ್ಡು ಮಾಡುವ ದಂಧೆಗೆ ಬಂಡವಾಳವಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ. ಬರೋಬ್ಬರಿ ಐದು ಬಾರಿ ಎಂಪಿಯಾಗಿ ಆಯ್ಕೆಯಾಗಿರುವ ಈ ಬೆಂಕಿ ನವಾಬ ಪಾರ್ಲಿಮೆಂಟ್‌ನಲ್ಲಿ ಪಾದಾರ್ಪಣೆ ಮಾಡುವ ಮೊದಲು ಶುದ್ಧ ತಿರಬೋಕಿ. ಬುತ್ತಿ ಕಟ್ಟಿಕೊಂಡು ಭಟ್ಕಳದ ಹಳ್ಳಿಹಳ್ಳಿಗಳಲ್ಲಿ ಕೋಮು ಸಂಘರ್ಷದ ಕಾರ್ಯಾಗಾರ ನಡೆಸಲು ಹೋಗುತ್ತಿದ್ದ ಮಾಣಿ ಇವತ್ತು ಐಷಾರಾಮದ ಲೋಲುಪಜೀವನ ನಡೆಸುವ ಕೋಟಿ ವೀರನಾಗಿದ್ದಾನೆ! ತಾನು ಪ್ರತಿನಿಧಿಸುವ ಜನರಿಗೆ 'ನಾಟ್ ರಿಚೇಬಲ್' ಆದ ನೆಟ್‌ವರ್ಕ್‌ನಲ್ಲಿ ಕುಳಿತು ಅಕ್ರಮ ವ್ಯವಹಾರದಲ್ಲಿ ಬಿಜಿಯಾಗಿರುವ ಮಾಣಿ ಮಾಡಿರುವ ಭಾನ್ಗಡಿ ಒಂದೆರಡಲ್ಲ.

ಭಟ್ಕಳದಲ್ಲಿ ಪಾಕಿಸ್ತಾನ ಆಗಿದೆ; ಅಂಕೋಲೆಯಲ್ಲಿ ಇಸ್ಲಾಮ್‌ಪುರ ಇದೆ; ಯಲ್ಲಾಪುರದ ಸಾಬರಕೇರಿಯಲ್ಲಿ ಕಸಾಯಿ ಖಾನೆ ತೆರೆಯಲಾಗಿದೆ ಎಂಬ ಧರ್ಮೋನ್ಮಾದದ ಹೇಳಿಕೆ ಬಿಸಾಕಿ ತಾನು ಅಡಗಿ ಕುಳಿತು ಲಾಭಕ್ಕೆ ನಾಲಿಗೆಯೊಡ್ಡುವ ಹೀನಬುದ್ಧಿಯ ಅನಂತ್ಮಾಣಿಯ ಹದಿನೈದು ವರ್ಷದ ಎಂಪಿಗಿರಿಯಲ್ಲಿ ಜಿಲ್ಲೆಗೆ ಹತ್ತು ಪೈಸೆ ಪ್ರಯೋಜನವೂ ಆಗಿಲ್ಲ. ತಾನೊಬ್ಬನೇ ಏಕೈಕ ದೇಶಪ್ರೇಮಿ ಎಂಬಂತೆ ಪೋಸು ಕೊಡುವ ಮಾಣಿ ದೇಶವನ್ನು ಅಡ್ಡಡ್ಡ-ಉದ್ದುದ್ದ ನುಂಗಿರುವ ಪರಿ ಘೋರವಾಗಿದೆ! ಶಿರಸಿಯ ಮತ್ತಿಘಟ್ಟ ಬಳಿ ಎಕರೆಗಟ್ಟಲೆ ಅರಣ್ಯ ಕಬಳಿಸಿ ಭರ್ಜರಿ ಅಡಿಕೆ ತೋಟ ಮಾಡಿಕೊಂಡಿರುವ ಮಾಣಿ ಅಲ್ಲಿಗೆ ಹೋಗಲು ಎಂಪಿ ನಿಧಿಯಿಂದ ರಸ್ತೆಯೂ ನಿರ್ಮಾಣ ಆಗುವಂತೆ ಜಾದೂ ನಡೆಸಿದ್ದಾನೆ. ರಾಷ್ಟ್ರೀಕೃತ ಬ್ಯಾಂಕ್‌ನಿಂದ ಎತ್ತಿದ ಲಕ್ಷಗಟ್ಟಲೆ ಸಾಲಮನ್ನಾ ಮಾಡಿಸಿಕೊಂಡು ಪುಗಸಟ್ಟೆ "ಕದಂಬ ದಂಧೆ" ನಡೆಸುತ್ತಿದ್ದಾನೆ. ಮಾಣಿ ಮಡದಿ ಪಕ್ಕಾ ಮಾರ್ವಾಡಿ ಉದ್ಯಮಿಯಾಗಿ ಅವತರಿಸಿದ್ದಾರೆ. ಈಕೆಯ ಕದಂಬ ಟ್ರಸ್ಟ್‌ನ ತರಹೇವಾರಿ ಬಿಸ್ನೆಸ್‌ಗಳಂತೂ ಕೋಟಿಗಳ ವಹಿವಾಟಿನಲ್ಲಿ ಸಾಗಿದೆ! ಅಗರ್‌ವುಡ್, ಸಾಂಬಾರ ಬೆಳೆ, ವ್ಯಾನಿಲ್ಲಾ ಎಂದೆಲ್ಲ ರೈತರ ಮೊಣಕೈಗೆ ತುಪ್ಪ ಸವರಿದ ಮಾಣಿ ತಾನು ತನ್ನ ಪರಿವಾರ ಮಜಬೂತಾಗಲು ಏನೇನು ಬೇಕೋ ಅದೆಲ್ಲ ಸಾಧಿಸಿಕೊಂಡಿದ್ದಾನೆ ಎಂಪಿಗಿರಿ ಮತ್ತು ಹಿಂದೂತ್ವಗಳ ಬಲದಿಂದ! ಅನಂತ್ಮಾಣಿ ಅದೆಂಥ ಕ್ಷುಲ್ಲಕ ಪುಢಾರಿಯೆಂದರೆ, ತನ್ನ ಹೆಂಡತಿಯನ್ನೇ ಸಂಸದನ ಪಿಎ ಎಂದು ನೇಮಿಸಿ ತಿಂಗಳಿಗೆ ಮೂವತ್ತು ಸಾವಿರ ಸರ್ಕಾರಿ ಸಂಬಳ ತಿಂದಿದ್ದಾನೆ.

ಮಾಣಿಯ ಇಂಥ ಸಣ್ಣತನ, ದಗಾ, ದ್ರೋಹ, ವಂಚನೆ ಪುರಾಣಕ್ಕೆ ಇಡೀ ಉತ್ತರ ಕನ್ನಡ ಬೆಚ್ಚಿಬಿದ್ದಿದೆ. ಈತನ ಹಣದ ಹಪಾಹಪಿ ಮತ್ತು ಅಡ್ಡ ಕಸುಬುಗಳು ಸಂಘ ಪರಿವಾರದ ಸರದಾರರಲ್ಲೇ ವಾಕರಿಕೆ ಮೂಡಿಸಿದೆ. ಸಿಕ್ಕಲ್ಲೆಲ್ಲ ಬಾಯಿ ಹಾಕುವ ಮಾಣಿಯ ಭ್ರಷ್ಟಾಚಾರದ ಕತೆಗಳು ಈಗ ಒಂದೊಂದಾಗಿ ಹೊರಬರುತ್ತಿದೆ. ಬಳ್ಳಾರಿಯಲ್ಲಿ ಬಗೆದ ಅಕ್ರಮ ಮ್ಯಾಂಗನೀಸ್ ಅದಿರು ಉತ್ತರ ಕನ್ನಡದ ಬೇಲೇಕೇರಿ ಮತ್ತು ಕಾರವಾರ ಬಂದರಿನ ಮೂಲಕ ವಿದೇಶಕ್ಕೆ ಹೋಗುವಾಗ ಆದ ಅನಾಹುತ-ಅವ್ಯವಹಾರ-ಅನ್ಯಾಯಗಳೆಲ್ಲ ಕಂಡೂಕಾಣದಂತಿದ್ದ ಮಾಣಿ. ಇದಕ್ಕೆ ಕಾರಣ 36 ರಫ್ತುದ ಅದಿರು ರಫ್ತು ಕಂಪನಿಗಳು, ಹಲವು ಹ್ಯಾಂಡಲಿಂಗ್ ಏಜೆನ್ಸಿಗಳು ಪ್ರತಿ ತಿಂಗಳು ಎಂಪಿ ಸಾಹೇಬರಿಗೆ ಕಪ್ಪ ಒಪ್ಪಿಸುತ್ತಿದ್ದುದೇ ಆಗಿತ್ತು. ಹಿಂದೆ 'ಪತ್ರಿಕೆ' ಅ… ಅವ್ಯವಹಾರದ ಹಫ್ತಾ ಮಾಣಿಗೆ ಕೋಟಿಗಳ ಕಂತಿ… ದಕ್ಕುತ್ತಿದೆ ಮತ್ತು ಈ ಪಾಲು ಆತನಿಗೆ ಅಂದು … ಯುವ ಬಿಜೆಪಿ ಅಧ್ಯಕ್ಷನಾಗಿದ್ದ ಅನಂತ್ಮಾಣಿಯ ಚೇ… ಅರುಣ ನಾಯಕ್, ಎಂಬ ಪುಂಡ ಸಂಗ… ತಲುಪಿಸುತ್ತಿದ್ದಾನೆಂದು ಬರೆದಿತ್ತು.

ಅದು ಈಗ ಪಕ್ಕಾ ಆಗಿದೆ. ಅಕ್ರಮ ಅದಿರು ಸಾ… ಮತ್ತು ರಫ್ತು ವ್ಯವಹಾರದಲ್ಲಿ ನಡೆದ ಗೋಲ್‌ಮಾ… ಭ್ರಷ್ಟ ಕಾಂಡಗಳ ತನಿಖೆಗೆ ನೇಮಿಸಲಾಗಿದ್ದ ಲೋಕಾಯು… ಎಸ್‌ಐಟಿ ಎಸ್ಪಿ ಎಚ್.ಎಸ್. ರೇವಣ್ಣ ವಶಪಡಿಸಿಕೊ… ದಾಖಲೆಗಳು ಕೆನರಾದ 'ಸಂಭಾವಿತ' ಸಂಸದ ಅನಂತ… ಅದಾನಿ ಕಂಪನಿಯಿಂದ 6 ಲಕ್ಷ ರೂ. ಇನಾ… ಪಡೆದಿದ್ದಾನೆಂದು ನಿಸ್ಸಂಶಯವಾಗಿ ಸಾಬೀತುಪಡಿಸಿ… ಲೋಕಾಯುಕ್ತದ ವರದಿಯ 22ನೇ ಪುಟದಲ್ಲಿ ಅನಂತ್ಮಾ… 2005 ರಿಂದ 2007ರ ವರೆಗೆ ಪ್ರತಿ ವರ್ಷ 2 ಲಕ್ಷದ… ಹಣವನ್ನು ಅದಾನಿ ಕಂಪನಿ ಸಂದಾಯ ಮಾಡಿದೆ ಎಂ… ಬರೆಯಲಾಗಿದೆ. ಇದು ಪ್ರಧಾನಿ ಮೋದಿ ಸಾಹೇ… ಅಚ್ಚುಮೆಚ್ಚಿನ ಉದ್ಯಮಪತಿ ಅದಾನಿಯ ಕಂಪನಿ … ಅಕ್ರಮ ಅದಿರು ವ್ಯವಹಾರಕ್ಕೆ ಸಂಸದ ಅನಂತ… ಅಡ್ಡಬರಬಾರದೆಂದು ಕೊಟ್ಟಿರುವ ಅಕ್ರಮ ಸಂಭಾವ…

ಎಸ್‌ಐಟಿ ಬೆಂಗಳೂರಿನ 23ನೇ ಹೆಚ್ಚುವರಿ … ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸಲ್ಲಿಸಿರು… ಎಫ್‌ಐಆರ್‌ನಲ್ಲಿ ಸಂಸದ ಅನಂತ್ಮಾಣಿ 2005 ರಿ… 2007ರ ತನಕ ಅದಾನಿ ಕಂಪನಿಯಿಂದ ಒಟ್ಟು 6 … ಪಡೆದಿದ್ದಾನೆಂದು ದಾಖಲಿಸಲಾಗಿದೆ. ಎಸ್‌ಐಟಿ ಎಸ್ಪಿ ರೇವ…




MLA / MP				
Sr No.	R.No.	Date	Particulars	Amount
		06.10.07	IOU - MP Anant Kumar Hegde	200000
			TOTAL	200000

H. S. REVANNA I.P.S.
Superintendent of Police
Special Investigation Team
Karnataka Lokayukta
Bengaluru

ಅನಂತ್‌ಕುಮಾರ್ ಹೆಗಡೆ ಹಫ್ತಾಗೆ ಸಾಕ್ಷಿ ಎಫ್‌ಐಆರ್

ಫಲಾನುಭವಿ ಪರಾಕ್ರಮಿಗಳು!





ಮೆ. ಅದಾನಿ ಎಂಟರ್‌ಪ್ರೈಸಸ್ ಕಂಪನಿ ಬೇಲೇಕೇರಿ ಬಂದರನ್ನು ಕೇಂದ್ರವಾಗಿಟ್ಟುಕೊಂಡು 2005 ರಿಂದ 2007ರ ವರೆಗೆ ಹಂಚಿದ ಹಫ್ತಾ ಲಂಚ, ಮಾಮೂಲಿ ಒಟ್ಟು 2,65,68,230 ರೂ.ಗಳಾಗಿದೆ! ಕಂದಾಯ, ಪೊಲೀಸ್, ಕಸ್ಟಮ್ಸ್, ಬಂದರು, ಪಿಡಬ್ಲ್ಯೂಡಿ, ಸಿಆರ್‌ಝಡ್, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತೂಕ ಮತ್ತು ಅಳತೆ ಇಲಾಖೆ ಅಧಿಕಾರಿಗಳು ಅದಾನಿಯಿಂದ ಆದಾಯ ವೃದ್ಧಿಸಿಕೊಂಡಿದ್ದಾರೆ. ದುರಂತವೆಂದರೆ 2007ರಲ್ಲಿ 'ನ್ಯಾಯ' ನೀಡುತ್ತಿದ್ದ ಜಡ್ಜ್ ಒಬ್ಬ ಈ ಅನ್ಯಾಯದ ಕೂಪದಲ್ಲಿ ಬಿದ್ದು 50 ಸಾವಿರ ಅಕ್ರಮ ಸಂಭಾವನೆ ಪಡೆದಿದ್ದಾನೆ!! ಆದರೆ ಈ ಜಡ್ಜ್‌ನ ಹೆಸರು ಎಫ್‌ಐಆರ್‌ನಲ್ಲಿ ಇಲ್ಲ. ಇದೇ ಥರ 'ಸ್ಥಳೀಯ' ಸುದ್ದಿ ಪತ್ರಿಕೆಯ ಸೋಗಲಾಡಿಯೂ ಹಣ ಪಡೆದಿದ್ದಾನೆ. ಈತ 'ದುಕಾನ್‌ದಾರಿ ಸಂಸ್ಕೃತಿ' ಪತ್ರಿಕೋದ್ಯಮಿಯಾ? ಎಂಬ ಚರ್ಚೆ ಉ.ಕನ್ನಡದಲ್ಲಿ ಜಿಜ್ಞಾಸೆ ಮೂಡಿಸಿದೆ!!

ಎಸ್‌ಐಟಿಗೆ ಸಿಕ್ಕಿರುವ ದಾಖಲೆಯಲ್ಲಿ ಎಸ್‌ಪಿಗೆ ಒಂದು ಲಕ್ಷ, ಎಎಸ್ಪಿಗೆ 40 ಸಾವಿರ, ಡಿಎಸ್‌ಪಿಗೆ 25 ಸಾವಿರ, ಸಿಪಿಐಗೆ 14 ಸಾವಿರ ಅದಾನಿ ಕಂಪನಿ ಕೊಡುತ್ತಿತ್ತು. ಅಪಘಾತ, ಪ್ರತಿಭಟನೆಗಳು ನಡೆದಾಗ ಅದನ್ನು ನಿಭಾಯಿಸಿ ಕಂಪನಿ ಕಾಪಾಡಲು 'ರಿಸ್ಕ್ ಮನಿ' 50 ಸಾವಿರದಿಂದ 1 ಲಕ್ಷದವರೆಗೆ ಅದಾನಿಗಳು ಹರಿಸುತ್ತಿದ್ದರು. ಅಕ್ರಮ ಅದಿರು ತುಂಬಿದ ಹಡಗು ಬೇಲೇಕೇರಿ ಬಂದರಿಂದ ಪ್ರಯಾಣ ಪ್ರಾರಂಭಿಸುವ ಮೊದಲು ಒಂದು ಲಕ್ಷ ರೂ. ಬಂದರು ಮತ್ತು ಕಸ್ಟಮ್ಸ್ ಇಲಾಖೆಗೆ ಹಂಚಿಕೆ ಮಾಡುವ ಒಪ್ಪಂದ ಅದಾನಿ ಕಂಪನಿ ಮಾಡಿಕೊಂಡಿತ್ತು.

ಇದೇ ಸೂತ್ರ ಸಿದ್ಧಾಂತದಂತೆಯೇ ಅಕ್ರಮ ದಂಧೆಯನ್ನು ಉಳಿದ 30-35 ಶಿಪ್ಪಿಂಗ್ ಕಂಪನಿಗಳೂ ನಡೆಸುತ್ತಿದ್ದವು. ಹ್ಯಾಂಡ್ಲಿಂಗ್ ಏಜೆನ್ಸಿಗಳೂ ಇದನ್ನೇ ಮಾದರಿಯಾಗಿ ಮಾಡಿಕೊಂಡಿದ್ದವು. ಅಂದರೆ ಬೇಲೇಕೇರಿ ಬಂದರಿನಲ್ಲಿ ಸಾವಿರಾರು ಕೋಟಿ ಅಕ್ರಮ ಅದಿರು ಕಳ್ಳಸಾಗಾಣಿಕೆ ನಡೆದರೆ, ನೂರಾರು ಕೋಟಿ ಹಫ್ತಾ ಎಂಪಿ, ಎಮ್ಮೆಲ್ಲೆ, ಎಸ್ಪಿ, ಪೋರ್ಟ್ ಡೈರೆಕ್ಟರ್, ಪಿಡಬ್ಲ್ಯೂಡಿ ಸೆಕ್ರೆಟರಿ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಸಿಆರ್‌ಝಡ್ ಮಂಗಳೂರು, ಡಿಜಿಎಂ ಮೈನರ್ ಮಿನರಲ್ಸ್, ಲೇಬರ್ ಇನ್ಸ್‌ಪೆಕ್ಟರ್, ಕಸ್ಟಮ್ಸ್ ಅಧಿಕಾರಿಗಳು, ಚೆಕ್‌ಪೋಸ್ಟ್ ಸಿಬ್ಬಂದಿ, ಸ್ಥಳೀಯ ಪತ್ರಿಕೆ ಪ್ರಭೃತಿ, ಮೀನುಗಾರರ ಯೂನಿಯನ್ ಪಾಲಾಗಿದೆ!!


ಅಂಕೋಲಾ-ಕಾರವಾರ ಭಾಗದಲ್ಲಿ ಅದಿರು ಅವ್ಯವಹಾರಕ್ಕೆ ಯಾವ ಧಕ್ಕೆ ಬಂದರೂ ನಿಭಾಯಿಸುವ ಹೊಣೆ ಕುಬೇರಾ ಎಂಟರ್‌ಪ್ರೈಸಸ್‌ನ ಕಿಂಗ್ ಮಯೂರ ನಾಯಕ್‌ಗೆ ವಹಿಸಲಾಗಿತ್ತು. ಯಾವುದೇ ಪ್ರತಿಭಟನೆ, ಸಾವು-ನೋವು, ಅಪಘಾತ, ಅಧಿಕಾರಿಗಳ ನಕಲಿ ದಾಳಿ, ಲೋಕಲ್ ಗೂಂಡಾಗಳ ವಸೂಲಿ… ಹೀಗೆ ಸ್ಥಳೀಯ ರಿಸ್ಕ್ ಕಂಟ್ರೋಲ್ ಮಯೂರ ನಾಯಕ್ ಮಾಡಬೇಕಿತ್ತು. ಇದಕ್ಕೆಂದು ಅದಾನಿ ಕಂಪನಿ ಮತ್ತಿತರ ಕಂಪನಿಗಳಿಂದ ತಿಂಗಳಿಗೆ ಇಂತಿಷ್ಟೆಂದು ಮಯೂರ ಮತ್ತವರ ಅಪ್ಪನಿಗೆ ಕೊಡಲಾಗುತ್ತಿತ್ತು. ಎಸ್‌ಐಟಿ ಎಫ್‌ಐಆರ್‌ನಲ್ಲಿ ಮಯೂರನೂ ಹಫ್ತಾ ಫಲಾನುಭವಿ ಎಂದು ಗುರುತಿಸಲಾಗಿದೆ!






ಫಲಾನುಭವಿಗಳು.....

ಕಾಗೇರಿನೂ ಕಳ್ಳನಾ?



ಚೋರ ಉದ್ಯಮಿಗಳ ಹಿತಚಿಂತಕ ಪಿಎಂ ಮೋದಿಯ ಆಪ್ತ ಬಂಡವಾಳಶಾಹಿ ಕೈಗಾರಿಕೋದ್ಯಮಿ ಅದಾನಿಗಳ ಅದಿರು ರಫ್ತು ಕಂಪನಿ ಬೇಲೇಕೇರಿ ಬಂದರಿನಲ್ಲಿ ಸಾವಿರಾರು ಕೋಟಿಗಳ ಕಳ್ಳ ಸಾಗಾಣಿಕೆ ಮಾಡಿದೆ. ಈ ಕಳ್ಳ ಕಂಪನಿಯಿಂದ ಎಸ್‌ಐಟಿ ವಶಪಡಿಸಿಕೊಂಡಿರುವ ದಾಖಲೆಯಲ್ಲಿ ಪ್ರತಿ ವರ್ಷದ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಸಂಸದ ಅನಂತ್ಮಾಣಿ ಹುಂಡಿಗೆ 2 ಲಕ್ಷ ಕಾಣಿಕೆ ಹಾಕಲಾಗುತ್ತಿತ್ತೆಂದಿದೆ. ಸರಿಸುಮಾರು ಅದೇ ವೇಳೆಗೆ ಸ್ಥಳೀಯ ಶಾಸಕನಿಗೂ ಮಾಮೂಲಿ ಕೊಡಲಾಗುತ್ತಿತ್ತು.


ಈ ಶಾಸಕನಿಗೆ ಒಂದು ಸಲ 3 ಲಕ್ಷ ಸಂದಾಯ ಮಾಡಲಾಗಿದ್ದರೆ, ಮತ್ತೊಂದು ಬಾರಿ ಎರಡೂವರೆ ಲಕ್ಷ ಒಪ್ಪಿಸಲಾಗಿದೆ. ಒಟ್ಟು ಐದೂವರೆ ಲಕ್ಷ ಹಫ್ತಾ ಪಡೆದ ಹರಾಮಿ ಶಾಸಕನ ಹೆಸರು ಮಾತ್ರ ಎಫ್‌ಐಆರ್‌ನಲ್ಲಿ ಇಲ್ಲ. 'ಸ್ಥಳೀಯ' ಶಬ್ದ ವಿಶ್ಲೇಷಣೆಗೆ ಒಳಪಡಿಸಿದರೆ ಅದು ಅಂದಿನ ಅಂಕೋಲಾ ಕ್ಷೇತ್ರ ಎಂಬುದು ಖಾತ್ರಿಯಾಗುತ್ತದೆ. ಬೇಲೇಕೇರಿ ಬಂದರು 2008ರ ಮೊದಲು ಅಂದಿನ ಅಂಕೋಲಾ-ಯಲ್ಲಾಪುರ-ಶಿರಸಿ ಕ್ಷೇತ್ರದ ವ್ಯಾಪ್ತಿಯಲ್ಲಿತ್ತು. ಆಗ ಅಂಕೋಲೆಗೆ ಶಾಸಕನಾಗಿದ್ದವನು ಬಿಜೆಪಿ ಭೂಪ ವಿಶ್ವೇಶ್ವರ ಹೆಗಡೆ ಕಾಗೇರಿ! ಅನಂತ್ಮಾಣಿಗಿಂತಲೂ ಒಳ್ಳೆಯವನು ತಾನೆಂದು ತೋರಿಸಿಕೊಳ್ಳಲು ಸದಾ ಚಡಪಡಿಸುವ ಈ ನಾಜೂಕಯ್ಯ ಅದಾನಿ ಕಂಪನಿಯ ಅಮೇಧ್ಯ ತಿಂದನಾ? ಹಾಗಂತ ಜಿಲ್ಲೆಯ ಹವ್ಯಕರ ಕೇರಿ-ಕೇರಿಗಳಲ್ಲೀಗ ಚರ್ಚೆ ನಡೆದಿದೆ.



ಎಫ್‌ಐಆರ್...

ಒಂದಂತೂ ಖರೆ. ಅದಿರು ಅವ್ಯವಹಾರದಿಂದ ಅಂಕೋಲೆ ನರಕದಂತಾಗಿದ್ದರೂ ಕಾಗೇರಿ ಮಾಣಿ ಮಾತ್ರ ಏನೂ ಆಗದಂತೆ ನಿರ್ಲಿಪ್ತನಾಗಿದ್ದ. ಬಿಜೆಪಿ ಡಾನ್ ಆಗಿದ್ದ ಜನಾರ್ದನ ರೆಡ್ಡಿಯ ಮುಲಾಜಿಗೋ? ಹಣದ ಹಂಗಿಗೋ? ಅಂತೂ ಕಾಗೇರಿ ಸಂಶಯಕ್ಕೆ ಸಿಲುಕಿದ್ದಾರೆ. ಬಿಜೆಪಿಗೂ ಅದಿರು ಅಕ್ರಮ ದಂಧೆಗೂ ಹೊಕ್ಕಳು ಬಳ್ಳಿ ಸಂಬಂಧ ತಾನೆ?!

ಡಿಎಸ್‌ಪಿ ಕೆ. ಅಶ್ವತ್ಥ ತಂಡ 2010ರ ಫೆಬ್ರವರಿ 20ರಂದು ಬೇಲೇಕೇರಿಯ ಅದಾನಿ ಎಂಟರ್‌ಪ್ರೈಸಸ್ ಕಂಪನಿ ಕಚೇರಿ ಮೇಲೆ ದಾಳಿ ಮಾಡಿದಾಗ ಸಿಕ್ಕಿದ ದಾಖಲೆಗಳು ಸಂಸದ ಅನಂತ್ಮಾಣಿ, ಮತ್ತೋರ್ವ ಶಾಸಕ ಹಾಗು ಹಲವು ಇಲಾಖೆಯ ಅಧಿಕಾರಿಗಳು ಪಡೆದ ಲಂಚ-ಹಫ್ತಾ-ಮಾಮೂಲಿಯ ವಿವರ ಎಳೆಎಳೆಯಾಗಿ ಬಿಚ್ಚಿಟ್ಟಿದೆ. ಬೇಲೇಕೇರಿಯ ಅದಾನಿ ಕಂಪನಿಯ ಬ್ರಾಂಚಿನ ಉಸ್ತುವಾರಿ ಪ್ರವೀಣ ಬಾಜಪೈ 2008ರ ಮಾರ್ಚ್ 28ರಂದು ಗುಜರಾತಿನ ಕೇಂದ್ರ ಕಚೇರಿಗೆ 29 ಪುಟಗಳ ಅಕ್ರಮ ಸಂಭಾವನೆಯ ಕ್ಯಾಶ್ ಅಕೌಂಟ್ ಸ್ಟೇಟ್‌ಮೆಂಟ್ ಇ-ಮೇಲ್‌ನಲ್ಲಿ ಕಳಿಸುತ್ತಾರೆ. ಇದರಲ್ಲಿ 4 ವರ್ಷ ಯಾವ್ಯಾವ ಜನಪ್ರತಿನಿಧಿ ಮತ್ತು ಯಾವ್ಯಾವ ಅಧಿಕಾರಿಗೆ ಎಷ್ಟೆಷ್ಟು ಕಳ್ಳ ಕಾಸು ಕೊಟ್ಟು ಸಂತೃಪ್ತಗೊಳಿಸಲಾಗಿದೆ ಎಂಬ ವಿವರವಿತ್ತು. ಲಂಚ-ಹಫ್ತಾ ಬಟವಾಡೆಗೆ ಕೇಂದ್ರ ಕಚೇರಿಯ ಮಿತ್ತಲ್ ಮತ್ತು ಮನೋಜ್ ಝಾ ಒಪ್ಪಿಗೆ ನೀಡಿದ್ದಾರೆ.



ADANI ENTERPRISES LIMITED BELEKERI

CASH RECONCILLATION STATEMENT

Particulars	27.03.08 Amount
YEAR 2007-08 (From 01.01.2007)	
PORT DEPT	496000
PORT DEPT - VESSELWISE	6648000
POLICE	1357750
OTHERS	1827950
AC CUSTOMS	710000
MLA / MP	200000
CUSTOMS - VESSELWISE	2020542
TOTAL 2007-08	12837242
BALANCE CASH REQUIRED	12837242
CASH IN HAND	257417.00
BALANCE AS PER SAP	3102409.00

H. S. REVANNA I.P.S.
Superintendent of Police
Special Investigation Team
Karnataka Lokayukta
Bengaluru

ಅನಂತ್‌ಕುಮಾರ್
ಹೆಗಡೆ ಹಫ್ತಾಗೆ
ಸಾಕ್ಷಿ- ಎಫ್‌ಐಆರ್

ಈ ಇ-ಮೇಲ್ ದಾಖಲೆ ಆಧಾರವಾಗಿಟ್ಟುಕೊಂಡು ತನಿಖೆ ನಡೆಸಿದ ಎಸ್‌ಐಟಿ ಎಫ್‌ಐಆರ್ ತಯಾರಿಸಿ ಕೋರ್ಟಿಗೆ ಸಲ್ಲಿಸಿದೆ. ಅದಾನಿ ಕಂಪನಿ ಹಂಚುತ್ತಿದ್ದ ಲಂಚದ ದರ ಭ್ರಷ್ಟರ ಯೋಗ್ಯತೆಗೆ ತಕ್ಕಂತೆ ನಿಗದಿ ಮಾಡಲಾಗಿದೆ. ಕೆಲವು ಎಂಜಲು ಬಡುಕರಿಗೆ ಒಂದು ಹಡಗಿಗೆ ಇಂತಿಷ್ಟು ಎಂದು ರೇಟ್ ಫಿಕ್ಸ್ ಮಾಡಿದ್ದರೆ, ಮತ್ತೆ ಕೆಲವರಿಗೆ ತಿಂಗಳ ಲೆಕ್ಕದಲ್ಲಿ, ವರ್ಷದ ಅವಧಿಯಲ್ಲಿ ಅದಿರಿನ ಪ್ರಮಾಣದಲ್ಲಿ ಹಫ್ತಾ ಮೊತ್ತ ಕೊಡಲಾಗುತ್ತಿತ್ತು. ಹೀಗೆ ಹಂಚಿದ ಕಪ್ಪು ಹಣ **2004-05**ರಲ್ಲಿ **22,62,924** ರೂ, **2005-06** ರಲ್ಲಿ **48,36,920** ರೂ, **2006-07** ರಲ್ಲಿ **66,31,144** ರೂ.ಗಳಾಗಿದ್ದರೆ, **2007-08**ರಲ್ಲಿ ಈ ಕಳ್ಳ ಕಪ್ಪ **1.28** ಕೋಟಿ-ಮೀರಿದೆ!!

ಅಕ್ರಮ ಅದಿರಿನ ಕೆಂಧೂಳಿನಲ್ಲಿ ಸಂಸದ ಅನಂತ್ಮಾಣಿ ಬಿದ್ದು ಹೊರಳಾಡಿ ಮೈ-ಮುಖ ಗಲೀಜಾಗಿರುವ ಗುಲ್ಲು ಏಳುತ್ತಿದ್ದಂತೆಯೇ ಆತ ಬೆಚ್ಚಿಬಿದ್ದಿದ್ದಾನೆ! "...ನಾನಂತೋನಲ್ಲ... ನಾನು ವರ್ಷಕ್ಕೆ 2 ಲಕ್ಷ ರೂ. ಭಿಕ್ಷೆ ಪಡಿಯೋ ಅಷ್ಟು ಭಿಕಾರಿಯಲ್ಲ...." ಎಂದು ತಡವರಿಸಿದ್ದಾನೆ! ಲಂಚ ಪಡೆದಿಲ್ಲ ಎಂದು ಹೇಳುವಾಗ ಮಾಣಿ ಮುಖದಲ್ಲಿ ಒಂಥರಾ ಅಪರಾಧಿಪ್ರಜ್ಞೆ ಇತ್ತೇ ವಿನಃ ಪರಿಶುದ್ಧತೆ-ಪ್ರಾಮಾಣಿಕತೆಯ ನೈತಿಕ ಕೆಚ್ಚಿರಲಿಲ್ಲ. ಮಾಣಿ ತಾನು ಸಂಭಾವಿತನೆಂದು ತೋರಿಸಿಕೊಳ್ಳಲು ತನಗೆ ಎರಡು ಲಕ್ಷ ಜುಜುಬಿ ಮೊತ್ತ ಎಂಬಂತೆ ಮಾತಾಡಿ ಜನರನ್ನು ಮಂಗ ಮಾಡಲು ನೋಡಿದ್ದಾನೆ. ಇಲ್ಲಿ ಗಮನಿಸಬೇಕಾದ ಮಹತ್ವದ ಒಂದಂಶವಿದೆ. ಅದೆಂದರೆ, ಎಸ್‌ಐಟಿ ಹಾಕಿರುವ ಎಫ್‌ಐಆರ್‌ನಲ್ಲಿ ಅದಾನಿ ಕಂಪನಿಯವರು ಕೊಟ್ಟಿರುವ ಹಫ್ತಾ, ಮಾಮೂಲಿ, ಲಂಚದ ವಿವರವಷ್ಟೇ ಇದೆ. ಆದರೆ ಬೇಲೇಕೇರಿಯಲ್ಲಿ **36** ಶಿಪ್ಪಿಂಗ್ ಕಂಪನಿಗಳಿದ್ದವು. ಕಾರವಾರ ಶಾಸಕ ಸತೀಶ್ ಸೈಲ್‌ನ ಮಲ್ಲಿಕಾರ್ಜುನ್ ಶಿಪ್ಪಿಂಗ್, ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರನ ಡ್ರೀಮ್ ಲಾಜಿಸ್ಟಿಕ್‌ನಂಥ ಘಟಾನುಘಟಿ ಕುಳಗಳ ರಫ್ತು ಕಂಪನಿಗಳು ಅದಾನಿ ಕಂಪನಿಯಂತೆಯೇ ಸಂಸದ-ಶಾಸಕ-ಅಧಿಕಾರಿ ಗಣಕ್ಕೆ ಹಫ್ತಾ, ಲಂಚ ನೀಡುತ್ತಿದ್ದರು. ಜತೆಗೆ ಹ್ಯಾಂಡ್ಲಿಂಗ್ ಏಜೆನ್ಸಿಗಳಂತೂ ಲೆಕ್ಕಕ್ಕೇ ಸಿಗದಷ್ಟು ಇದ್ದವು. ಇವೂ ದೊಡ್ಡವರಿಗೆ ಕಪ್ಪ ಒಪ್ಪಿಸುತ್ತಿದ್ದವು. ಒಂದು ಅಂದಾಜಿನಂತೆ ಸಂಸದ ಅನಂತ್ಮಾಣಿಗೆ ಕಮ್ಮಿಕಮ್ಮಿ ಎಂದರೂ ಒಂದು ಕೋಟಿಯಷ್ಟು ಕಳ್ಳ ಹಣ ಗಣಿ ದಂಧೆಕೋರರಿಂದ ಪ್ರತಿ ವರ್ಷ ಸಿಕ್ಕಿದೆ.

ಹನಿ-ಹನಿ ಕೂಡಿದರೆ ಹಳ್ಳ ತಾನೆ? ಅದಾನಿ ಕಂಪನಿಯಂತೆಯೇ ಎರಡರೆಡೇ ಲಕ್ಷ ಲಂಚ ಸಂಸದ ಸಾಹೇಬನಿಗೆ ಉಳಿದ ಕಂಪನಿಯವರೂ ಕೊಟ್ಟಿರುವ ಸಾಧ್ಯತೆಯಿದೆ. ಅಧಿಕಾರಸ್ಥರಿಗೆ ಹಫ್ತಾ ಕೊಡಲೆಂದೇ ರಫ್ತು ಕಂಪನಿಗಳು- ಹ್ಯಾಂಡ್ಲಿಂಗ್ ಏಜೆನ್ಸಿಗಳು ಸಿಂಡಿಕೇಟ್ ಮಾಡಿಕೊಂಡು ದೊಡ್ಡ ಕಾಣಿಕೆ ಕೊಡುತ್ತಿದ್ದರು. ಇದರಿಂದ ಪುಳಕಿತರಾಗುತ್ತಿದ್ದ ಜನಪ್ರತಿನಿಧಿಗಳು, ಅಧಿಕಾರಿಗಳು ಜನಸಾಮಾನ್ಯರ ಬಲಿ ಹಾಕಿ ಅದಿರು ಮಾಫಿಯಾದ ಬೆನ್ನಿಗೆ ನಿಲ್ಲುತ್ತಿದ್ದುದು ಇತಿಹಾಸ. ಸಂಸದ ಅನಂತ್ಮಾಣಿ-ಶಾಸಕ ಕಾಗೇರಿಗಳು ತಾವೆಷ್ಟೇ ಶುದ್ಧ ಹಸ್ತರೆಂದರೂ ಅದಿರು ವ್ಯವಹಾರ ಬಿರುಸಾಗಿದ್ದಾಗ ಈ ಚಡ್ಡಿ ಚತುರರು ನಡೆದುಕೊಂಡ ರೀತಿ-ನೀತಿ ಅನುಮಾನಾಸ್ಪದವಾಗಿತ್ತು!

ಗಣಿ ಕರ್ಮಕಾಂಡ ಕಳೆದ ಆರು ವರ್ಷದಿಂದ ಸುದ್ದಿ ಮಾಡುತ್ತಲೇ ಇದೆ. ಆದರೆ ತಾರ್ಕಿಕ ಅಂತ್ಯ ತಲುಪಿಲ್ಲ. ಗಣಿ ಮಾಫಿಯಾ ಡಾನ್ ಆಗಿದ್ದ ಜನಾರ್ದನ್ ರೆಡ್ಡಿ, ಸತೀಶ್ ಸೈಲ್, ಸುರೇಶ್ ಬಾಬು, ಆನಂದ್ ಸಿಂಗ್, ನಾಗೇಂದ್ರನಂಥ ಶಾಸಕರು, ವಿವೇಕ್ ಹೆಬ್ಬಾರ್‌ನಂಥ ಶಾಸಕನ ಸುಪುತ್ರ ಸಿಬಿಐ ಬೋನಿಗೆ ಬಿದ್ದು ಹೊರಗೆ ಬಂದಿದ್ದಾರೆ. ಲೋಕಾಯುಕ್ತ, ಸಿಬಿಐ, ಎಸ್‌ಐಟಿ ತನಿಖೆ ನಡೆದಿದೆ. ಆದರೆ ಅದ್ಯಾಕೋ ತಾರ್ಕಿಕ ಅಂತ್ಯಕ್ಕೆ ತನಿಖೆ ತಲುಪುತ್ತಿಲ್ಲ. ಈಗ ಎಸ್‌ಐಟಿ ಎಫ್‌ಐಆರ್ ಹಾಕಿದೆ. ಕೆನರಾ ಸಂಸದ, ಶಾಸಕ, ಎಸ್ಪಿ ಬಂದರು ಅಧಿಕಾರಿ, ಕಸ್ಟಮ್ಸ್, ಗಣಿ ಅಧಿಕಾರಿಗಳು ಮತ್ತು ನ್ಯಾಯಾಧೀಶರ ಮೇಲೂ ಹಣ ಸಗಣಿ ಮುಕ್ಕಿದ ಆರೋಪ ಬಂದಿದೆ.

ಚಾರ್ಜ್‌ಶೀಟ್ ಸಲ್ಲಿಕೆ ಆದೀತಾ? ಸಂಸದ ಶಾಸಕ, ನ್ಯಾಯಾಧೀಶ, ಅಧಿಕಾರಿಗಳು ಕಂಬಿ ಎಣಿಸುವರಾ? ಕಷ್ಟ-ಕಷ್ಟ!!

■ ವರದಿಗಾರ

ನಾಲ್ಕು ಬಾರಿ ಮುಖ್ಯಮಂತ್ರಿ ಪಟ್ಟ ಮನೆಬಾಗಿಲಿಗೆ ಬಂದಿತ್ತು

ಥೂತ್ತೇರಿ

ಯಾಹೂ ▸

ಕಡೆಗೂ ಶಕ್ತಿಮಾನ್ ಎಂಬ ಅಶ್ವ ಯಾತನೆಯಿಂದ ನರಳಿ ಇಹಲೋಕ ತ್ಯಜಿಸಿದ್ದಾನೆ. ದೇಶ ನೋವಿನಿಂದಲೇ ಕಣ್ಣೀರು ಮಿಡಿದಿದೆ. ಆದರೇನು, ಶಕ್ತಿಮಾನ್ ಕಾಲಿಗೆ ಅಮಾನುಷವಾಗಿ ಹೊಡೆದ ಗಣೇಶ್ ಜೋಷಿ ಎಂಬ ಬಿಜೆಪಿ ಎಮ್ಮೆಲ್ಲೆ "ನಾನ್ಯಾವ ತಪ್ಪನ್ನೂ ಮಾಡಿಲ್ಲ, ಮಾಡಿದ್ದರೆ ನನ್ನ ಕಾಲನ್ನು ಕತ್ತರಿಸಿ" ಎಂದಿದ್ದಾನೆ. ಈತನ ಮಾತು ಮತ್ತೊಂದು ಮಾತನ್ನು ಜ್ಞಾಪಿಸುತ್ತಿದೆಯಲ್ಲಾ, ಹೈದರಾಬಾದಿನಲ್ಲಿ ವೇಮುಲನ ಜೀವಹತ್ಯೆಗೆ ಕಾರಣವಾದ ಕಾರಣಗಳನ್ನೆಲ್ಲಾ ಮುಚ್ಚಿಟ್ಟ ಸ್ಮೃತಿ ಇರಾನಿ ಎಂಬ ನಟಿ ಲೋಕಸಭೆಯಲ್ಲಿ ಭೀಕರವಾಗಿ ಅಭಿನಯಿಸುತ್ತ "ಬೇಕಿದ್ದರೆ ನನ್ನ ಶಿರಚ್ಛೇದನ ಮಾಡಿ ಇಡುತ್ತೇನೆ" ಎಂದುಬಿಟ್ಟಳು. ಬೆಚ್ಚಿದ ಸಭೆ ಹಾಳು ಬಿದ್ದೋಗಲಿ ಎಂದು ಸುಮ್ಮನಾಯ್ತು. ಇದು ಚಡ್ಡಿಗಳ ಮೂಲಗುಣ. ಗಣೇಶ್ ಜೋಶಿ ಶಕ್ತಿಮಾನನ ಹಿಂಗಾಲಿಗೆ ಬೀಸಿ ಬೀಸಿ ಹೊಡೆಯುವುದನ್ನು ದೇಶವೇ ನೋಡಿದೆ. ಆದರೆ ಆತ "ನಾನು ಯಾವ ತಪ್ಪನ್ನು ಮಾಡಿಲ್ಲ. ಮಾಡಿದ್ದರೆ ನನ್ನ ಕಾಲನ್ನೇ ಕತ್ತರಿಸಿ" ಎಂದು ಹೇಳುತ್ತಿದ್ದಾನೆ ಎಂದರೆ ಅದು ಇಡೀ ಬಿಜೆಪಿಗಳ ಮಾತು. ಪ್ರತ್ಯಕ್ಷವಾಗಿ ತೋರಿದ್ದನ್ನೂ ಅಲ್ಲಗಳೆಯುತ್ತ ಸುಳ್ಳನ್ನೇ ವಾದಿಸುತ್ತ, ಅದನ್ನು ಸತ್ಯ ಮಾಡುವ ಕಲೆಯನ್ನು ಬಿಜೆಪಿ ಬೈಠಕ್‌ನಲ್ಲೇ ಕೊಡುವ ತರಬೇತಿಯಂತಲ್ಲಾ, ಥೂತ್ತೇರಿ!

* * * *

ಎಮ್ಮೆಯಷ್ಟು ನಿಧಾನಗತಿಯ ಸಿದ್ದರಾಮಯ್ಯನವರ ಮೇಲೆ ಕುಂಬಳದ ಕೋಣನಂತೆ ಎಗರಿಬಿದ್ದ ಪೂಜಾರಿಯವರನ್ನು ಮಾತನಾಡಿಸಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಯಾರು ಏನು ಮಾಡುವರು ನನಗೇನು ಕೇಡು ಮಾಡುವರು... ಯಾರು..."

"ಹಲೋ ಯಾರು?"

"ನಾನು ಸಾರ್, ಯಾಹು."

"ಹೇಳಿ ಇವರೆ."

"ಚೆನ್ನಾಗಿದ್ದೀರ ಸಾರ್?"

"ನನಗೇಂತ ಆಗಿದ್ದು?"

"ಮತ್ತೆ ನಾನು ಎಷ್ಟು ದಿನ ಇರತಿನೊ ಗೊತ್ತಿಲ್ಲ ಅಂದಿದ್ದೀರಲ್ಲ ಸಾರ್?"

"ಅದು ಮಾತಿಗೆ ಹೇಳಿದ್ದು."

"ಮಾತಿಗೆ ಅಂದ್ರೆ?"

"ನೋಡಿ ಇವರೆ, ನಾವೆಲ್ಲಾ ಒಂದು ದಿನ ಹೋಗುವವರೆ. ಆ ಅರ್ಥದಲ್ಲಿ ಹೇಳಿದ್ದು."

"ಸಾವಿನ ಮಾತಾಡಿದ್ರೆ ಜನ ನಿಮ್ಮ ಬಗ್ಗೆ ಉತ್ಸಾಹ ಕಳಕೊಳ್ತರೆ."

"ಯಂತಕ್ಕೆ?"

"ಏನು ಕಾಯಿಲೆನೊ ಏನೋ ಅಂತ."

"ಎಲ್ಲರಿಗೂ ಸಾವು ಖಚಿತವಲ್ಲವ?"

"ಖಚಿತ ನಿಜ. ನೀವು ಸಾವಿನ ಬಗ್ಗೆ ಮಾತಾಡಿದ್ರೆ ಅಂಗನ್ನಬೇಡಿ ನೀವಿನ್ನೂ ಇರಬೇಕು ಅಂತ ಯಾರು ಅನ್ನಲಿಲ್ಲ ನೋಡಿ."

"ಬೇಡ. ನನ್ನ ಸಾವಿನನಂತರ ನನ್ನ ನಡವಳಿಕೆ ನೆನೆಸಿಕೊಂಡರೆ ಸಾಕು."

"ನಿಮ್ಮ ಪ್ರಧಾನ ನಡವಳಿಕೆ ಏನು ಸಾರ್?"

"ನಿಜ ಹೇಳಿದ್ದು, ಸರಳವಾಗಿ ಬದುಕಿದ್ದು, ಕಷ್ಟಪಟ್ಟು ಪಾರ್ಟಿ ಕಟ್ಟಿ ಬೆಳೆಸಿದ್ದು."

"ಕಷ್ಟಪಟ್ಟು ಪಾರ್ಟಿ ಕಟ್ಟಿದರೆ ಮೂರು ಸಲ ಯಂಗೆ ಸೋತ್ರಿ ಅಂತ?"

"ಮತಾಂಧರ ಕೈ ಮೇಲಾಯ್ತು, ಪ್ರಾಮಾಣಿಕವಾದ ಚುನಾವಣೆಗೆ ಬೆಲೆಯಿಲ್ಲದಾಯ್ತು."

"ರಾಜಕಾರಣ ಬಿಟ್ಟು ಸಾಮಾಜಿಕವಾದ ಕೆಲಸದಲ್ಲಿ ತೊಡಗಿಕೊಳ್ಳಿ ಸಾರ್."

"ಈಗ ಮಾಡುತ್ತಿರುವುದು ಅದನ್ನೇ ಅಲ್ಲವ?"

"ಒಂದು ಕಾಲದಲ್ಲಿ ನಿಮ್ಮನ್ನು ಸೋಲಿಸೋರೆ ಇರಲಿಲ್ಲ."

"ಅದು ಇಂದಿರಾ ಗಾಂಧಿ ಕಾಲ. ಈಗ ನಮ್ಮ ಸಾಮರ್ಥ್ಯದಿಂದಲೇ ಗೆದ್ದು ಬರಬೇಕು."

"ಗೊತ್ತಾಯ್ತು ಬಿಡಿ ಸಾರ್."

"ಯಂತ ಗೊತ್ತಾಗಿದ್ದು?"

"ನಿಮ್ಮ ಸಾಮರ್ಥ್ಯದ ಬಗ್ಗೆ ಗೊತ್ತಾಯ್ತು ಅದ್ಕೆ ಸೋಲ್ತಾಯಿರದು."

"ನೋಡಿ ಇವರೆ, ಕಾಲ ಬದಲಾಗ್ತಾಉಂಟು. ನಾವು ನಡೆಸಿದ ಪ್ರಾಮಾಣಿಕ ಚುನಾವಣೆಗಳು ಈಗ ನಡೆಯುವುದಿಲ್ಲ, ಈಗ ಮತಾಂಧತೆ, ಜಾತಿಬಲ ಮತ್ತು ಹಣಬಲ ಕೆಲಸ ಮಾಡ್ತಾಉಂಟು."

"ನಿಜ ಸಾರ್. ಅದ್ಕೆ ಏನು ಮಾಡಬೇಕು ಅಂದ್ರೆ ಒಬ್ಬ ಜನಾರ್ದನಾಗಿಯನ್ನು ತಯಾರು ಮಾಡಿ. ನಿಮ್ಮ ಕಾಲ ಮುಗಿದಿದೆ. ಹೊಸಬರಿಗೆ ಗೊಬ್ಬರ ಆಗಿ."

"ನೀವು ನಮಗೆ ಸಲಹೆ ಕೊಡುವುದು ಬೇಡ."

"ನೀವು ಮುಖ್ಯಮಂತ್ರಿಗೆ ಸಲಹೆ ಕೊಡಬಹುದೊ?"

"ನಾನು ಪಾರ್ಟಿಯ ಹಿರಿ ವ್ಯಕ್ತಿ ಕಾಂಗ್ರೆಸ್ಸಿಗ."

"ನಾನು ಹಿರಿಯ ಪತ್ರಕರ್ತ."

"ಪತ್ರಕರ್ತರು ನನಗೆ ಗೊತ್ತುಂಟು. ಅವರ ಬಗ್ಗೆ ಹೆಚ್ಚಿಗೆ ಹೇಳುವುದು ಬೇಡ."

"ಒಂದು ಪರ್ಸನಲ್ ಸಲಹೆ ಸಾರ್."

"ಏನು ಹೇಳಿ?"

"ನೀವು ರಾಮಕೃಷ್ಣ ಹೆಗಡೆ ಎದುರು ರಾಜಕಾರಣ ಮಾಡಿದೋರು. ಆಗ ದಳ ಸೋಲಬೇಕಾದ್ರೆ ದಳದಲ್ಲೇ ಜಗಳ ನಡದೂ ನಡದು ಜನಗಳಿಗೆ ಬೇಜಾರಾಗಿ ಸೋಲಿಸಿದ್ರು. ಈಗ್ಲೂ ನೀವು ಕಾಂಗ್ರೆ ಜಗಳಕ್ಕೆ ನಾಂದಿ ಹಾಡ್ತಾಯಿದ್ದಿರಿ. ಹೇಳದೇನಾರ ಇದ್ರೆ ಪಾರ್ಟಿ ಪ್ರೆಸಿಡೆಂಟ್ ಕರಿಸಿಗಂಡೇಳಿ ಅಥವಾ ಸಿದ್ದು ಹತ್ರ ಹೋಗಿ ಹೇಳಿ ಸಾರ್."

"ಸಿದ್ದು ಹತ್ತಿರ ಹೋಗಲಿಕ್ಕೆ ನಾನು ಅಂತ ಜನ ಅಲ್ಲ. ನನ್ನ ಮನೆ ಬಾಗಿಲಿಗೆ ನಾಲ್ಕು ಬಾರಿ ಮುಖ್ಯಮಂತ್ರಿ ಪದವಿ ಹುಡುಕಿಕೊಂಡು ಬಂದಿತ್ತು."



"ಆಗ ನೀವು ಸಿಗಲಿಲ್ವ ಸಾರ್?"

"ಇಂದಿರಾ ಗಾಂಧಿ ಕರೆಸಿಕೊಂಡು ಕೇಳಿದ್ದರು."

"ಆಕೆಗೆ ತನ್ನ ಚೇಲಾಗಳು ಮುಖ್ಯಮಂತ್ರಿ ಆಗದು ಬೇಕಿತ್ತು. ಆಂಧ್ರದಲ್ಲಿ ಅಂಜಯ್ಯ, ಮಹಾರಾಷ್ಟ್ರದಲ್ಲಿ ಅಂಟುಲೆ, ಕರ್ನಾಟಕದಲ್ಲಿ ಗುಂಡೂರಾಯರು ಇದ್ದ ಕಾಲ ಅಲ್ಲವೆ ಅದು?"

"ಅದಾದ ಮ್ಯೇಲೂ ಕೇಳಿದ್ದರು."

"ಕರ್ನಾಟಕದಲ್ಲಿ ಯಾರೂ ಕೂಡ ನೀವು ಮುಖ್ಯಮಂತ್ರಿ ಆಗೋ ವಿಷಯ ಮಾತಾಡಲಿಲ್ಲ ಸಾರ್. ಈಗ ನಿಮ್ಮ ಬಾಯಲ್ಲೇ ಕೇಳಿದ್ದು."

"ಸತ್ಯ ಸಂಗತಿ ಏನು ಅಂತ ನನ್ನ ಆತ್ಮಕತೆಯಲ್ಲಿ ಬರೀತನೆ."

"ಬರೀರಿ ಸಾರ್. ನಿಮ್ಮ ಆತ್ಮಕತೆಯಿಂದ ಯಾರೂ ಬೆಚ್ಚಿ ಬೀಳಲ್ಲ ಅನ್ಸುತ್ತೆ."

"ಬೆಚ್ಚಿ ಬೀಳಲಿ ಅಂತ ಬರೀತಿಲ್ಲ, ಸತ್ಯ ಏನು ಅಂತ ಜನಕ್ಕೆ ಗೊತ್ತಾಗಲಿ."

"ಈ ಸಂದರ್ಭದಲ್ಲಿ ಗೊತ್ತಾದರೇನು, ಗೊತ್ತಾಗದೆ ಇದ್ರೇನು ಅನ್ನಂಗಾಗಿದೆಯಲ್ಲಾ ಸಾರ್."

"ಯಂತ ಆಗಿದೆ?"

"ಸದ್ಯದ ಜನಕ್ಕೆ ಇತಿಹಾಸನೇ ಬೇಕಿಲ್ಲ. ಇವತ್ತು ನಾಳೆ ಅಷ್ಟೇ ನೋಡಿ ಬೇಕಾಗಿರೋದು."

"ಹೌದೌದು. ಆದರೆ ಈ ಬಿಜೆಪಿಗಳು ನಮ್ಮ ಇತಿಹಾಸವನ್ನೇ ತಿರುಚಲು ಹೊರಟಿದ್ದಾರೆ. ಆದಕ್ಕಾಗಿ ನಾವು ನಿಜ ಸಂಗತಿಗಳನ್ನು ದಾಖಲಿಸಬೇಕು ಅಲ್ಲವ?"

"ಅದೇನೋ ನಿಜ ಸಾರ್. ನಿಮ್ಮ ಮಂಗಳೂರಲ್ಲೇ ನೋಡಿ ನೆಹರು ಮೈದಾನನ ಜಿಲ್ಲಾ ಮೈದಾನ ಅಂತ ಚಡ್ಡಿಗಳು ಬದ್ಲಾಯಿಸಿದ್ದರಂತೆ."

"ಯಂತ ಬದಲಾಯಿಸುವುದು ಅವರ ಬೊಜ್ಜ ಹದಿನೇಳು ವರ್ಷ ನೆಹರು ಜೈಲಿನಲ್ಲಿದ್ದರು. ಯಾವ ಬಿಜೆಪಿಗಳು ಅಷ್ಟು ಸಮಯ ಇದ್ದು ಬಂದರು ತೋರಿಸಲಿ."

"ಅವುರ್‍ಯಾರೂ ಜೈಲಲ್ಲಿರಲಿಲ್ಲ ಸಾರ್. ಬ್ರಿಟಿಷರ ಆಡಳಿತದಲ್ಲಿ ಅವುರೆಲ್ಲಾ ಸರಕಾರಿ ಕೆಲಸದಲ್ಲಿದ್ರು. ಬ್ಯಾಂಕು, ಎಲ್‌ಐಸಿ, ಪೋಸ್ಟಾಫೀಸು, ರೈಲ್ವೆ ಇಂತಲ್ಲಿ ಕೆಲಸದಲ್ಲಿದ್ರು. ಅವರ ಮಕ್ಕಳೆಲ್ಲಾ ಈಗ ಬಿಜೆಪಿ ಲೀಡರುಗಳು. ಅಲ್ಲವ ಸಾರ್?"

"ಸರೀಗೆ ಗುರುತಿಸಿದ್ದೀರಿ. ಈಗಲಾದರೂ ನಾನು ಆತ್ಮಚರಿತ್ರೆ ಬರೆಯುವುದು ಒಳ್ಳೆಯದಲ್ಲವಾ?"

"ಅದರಲ್ಲಿ ಸಿದ್ದು ಪ್ರಸ್ತಾಪ ಇರುತ್ತ ಸಾರ್?"

"ಮತ್ತೆ, ಅವರ ಪ್ರಸ್ತಾಪದಿಂದಲೇ ನನ್ನ ಆತ್ಮಚರಿತ್ರೆ ಮುಗಿಯುವುದು."


"ಏನು ಬರೀತಿರಿ ಸಾರ್?"

"ಕಷ್ಟಪಟ್ಟು ನಾವೆಲ್ಲಾ ಸೇರಿ ಕಟ್ಟಿದ ಕಾಂಗ್ರೆಸ್ ಪಾರ್ಟಿಗೆ ವಲಸೆ ಬಂದ ಸಿದ್ದು ಕಾಂಗ್ರೆಸ್ ಮುಗಿಸಿ ಮನೆಗೆ ಹೋಗಿ ಮಲಗಿದರು ಅಂತ ಸಮಾಪ್ತಿ ಮಾಡ್ತೇನೆ."

"ಥೂತ್ತೇರಿ!!!"

■

ಚಿತ್ರದುರ್ಗ: ಬಿಸಿಎಂ ಗೋದಾಮಿನ 'ಮಹಾ' ಹೆಗ್ಗಣ


ಆಂಜನೇಯ

ದೀಪದ ಕೆಳಗೇ ಕತ್ತಲು ಅನ್ನುವಂತೆ ಸಮಾಜ ಕಲ್ಯಾಣ ಸಚಿವ ಎಚ್.ಆಂಜನೇಯರ ತವರು ಜಿಲ್ಲೆ ಚಿತ್ರದುರ್ಗದ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯಲ್ಲೊಂದು ಹೆಗ್ಗಣ ಸೇರಿಕೊಂಡು ಭಾರೀ ಭಾನ್ಗಡಿ ನಡೆಸುತ್ತಿದೆ. ಬಿಸಿಎಂ ಇಲಾಖೆಯ ಜಿಲ್ಲಾಧಿಕಾರಿ ಕುರ್ಚಿಗೆ ತಳವೂರಿರುವ ಮಹೇಶ್ ಅನ್ನೋ ಹೆಸರಿನ ಈ ಹೆಗ್ಗಣ ಕಳೆದ ಮೂರು ವರ್ಷದಲ್ಲಿ ದುಂಡಗಾದ ವೇಗವನ್ನು ಕಂಡು ಚಿತ್ರದುರ್ಗದ ಜನತೆಯೇ ದಂಗಾಗಿಹೋಗಿದ್ದಾರೆ. ವಿಪರ್ಯಾಸವೆಂದರೆ ತನಗೆ ಮಂತ್ರಿ ಆಂಜನೇಯರ ಅಭಯವಿದೆ ಅಂತೇಳಿಕೊಳ್ಳುತ್ತಲೇ ಈ ಹೆಗ್ಗಣ ಲೂಟಿಗಿಳಿದಿದೆ!

ಈತನ ಭ್ರಷ್ಟಾಚಾರದ ಆವೇಗ ಎಂತದ್ದೆಂದರೆ ಜಿಲ್ಲೆಯ ಮಟ್ಟಿಗೆ ಮಂತ್ರಿ ಆಂಜನೇಯರ ದಲಿತ ಬಿಡಾರ ವಾಸ್ತವ್ಯದ ಪಬ್ಲಿಸಿಟಿಯನ್ನೇ ಓವರ್‌ಟೇಕ್ ಮಾಡಿ ಜನರ ನಡುವೆ ಚರ್ಚೆಗೊಳ್ಳುತ್ತಿದೆ. ನಿಜ ಹೇಳಬೇಕೆಂದರೆ, ಆಂಜನೇಯರು ಸಮಾಜಕಲ್ಯಾಣ ಮಂತ್ರಿಯಾದ ನಂತರವೇ ಚಿತ್ರದುರ್ಗದ ಎಸ್ಸಿ/ಎಸ್ಟಿ ಸಮುದಾಯದ ರೈತರು ಗಂಗಾಕಲ್ಯಾಣ ಯೋಜನೆಯ ಬೋರ್‌ವೆಲ್‌ಗಳನ್ನು ಕಾಣುವಂತಾದದ್ದು. ಈ ವಿಚಾರದಲ್ಲಿ ಆಂಜನೇಯರು ಅದೆಷ್ಟು ಮುತುವರ್ಜಿ ವಹಿಸಿದ್ದರೆಂದರೆ ಈ ಯೋಜನೆಯಡಿ ದಲಿತರು-ಹಿಂದುಳಿದ ಫಲಾನುಭವಿಗಳು ಬೋರು ಕೊರೆಸಲು ಯಾವ ಅಧಿಕಾರಿಗೂ ನಯಾಪೈಸೆಯ ಲಂಚ ನೀಡಬಾರದು, ಒಂದುವೇಳೆ ಯಾವ ಅಧಿಕಾರಿಯಾದರೂ ಹಣಕ್ಕೆ ಬೇಡಿಕೆ ಇಟ್ಟರೆ ನನ್ನ ಮೊಬೈಲ್‌ಗೆ ಸಂಪರ್ಕಿಸಿ ಅಂತ ತಮ್ಮ ಮೊಬೈಲ್ ನಂಬರ್‌ನ್ನು ಬಹಿರಂಗ ಸಭೆಯಲ್ಲೇ ಹೇಳಿದ್ದರು. ಆಗ ದಲಿತರು-ಹಿಂದುಳಿದವರು-ಅಲ್ಪಸಂಖ್ಯಾತರು ಖುಷಿ ಪಟ್ಟಿದ್ದು ಅಷ್ಟಿಷ್ಟಲ್ಲ.

ಆದರೆ, ಮಹೇಶ್ ಎಂಬ ಈ ಭ್ರಷ್ಟ ಆಸಾಮಿ ಏಕಾಂಗಿಯಾಗಿ ಸಚಿವರ ಅಷ್ಟೂ ಆಶಯಗಳನ್ನು ಹಳ್ಳ ಹಿಡಿಸುತ್ತಿದ್ದಾನೆ ಮಾತ್ರವಲ್ಲ, ಅವತ್ತು ಆಂಜನೇಯರು ವೇದಿಕೆ ಮೇಲೆ ಆಡಿದ ಮಾತುಗಳನ್ನೇ ಜನ ಅನುಮಾನಿಸುವಂತೆ ಮಾಡಿದ್ದಾನೆ. ಇವನ ಎತ್ತುವಳಿ ರಭಸಕ್ಕೆ ಚಿತ್ರದುರ್ಗ ಜಿಲ್ಲಾ ಬಿಸಿಎಂ ಇಲಾಖೆಯೇ ಬೆಂಡಾಗಿಹೋಗಿದೆ. ಮಂತ್ರಿ ಆಂಜನೇಯ ವೇದಿಕೆ ಮೇಲೆ ನಿಂತು ಯಾವ ಗಂಗಾಕಲ್ಯಾಣ ಯೋಜನೆಯ ಅನುಷ್ಠಾನಕ್ಕೆ ನಯಾಪೈಸೆ ಲಂಚ ನೀಡಬೇಡಿ ಅಂತ ಫರ್ಮಾನು ಹೊರಡಿಸಿದ್ದರೋ, ಅದೇ ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳು ಐದು ಸಾವಿರ ರೂಪಾಯಿ ತಂದು ಮಹೇಶನ ಕಿಸೆ ತುಂಬಿಸಿದ ನಂತರವಷ್ಟೇ ಫೈಲಿಗೆ ಈತ ಸಹಿ ಹಾಕೋದು. ಏನಿಲ್ಲವೆಂದರು ಜಿಲ್ಲೆಯಲ್ಲಿ ಈ ಯೋಜನೆಯಡಿ ಅಜಮಾಸು ಎಂಟು ನೂರು ಬೋರುಗಳನ್ನು ಕೊರೆಯಲಾಗಿದೆ. ಪ್ರತಿ ಬೋರಿಗೆ ಐದು ಸಾವಿರ ಅಂದರೂ ಇದೊಂದೆ ಯೋಜನೆಯಿಂದ ಮಹೇಶನ ಬ್ಯಾಂಕ್ ಬ್ಯಾಲೆನ್ಸು ನಲವತ್ತು ಲಕ್ಷದ ಗಡಿ ದಾಟುತ್ತದೆ.

ತನ್ನ ಈ ಅಕ್ರಮಗಳಿಗೆಲ್ಲ ಮಹೇಶ, ಮಂತ್ರಿ ಆಂಜನೇಯರ ಹೆಸರನ್ನು ಗುರಾಣಿಯಂತೆ ಬಳಸಿಕೊಂಡು ಬರುತ್ತಿರೋದು ವಿಪರ್ಯಾಸ. ಕಳೆದ ಮೂರು ವರ್ಷಗಳಿಂದಲೂ ಈತ ಇಂತಹ ಎತ್ತುವಳಿ ನಡೆಸಿಕೊಂಡು ಬಂದಿದ್ದರೂ ಆತ ತನ್ನ ಕುರ್ಚಿಯಿಂದ ಅಲ್ಲಾಡದೆ ಅಲ್ಲೇ ಅಂಡೂರಿರುವುದು ನೋಡಿದರೆ ನಿಜಕ್ಕೂ ಆಂಜನೇಯರ ಪ್ರಭಾವ ಇರಲೇಬೇಕು ಅಂತ ಜನ ಮಾತಾಡಿಕೊಂಡು ಮಹೇಶನಿಗೆ ಕಪ್ಪ ಸಲ್ಲಿಸಿ ಹೋಗುತ್ತಿದ್ದಾರೆ. ಅಸಲಿಗೆ ಆಂಜನೇಯ ಮಂತ್ರಿಯಾದ ನಂತರ ಚಿತ್ರದುರ್ಗದ ಚಿತ್ರಣ ಕೊಂಚ ಬದಲಾಗಿದೆ. ಹಲವು ಸರ್ಕಾರಗಳು ಹಾದುಹೋದರೂ ಕನಿಷ್ಠ ಸೌಲಭ್ಯದಿಂದ ವಂಚಿತವಾಗಿದ್ದ ಕುಗ್ರಾಮಗಳು ಈಗೀಗ ಸೌಲಭ್ಯಗಳನ್ನು ಕಾಣುವಂತಾಗಿದೆ. ಒಂದಿಷ್ಟು ಪೊಲಿಟಿಕಲ್ ಏರಿಳಿತಗಳ ಹೊರತಾಗಿ ಇನ್ನೂ ಜನರ ಮನಸ್ಸಲ್ಲಿ ಆಂಜನೇಯರ ಬಗ್ಗೆ ಒಲವು ಉಳಿದಿದೆಯೆಂದರೆ ಅದಕ್ಕೆ ಇದೇ ಕಾರಣ. ಅಂತದ್ದರಲ್ಲಿ ಮಹೇಶನಂಥ ಸರ್ಕಾರಿ ಹೇತ್ಲಾಂಡಿಯೊಬ್ಬ 'ನಾನು ಮಂತ್ರಿಗಳಿಗೆ ಹತ್ತಿರದವನು, ನಾನು ವಸೂಲು ಮಾಡುವ ಲಂಚದಲ್ಲಿ ಮಂತ್ರಿಗೂ ಪಾಲು ಕೊಡಬೇಕು' ಅಂತ ಘಂಟಾಘೋಷವಾಗಿ ವಸೂಲಿಗಿಳಿಯುತ್ತಿರುವುದು ಅವರ ಹೆಸರಿಗೂ ಮಸಿ ಬಳಿಯುತ್ತಿದೆ. ಇವನ ಉಪಟಳ ಕೇವಲ ಜನಸಾಮಾನ್ಯರಿಗೆ ಮಾತ್ರ ಸೀಮಿತವಾದುದಲ್ಲ, ಮಂತ್ರಿಯ ಹೆಸರು ಭಜನೆ ಮಾಡುತ್ತಾ ಸರ್ಕಾರಿ ಅಧಿಕಾರಿಗಳ ನಡುವೆಯೂ ಭಾರೀ ಸದ್ದು ಮಾಡುತ್ತಿದ್ದಾನೆ. ಇವನ ಹೆಸರು ಕೇಳಿದರೇನೆ ಸರ್ಕಾರಿ ಅಧಿಕಾರಿಗಳು ಹೆದರುತ್ತಾರೆ. ಪ್ರತಿ



ಮಹೇಶ

ಇಲಾಖೆಯಿಂದಲೂ ಈತ ಮಂತ್ರಿ ವಸೂಲಿಗೆ ಇಳಿದಿದ್ದಾ[ನೆ] ಅನ್ನೋ ಗಾಳಿ ಸುದ್ದಿ ಇದೆಯಾದರು ಅದಿನ್ನೂ ಖಾತ್ರಿಯಾಗಿಲ್ಲ. ಅಂದಹಾಗೆ, ಇವನ ವಿಚಾರ ಆಂಜನೇಯರಿಗೆ ಗೊತ್ತಿಲ್ಲ ಅಂತನ್ನಲಿಕ್ಕಾಗದು. ಹಾಗೊಮ್ಮೆ ಗೊತ್ತಿದ್ದೂ ಸುಮ್ಮನಿದ್ದರೆ ಆಂಜನೇಯರು ಭಾರೀ ಬೆಲೆಯನ್ನು ತರಬೇಕಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಯಾವುದಕ್ಕೂ ಮಂತ್ರಿ ಸಾಹೇಬರು ಎಚ್ಚೆತ್ತುಕೊಂಡು ಇವನನ್ನು 'ಹಚಾ...' ಅಂತ ಹೊರಗಟ್ಟಬೇಕಾಗಿದೆ. ಅದಕ್ಕಿನ್ನೂ ಕಾಲ ಮಿಂಚಿಲ್ಲ. ಈಗಲೂ ಆ ಸಾಹಸಕ್ಕೆ ಕೈಹಾಕದಿದ್ದರೆ 2018ರ ಹೊತ್ತಿಗೆ ಅವರ ಹೆಸರನ್ನು ಇನ್ನೆಷ್ಟು ಪಾತಾಳಕ್ಕಿಳಿಸುತ್ತಾನೊ ದೇವರೇ ಬಲ್ಲ.

■ ಟಿ.ಎನ್. ಷಣ್ಮುಖ

ಚಿತ್ರದುರ್ಗ: ಕಾಂಗ್ರೆಸ್ ಬಾಯಲ್ಲಿ ಸೌಭಾಗ್ಯಳೆಂಬ 'ಬಿಸಿ' ತುಪ್ಪ


ಸೌಭಾಗ್ಯ ಬಸವರಾಜು

ಜಿಲ್ಲಾ ಪಂಚಾಯ್ತಿ ಅಧ್ಯಕ್ಷಗಾದಿಯ ಚುನಾವಣೆ ಮೇ 4ಕ್ಕೆ ಅಂತ ನಿಕ್ಕಿಯಾದದ್ದೇ ತಡ, ಚಿತ್ರದುರ್ಗದ ಕಾಂಗ್ರೆಸ್ ಪಾಳಯದಲ್ಲಿ ರಾಜಕಾರಣ ರಂಗೇರಲು ಶುರುವಾಗಿದೆ. ಅಸಲಿಗೆ ಕೈ ಪಾರ್ಟಿಯಲ್ಲಿ ಹೇಳಿಕೊಳ್ಳುವಂತಹ ಬಣ ರಾಜಕಾರಣ ಸದ್ಯಕ್ಕೆ ಗೋಚರಿಸುತ್ತಿಲ್ಲವಾದರೂ ಅಧಿಕಾರಕ್ಕಾಗಿ ಹಕೀಕತ್ತುಗಳು ನಡೆಯುತ್ತಿರೋದನ್ನು ತಳ್ಳಿ ಹಾಕುವಂತಿಲ್ಲ. ಕಳೆದ ಸಲ ಸ್ಪಷ್ಟ ಬಹುಮತವಿಲ್ಲದೆ ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಂಡಿದ್ದಾಗಲೇ ಅಧ್ಯಕ್ಷಗಾದಿಗಾಗಿ ಕಾಂಗ್ರೆಸ್‌ನಲ್ಲಿ ನಡೆದ ಗುಂಡಾಗುಂಡಿಯೇನೂ ಕಮ್ಮಿ ಅಲ್ಲ. ಕೊನೆಯ ಇಪ್ಪತ್ತು ತಿಂಗಳ ಅಧಿಕಾರಕ್ಕಾಗಿ ಗಿರಿ ಜಾನಕಲ್ ಎಂಬ ಸಮಯಸಾಧಕ ಆಸಾಮಿ ತನ್ನೊಟ್ಟಿಗೆ ನಾಲ್ವರು ಕಾಂಗ್ರೆಸ್ ಸದಸ್ಯರನ್ನು ಹೈಜಾಕ್ ಮಾಡಿಕೊಂಡು ಬಿಜೆಪಿಯ ಕದ ತಟ್ಟಿ ಅಧ್ಯಕ್ಷನಾಗಿದ್ದ. ಅಂತಹದ್ದರಲ್ಲಿ ಈ ಸಲ ಚಿತ್ರದುರ್ಗ ಜಿಲ್ಲಾ ಪಂಚಾಯ್ತಿಯಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಸಿಕ್ಕಿದೆ. ಒಟ್ಟು 37 ಜಿ.ಪಂ. ಕ್ಷೇತ್ರಗಳಲ್ಲಿ 23 ಕಾಂಗ್ರೆಸ್, 12 ಬಿಜೆಪಿ ಸದಸ್ಯರು ಚುನಾಯಿತರಾಗಿದ್ದಾರೆ. ಅದೂಅಲ್ಲದೆ ಅಧ್ಯಕ್ಷರಾದವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ಒಲಿದು ಬರುವ ಹೊಸ ನಿಯಮವೂ ಸಜ್ಜಾಗಿ ಕೂತಿದೆ. ಹೀಗಿರುವಾಗ ಅಧ್ಯಕ್ಷ ಕುರ್ಚಿಯ ಮೇಲೆ ತಮ್ಮ ತಳವೂರಲು ತರಹೇವಾರಿ ಕಸರತ್ತುಗಳು ನಡೆಯುತ್ತಿವೆ.

ಒಟ್ಟಾರೆ ರೇಸಿನಲ್ಲಿ ಮುಂಚೂಣಿಯಲ್ಲಿರೋದು ದೊಡ್ಡಸಿದ್ದವನಹಳ್ಳಿ ಕ್ಷೇತ್ರದಿಂದ ಗೆದ್ದು ಬಂದಿರುವ ಸೌಭಾಗ್ಯ ಬಸವರಾಜನ್ ಹೆಸರು. ಯಾಕೆಂದರೆ ಎಲ್ಲರ ನಿರೀಕ್ಷೆಗಳನ್ನು ತಲೆಕೆಳಗು ಮಾಡುವಂತೆ ಚಿತ್ರದುರ್ಗ ಜಿ.ಪಂ. ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ ಕೆಟಗರಿಗೆ ರಿಸರ್ವ್ ಆಗಿದೆ. ಕಳೆದ ಬಾರಿಯೂ ಚಿತ್ರದುರ್ಗದ ಜಿ.ಪಂ. ಪರಮ ಗಾದಿ ಸಾಮಾನ್ಯ ವರ್ಗಕ್ಕೇ ಮೀಸಲಾಗಿತ್ತು, ಈ ಬಾರಿ ಪರಿಶಿಷ್ಟ ಪಂಗಡಗಳಿಗೇ ಮೀಸಲಾಗುತ್ತೆ ಯಾಕೆಂದರೆ ಇದೇ ಶೋಷಿತ ಸಮುದಾಯದಿಂದ ಬಂದಿರೊ ಎಚ್.ಆಂಜನೇಯರೇ ಸರ್ಕಾರದ ಮಟ್ಟದಲ್ಲಿ ಪವರ್‌ಫುಲ್ ಸಮಾಜ ಕಲ್ಯಾಣ ಕಂ ಜಿಲ್ಲಾ ಉಸ್ತುವಾರಿ ಮಂತ್ರಿ ಆಗಿರೋದರಿಂದ ಪರಿಶಿಷ್ಟರಿಗೆ ಅವಕಾಶ ಒದಗಿ ಬರುತ್ತೆ ಅನ್ನೋ ಅಂದಾಜುಗಳೇ ದಟ್ಟವಾಗಿದ್ದವು. ಆದರೆ ಮೀಸಲಾದದ್ದು ಮಾತ್ರ ಕಳೆದ ಬಾರಿ ಮೀಸಲಿದ್ದ ಸಾಮಾನ್ಯ ಕೆಟಗರಿಗೇ!


ಇಂತಹದ್ದೊಂದು ಅನುಕೂಲಸಿಂಧು ಮೀಸಲು ಒದಗಿಬರುವಂತೆ ನೋಡಿಕೊಂಡಿದ್ದೇ ಸೌಭಾಗ್ಯ ಮತ್ತವಳ ಗಂಡ ಮಾಜಿ ಶಾಸಕ ಬಸವರಾಜನ್ ಅನ್ನೋ ಸಂಗತಿ ಈಗ ರಹಸ್ಯವಾಗೇನೂ ಉಳಿದಿಲ್ಲ. ಇದಕ್ಕೆ ಮಂತ್ರಿ ಆಂಜನೇಯರೆ ಸಾಥ್ ನೀಡಿದ್ದಾರೆ ಮತ್ತು ತನ್ನನ್ನು ಅಧ್ಯಕ್ಷೆಯನ್ನಾಗಿ ಮಾಡಿಯೇ ತೀರುವುದಾಗಿ ಮಾತು ಕೊಟ್ಟಿದ್ದಾರೆ ಎಂದು ಸೌಭಾಗ್ಯಳೇ ಆಪ್ತರ ಮುಂದೆ ಹೇಳಿಕೊಂಡು ತಿರುಗಾಡುತ್ತಿದ್ದಾಳೆ. ಇದು ನಿಜವೋ, ಸುಳ್ಳೋ ಬೇರೆ ಮಾತು; ಆದರೆ ಸೌಭಾಗ್ಯ ಬಸವರಾಜನ್ ಹೆಸರು ಅಧ್ಯಕ್ಷಗಾದಿ ರೇಸ್‌ನಲ್ಲಿ ಪವರ್‌ಫುಲ್ಲಾಗಿ ಮುನ್ನುಗ್ಗುತ್ತಿರೋದು ಮಾತ್ರ ಸತ್ಯ.


ಅಷ್ಟಕ್ಕೂ ಸೌಭಾಗ್ಯ ಸರ್ವಾನುಮತದ ಅಭ್ಯರ್ಥಿಯಾಗುವುದಕ್ಕಂತೂ ಸಾಧ್ಯವಿಲ್ಲ. ಯಾಕೆಂದರೆ ಈಕೆ ಹಿಂದೊಮ್ಮೆ ಇದೇ ಕಾಂಗ್ರೆಸ್ ಪಾರ್ಟಿಯಿಂದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯಾಗಿ ಅಧಿಕಾರದ ರುಚಿ ನೋಡಿದವಳು. ಆಗಿನ್ನೂ ಸೌಭಾಗ್ಯ ಮತ್ತವಳ ಗಂಡ ಬಸವರಾಜನ್ ಮುರುಘಾ ಮಠದ ಅಂಗಳದಿಂದ ಹೊರದಬ್ಬಿಸಿಕೊಂಡಿರಲಿಲ್ಲ. ಆನಂತರ ನಡೆದ ರಾಜಕೀಯ ವಿದ್ಯಮಾನಗಳಲ್ಲಿ ಕಾಂಗ್ರೆಸ್‌ಗೆ ಕೈಕೊಟ್ಟು ಜೆಡಿಎಸ್ ಸೇರಿಕೊಂಡ ಈ ಗಂಡಾ-ಗುಂಡಿ, ಅಲ್ಲಿ ತಮಗೆ ಏನೂ ಗಿಟ್ಟುವುದಿಲ್ಲ ಅನ್ನೋದು ಖಾತ್ರಿಯಾಗುತ್ತಿದ್ದಂತೆಯೇ ವಾಪಾಸ್ ಕಾಂಗ್ರೆಸ್‌ಗೆ ವಕ್ಕರಿಸಿ ಠಿಕಾಣಿ ಹೂಡಿದ್ದಾರೆ. ಪಕ್ಷಕ್ಕೆ ನಿಷ್ಠರಾಗಿರದ, ಹಿಂದೊಮ್ಮೆ ಅಧಿಕಾರದ ರುಚಿ ನೋಡಿರೊ ಸೌಭಾಗ್ಯಳನ್ನೇ ಮತ್ತೆ ಅಧ್ಯಕ್ಷೆಯನ್ನಾಗಿಸೋದಕ್ಕೆ ಹಲವರ ವಿರೋಧವಿದೆ. ಅಧಿಕಾರ ಬೇರೆಯವರಿಗೆ ಬೇಡವೇ? ಅನ್ನೋ ಪ್ರಶ್ನೆ ಸಣ್ಣಗೆ ಕದಲಾಡುತ್ತಿದೆ.


ಇದರ ಹಿಂದೆ ಇರೋದು ಜಿಲ್ಲೆಯ ಮೂವರು ಶಾಸಕರು. ಹೌದು, ಚಳ್ಳಕೆರೆ ಶಾಸಕ ರಘುಮೂರ್ತಿ, ಹೊಸದುರ್ಗ ಶಾಸಕ ಗೋವಿಂದಪ್ಪ ಹಾಗೂ ಹಿರಿಯೂರು ಶಾಸಕ ಸುಧಾಕರರಿಗೆ ಈಕೆ ಅಧ್ಯಕ್ಷೆಯಾಗುವುದು ಸುತಾರಾಂ ಇಷ್ಟವಿಲ್ಲ. ಹಾಗೆ ನೋಡಿದರೆ, ಜಿ.ಪಂ. ಚುನಾವಣೆಯಲ್ಲಿ ಆಕೆಗೆ ಟಿಕೆಟ್ ಕೊಡುವುದೇ ಇವರ‍್ಯಾರಿಗೂ ಇಷ್ಟವಿರಲಿಲ್ಲ. ಆದರೆ ಮಂತ್ರಿ ಆಂಜನೇಯರು ಇವರೆಲ್ಲರ ವಿರೋಧ ಕಟ್ಟಿಕೊಂಡು ಆಕೆಗೆ ಬಿ ಫಾರ್ಮ್ ದಯಪಾಲಿಸಿದ್ದು ಏಕೆನ್ನುವ ಪ್ರಶ್ನೆ ಇನ್ನೂ ನಿಗೂಢವಾಗೇ ಉಳಿದಿದೆ. ಅದೇ ಕಾರಣಕ್ಕೆ ಈ ತ್ರಿಮೂರ್ತಿಗಳ ಸಿಂಡಿಕೇಟ್ ಮಂತ್ರಿ ಆಂಜನೇಯರ ವಿರುದ್ಧ ತಿರುಗಿಬಿದ್ದಿದೆ. ಈಗ ಮತ್ತೊಮ್ಮೆ ಆಕೆಗೆ ಅನುಕೂಲವಾಗುವಂತೆಯೇ ಮೀಸಲಾತಿ ನಿಕ್ಕಿಯಾಗಿರೋದು ಕೂಡಾ ಅವರ ದೃಷ್ಟಿಯಲ್ಲಿ ಮಂತ್ರಿ ಆಂಜನೇಯರನ್ನು ಮತ್ತಷ್ಟು ವಿಲನ್ ಆಗಿಸಿದೆ. ಜೊತೆಗೆ ಮುರುಘಾ ಮಠದ ಶಿವಮೂರ್ತಿ ಶರಣರೂ ಅಸಮಾಧಾನಗೊಂಡಿದ್ದಾರೆ.


ಹಿಂದೆ ಈಕೆ ಜಿ.ಪಂ ಅಧ್ಯಕ್ಷೆಯಾಗಿದ್ದಾಗ ನಡೆಸಿದ ಮೆರೆದಾಟವನ್ನು ಕಂಡಿರೋ ಕಾಂಗ್ರೆಸ್ ಸದಸ್ಯರು ಕೂಡಾ ಈಕೆ ಮತ್ತೊಮ್ಮೆ ವಕ್ಕರಿಸಿಕೊಳ್ಳೋದು ಬೇಡ ಅಂತ ಒಳಗೊಳಗೇ ಬೇಡಿಕೊಳ್ಳುತ್ತಿದ್ದಾರೆ. ಅವರೆಲ್ಲರ ಕನವರಿಕೆಗಳನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಸಜ್ಜಾಗಿರುವ ತ್ರಿಮೂರ್ತಿ ಶಾಸಕರು ಸೇರಿಕೊಂಡು ಇದೇ ಸಾಮಾನ್ಯ ಮಹಿಳಾ ಕೆಟಗರಿಯಿಂದ ಗೆದ್ದಿರುವ ಹೊಸದುರ್ಗ ತಾಲೂಕಿನ ಚೇತನಾ ಪ್ರಸಾದ್ ಎಂಬ ಹೆಣ್ಮಗಳ ಹೆಸರನ್ನು ಚಲಾವಣೆಗೆ ತಂದಿದ್ದಾರೆ. ತನ್ನದೇ ಕ್ಷೇತ್ರದ ಸದಸ್ಯೆ ಅಧ್ಯಕ್ಷೆಯಾದರೆ ಅಧಿಕಾರದ ಚುಕ್ಕಾಣಿಯನ್ನು ತಾನೇ ಕಾಯ್ದುಕೊಳ್ಳಬಹುದು ಅಂತ ಹೊಸದುರ್ಗ ಎಂಎಲ್‌ಎ ಗೋವಿಂದಪ್ಪ ಲೆಕ್ಕಾಚಾರ ಹಾಕಿಕೊಂಡಿದ್ದಾರೆ. ಮಂತ್ರಿ ಆಂಜನೇಯರ ಮೇಲೆ ಮುನಿಸಿಕೊಂಡಿರುವ ಚಳ್ಳಕೆರೆ ಮತ್ತು ಹಿರಿಯೂರು ಶಾಸಕರೂ ಗೋವಿಂದಪ್ಪನಿಗೆ ಸಾತ್ ನೀಡಿರೋದು ಹೊಸದೊಂದು ಸಮೀಕರಣವನ್ನು ಸೃಷ್ಟಿಸಿದೆ. ಹಾಗಾಗಿ ಚೇತನಾ ಪ್ರಸಾದ್, ಸೌಭಾಗ್ಯಳಿಗೆ ರಾಜಕೀಯ ಪಾಟಿ ಸವಾಲು ಹಾಕಲು ಸಕಲ ಸನ್ನದ್ಧರಾಗಿದ್ದಾರೆ.

ಇದೆಲ್ಲ ಸಂಕಟ ಮುತ್ತಿಕೊಂಡಿರೋದು ಮಂತ್ರಿ ಆಂಜನೇಯರನ್ನು. ಸೌಭಾಗ್ಯ ಮತ್ತವಳ ಗಂಡ ಬಸವರಾಜನ್ ಇಬ್ಬರೂ ಆಂಜನೇಯನ ಹೆಸರಿನ ಮೇಲೆ ಭಾರ ಹಾಕಿ ಅಧ್ಯಕ್ಷಗಾದಿಯ ಕನಸು ಕಾಣುತ್ತಿದ್ದಾರೆ. ಈ ದುರಹಂಕಾರಿ ದಂಪತಿಗೆ ಶತಾಯಗತಾಯ ಅವಕಾಶ ತಪ್ಪಿಸಬೇಕೆಂದು ರಾಜಕೀಯ ಸಂಚಲನಗಳು ಶುರುವಾಗಿವೆ. ಈ ನಡುವೆ ಮಠದ ವೈರುಧ್ಯ ಬೇರೆ. ಹೀಗಾಗಿ ಮಂತ್ರಿ ಆಂಜನೇಯರು ಇಕ್ಕಟ್ಟಿನಲ್ಲಿರುವಂತಿದೆ. ಹಾಗೆನೋಡಿದರೆ ಸೌಭಾಗ್ಯ ಅಧ್ಯಕ್ಷೆಯಾಗುವುದು ಬಹುತೇಕ ಸದಸ್ಯರಿಗೇ ಇಷ್ಟವಿಲ್ಲ. ಜಿಲ್ಲೆಯಲ್ಲಿ ಇರೋ ನಾಲ್ಕು ಜನ ಕೈಶಾಸಕರಲ್ಲಿ ಆಂಜನೇಯರನ್ನು ಹೊರತುಪಡಿಸಿ ಮೂವರು ಶಾಸಕರಿಗೂ ಸೌಭಾಗ್ಯಳನ್ನು ಅಧ್ಯಕ್ಷರ ಗಾದಿಯಲ್ಲಿ ಕೂರಿಸಲು ಇಷ್ಟವಿಲ್ಲ. ಜೊತೆಗೆ ಯಡ್ಡಿ ಮತ್ತೊಮ್ಮೆ ಬಿಜೆಪಿ ರಾಜ್ಯಾಧ್ಯಕ್ಷನಾಗುವ ಮೂಲಕ ಇಡೀ ಲಿಂಗಾಯತ ಸಮುದಾಯವನ್ನೇ ಬಿಜೆಪಿ ಬುಟ್ಟಿಗೆ ಮರು ಕೆಡವಿಕೊಳ್ಳುವ ಸಾಧ್ಯತೆಯೂ ಇದೆ. ಚಿತ್ರದುರ್ಗ-ಹೊಸದುರ್ಗಗಳಲ್ಲಿ ಕುಂಚಟಿಗ ಲಿಂಗಾಯತರು, ಹೊಳಲ್ಕೆರೆಯಲ್ಲಿ ಸಾದರು-ಬಣಜಿಗ ಲಿಂಗಾಯತರು ಪೊಲಿಟಿಕಲ್ ಪ್ರಭಾವಿಗಳು. ಇನ್ನು ಈ ಭಾಗದ ಜೋಡಿ ಲಿಂಗಾಯತ ಮಠಗಳಾದ ಸಿರಿಗೆರೆ ಮತ್ತು ಮುರುಘಾ ಮಠಗಳ ಫರ್ಮಾನುಗಳು ಕೇವಲ ಲಿಂಗಾಯತರನ್ನಷ್ಟೇ ಅಲ್ಲ, ಕೆಲಮಟ್ಟದ ಹಿಂದುಳಿದ ವರ್ಗಗಳನ್ನು ಪ್ರಭಾವಿಸಬಲ್ಲವು ಎನ್ನುವುದು ವಾಸ್ತವ ಸತ್ಯ. ಇಂಥಾ ಸಂದರ್ಭದಲ್ಲಿ ಸೌಭಾಗ್ಯಳನ್ನು ಅಧ್ಯಕ್ಷೆಯಾಗಿಸುವ ಸಲುವಾಗಿ ಸಾಮಾನ್ಯ ಮಹಿಳಾ ಮೀಸಲಾತಿಯನ್ನು ಚಿತ್ರದುರ್ಗಕ್ಕೆ ತರಿಸಿಕೊಂಡು ಮಂತ್ರಿ ಆಂಜನೇಯರು ಯಡವಟ್ಟು ಮಾಡಿಕೊಂಡಿರುವಂತಿದೆ. ಯಾಕೆಂದರೆ ಸೌಭಾಗ್ಯಳಂತೆ, ಸ್ಪರ್ಧೆಯಲ್ಲಿರುವ ಚೇತನಾ ಪ್ರಸಾದ್ ಕೂಡಾ ಕುಂಚಟಿಗ ಲಿಂಗಾಯತ ಸಮುದಾಯದವಳೆ. ಇಬ್ಬರಲ್ಲಿ ಯಾರೇ ಅಧ್ಯಕ್ಷರಾದರು ಲಿಂಗಾಯತರಲ್ಲಿ ಒಡಕು ಮೂಡಿಸುವ ಅಪಾಯವಿದೆ. ಅದು ಯಡ್ಡಿಯ 'ಲಿಂಗಾಯತ್' ಫ್ಯಾಕ್ಟರ್‌ಗೆ ವರವಾದರೂ ಆಗಬಹುದು. ಈ ನಿಟ್ಟಿನಲ್ಲಿ ಅಂದಾಜಿಸುವುದಾದರೆ ಚೇತನಾ ಪ್ರಸಾದ್ ಆಯ್ಕೆಯೇ ಸೂಕ್ತ ಅಂತನ್ನಿಸುತ್ತೆ. ಯಾಕೆಂದರೆ ಮುರುಘಾ ಮಠದ ವಿರೋಧ ಕಟ್ಟಿಕೊಂಡಿರುವ ಸೌಭಾಗ್ಯಳ ಹಿಂದೆ ಲಿಂಗಾಯತ ಸಮುದಾಯ ದೊಡ್ಡಮಟ್ಟದಲ್ಲಿ ಸಂಚಲಿಸುವ ಸಂಭವ ತುಂಬಾ ಕಡಿಮೆ. ಯಾವುದಕ್ಕೂ ಕಾಂಗ್ರೆಸ್ಸು ಬಿಸಿತುಪ್ಪ ಬಾಯಿಗೆ ಹಾಕಿಕೊಂಡಿದೆ, ಎಚ್ಚರಿಕೆಯಿಂದ ಪರಿಸ್ಥಿತಿ ನಿಭಾಯಿಸಬೇಕಿದೆ...


ಬಸವರಾಜನ್


ರಘುಮೂರ್ತಿ


ಸುಧಾಕರ್


ಗೋವಿಂದಪ್ಪ

■ ಟಿ.ಎನ್. ಷಣ್ಮುಖ

ಮೈಸೂರು: ಸಿದ್ದು ವರ್ಚಸ್ಸಿಗೆ ಮರೀಗೌಡನೇ 'ಕಪ್ಪುಚುಕ್ಕೆ'!

ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಎದುರಿಸಿದ ದುರ್ದೈವ ರಾಜಕಾರಣದಲ್ಲಿ ಕೊಂಚ ನಿಟ್ಟುಸಿರು ಬಿಡುವಂಥ ಮುಖ್ಯಮಂತ್ರಿಯನ್ನೇನಾದರು ಜನ ನೋಡಿದ್ದರೆ ಅದು ಸಿದ್ದರಾಮಯ್ಯ ಮಾತ್ರ ಅನ್ನೋದರಲ್ಲಿ ಅನುಮಾನವೇ ಇಲ್ಲ. ಪೊಲಿಟಿಕಲ್ ಮೋಟಿವೇಷನ್ ಇದ್ದಾಗ್ಲೂ ಅವರ 'ಅಹಿಂದ' ಅಜೆಂಡಾ ಈ ನೆಲದ ತಳಸಮುದಾಯಗಳ ಬದುಕನ್ನು ತಕ್ಕಮಟ್ಟಿಗೆ ಸುಧಾರಿಸುವಲ್ಲಿ ಸೈ ಎನಿಸಿಕೊಂಡಿದೆ. ಈ ಕಾರಣಕ್ಕೇ ಕೆಲ ಪುರೋಹಿತಶಾಹಿ ಮಾಧ್ಯಮಪತಿಗಳಿಂದ ಸಿದ್ದು ವ್ಯವಸ್ಥಿತ ಅಪಪ್ರಚಾರಕ್ಕೆ ಈಡಾಗುತ್ತಿರೋದು ಬೇರೆ ಮಾತು. ಆದರೆ ಅದೇ ಸಿದ್ದು ಮೊನ್ನೆ ನಡೆದ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ತನ್ನ ತವರುಜಿಲ್ಲೆಯಲ್ಲೇ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದುಕೂರಿಸುವಲ್ಲಿ ವಿಫಲರಾದದ್ದು ಅಚ್ಚರಿಯ ವಿಷಯ. ಯಾಕೆಂದರೆ ಮೈಸೂರಿನಲ್ಲಿ ಸಿದ್ದರಾಮಯ್ಯನಿಗೆ ಜಾತಿ ಸಮೀಕರಣವನ್ನೂ ಮೀರಿದ ಒಂದು ವರ್ಚಸ್ಸಿದೆ. 2006-07ರಲ್ಲಿ ವರುಣಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯ ಫಲಿತಾಂಶವೇ ಅದಕ್ಕೆ ಸಾಕ್ಷಿ. ಅವತ್ತು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಸಿದ್ರಾಮಯ್ಯನನ್ನು ಸೋಲಿಸಬೇಕೆಂದು ವೈಯಕ್ತಿಕ ಜಿದ್ದಿಗೆ ಬಿದ್ದ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಜೆಡಿಎಸ್-ಬಿಜೆಪಿ ಕಿಚಡಿ ಸರ್ಕಾರವನ್ನೇ ಇಡಿಯಾಗಿ ತಂದು ವರುಣಾ ವ್ಯಾಪ್ತಿಯಲ್ಲಿ ಕೆಡವಿದಾಗಲೂ ಸಿದ್ದು ಗೆದ್ದು ಬರುತ್ತಾರೆಂದರೆ ಅದಕ್ಕೆ ಸಿದ್ದು ವರ್ಚಸ್ಸೇ ಕಾರಣ. ಅಂತದ್ದರಲ್ಲಿ ಮುಖ್ಯಮಂತ್ರಿಯಾಗಿ, ಒಂದಷ್ಟು ಜನಪರ ಕೆಲಸಗಳನ್ನೂ ಮಾಡಿ, ಹಗರಣಗಳಿಂದ ದೂರವೇ ಉಳಿದ ಸಿದ್ದು ಮೈಸೂರಿನ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಮುಗ್ಗರಿಸುತ್ತಾರೆಂದರೆ ಅಚ್ಚರಿ ಎನಿಸುವುದಿ ಲ್ಲವೇ? ಇಂತಹದ್ದೊಂದು ಅಚ್ಚರಿಯನ್ನಿಟ್ಟು ಕೊಂಡು ಮೈಸೂರಿನ ರಾಜಕಾರಣದ ಸಿಕ್ಕುಗಳನ್ನು ಬಿಡಿಸುತ್ತಾ ಹೋದರೆ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಪಕ್ಷದ ಹಿನ್ನಡೆಗೆ ಹಾಗೂ ಕುಸಿಯುತ್ತಿರುವ ಸಿದ್ದು ವರ್ಚಸ್ಸಿಗೆ ಕಾರಣೀ ಭೂತನಾಗಿ ಕಾಣಿಸಿಕೊಳ್ಳೋದು ಸಿದ್ದು ಬಲಗೈ ಭಂಟ ಕಮ್ ಮೈಸೂರು ಜಿಲ್ಲೆಯ ಡಿಫ್ಯಾಕ್ಟೊ ಸಿಎಂನಂತೆ ಮೆರೆದಾಡುತ್ತಿರುವ ಕೆ.ಮರೀಗೌಡನ ಮುಖ!

ಡಿಸಿ, ಎಸ್ಪಿ ಕಚೇರಿಗಳಿಂದ ಮೊದಲ್ಗೊಂಡು ಜಿಲ್ಲೆಯ ಅಷ್ಟೂ ತಾಲೂಕು ಕಚೇರಿಗಳ ಮೇಲೆ ತನ್ನ ಹಿಡಿತ ಸ್ಥಾಪಿಸಿಕೊಂಡಿರುವ ಈ ಮರೀಗೌಡ, ಸಿದ್ದು ಪಾಲಿಗೆ ಮಗ್ಗುಲು ಮುಳ್ಳು ಅನ್ನುವುದು ಮಾತ್ರ ಸತ್ಯ. ಇತರೆ ಸಾಮಾನ್ಯ ಜನರ ಮಾತು ಒತ್ತಟ್ಟಿಗಿರಲಿ, ಪಕ್ಷಕ್ಕಾಗಿ ಪ್ರಾಮಾಣಿಕವಾಗಿ ದುಡಿಯುತ್ತಿರೊ ನಿಷ್ಠಾವಂತ ಕಾರ್ಯಕರ್ತರನ್ನೂ ಈತ ಸಿದ್ದರಾಮಯ್ಯರಿಂದ ವ್ಯವಸ್ಥಿತವಾಗಿ ದೂರವಿಡುತ್ತಿದ್ದಾನೆ. ಸಿದ್ದು ಮೊದಲಿನಿಂದಲೂ ಮತದಾರರ ನಡುವೆಯಾಗಲಿ, ಕಾರ್ಯಕರ್ತರ ನಡುವೆಯಾಗಲಿ ಹಮ್ಮುಬಿಮ್ಮು ಸಾಕಿಕೊಂಡ ಮನುಷ್ಯನಲ್ಲ. ಸಲೀಸಾಗಿ ಹೆಸರಿಡಿದು ಕರೆದು ಮಾತಾಡಿ ಕಳಿಸುವಷ್ಟು ಸೀದಾಸಾದಾ ವ್ಯಕ್ತಿತ್ವ ಅವರದು. ಅಂತವರು ತನ್ನ ಆಪ್ತ ಕಾರ್ಯಕರ್ತರ ಸಮಸ್ಯೆಗಳನ್ನು ಆಲಿಸಿ, ಅವರಿಗೆ ಆಗಬೇಕಾದ ಕೆಲಸಗಳನ್ನು ಜರೂರಾಗಿ ಮಾಡಿಕೊಡಬೇಕೆಂದು ತಾನೇ ಸ್ವತಃ ಸಹಿ ಮಾಡಿ ಲೆಟರ್ ಕೊಟ್ಟರೂ ಅವರ ಕೆಲಸಗಳು ಈಡೇರುತ್ತಿಲ್ಲ. ಅದಕ್ಕೆಲ್ಲ ಕಾರಣ ಮರೀಗೌಡ. ತನ್ನ ಕಾರ್ಯಕರ್ತರಿಗೋಸ್ಕರ ಸಿದ್ದರಾಮಯ್ಯ ಶಿಫಾರಸ್ಸು ಮಾಡಿದ ಕೆಲಸಗಳನ್ನು ಮಾಡಿಕೊಡದಂತೆ ಈತ ಅಧಿಕಾರಿಗಳಿಗೆ ಮೌಖಿಕ ಫರ್ಮಾನು ಹೊರಡಿಸುತ್ತಾನೆ. ಅವನ ಫರ್ಮಾನು ಅದೆಷ್ಟು ದೃಢವಾಗಿರುತ್ತದೆಂದರೆ 'ಹೀಗಂತ ಸಿಎಂ ಸಾಹೇಬರೆ ನನ್ನ ಬಳಿ ಹೇಳಿಕಳಿಸಿದ್ದಾರೆ' ಅನ್ನೋ ಧಾಟಿಯಲ್ಲಿರುತ್ತೆ. ಸದಾಕಾಲ ಸಿಎಂ ಸಿದ್ದರಾಮಯ್ಯನ ನೆರಳಿನಂತೆ ಅವರ ಆಜುಬಾಜಿನಲ್ಲೇ ಸುತ್ತಾಡುವ ಮರೀಗೌಡನ ಮಾತನ್ನು ಅವರ್‍ಯಾರೂ ತಳ್ಳಿಹಾಕುವುದಿಲ್ಲ.

ಅಂದಹಾಗೆ, ಮರೀಗೌಡನ ಕಾಟದಿಂದ ಖುದ್ದು ಸಿದ್ದರಾಮಯ್ಯನ ಪುತ್ರ ರಾಕೇಶ್ ಕೂಡಾ ಹೊರತಾದವನಲ್ಲ. ರಾಜಕಾರಣದಿಂದ ಮಗನನ್ನು ದೂರದಲ್ಲೇ ಇಟ್ಟಿರುವ ಸಿದ್ದರಾಮಯ್ಯ 'ನಿನಗೆ ತಾಕತ್ತಿದ್ದರೆ ಸ್ವಂತ ಬಲದಿಂದ ಕ್ಷೇತ್ರದಲ್ಲಿ ಜನಮನ್ನಣೆ ಗಳಿಸಿ ನಾಯಕನಾಗಿ ಹೊರಹೊಮ್ಮು' ಅನ್ನೋ ನಿಷ್ಠುರ ಕಟ್ಟಾಜ್ಞೆ ಹೊರಡಿಸಿದ್ದಾರೆ. ಹಾಗಾಗಿ ರಾಕೇಶ್ ಕೂಡಾ ವರುಣಾ ಕ್ಷೇತ್ರದಲ್ಲಿ ಓಡಾಡಿ ಕೆಲಸ ಮಾಡಿ ತನ್ನ ರಾಜಕೀಯ ಬೇರುಗಳನ್ನು ಗಟ್ಟಿಮಾಡಿಕೊಳ್ಳುವ ತಯಾರಿಯಲ್ಲಿದ್ದಾನೆ. ಆದರೆ ಮರೀಗೌಡ, ರಾಕೇಶ್ ರಾಜಕಾರಣಕ್ಕೂ ಕಲ್ಲು ಹಾಕುತ್ತಿದ್ದಾನೆ. ಜನರಿಗೋಸ್ಕರ ಅಥವಾ ಕಾರ್ಯಕರ್ತರಿಗೋಸ್ಕರ ಯಾವುದಾದರು ಕೆಲಸ ಮಾಡಿಸಲೆಂದು ರಾಕೇಶ್ ಮುಂದಾಗುತ್ತಿದ್ದಂತೆಯೇ ಮರೀಗೌಡ ಯಥಾಪ್ರಕಾರ ಅದಕ್ಕೆ ಅಡ್ಡಗಾಲು ಹಾಕುತ್ತಾನೆ. ಸಿಎಂ ಮಗನಿಗೇ ಈ ಪರಿ ಕಾಟವಾದರೆ ಇನ್ನು ಬೇರೆಯವರ ಪಾಡೇನು? ಇಷ್ಟೆಲ್ಲಾ ಆದರೂ ಸಿದ್ದರಾಮಯ್ಯ ಇನ್ನೂ ಈ ಮರೀಗೌಡನನ್ನು ಆಪ್ತ ಬಳಗದಲ್ಲೇ ಉಳಿಸಿಕೊಂಡಿರೋದು ಯಾಕೆಂಬುದೇ ಗೊತ್ತಾಗುತ್ತಿಲ್ಲ.

ಅಂದು ವಿರೋಧಿ, ಇಂದು ಭಂಟ

ಎಂಬತ್ತರ ದಶಕದಲ್ಲಿ ತಾಲ್ಲೂಕು ಕಚೇರಿ, ಪೊಲೀಸ್ ಸ್ಟೇಷನ್, ಗ್ರಾಮ ಪಂಚಾಯ್ತಿ ಕಚೇರಿಗಳ ಮುಂದೆ ಅಹವಾಲು ಹೊತ್ತು ತರುವ ಜನರಿಗೆ ಅರ್ಜಿ ಬರೆದುಕೊಂಡಿದ್ದಾತ ಈತ. ಬೀರಿಹುಂಡಿ ಗ್ರಾಮದ ಕುಳ್ಳೇಗೌಡ, ಕೆಂಚಮ್ಮ ಎಂಬ ದಂಪತಿಗಳ ನಾಲ್ವರು ಮಕ್ಕಳಲ್ಲಿ ಒಬ್ಬ, ನಾಲ್ಕು ಎಕರೆ ಜಮೀನು ಹೊಂದಿದ್ದ ಕೆಂಚೇಗೌಡರಾದರೂ ಆರ್ಥಿಕವಾಗಿ, ರಾಜಕೀಯವಾಗಿ ಪ್ರಭಾವಿ ಕುಳವೇನೂ ಅಲ್ಲ, ಹೊಟ್ಟೆ-ಬಟ್ಟೆಗೆ ನ್ಯಾರ ಎನ್ನುವ ಒಂದು ಮಧ್ಯಮ ವರ್ಗದ ಸೀದಾಸಾದಾ ಕುಟುಂಬ. ಸರ್ಕಾರಿ ಕಚೇರಿಗಳ ಮುಂದೆ ಅರ್ಜಿ ಬರೆಯುತ್ತಲೇ ರಾಜಕೀಯಕ್ಕೆ ಕಾಲಿರಿಸಿದ ಮರೀಗೌಡ ಇವತ್ತು ಏನಿಲ್ಲವೆಂದರೂ ಹತ್ತಾರು ನಿವೇಶನಗಳಿಗೆ, ಬೀರಿಹುಂಡಿಯಲ್ಲಿ 6 ಎಕರೆ ಹಾಗೂ ಉಂಬ್ಳಿಯ ಎರಡೂವರೆ ಎಕರೆ ಜಮೀನಿಗೆ ಒಡೆಯ; ಅಲ್ಲದೆ ಒಂದು ತೋಟದ ಮನೆಗೂ



ಸಿದ್ದು ಜೊತೆ ಮರೀಗೌಡ

ಮಾಲೀಕ. ನಿಜ ಹೇಳಬೇಕೆಂದರೆ, ಇವತ್ತು ಸಿದ್ದರಾಮಯ್ಯನ ಬಲಗೈ ಭಂಟನಂತೆ ಪೋಜು ಕೊಡುತ್ತಿರುವ ಮರೀಗೌಡ ತನ್ನ ರಾಜಕೀಯ ಹಾದಿಯನ್ನು ಶುರು ಮಾಡಿದ್ದೇ ಸಿದ್ದು ವಿರೋಧಿಯಾಗಿ. 1983ರಲ್ಲಿ ಸಿದ್ದು ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಮರೀಗೌಡ ಹೆಗಲು ಕೊಟ್ಟು ದುಡಿದದ್ದು ಪ್ರತಿಸ್ಪರ್ಧಿ ಜಯದೇವರಾಜು ಅರಸು ಪರವಾಗಿ. ಶಾಸಕನಾಗಿ ಜಯದೇವರಾಜು ಅರಸು ಮಾಡಿಕೊಂಡ ಯಡವಟ್ಟುಗಳ ಕಾರಣಕ್ಕೆ ಆ ಚುನಾವಣೆಯಲ್ಲಿ ಅವರ ವಿರುದ್ಧ ಅಲೆ ಎದ್ದಿತ್ತು. ಹಾಗಾಗಿ ಸಿದ್ದು ಗೆದ್ದು ಶಾಸನಸಭೆ ಪ್ರವೇಶಿಸಿದರು. 1985ರ ಚುನಾವಣೆಯಲ್ಲೂ ಈತ ಕಾಂಗ್ರೆಸ್‌ನ ಕಡಕೋಳದ ರಂಗನಾಯಕ ಅವರ ಪರವಾಗಿಯೇ ಕೆಲಸ ಮಾಡಿದ್ದು.

ಆಮೇಲೆ ನ್ಯಾಯಬೆಲೆ ಅಂಗಡಿಯ ಮೂಲಕ ಸಣ್ಣಗೆ ವ್ಯವಹಾರ ಶುರು ಮಾಡಿದ ಮರೀಗೌಡ ಗ್ರಾಮ ಪಂಚಾಯ್ತಿ ಅಧ್ಯಕ್ಷನಾಗಿ ಚುನಾಯಿತನಾದ. ಅಲ್ಲಿಂದಾಚೆಗೆ ದಿಢೀರನೆ ಸಿದ್ದರಾಮಯ್ಯನ ಪಾಳೆಯಕ್ಕೆ ಜಂಪ್ ಮಾಡಿ ನಿಧಾನಕ್ಕೆ ಸಿದ್ದು ಆಪ್ತವಲಯಕ್ಕೇ ಲಗ್ಗೆಯಿಟ್ಟ. ಸಿದ್ದರಾಮಯ್ಯನ ಕೃಪಕಟಾಕ್ಷದಿಂದಲೇ 2000ರಲ್ಲಿ ಜಿಲ್ಲಾ ಪಂಚಾಯತ್ ಸದಸ್ಯನಾಗಿ ಆಯ್ಕೆಯಾದ. ನಂತರ ಸಿದ್ದರಾಮಯ್ಯ ಎಬಿಪಿಜೆಡಿ ರಚಿಸಿದಾಗಲೂ ಅವರ ಹಿಂದೆಯೇ ಅಲೆದು ಮತ್ತೆ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಗೆದ್ದು ಜಿ.ಪಂ. ಅಧ್ಯಕ್ಷನೇ ಆಗಿಬಿಟ್ಟ. 2013ರ ಚುನಾವಣೆಯಲ್ಲಿ ಜೆಡಿಎಸ್‌ನ ಜಿ.ಟಿ.ದೇವೇಗೌಡರ ಜೊತೆ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್‌ನ ಸತ್ಯನಾರಾಯಣರ ಸಣ್ಣ ಸೋಲಿಗೂ ಕಾರಣನಾದ ಎನ್ನುವ ವದಂತಿಗಳಿವೆ. ಮರೀಗೌಡನ ಬಗ್ಗೆ ಸಿದ್ದರಾಮಯ್ಯನಿಗೆ ಸಣ್ಣ ಅನುಮಾನ ಶುರುವಾದದ್ದೇ ಆಗ. ಆದರೆ ಸಿಟ್ಟಿಗೆದ್ದಿದ್ದ ಸಿದ್ದುವನ್ನು ಅದೇಗೋ ತಣ್ಣಗೆ ಮಾಡಿ ಮತ್ತೆ ವಕ್ಕರಿಸಿದ.


ಡ್ಯಾಮೇಜ್ ಪಾರ್ಟಿ



ಮರೀಗೌಡನೆಂಬ ಆಸಾಮಿಯೇ ಪರಮ ಡ್ಯಾಮೇಜ್ ಪಾರ್ಟಿ. ಈತನಿಂದ ಪಕ್ಷಕ್ಕೆ ಮತ್ತು ಸ್ವತಃ ಸಿದ್ದರಾಮಯ್ಯನಿಗೆ ಆಗುತ್ತಿರುವ ಡ್ಯಾಮೇಜು ಅಷ್ಟಿಷ್ಟಲ್ಲ. ನಿಷ್ಠಾವಂತ ಕಾರ್ಯಕರ್ತರು, ಬೆಂಬಲಿಗರನ್ನೇ ಸಿದ್ದುರಿಂದ ದೂರ ಮಾಡಿ ತಾನೊಬ್ಬನೇ ಲಾಭ ಮಾಡಿಕೊಳ್ಳಬೇಕೆಂಬುದು ಅವನ ಲೆಕ್ಕಾಚಾರ. ವರುಣಾ ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲಿ ತಕ್ಕಮಟ್ಟಿನ ಜನಬೆಂಬಲ ಹೊಂದಿರುವ ಮತ್ತು ಜನಸ್ನೇಹಿ ನಾಯಕ ಅಂತ ಕರೆಸಿಕೊಳ್ಳುವ ಬೀರಿಹುಂಡಿ ಬಸವಣ್ಣ ಸಿದ್ದು ಸಂಗ ತೊರೆದು ಜೆಡಿಎಸ್ ಸೇರುವುದಕ್ಕೂ ಈ ಮರೀಗೌಡನೇ ಕಾರಣ. ಹಿಂದೊಮ್ಮೆ ಬೀರಿಹುಂಡಿ ಬಸವಣ್ಣ ಸಿದ್ದರಾಮಯ್ಯನ ಅಪ್ಪಟ ಬೆಂಬಲಿಗರಲ್ಲಿ ಒಬ್ಬರಾಗಿದ್ದರು. ಬಸವಣ್ಣನ ಜನಪ್ರಿಯತೆಯನ್ನು ಸಹಿಸದ ಈತ ತನ್ನ ಚಾಡಿ ಬುದ್ಧಿಯ ಮೂಲಕ ಅವರಿಬ್ಬರ ನಡುವೆ ತಂದಿಡುವ ಹಲವು ಯತ್ನ ಮಾಡಿದ. ಅವ್ಯಾವುವೂ ಫಲಿಸದಿದ್ದಾಗ ಮೈಸೂರಿನ ರೌಡಿಗಳಾದ ಬಲ್ಬು ಟ್ಯೂಬ್ ಎಂಬುವವರನ್ನು ಬಿಟ್ಟು ಬೀರಿಹುಂಡಿ ಬಸವಣ್ಣನ ಮೇಲೆ ಹಲ್ಲೆ ಕೂಡ ಮಾಡಿಸಿದ್ದ. ಇದರಿಂದ ಬೇಸತ್ತ ಬಸಣ್ಣ ಸಿದ್ದು ಪಾಳೆಯ ತೊರೆದು ಜೆಡಿಎಸ್‌ನ ಜಿ.ಟಿ.ದೇವೇಗೌಡರ ಪಟಾಲಮ್ಮು ಸೇರಿಕೊಂಡಿದ್ದಾರೆ. ಈ ಸಲದ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಸ್ವತಃ ಸಿದ್ದರಾಮಯ್ಯನ ವರುಣಾ ಕ್ಷೇತ್ರದಲ್ಲೇ ಕಾಂಗ್ರೆಸ್ ಅಭ್ಯರ್ಥಿ ಸೋಲಲು ಬೀರಿಹುಂಡಿ ಬಸವಣ್ಣನ ಫ್ಯಾಕ್ಟರೂ ಒಂದು ಪ್ರಮುಖ ಕಾರಣ.

ಇನ್ನು ಕಳೆದ ಸಲದ ಜಿಲ್ಲಾ ಪಂಚಾಯ್ತಿಯಲ್ಲಿ ಹುಣಸೂರು ಎಂಎಲ್‌ಎ ಮಂಜುನಾಥ್ ತಮ್ಮ ನಾದಿನಿ ಪುಷ್ಪ ಅಮರಾನಾಥ್‌ರನ್ನು ಗೆಲ್ಲಿಸಿಕೊಂಡು ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆಯನ್ನಾಗಿ ಮಾಡಿಸಿದ್ದರು. ಆಗಲೂ ಸಹ ಸಿದ್ದರಾಮಯ್ಯನ ವರ್ಚಸ್ಸನ್ನು ದುರ್ಬಳಕೆ ಮಾಡಿಕೊಂಡ ಮರೀಗೌಡ ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಗೋಪಾಲರನ್ನು ಕೈಗೊಂಬೆ ಮಾಡಿಕೊಂಡು ಜಿಲ್ಲಾ ಪಂಚಾಯ್ತಿ ಅಧ್ಯಕ್ಷರ ಹಾಗೂ ಸದಸ್ಯರ ಮಾತಿಗೆ ಕಿಮ್ಮತ್ತಿಲ್ಲದಂತೆ ದರ್ಬಾರು ನಡೆಸಿದ್ದ. ಇದರಿಂದಾಗಿ ಮಂಜುನಾಥ್ ಸಿದ್ದು ಮೇಲೆ ಬೇಸರ ತಾಳಿದ್ದೂ ಇದೆ. ಸಿದ್ದು ಜೊತೆಗಿದ್ದುಕೊಂಡೇ ಕಾಂಗ್ರೆಸ್‌ನೊಳಗೆ ಈ ಪರಿ ಒಡಕು ಹುಟ್ಟಿಸುವ ಕಲೆ ಮರೀಗೌಡನಿಗೆ ಕರಗತವಾದಂತಿದೆ.

ಈ ಜಿಲ್ಲಾ ಪಂಚಾಯ್ತಿ ಚುನಾವಣೆಯಲ್ಲಿ ಈತನಿಂದ ಪಕ್ಷಕ್ಕಾದ ಲುಕ್ಸಾನು ಇಷ್ಟೇ ಅಲ್ಲ, ಈ ಬಾರಿ ಕಾಂಗ್ರೆಸ್‌ನಿಂದಲೇ ಸ್ಪರ್ಧಿಸಿದ್ದ ಹಿಂಕಲ್ ಪಾಪಣ್ಣ ಪುತ್ರ ರಾಕೇಶ್ ಪಾಪಣ್ಣ ಹಾಗೂ ಮಾಜಿ ಶಾಸಕ ಸತ್ಯನಾರಾಯಣರ ಪುತ್ರನ ಸೋಲಿಗೂ ಈತ ತೆರೆಮರೆಯಲ್ಲಿ ಕಸರತ್ತು ನಡೆಸಿದ್ದ ಕುರಿತು ಗುಸುಗುಸು ಹರಿದಾಡುತ್ತಿವೆ. ಅಂದಹಾಗೆ, ಮಂಜೇಗೌಡನೆಂಬ ಜನದ್ರೋಹಿಯನ್ನು ಕಾಂಗ್ರೆಸ್‌ನೊಳಗೆ ಎಳೆದುತಂದ ಮರೀಗೌಡನ ಪ್ರಯತ್ನವಿದೆಯಲ್ಲ, ಅದು ಪಕ್ಷಕ್ಕೆ ಮಾಡಿರುವ ಡ್ಯಾಮೇಜು ಅಷ್ಟಿಷ್ಟಲ್ಲ. ಈ ಮಂಜೇಗೌಡ ಹಲವಾರು ಪಕ್ಷಗಳನ್ನು ಸುತ್ತಿಬಂದಿರುವ ರಿಯಲ್ ಎಸ್ಟೇಟ್ ಕುಳ. ಶ್ರೀರಾಂಪುರದಲ್ಲಿ ಒಂದೇ ನಿವೇಶನವನ್ನು ಹಲವರಿಗೆ ಮಾರಾಟ ಮಾಡಿ ಈಗಲೂ ಕೋರ್ಟು-ಕಚೇರಿಗೆ ಅಲೆದಾಡುತ್ತಿರುವಾತ. ಹಿಂದೊಮ್ಮೆ ಈತ ಬಿಜೆಪಿಯಲ್ಲಿದ್ದಾಗ ಕಾಂಗ್ರೆಸ್‌ನ ಸತ್ಯನಾರಾಯಣರ ವಿರುದ್ಧವೇ ಎಂಎಲ್‌ಎ ಎಲೆಕ್ಷನ್‌ಗೆ ಸ್ಪರ್ಧಿಸಿ ಸೋತಿದ್ದ. ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಮಂಜೇಗೌಡನನ್ನು ಭಿಕ್ಷುಕರ ಪುನರ್ವಸತಿ ಪ್ರಾಧಿಕಾರದ ಅಧ್ಯಕ್ಷನನ್ನಾಗಿ ನೇಮಿಸಲಾಗಿತ್ತು. ಆಗ ತಮಗೂ ಒಂದಿಷ್ಟು ಉಳಿಸಿದಂತೆ ಈತ ನಡೆಸಿದ ಅಖಂಡ ಭ್ರಷ್ಟಾಚಾರ ಕಂಡು ಖುದ್ದು ಯಡ್ಡಿಯೇ ದಂಗಾಗಿ ಬಿಜೆಪಿಯಿಂದಲೇ ಹೊರಗಟ್ಟಿದ್ದರು.

ಅಂತಹವನ ಹಣದಾಸೆಗೆ ಬಿದ್ದ ಮರೀಗೌಡ, ಕರಾಳ ಹಿನ್ನೆಲೆಯ ಹೊರತಾಗಿಯೂ ಕಾಂಗ್ರೆಸ್‌ಗೆ ಕರೆತಂದಿದ್ದಲ್ಲದೆ ಅವನ ಮಗ ಭರತ್ ಗೌಡನಿಗೆ ಜಿಲ್ಲಾ ಪಂಚಾಯ್ತಿ ಟಿಕೆಟ್ ಕೂಡಾ ಕೊಡಿಸಿಬಿಟ್ಟ. ಮರಿಗೌಡನ ಸಂಗತಿ ಪಕ್ಕಕ್ಕಿರಲಿ, ಮಂಜೇಗೌಡನ ಇತಿಹಾಸ ತಿಳಿದಿದ್ದೂ ಸಿದ್ದರಾಮಯ್ಯನವರು ಹೇಗೆ ಇದಕ್ಕೆಲ್ಲ ಅನುಮತಿ ಕೊಟ್ಟರೆನ್ನುವುದೇ ನಿಗೂಢ ಪ್ರಶ್ನೆ. ಮಂಜೇಗೌಡನ ಕುಖ್ಯಾತಿಯಿಂದಲೇ ಅವನ ಮಗನೂ ಸೋತುಹೋದ. ಆ ಮೂಲಕ ಕಾಂಗ್ರೆಸ್ ಗೆಲ್ಲಬಹುದಾಗಿದ್ದ ಒಂದು ಅವಕಾಶವೂ ಮರೀಗೌಡನ ಹಣದಾಸೆಯಿಂದ ಮಣ್ಣುಪಾಲು ಆಗಬೇಕಾಯ್ತು. ಇದೇರೀತಿ, ವರುಣ ಹಾಗೂ



ಬೀರಿಹುಂಡಿ ಬಸವಣ್ಣ | ಪುಷ್ಪಾ | ಸತ್ಯನಾರಾಯಣ | ರಾಕೇಶ್ ಪಾಪಣ್ಣ

ಚಾಮುಂಡೇಶ್ವರಿ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು ಪಂಚಾಯ್ತಿ ಚುನಾವಣೆಯಲ್ಲಿ ಟಿಕೆಟ್ ಕೊಡಿಸುವುದಾಗಿ ಹಲವರನ್ನು ನಂಬಿಸಿ ಕೈಎತ್ತಿದ್ದಾನೆ. ಇಂತಹ ಭ್ರಮನಿರಶನಕ್ಕೆ ಒಳಗಾದ ಅವರೆಲ್ಲ ಕಾಂಗ್ರೆ ಅಭ್ಯರ್ಥಿಗಳ ವಿರುದ್ಧವೇ ಕೆಲಸ ಮಾಡಿ, ಮುಖ್ಯಮಂತ್ರಿಗಳ ಮುಖಭಂಗಕ್ಕೆ ಕಾರಣರಾಗಿದ್ದಾರೆ.


ಮರೀಗೌಡ ಅದೆಷ್ಟು ಹದ್ದುಮೀರಿ ಹೋಗಿದ್ದಾನೆಂದರೆ ಮುಖ್ಯಮಂತ್ರಿಯವರ ಲೆಟರ್‌ಹೆಡ್ ದುರುಪಯೋಗಪಡಿಸಿ ಕೊಳ್ಳುತ್ತಿದ್ದಾನೆ ಅಂತ ಇತ್ತೀಚೆಗಷ್ಟೆ ಕೆಪಿಸಿಸಿಗೆ ದೂರು ದಾಖಲಾಗಿದೆ. ಈಗಲಾದರೂ ಸಿದ್ದರಾಮಯ್ಯ ಎಚ್ಚೆತ್ತುಕೊಂಡು ಈ ಮಗ್ಗುಲ ಮುಳ್ಳನ್ನು ನಿವಾರಿಸಿಕೊಳ್ಳುವ ಸಾಹಸಕ್ಕೆ ಕೈಹಾಕಬೇಕಿದೆ. ಇಲ್ಲವಿದ್ದರೆ ಸಿದ್ದರಾಮಯ್ಯನ ವರ್ಚಸ್ಸಿಗೆ ಮರೀಗೌಡ ಅದೆಷ್ಟು ದೊಡ್ಡ ಡ್ಯಾಮೇಜ್ ಮಾಡಿಬಿಡುವ ಅಪಾಯವಿದೆಯೆಂದರೆ ಅದನ್ನು ಸರಿಪಡಿಸಿಕೊಳ್ಳಲು ಸಿದ್ದು ದೀರ್ಘಕಾಲ ಹೆಣಗಾಡಬೇಕಾದೀತು.

■ ಮೈಸೂರು ಮಹಿಷ

ಸಿದ್ದುವಿಗೇ ಬೈದಿದ್ದ ಸಿಡಿ!

ಈಗ್ಗೆ ಏಳೆಂಟು ವರ್ಷಗಳ ಹಿಂದೆ ಮರೀಗೌಡನ ಅವಾಂತರದ ಸಿಡಿಯೊಂದು ಮೈಸೂರಿನಲ್ಲಿ ಸದ್ದು ಮಾಡಿತ್ತು. ಗೆಳತಿಯೊಬ್ಬಳ ಮನೆಯಲ್ಲಿ ಕುಡಿದು ಟೈಟಾಗಿದ್ದ ಮರೀಗೌಡ 'ಸಿದ್ದರಾಮಯ್ಯ ನನ್ನನ್ನು ಎಂಎಲ್‌ಎ ಮಾಡಲಿಲ್ಲ' ಅಂತೆಲ್ಲಾ ಸಿದ್ದುವನ್ನು ವಾಚಾಮಗೋಚರ ನಿಂದಿಸಿದ್ದಲ್ಲದೆ ಕುಡಿದ ಮತ್ತಿನಲ್ಲೆ ಗೆಳತಿಯ ಕಪಾಳಕ್ಕೇ ಬಾರಿಸಿದ ದೃಶ್ಯಗಳು ಅದರಲ್ಲಿದ್ದವು. ಕೊನೆಗೆ ಅದೇ ಹೆಂಗಸು ಮರೀಗೌಡ ತನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆ ಅಂತ ಮೈಸೂರಿನ ವಿಜಯನಗರದಲ್ಲೂ ದೂರು ದಾಖಲಿಸಿದ್ದಳು. ದಿನಪತ್ರಿಕೆಗಳಲ್ಲಿ ಧಾರಾವಾಹಿಯೋಪಾದಿಯಲ್ಲಿ ಬಿತ್ತರಗೊಂಡ ಆ ಪುರಾಣ ಕಿವಿಗೆ ಬೀಳುತ್ತಿದ್ದಂತೆಯೆ ಸಿದ್ದು ಕೆಂಡಮಂಡಲವಾಗಿದ್ದರು. ಕೆಲಕಾಲ ಅಜ್ಞಾತವಾಸದಲ್ಲಿದ್ದು ತಲೆಮರೆಸಿಕೊಂಡ ಮರೀಗೌಡ, ವಿಷಯ ತಣ್ಣಗಾಗುತ್ತಿದ್ದಂತೆಯೇ ಆ ಹೆಂಗಸನ್ನು ಪುಸಲಾಯಿಸಿ, ಅವತ್ತಿನ ಇನ್ಸ್‌ಪೆಕ್ಟರ್ ಅರುಣ್‌ಗೌಡನನ್ನು ಕುದುರಿಸಿಕೊಂಡು ಸೀ ರಿಪೋರ್ಟ್ ಬರೆಸಿ ಕೈ ತೊಳೆದುಕೊಂಡಿದ್ದ. ಅಂತವನನ್ನು ಸಿದ್ದು ಯಾಕೆ ಮತ್ತೆ ಸೇರಿಸಿಕೊಂಡಿದ್ದಾರೆ ಅನ್ನೋದೆ ಅರ್ಥವಾಗುತ್ತಿಲ್ಲ. ಸಿದ್ದು ನಾಮಬಲದಿಂದ ಅವನು ಅದೆಷ್ಟು ಕೊಬ್ಬಿಹೋಗಿದ್ದಾನೆಂದರೆ ಅವನ ಪತ್ನಿಯ ತಮ್ಮನೊಬ್ಬ ಜಾಹೀರಾತು ಏಜೆನ್ಸಿ ನಡೆಸುತ್ತಿದ್ದಾನೆ. ಮೈಸೂರು ನಗರದಾದ್ಯಂತ ಪ್ರಮುಖ ಸ್ಥಳಗಳಲ್ಲಿ ಆ ಕಂಪನಿಯ ಜಾಹೀರಾತುಗಳೇ ಕಳಾಯಿಸಿವೆ. ಅವುಗಳಲ್ಲಿ ಶೇಕಡ 50ರಷ್ಟಕ್ಕೆ ನಗರಪಾಲಿಕೆಯ ಅನುಮತಿ ಇದ್ದರೆ ಇನ್ನುಳಿದ ಅರ್ಧದಷ್ಟು ಅನಧಿಕೃತ ಜಾಹೀರಾತು ಫಲಕಗಳು. ನಗರಪಾಲಿಕೆಯ ಅಧಿಕಾರಿಗಳು ಕ್ರಮತೆಗೆದುಕೊಳ್ಳಲು ಸಾಧ್ಯವಿಲ್ಲದಂತೆ ಮರೀಗೌಡ ಅವರೆಲ್ಲರ ಕೈಕಟ್ಟಿ ಹಾಕಿದ್ದಾನೆ. ಅಲ್ಲದೇ ಇದೇ ವ್ಯಕ್ತಿ ಹೆಚ್.ಡಿ.ಕೋಟೆ ರಸ್ತೆಯಲ್ಲಿ ಒಂದು ರೆಸಾರ್ಟ್ ಹೊಂದಿದ್ದು, ಮರೀಗೌಡನ ರಹಸ್ಯ ಕಾರ್ಯಚಟುವಟಿಕೆಗಳಿಗೆ ಅದೇ ಅಡಗುದಾಣ ಎನ್ನಲಾಗುತ್ತಿದೆ.

ಮಂಡ್ಯ: ರವಿಕುಮಾರನ ಜಾತಿ ಪ್ರೇಮವೂ ಕಸಾಪವೆಂಬ 'ಒಕ್ಕಲಿಗರ ಸಂಘವೂ'



ಸಾಹಿತ್ಯ ಪ್ರಗತಿಶೀಲತೆಯ ಸಂಕೇತ. ಅಂತಹ ಸಾಹಿತ್ಯವನ್ನು ಜಾತಿ, ಧರ್ಮಗಳಂತಹ ಕಂದಾಚಾರಗಳಿಗೆ ಕಟ್ಟಿಹಾಕುವುದು ಮಹಾ ವಿದ್ರೋಹದ ಕೆಲಸ. ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ರವಿಕುಮಾರ ಕಿಂಚಿತ್ತೂ ಮುಜುಗರವಿಲ್ಲದೆ ಅಂತಹದ್ದೊಂದು ವಿದ್ರೋಹಕ್ಕೆ ಕೈಹಾಕಿದ್ದಾನೆ. ಈಗಾಗಲೇ ರಾಜಕೀಯಮಯವಾಗಿರುವ ಸಾಹಿತ್ಯ ಪರಿಷತ್ತನ್ನು ಇದೀಗ ಸಂಪೂರ್ಣ ಜಾತಿಮಯಗೊಳಿಸುವ ಅವನ ಹುನ್ನಾರದಿಂದಾಗಿ ಜಿಲ್ಲೆಯ ಎಲ್ಲಾ ಏಳು ತಾಲ್ಲೂಕು ಕಸಾಪಗಳ ಅಧ್ಯಕ್ಷ ಮತ್ತು ಪದಾಧಿಕಾರಿ ಸ್ಥಾನಗಳಿಗೆ ಒಕ್ಕಲಿಗರನ್ನೇ ನೇಮಕ ಮಾಡಿದ್ದಾನೆ. ಆ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಮತ್ತೊಂದು ಒಕ್ಕಲಿಗರ ಸಂಘವನ್ನಾಗಿಸಲು ಹೊರಟಿರುವುದು ಪ್ರಗತಿಪರ ಸಾಹಿತ್ಯಾಸಕ್ತರ ಆಕ್ರೋಶಕ್ಕೆ ತುತ್ತಾಗಿದೆ. ಹೋಗಲಿ, ಒಂದೊಮ್ಮೆ ಹೀಗೆ ಆಯ್ಕೆಯಾದ ಎಲ್ಲರೂ ಅರ್ಹ ಸಾಹಿತ್ಯಸೇವೆಗೈದವರೇ ಆಗಿದ್ದರೆ ಅವರೆಲ್ಲರ ಜಾತಿಯನ್ನು ಕಟ್ಟಿಕೊಂಡು ಯಾರಿಗೂ ಏನೂ ಆಗಬೇಕಾದ್ದಿರಲಿಲ್ಲ, ಅರ್ಹತೆಯ ಆಧಾರದಲ್ಲಿ ನಡೆದಿರುವ ಈ ಆಯ್ಕೆಯಲ್ಲಿ ಎಲ್ಲರೂ ಒಂದೇ ಜಾತಿಗೆ ಸೇರಿರೋದು ಕಾಕತಾಳೀಯ ಅಂತ ತಳ್ಳಿ ಹಾಕಬಹುದಿತ್ತು, ಆದರೆ ಎಸಿ ಶೋರೂಂನಲ್ಲಿ ಕೂತು ಬಿಸಿನೆಸ್ ಮಾಡುವವರನ್ನೋ, ಮೂರೊತ್ತೂ ಪೊಲಿಟಿಕ್ಸ್ ಜಪ ಮಾಡುವ ರಾಜಕೀಯ ಪಕ್ಷಗಳ ಆಯಕಟ್ಟಿನ ಹುದ್ದೆಯವರನ್ನೇ ತಂದು ಕೂರಿಸಿರೋದು ನೋಡಿದ ಯಾರಿಗೇ ಆಗಲಿ ಆಕ್ರೋಶ ನೆತ್ತಿಗೇರದ ಇರುವುದಿಲ್ಲ.

ಹಾಗೆ ನೋಡಿದರೆ, ಜಿಲ್ಲಾ ಕಸಾಪ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ರವಿಕುಮಾರನೇ ಪಕ್ಕಾ ಲೇವಾದೇವಿಗಾರ. ಬಡ್ಡಿ ದಂಧೆಯಿಂದ ದುಡಿದ ಹಣವನ್ನು ಚೆಲ್ಲಾಡಿಯೇ ಆತ ಕಸಾಪ ಜಿಲ್ಲಾಧ್ಯಕ್ಷನಾದದ್ದು. ನೆಲ-ಜಲ, ನಾಡು-ನುಡಿಯ ಉಳಿವಿಗೆ ಸದಾ ಹೋರಾಡುವ ದಿಕ್ಕು-ದಾರಿಗಳನ್ನು ತೋರಬೇಕಾಗಿರುವ ಜಿಲ್ಲಾ ಸಾಹಿತ್ಯ ಪರಿಷತ್ ರವಿಕುಮಾರ್ ಅಧ್ಯಕ್ಷನಾದ ನಂತರ ಮತ್ತೊಂದು ಒಕ್ಕಲಿಗರ ಸಂಘವಾಗಿ ಮಾರ್ಪಾಡಾಗಿದೆ. ಇಂತಹದ್ದೊಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದ್ದು ನಿಕಟಪೂರ್ವ ಕಸಾಪ ಜಿಲ್ಲಾಧ್ಯಕ್ಷೆಯಾಗಿದ್ದ ಮೀರಾ ಶಿವಲಿಂಗಯ್ಯ. ಕಸಾಪದಲ್ಲಿನ ಎಲ್ಲಾ ಹುದ್ದೆಗಳಲ್ಲೂ ಒಕ್ಕಲಿಗರನ್ನೇ ಕೂರಿಸಿದ ಮೀರಾ ಶಿವಲಿಂಗಯ್ಯ ಒಕ್ಕಲಿಗರ ಸಂಘದ ಚುನಾವಣೆಯಲ್ಲಿ ತನ್ನ ಪತಿ ಬಿ.ಶಿವಲಿಂಗಯ್ಯರನ್ನು ಗೆಲ್ಲಿಸಿಕೊಂಡಿದ್ದು ಬಹಿರಂಗ ಸತ್ಯ. ಮೀರಾ ಶಿವಲಿಂಗಯ್ಯನ ಆಪ್ತ ಬಳಗದಲ್ಲಿರುವ ರವಿಕುಮಾರನಿಗೆ ಒಕ್ಕಲಿಗರ ಸಂಘದ ನಿರ್ದೇಶಕನಾಗುವ ತುಡಿತ ಸ್ವಲ್ಪ ಹೆಚ್ಚಿದೆ. ಹಾಗೆಯೇ ಎಂಎಲ್‌ಸಿ ಚುನಾವಣೆಯಲ್ಲಿ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸುವ ಕನಸು ಕಾಣುತ್ತಿರುವ ರವಿಕುಮಾರ ದುರಾಲೋಚನೆಯಿಂದಲೇ ಒಕ್ಕಲಿಗ ಸಮುದಾಯಕ್ಕೆ ಸೇರಿದವರನ್ನೇ ತಾಲ್ಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದು ನೂರಕ್ಕೆ ನೂರರಷ್ಟು ಸತ್ಯ. ಆ ಉಮೇದಿಯಲ್ಲೇ ಆತ ಇತರೆ ಜಾತಿ, ಧರ್ಮದವರಿಗೆ ಅವಮಾನ ಮಾಡಿದ್ದಾನೆ.

ಮಂಡ್ಯ ತಾಲ್ಲೂಕು ಕಸಾಪ ಅಧ್ಯಕ್ಷನಾಗಿ ರವಿಕುಮಾರನಿಂದ ನೇಮಕಗೊಂಡಿರುವ ಶಿವರಾಮು ಎಂಬಾತ ರವಿಕುಮಾರ್‌ನ ಸ್ನೇಹಿತ. ಮಂಡ್ಯದ ಸರ್ಕಾರಿ ಮಹಾವಿದ್ಯಾಲಯದಲ್ಲಿ ಲೆಕ್ಚರರ್ ಆಗಿರುವ ಈತ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕಾಲೇಜಿನಲ್ಲೇ ಇರುತ್ತಾರೆ. ಹೀಗಿರುವಾಗ ಆತ ಯಾವ ಸಮಯದಲ್ಲಿ ಸಾಹಿತ್ಯ ಪರಿಷತ್ತಿಗೆ ಸೇವೆ ಸಲ್ಲಿಸಬಲ್ಲನೆಂಬುದಕ್ಕೆ ರವಿಕುಮಾರನೇ ಉತ್ತರ ನೀಡಬೇಕು. ಇನ್ನು ಮದ್ದೂರು ತಾಲ್ಲೂಕು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವ ಪಣ್ಣೆದೊಡ್ಡಿ ಹರ್ಷ ಸಾಕಷ್ಟು ರೊಕ್ಕಸ್ಥ ಆಸಾಮಿ. ಪ್ರತಿದಿನ ತನ್ನ ಹೀರೋ ಹೋಂಡಾ ಶೋರೂಂನಲ್ಲಿದ್ದುಕೊಂಡು ಬೈಕ್ ಮಾರುವ ಈತನಿಂದ ಸಾಹಿತ್ಯ ಸೇವೆಯನ್ನು ನಿರೀಕ್ಷಿಸುವುದೇ ಮಹಾಪರಾಧ ಅಂತ ಜನ ಮಾತಾಡಿಕೊಳ್ಳುತ್ತಿದ್ದಾರೆ. ಮದ್ದೂರು ಶಾಸಕ ಡಿ.ಸಿ.ತಮ್ಮಣ್ಣನ ಬೆಂಬಲಿಗನಾಗಿರುವ ಏಕೈಕ ಅರ್ಹತೆಯೇ ಪಣ್ಣೆದೊಡ್ಡಿ ಹರ್ಷನ ಆಯ್ಕೆಯ ಹಿಂದಿರುವ ಮಾನದಂಡ.

ಅದೇರೀತಿ ಶ್ರೀರಂಗಪಟ್ಟಣ ತಾಲ್ಲೂಕು ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ಸಿದ್ದಲಿಂಗು ಕೂಡ ಒಕ್ಕಲಿಗ ಸಮುದಾಯಕ್ಕೆ ಸೇರಿದವ. ಈತನ ಆಯ್ಕೆಯ ಹಿಂದೆ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರ ಕೈವಾಡ ಇದೆ. ಇನ್ನು ನಾಗಮಂಗಲ ತಾಲ್ಲೂಕಿನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಿ.ಆರ್.ಚಂದ್ರಶೇಖರ್ ಶಾಸಕ ಚಲುವರಾಯಸ್ವಾಮಿ ಭಂಟ. ಚಲುವರಾಯಸ್ವಾಮಿ ಅಪೇಕ್ಷೆಯಂತೆ ಒಕ್ಕಲಿಗ ಚಂದ್ರಶೇಖರನಿಗೆ ಅಧ್ಯಕ್ಷ ಸ್ಥಾನ ದಕ್ಕಿದೆ. ಮಳವಳ್ಳಿ ತಾಲ್ಲೂಕು ಅಧ್ಯಕ್ಷನಾಗಿ ಆಯ್ಕೆಯಾದ ಶಿವರಾಮೇಗೌಡ ಪಕ್ಕಾ ಕಾಂಗ್ರೆಸ್ ಕಾರ್ಯಕರ್ತ. ಇಲ್ಲೂ ಸಹ ಶಾಸಕ ಪಿ.ನರೇಂದ್ರಸ್ವಾಮಿ ಮಾತಿನಂತೆ ಕಂಸಾಗರ ಶಿವರಾಮೇಗೌಡನಿಗೆ ಮಣೆ ಹಾಕಲಾಗಿದೆ. ಕೆ.ಆರ್.ಪೇಟೆಯ ತಾಲ್ಲೂಕಿನ ಅಧ್ಯಕ್ಷ ಪೂರ್ಣಚಂದ್ರ ತೇಜಸ್ವಿ ಹಾಗೂ ಪಾಂಡವಪುರ ತಾಲ್ಲೂಕು ಅಧ್ಯಕ್ಷ ಎಂ. ರಮೇಶ್ ಇವರೆಲ್ಲಾ ಹೆಚ್ಚೂಕಮ್ಮಿ ಜೆಡಿಎಸ್ ಪಕ್ಷದೊಂದಿಗೆ ಗುರುತಿಸಿಕೊಂಡವರು.

ಮಳವಳ್ಳಿ ತಾಲ್ಲೂಕು ಬಿಟ್ಟರೆ ಉಳಿದ 6 ಕಡೆ ಜೆಡಿಎಸ್ ಪಕ್ಷದ ಕಾರ್ಯಕರ್ತ ಹಾಗೂ ಆ ಪಕ್ಷದ ಬಗ್ಗೆ ಒಲವು ಹೊಂದಿರುವವರಿಗೆ ಅಧ್ಯಕ್ಷ ಪಟ್ಟ ಕಟ್ಟಲಾಗಿದೆ. ಸ್ವತಃ ಜಿಲ್ಲಾ ಕಸಾಪ ಅಧ್ಯಕ್ಷ ರವಿಕುಮಾರನೇ ಒಕ್ಕಲಿಗನಾಗಿದ್ದು, ಮಾಜಿ ಶಾಸಕ ಎಂ.ಶ್ರೀನಿವಾಸ್ ಹಿಂಬಾಲಕನಾಗಿರುವುದರಿಂದ ಎಲ್ಲಾ ತಾಲ್ಲೂಕು ಅಧ್ಯಕ್ಷರ ಆಯ್ಕೆಯಲ್ಲೂ ಒಕ್ಕಲಿಗ ಸಮುದಾಯದ ಹಾಗೂ ಜೆಡಿಎಸ್ ಪಕ್ಷದ ಬೆಂಬಲಿಗರಿಗೆ ಅವಕಾಶ ಕಲ್ಪಿಸಿದ್ದಾನೆ.

ಇನ್ನು ಜಿಲ್ಲಾ ಕಸಾಪ ಪದಾಧಿಕಾರಿಗಳಾಗಿ ಆಯ್ಕೆಯಾಗಿರುವ ಹುಸ್ಕೂರು ಕೃಷ್ಣೇಗೌಡ, ಎಂ.ಬಿ.ರಮೇಶ್ ಇಬ್ಬರೂ ಕೂಡ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ರವಿಕುಮಾರನ ಚುನಾವಣೆಗೆ ನಿಂತು ಓಡಾಡಿದ್ದರೆಂಬ ಕಾರಣಕ್ಕೆ ಅವರಿಗೆ ಅವಕಾಶ ನೀಡಲಾಗಿದೆ. ಎಂ.ಬಿ.ರಮೇಶ್ ಪಕ್ಕಾ ಜಾತಿವಾದಿಯಾಗಿದ್ದು ಕಸಾಪ ಪದಾಧಿಕಾರಿಯಾಗಲು ಯೋಗ್ಯವಾದ ವ್ಯಕ್ತಿಯಲ್ಲ. ಮಹಿಳಾ ಘಟಕಕ್ಕೆ ಮಂಜುಳಾ ಉದಯಶಂಕರ್ ಎಂಬ ಮಹಿಳೆಯನ್ನು ನೇಮಕ ಮಾಡಲಾಗಿದೆ. ಈಕೆ ಕೂಡ ಜೆಡಿಎಸ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ. ಒಕ್ಕಲಿಗ ಸಮುದಾಯಕ್ಕೆ ಸೇರಿದ ಈಕೆ ಅದ್ಯಾವಾಗ ಸಾಹಿತ್ಯ ಸೇವೆ ಮಾಡಿದರೋ ಗೊತ್ತಿಲ್ಲ.



ಜೆಡಿಎಸ್ ಪಕ್ಷದ ಮಾಜಿ ಶಾಸಕ ಎಂ.ಶ್ರೀನಿವಾಸ್ ಅಳಿಯ, ಬೂದನೂರು ಜಿ.ಪಂ. ಕ್ಷೇತ್ರದ ಜೆಡಿಎಸ್ ಸದಸ್ಯ ಎಚ್.ಎನ್.ಯೋಗೇಶ್‌ರನ್ನು ಕಸಾಪ ಕೋಶಾಧ್ಯಕ್ಷರನ್ನಾಗಿ ಮಾಡಲಾಗಿದೆ. ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮಿಯಾಗಿರುವ ಎಚ್.ಎನ್.ಯೋಗೇಶ್ ಒಂದು ಓಟಿಗೆ ಕನಕಾಂಬರ ನೋಟು ಕೊಟ್ಟು ಇತ್ತೀಚೆಗಷ್ಟೆ ನಡೆದ ಜಿ.ಪಂ. ಚುನಾವಣೆಯಲ್ಲಿ ಗೆದ್ದು ಬಂದಂತವ. ಸಾಹಿತ್ಯ ಕ್ಷೇತ್ರಕ್ಕೆ ಈತ ಸಲ್ಲಿಸಿರುವ ಕೊಡುಗೆ ಶೂನ್ಯ. ರವಿಕುಮಾರನ ಜೆಡಿಎಸ್ ಪ್ರೀತಿ ಯೋಗೇಶ್‌ನನ್ನು ಕೋಶಾಧ್ಯಕ್ಷನನ್ನಾಗಿ ಮಾಡಿದೆ. ಲಿಂಗಾಯತ ಶಿವಕುಮಾರ್, ಪರಿಶಿಷ್ಟಜಾತಿಯ ಸುಂಡಳ್ಳಿ ಮಂಜುನಾಥ್ ಬಿಟ್ಟರೆ ಉಳಿದವರೆಲ್ಲರೂ ಒಕ್ಕಲಿಗ ಸಮುದಾಯದವರೆಂದರೆ ಜಿಲ್ಲಾಧ್ಯಕ್ಷ ರವಿಕುಮಾರನ ಸ್ವಜಾತಿ ಪ್ರೇಮ ಎಂತಹದೆಂಬುದು ಗೊತ್ತಾಗುತ್ತದೆ.

ಜಿಲ್ಲಾ ಕಸಾಪ ಪ್ರಮುಖ ಪದಾಧಿಕಾರಿಗಳು ಹಾಗೂ 7 ತಾಲ್ಲೂಕುಗಳ ಅಧ್ಯಕ್ಷರು ಒಕ್ಕಲಿಗ ಸಮುದಾಯಕ್ಕೆ ಸೇರಿದವರಾಗಿರುವುದು ಇತರೆ ಜಾತಿ, ಧರ್ಮೀಯರ ಅಸಮಾಧಾನಕ್ಕೆ ಕಾರಣವಾಗಿದೆ. ಮಂಜುಳಾ ಉದಯಶಂಕರ್ ಬಿಟ್ಟರೆ ಕಸಾಪದ ಉಳಿದ ಎಲ್ಲಾ ಪದಾಧಿಕಾರಿಗಳು ಪುರುಷರೇ ಆಗಿರುವುದು ಕೂಡ ಲಿಂಗ ಅಸಮಾನತೆಯನ್ನು ಎತ್ತಿ ತೋರುತ್ತದೆ. ಜಿಲ್ಲೆಯ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಹಿರಿಯರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಒಕ್ಕಲಿಗ ಜನಾಂಗವನ್ನು ಬಿಟ್ಟು ಬೇರೆ ಜಾತಿ, ಸಮುದಾಯದ ಜನರತ್ತ ಕಣ್ಣೆತ್ತಿಯೂ ರವಿಕುಮಾರ್ ನೋಡಿಲ್ಲ. ಈ ಹಿಂದಿನ ಅಧ್ಯಕ್ಷೆ ಒಕ್ಕಲಿಗ ಸಮುದಾಯದ ಮೀರಾ ಶಿವಲಿಂಗಯ್ಯ ಕೂಡ ಹಣಬಲದಿಂದಲೇ ಚುನಾವಣೆ ಎದುರಿಸಿ ಗೆದ್ದು ಬಂದು, ತಮ್ಮ ಸ್ವಜಾತಿಪ್ರೇಮ ಮೆರೆದಿದ್ದರು. ತನ್ನ ಪತಿ ಬಿ.ಶಿವಲಿಂಗಯ್ಯ ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಗೆಲ್ಲಲು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಅಧ್ಯಕ್ಷರಾಗಿ ಒಕ್ಕಲಿಗ ಸಮುದಾಯದವರನ್ನೇ ಆಯ್ಕೆ ಮಾಡಿಕೊಂಡಿದ್ದರು. ಆಕೆಯ ಅವಧಿಗೂ ಮೊದಲು ನಾಗಮಂಗಲ ತಾಲ್ಲೂಕು ಅಧ್ಯಕ್ಷರನ್ನಾಗಿ ದೇವಲಾಪುರ ಜಗದೀಶ್ ಎಂಬ ಒಕ್ಕಲಿಗೇತರನನ್ನು ನೇಮಿಸಲಾಗಿತ್ತು. ಆದರೆ ತಾನು ಅಧ್ಯಕ್ಷೆಯಾಗುತ್ತಿದ್ದಂತೆಯೇ ಗಂಡ ಶಿವಲಿಂಗಯ್ಯನನ್ನು ಒಕ್ಕಲಿಗ ಸಂಘದ ಚುನಾವಣೆಯಲ್ಲಿ ಗೆಲ್ಲಿಸಿಕೊಳ್ಳಬೇಕೆಂಬ ಉದ್ದೇಶದಿಂದ ತಾಲ್ಲೂಕು ಅಧ್ಯಕ್ಷ ಸ್ಥಾನದಿಂದ ಜಗದೀಶ್‌ರನ್ನು ಕಿತ್ತುಹಾಕಿ ಒಕ್ಕಲಿಗ ಸಮುದಾಯದ ಬಿ.ಸಿ.ಮೋಹನ್‌ಕುಮಾರನನ್ನು ಆಯ್ಕೆ ಮಾಡಿದ್ದಳು.

ತಾಲ್ಲೂಕು ಅಧ್ಯಕ್ಷರು ಹಾಗೂ ಜಿಲ್ಲಾ ಪದಾಧಿಕಾರಿಗಳನ್ನು ನೇಮಕ ಮಾಡುವಾಗ ಪರಿಶಿಷ್ಟಜಾತಿ, ವರ್ಗ, ಅಲ್ಪಸಂಖ್ಯಾತರು, ಹಿಂದುಳಿದವರು, ಮಹಿಳೆಯರನ್ನ ಗುರುತಿಸಿದ್ದರೆ ಸಾಮಾಜಿಕ ನ್ಯಾಯಕ್ಕೂ ಅರ್ಥ ಬರುತ್ತಿತ್ತು, ಆದರೆ ರವಿಕುಮಾರ್‌ನ ಸ್ವಜಾತಿ ಹಾಗೂ ಜೆಡಿಎಸ್ ಪಕ್ಷ ಪ್ರೇಮದಿಂದ ಇತರೆ ಜಾತಿ-ಧರ್ಮದವರಿಗೆ ನಿಜಕ್ಕೂ ಅನ್ಯಾಯ ಎಸಗಿದ್ದಾನೆ. ಹಾಗಾದರೆ ಬೇರೆ ಸಮುದಾಯಗಳಲ್ಲಿ ನಿಜಕ್ಕೂ ಸಾಹಿತ್ಯಾಸಕ್ತರು, ಸಾಹಿತ್ಯ ಸೇವಕರು ಇರಲಿಲ್ಲವಾ ಅನ್ನೋ ಪ್ರಶ್ನೆಗೆ ಆತನೇ ಉತ್ತರ ಕೊಡಬೇಕು.

ದುಡಿದವರಿಗೆ ದ್ರೋಹ

ಕಳೆದ ಫೆಬ್ರವರಿ 28ರಂದು ನಡೆದ ಜಿಲ್ಲಾ ಕಸಾಪ ಚುನಾವಣೆಯಲ್ಲಿ ರವಿಕುಮಾರನ ಪರ ನಿಂತು ಕೆಲಸ ಮಾಡಿದವರೇ ಬೇರೆ, ಈಗ ಅಧ್ಯಕ್ಷರಾಗಿರುವವರೇ ಬೇರೆ. ಚುನಾವಣೆಯಲ್ಲಿ ಗೆಲ್ಲುವುದಕ್ಕೂ ಮುನ್ನ ರವಿಕುಮಾರ್ ಪ್ರತಿ ತಾಲ್ಲೂಕುಗಳಲ್ಲಿಯೂ ಒಂದಷ್ಟು ಮಂದಿಗೆ ನಿಮ್ಮನ್ನೇ ಅಧ್ಯಕ್ಷರಾಗಿ ಮಾಡುತ್ತೇನೆ ಅಂತ ಬಣ್ಣಬಣ್ಣದ ಮಾತನಾಡಿ ಮರಳು ಮಾಡಿದ್ದ. ಅವರು ಟೊಂಕಕಟ್ಟಿ ದುಡಿದಿದ್ದರಿಂದಲೇ ರವಿಕುಮಾರ್ ಗೆಲ್ಲುವಂತಾದದ್ದು. ಆದರೆ ಗೆದ್ದ ಮೇಲೆ ಅವರನ್ನೆಲ್ಲ ದೂರವಿಟ್ಟು, ಒಕ್ಕಲಿಗರ ಸಂಘದ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಜಾತಿಪ್ರೇಮ ಮೆರೆದಿದ್ದಾನೆ. ನಾಗಮಂಗಲ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ದೇವಾನಂದ ಹಾಗೂ ಬಿ.ಸಿ.ಮೋಹನ್‌ಕುಮಾರ್ ಇಬ್ಬರ ಹೆಗಲ ಮೇಲೂ ಕೈಯಿಟ್ಟ ರವಿಕುಮಾರ ತಾಲ್ಲೂಕು ಅಧ್ಯಕ್ಷರನ್ನಾಗಿ ಮಾಡುವುದಾಗಿ ಹೇಳಿದ್ದ. ಆದರೆ ಗೆದ್ದ ಮೇಲೆ ಇಬ್ಬರಿಗೂ ಕೈಕೊಟ್ಟ ರವಿಕುಮಾರ ಶಾಸಕ ಚಲುವರಾಯಸ್ವಾಮಿಯ ಭಂಟ ಚಂದ್ರಶೇಖರನನ್ನು ನಾಗಮಂಗಲ ತಾಲ್ಲೂಕು ಅಧ್ಯಕ್ಷರಾಗಿ ಮಾಡಿದ್ದಾನೆ. ಇದೇರೀತಿ ಉಳಿದ 6 ತಾಲ್ಲೂಕುಗಳಲ್ಲಿಯೂ ನಡೆದಿದೆ. ತಾಲ್ಲೂಕು ಅಧ್ಯಕ್ಷರ ಆಯ್ಕೆ ಮಾಡುವ ಸಂದರ್ಭದಲ್ಲಿ ತನ್ನ ಗುಂಪಿನ ಒಂದಷ್ಟು ಜನರನ್ನು ಸೇರಿಸಿ ವಿರೋಧ ಬರದಂತೆ ಆಯ್ಕೆಯನ್ನು ಅಂತಿಮಗೊಳಿಸಿಕೊಂಡಿದ್ದಾನೆ.

ಮಂಡ್ಯ ಜಿಲ್ಲಾ ಕಸಾಪ, ತಾಲ್ಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆಯಲ್ಲಿ ಕಳೆದ ಮೂರ್ನಾಲ್ಕು ಅವಧಿಯಿಂದ ಜಾತಿಪ್ರೇಮ ಮೇಲುಗೈ ಸಾಧಿಸುತ್ತಿದೆ. ಆದರೆ ರವಿಕುಮಾರ್ ಅವರನ್ನೆಲ್ಲ ಮೀರಿಸಿ ಜಾತಿಯ ಜೊತೆಗೆ ಪಕ್ಷಪ್ರೇಮವನ್ನೂ ಸಾಧಿಸಿದ್ದಾನೆ. ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ ಪರಿಷತ್ ಅಧ್ಯಕ್ಷ ಹುದ್ದೆಯನ್ನ ತಮ್ಮ ವೈಯಕ್ತಿಕ ವರ್ಚಸ್ಸಿಗೆ ಬಳಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದೆ. ರಾಜಕಾರಣಿಗಳ ಸಖ್ಯಕ್ಕೆ ಹಾತೊರೆಯುವ ಪರಿಷತ್ ಅಧ್ಯಕ್ಷರು ಅವರಿಂದಲೇ ಕಾರ್ಯಕ್ರಮಗಳಿಗೆ ಹಣ ಪಡೆಯುತ್ತಾರೆ. ಯಾವುದೋ ಒಂದು ಪಕ್ಷದಡಿ ಗುರುತಿಸಿಕೊಳ್ಳುವ ಅಧ್ಯಕ್ಷ ಕ್ರಮೇಣ ಅವರ ಹಿಡಿತಕ್ಕೆ ಸಿಲುಕಿ ತಾಲ್ಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳನ್ನು ಅವರು ಹೇಳಿದಂತೆ ಆಯ್ಕೆ ಮಾಡುತ್ತಾನೆ. ಕನ್ನಡ ಭಾಷೆ ಉಳಿಸಿ-ಬೆಳೆಸುವ ಕಾವ್ಯಕಮ್ಮಟ, ಸಂವಾದ, ವಿಚಾರಸಂಕಿರಣ, ಸಾಹಿತ್ಯಗೋಷ್ಠಿ, ಪುಸ್ತಕ ಪ್ರಕಟಣೆಯಂತಹ ಕಾರ್ಯಕ್ರಮಗಳು ಕಣ್ಮರೆಯಾಗಿ ಹೆಚ್ಚೆಂದರೆ ರಾಜಕಾರಣಿಗಳ ಅಭಿನಂದನಾ ಗ್ರಂಥಗಳಷ್ಟೇ ಸಾಹಿತ್ಯ ಸೇವೆ ಎನ್ನುವಂತಾಗಿರುವುದು ದುರದೃಷ್ಟಕರ. ಸಮ್ಮೇಳನದ ನೆಪದಲ್ಲಿ ವಸೂಲಿ ಮಾಡುವ ಚಂದಾಹಣದಲ್ಲಿ ಒಂದಷ್ಟನ್ನು ಜೇಬಿಗಿಳಿಸುವುದು, ರಾಜಕಾರಣಿಗಳಿಗೆ ವೇದಿಕೆಯಲ್ಲಿ ಅವಕಾಶ ನೀಡಿ ಅವರ ಕೃಪಾಕಟಾಕ್ಷ ಗಿಟ್ಟಿಸುವುದು, ವೈಯಕ್ತಿಕವಾಗಿ ಪ್ರಚಾರ, ಲಾಭ ಮಾಡಿಕೊಳ್ಳುವುದು ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಒನ್‌ಲೈನ್ ಅಜೆಂಡಾ ಆಗಿಬಿಟ್ಟಿದೆ.



ರವಿಕುಮಾರ್‌ಗೆ ಕಿಂಚಿತ್ತಾದರೂ ಸಾಹಿತ್ಯ ಪ್ರೇಮವಿದ್ದರೆ ಮತ್ತು ಆ ಸಾಹಿತ್ಯ ಕಲಿಸಿಕೊಡುವ ಪ್ರಗತಿಶೀಲತೆ, ಸಾಮಾಜಿಕ ನ್ಯಾಯಗಳ ಬಗ್ಗೆ ಅರಿವಿದ್ದರೆ ಈ ಕೂಡಲೇ ಈಗಿರುವ ಅಧ್ಯಕ್ಷ, ಪದಾಧಿಕಾರಿಗಳ ಆಯ್ಕೆಯನ್ನು ರದ್ದುಗೊಳಿಸಿ ಎಲ್ಲಾ ಸಮುದಾಯಗಳನ್ನು ಒಳಗೊಳ್ಳುವಂತೆ ಅರ್ಹರನ್ನು ಆಯ್ಕೆ ಮಾಡಲಿ.

■ ವರದಿಗಾ

ಭಾರತ' ಎಂದರೆ ನಮ್ಮ ತಾಯಿಯೊ ಅಥವಾ ತಂದೆಯೋ?

ಈಗ ಕೇವಲ ಭಾರತ ಮಾತಾಕಿ ಜೈ ಎಂಬ ಘೋಷಣೆ ಕೂಗುವವರು ತ ರಾಷ್ಟ್ರಭಕ್ತಿಯುಳ್ಳವರು ಹಾಗೂ ಜೈ ಹಿಂದ್ - ಜೈ ಭಾರತ್ ಎಂದು ನವವರೆಲ್ಲಾ ದೇಶದ್ರೋಹಿಗಳು ಎಂದು ತಮ್ಮದೇ ಸ್ಟೀರಿಯೋಟೈಪ್ ಶ್ಯಾಯ ಕೇಸರಿ ಸಂಘಟನೆಗಳವರು ರೂಪಿಸಿರುವಾಗ "ಭಾರತ" ಎಂದರೆ ತಾಯಿಯೊ ಅಥವಾ ತಂದೆಯೋ? ಅಥವಾ ಕೊನೆಗೆ ಭಾರತ ಮಾತೆ ದರೆ ಬೃಹನ್ನಳೆಯೋ? ಎಂಬ ಅತ್ಯಂತ ಸಂದರ್ಭೋಚಿತ ಜಿಜ್ಞಾಸೆ ಕೆಲವರು ಟ್ಟು ಹಾಕಿರುವರು.

ಜಂಬೂ ದ್ವೀಪ ಎಂಬ ಹೆಸರಿದ್ದ ಈ ಉಪಖಂಡಕ್ಕೆ ಭರತ ವರ್ತಿಯಿಂದಾಗಿ ಭರತವರ್ಷ, ಭರತಖಂಡ ಎಂಬ ಹೆಸರು ಮೊದಲು ಮು ನಂತರ ಅದು ಭಾರತ ಆಯಿತು ಎಂದು ಇತಿಹಾಸಕಾರರು ತ್ತಾರೆ. ಆದರೆ ನಮ್ಮ ಪುರಾಣಗಳಲ್ಲಿ ಮೂರು ಜನ ಭರತರಿದ್ದಾರೆ. ರಾಮನ ತಮ್ಮ ಭರತ. ದುಶ್ಯಂತ-ಶಕುಂತಲೆಯ ಮಗ ಭರತ ಜೈನ ಪುರಾಣಗಳಲ್ಲಿ ಬರುವ ಬಾಹುಬಲಿಯ ಅಣ್ಣ ಭರತ. ಈ ವರೂ ಗಂಡಸರು. ಈ ಗಂಡಸರ ಹೆಸರಿನಂತೆಯೇ ಇಟ್ಟ ದೇಶದ ರು ಸಹ ಪುಲ್ಲಿಂಗ ಆಗುತ್ತದೆ ತಾನೇ. ಈಗ ನಮ್ಮ ದೇಶಕ್ಕೆ ಭಾರತ ಪುಲ್ಲಿಂಗ ಹೆಸರು ಇಟ್ಟು ಸೀರೆ ಉಟ್ಟಿರುವ ಮಹಿಳೆಯ ಪ್ರತಿಮೆ ವಾ ಚಿತ್ರ ತೋರಿಸಿದರೆ ಇದರ ಅರ್ಥ ಭಾರತ ಮಾತೆ ಎಂದರೆ ಣ್ಣಿ ವೇಷದ ಗಂಡು ಅಥವಾ ತೃತೀಯಾಲಿಂಗಿ ಎಂಬ ಅರ್ಥ ಬರುತ್ತದೆ. ತ ಎನ್ನುವ ಬದಲು 'ಭಾರತಿ' ಎಂಬ ಹೆಸರಿಟ್ಟಿದ್ದರೆ ಅದು ಸರಿಯಾದ ಂಗ ಹೆಸರಾಗಿರುತ್ತಿತ್ತು ಎಂಬುದು ಕೆಲವರ ತರ್ಕ. ರಾಷ್ಟ್ರಕವಿ ಕುವೆಂಪು ತ ಹಲವು ಕನ್ನಡದ ಹಿರಿಯ ಸಾಹಿತಿಗಳೆಲ್ಲಾ ನಮ್ಮ ದೇಶಕ್ಕೆ ಭಾರತಿ ಸ್ತ್ರೀ ಹೆಸರಿನಿಂದಲೇ ಕರೆದಿರುವರು.

ಮಹಾಭಾರತದಲ್ಲಿ ಪಾಂಡವರ ಅಜ್ಞಾತವಾಸದಲ್ಲಿ ಅರ್ಜುನನು ಊರ್ವಶಿಯ ದಿಂದ ನಪುಂಸಕ ಗಂಡಾಗಿದ್ದರೂ ಹೆಣ್ಣು ವೇಷತೊಟ್ಟು ಬೃಹನ್ನಳೆ ಎಂಬ ನೊಂದಿಗೆ ವಿರಾಟರಾಜನ ಅರಮನೆಯಲ್ಲಿ ನೃತ್ಯ ಶಿಕ್ಷಕಿಯಾಗಿ ಕೆಲಸಕ್ಕೆ ಕೊಳ್ಳುತ್ತಾನೆ. ಈಗಿನ ಭಾರತ ಮಾತೆಯ ಪರಿಸ್ಥಿತಿಯೂ ಆ ಪುರಾಣದ ನ್ನಳೆಯ ಸ್ಥಿತಿಯಾಗಿದೆಯೇ ಎಂಬ ಜಿಜ್ಞಾಸೆ ಕೆಲವರದ್ದು. ಮೇಲಾಗಿ ನಮ್ಮ ಭಾರತೀಯ ಸೀರೆ ಉಡುವ ಪದ್ಧತಿ ಸಹ ವಿದೇಶಿ ಗ್ರೀಕ್ ಲದ್ದಾಗಿದ್ದು ಚಂದ್ರಗುಪ್ತನು ಗ್ರೀಕ್ ರಾಜಕುಮಾರಿಯನ್ನು ಮದುವೆಯಾದಾಗ ಜೊತೆಗೆ ಬಂದ ನೂರಾರು ಪರಿಚಾರಿಕೆಯರಿಂದ ಸೀರೆ ಉಡುವ ಶೈಲಿ ತದಲ್ಲಿ ಪ್ರಚಲಿತ ಆಯಿತಂತೆ. ಮೂಲತಃ ಗ್ರೀಕ್ ಮತ್ತು ರೋಮನ್ ಸರೂ ಹೀಗೆ ಬಲದಿಂದ ಎಡಕ್ಕೆ ಸೆರಗು ಹೊದ್ದುಕೊಳ್ಳುತ್ತಿದ್ದರು. ಅದೇ ರ ಹೆಂಗಸರ ರವಿಕೆ ಅರ್ಥಾತ್ ಬ್ಲೌಸ್ ಸಹ 11ನೇ ಶತಮಾನದಲ್ಲಿ



ಪರ್ಶಿಯಾದಿಂದ ಬಂದ ವಸ್ತ್ರ ಶೈಲಿ. ಅದಕ್ಕೆ ಮೊದಲು ನಮ್ಮ ದೇಶದವರಿಗೆ ಬಟ್ಟೆಗಳನ್ನು ದೇಹದ ಆಕಾರಕ್ಕೆ ತಕ್ಕಂತೆ ಕತ್ತರಿಸಿ ಸೂಜಿಯಿಂದ ಹೊಲಿಯುವ ಕಲೆ ಗೊತ್ತೇ ಇರಲಿಲ್ಲ. ಅದಕ್ಕಾಗಿ ಎಲ್ಲಾ ಹಳೆಯ ದೇವಾಲಯ-ಗುಹಾಲಯಗಳ ಶಿಲ್ಪ ಮತ್ತು ಭಿತ್ತಿಚಿತ್ರಗಳಲ್ಲಿ ಎಲ್ಲಿಯೂ ಹೊಲಿದ ಬಟ್ಟೆಯನ್ನು ಗಂಡಸರು ಬಿಡಿ ಹೆಂಗಸರೂ ಧರಿಸಿಲ್ಲ. ಕೇವಲ ಒಂದು ತುಂಡ ಅಡ್ಡ ಬಟ್ಟೆ ಸೊಂಟದ ಕೆಳಗೆ ಹಾಗೂ ಇನ್ನೊಂದು ಅಡ್ಡ ಬಟ್ಟೆ ಎದೆಯ ಸುತ್ತ ಸುತ್ತಿಕೊಂಡು ಹೆಂಗಸರು ಮಾನ ಮುಚ್ಚಿಕೊಳ್ಳುತ್ತಿದ್ದರು. ರೇಷ್ಮೆ ವಸ್ತ್ರವಂತೂ ಇಡೀ ಜಗತ್ತಿಗೆ ಪರಿಚಯಿಸಿದವರು ಚೀನಿಯರು. ಅಂದರೆ ನಮ್ಮ ಭಾರತ ಮಾತೆಯ ಪ್ರತಿಮೆಯ ವಸ್ತ್ರಶೈಲಿ ಕೇಸರಿ ಪಡೆಗಳು ದ್ವೇಷಿಸುವ ವಿದೇಶಿ ಮೂಲದ್ದೆಂದಾಯಿತು. ಹಾಗಾದರೆ ಸಮಸ್ತ ಜಗತ್ತಿಗೆ ಎಲ್ಲವನ್ನೂ ವೈದಿಕರೇ ಕಲಿಸಿದ್ದು ಎಂಬ ಸಂಘಿ ಸಿದ್ಧಾಂತ ಏನಾಯಿತು?

ಭಾರತದಲ್ಲಿ ಈಗಲೂ ಜನರು ಎಷ್ಟೊಂದು ಬಡವರಾಗಿದ್ದಾರೆ ಎಂದರೆ ಅವರಲ್ಲಿ ಅರ್ಧಕ್ಕೂ ಹೆಚ್ಚು ಜನರು ಜೀವನದಲ್ಲೆಂದೂ ಚಿನ್ನ ವಜ್ರ ಮುಟ್ಟಿಲ್ಲ. ಹಾಗಿರುವಾಗ ಚಿತ್ರದಲ್ಲಿ ಭಾರತಿ ಮಾತೆ ತಲೆ ಹಾಗೂ ಮೈಮೇಲೆ ಕಿಲೋ ಗಟ್ಟಲೆ ಚಿನ್ನ-ವಜ್ರದ ಆಭರಣ ಹೇರಿಕೊಂಡಿರುವುದು ನಮ್ಮ ಬಡ ದೇಶದ ಪ್ರತೀಕ ಎಂದೂ ಆಗಲಾರದು. ಬ್ರಿಟಿಷರು ನಮ್ಮ ದೇಶಕ್ಕೆ ಕೊಟ್ಟ ಇಂಡಿಯಾ ಎಂಬ ಹೆಸರು ಸಹ ಬಂದಿದ್ದು ಹಿಂದ್ ಶಬ್ದದಿಂದ. 11ನೇ ಶತಮಾನದಲ್ಲಿ ಭಾರತಕ್ಕೆ ದಾಳಿಯಿಟ್ಟ ತುರ್ಕರು ಸಿಂಧೂ ನದಿಯ ಹೆಸರಿನಿಂದಾಗಿ ಆ ವಾಯುವ್ಯ ಪ್ರದೇಶಕ್ಕೆ ಸಿಂಧ್ ಎಂದು ಹೆಸರಿಸಿದರು. ಅದೇ ಸಿಂಧ್ ನಂತರ ಹಿಂದ್ ಆಯಿತು. ಈ ಹಿಂದ್ ನಂತರ ಉಚ್ಚಾರಭೇದದಿಂದ ಇಂಡ್ ಆಗಿ ಕೊನೆಗೆ ಇಂಡಿಯಾ ಆಯಿತು. ನಮ್ಮ ದೇಶದ ವಾಯುವ್ಯ ದಿಕ್ಕಿನ ಒಂದು ಸಣ್ಣ ಪ್ರದೇಶಕ್ಕೆ ಇದ್ದ ಹಿಂದ್/ಇಂಡ್/ಇಂಡಿಯಾ ಹೆಸರನ್ನು ಬ್ರಿಟಿಷರು ನಂತರ ಇಡೀ ದೇಶಕ್ಕೆ ವಿಸ್ತರಿಸಿದರು. ಹಾಗಾಗಿ ಈಗ ನಾವು ಭಾರತ್ ಮಾತಾಕಿ ಜೈ ಎಂದು ಕೂಗುವುದರಿಂದ ಬ್ರಿಟಿಷ್, ಗ್ರೀಕ್, ಪರ್ಶಿಯನ್, ಚೀನಿಯರಿಗೆಲ್ಲಾ ಒಟ್ಟಿಗೇ ಜಯಕಾರ ಹಾಕಿದಂತಾಗುತ್ತದೆ.

ಬ್ರಿಟಿಷರು ಬರುವುದಕ್ಕಿಂತ ಮುಂಚೆ ಸಾವಿರಾರು ಸಣ್ಣಪುಟ್ಟ ರಾಜರು ಮತ್ತು ನವಾಬರು ಸ್ವತಂತ್ರವಾಗಿ ಆಳುತ್ತಿದ್ದ ದೇಶವಿದು. ಶಿವಾಜಿ, ಪೃಥ್ವೀರಾಜ ಚೌಹಾಣ್, ಕಿತ್ತೂರು ಚೆನ್ನಮ್ಮ, ಝಾನ್ಸಿ ಲಕ್ಷ್ಮಿಬಾಯಿ, ಟಿಪ್ಪು ಸುಲ್ತಾನ್ ಮುಂತಾದವರೆಲ್ಲ ಯುದ್ಧ ಮಾಡಿದ್ದು ಕೇವಲ ತಮ್ಮ ತಮ್ಮ ರಾಜ್ಯ ಉಳಿಸಿಕೊಳ್ಳಲು ಮಾತ್ರವೇ ಹೊರತು ಇಡೀ ಉಪಖಂಡ ಒಂದುಗೂಡಿಸಿ ರಕ್ಷಿಸಲು ಅಲ್ಲವೇ ಅಲ್ಲ. ಆಗ ದೇಶಭಕ್ತಿ ಅಥವಾ ರಾಷ್ಟ್ರಪ್ರೇಮ ಎಂದರೆ ಕೇವಲ ತಮ್ಮ ತಮ್ಮ ರಾಜ್ಯದ ಅರಸನಿಗೆ ನಿಷ್ಠೆ ತೋರಿಸುವುದು ಹಾಗೂ ಅಗತ್ಯ ಬಿದ್ದರೆ ಅವನ ಸೇನೆ ಸೇರಿ ತಮ್ಮದೇ ಜಾತಿಯ ನೆರೆಯ ವೈರಿ ರಾಜನ ವಿರುದ್ಧ ಕಾದಾಡುವುದು ಮಾತ್ರವೇ ಆಗಿತ್ತು. ಧ್ವಜ ಹಿಡಿದು ಬೀದಿಬೀದಿಯಲ್ಲಿ ಘೋಷಣೆ ಕೂಗಿ ಹುಸಿ ದೇಶಪ್ರೇಮದ ನಾಟಕ ಆಡುವ ಅಗತ್ಯ ಆಗ ಇರಲಿಲ್ಲ. ಇಡೀ ಉಪಖಂಡ ಒಂದು ದೇಶ ಎನ್ನುವ ಪರಿಕಲ್ಪನೆ ಆಗ ಯಾವುದೇ ಹಿಂದೂವಿನ ತಲೆಯಲ್ಲಿ ಮೂಡಿರಲೇ ಇಲ್ಲ. ಆದರಿಂದಾಗಿ ಇಡೀ ದೇಶ ಒಂದಾಗಿರುವಂತಹ ನಕಾಶೆಯನ್ನೂ ಯಾವುದೇ ಭಾರತೀಯ ಆಗ ರಚಿಸಿರಲಿಲ್ಲ. ಅಖಂಡ ಭಾರತದ ನಕಾಶೆ ಮೊಟ್ಟ ಮೊದಲು ತಯಾರಿಸಿದವರು ಬ್ರಿಟಿಷ್ ರೆವೆನ್ಯೂ ಅಧಿಕಾರಿಗಳು. ಬ್ರಿಟಿಷರು ನಮ್ಮ ದೇಶಕ್ಕೆ ಬಾರದೇ ಇರುತ್ತಿದ್ದರೆ ಇಂದಿಗೂ ನಮ್ಮ ದೇಶ ನೂರಾರು ಸಣ್ಣ ಪುಟ್ಟ ಸ್ವತಂತ್ರ ದೇಶ ಅಥವಾ ಅರಸೊತ್ತಿಗೆಯಾಗಿ ತಮ್ಮತಮ್ಮಲ್ಲಿಯೇ ಜಗಳಾಡಿಕೊಂಡು ಇರುತ್ತಿದ್ದವು. ಆ ಪರಿಸ್ಥಿತಿಯಲ್ಲಿ ಯಾವ ದೇಶದ ಮಾತೆಗೆ ಜೈ ಅನ್ನದಿದ್ದರೆ ದೇಶದ್ರೋಹಿ ಎಂದು ಆರೋಪಿಸಿ ಸಂಘ ಪರಿವಾರದವರು ಜನರಿಗೆ ಹೊಡೆಯುತ್ತಿದ್ದರು?

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಬಗಲಲ್ಲಿ ದೊಣ್ಣೆ ಬಾಯಲ್ಲಿ ಶರಣಾರ್ಥಿ

ಭಾಜಪ ಸರ್ಕಾರಕ್ಕೆ ಹೆಸರು ಬದಲಾವಣೆ ಆದ್ಯತೆ. ಲ್ಮಾನರ ಹೆಸರು ಎಲ್ಲೂ ಇರಬಾರದು. ಅದು ಅದರ ಂತಿಕ ನಿಲುವು.

ಭಾರತೀಯ ಸಂಸ್ಕೃತಿಯಿಂದಲೇ ಒಡಮೂಡಿದ ಹೆಸರು ಗಿದ್ದರೆ?

ಇದುವೆ ಪ್ರಶ್ನೆ.

ಗುಡ್ಗಾಂವ್ ಎಂಬುದು ಹರ್ಯಾಣ ರಾಜ್ಯದ ಮಾಹಿತಿ ಜ್ಞಾನ ಕೇಂದ್ರ. ಹಿಂದೆ ಅದು ಹಳ್ಳಿ ಆಗಿತ್ತು, ಅಲ್ಲಿ ಹೇರಳವಾಗಿ ಕಬ್ಬು ಬೆಳೆಯುತ್ತಿದ್ದರು. ಬೆಲ್ಲ ತಯಾರಿಸು ು. ಅಲ್ಲಿಯ ಬೆಲ್ಲ ಬಹಳ ಹೆಸರುವಾಸಿಯಾಗಿತ್ತು, ಹಳ್ಳೀ 'ಗೂಡ್ ಗಾಂವ್' ಎಂದೇ ಗುರುತಿಸಿಕೊಂಡಿತು. ಮಾತಿನಲ್ಲಿ 'ಗೂಡ್ ಗಾಂವ್', 'ಗುಡ್ಗಾಂವ್' ಆಯಿತು. ಹಳ್ಳಿಗೆ ಅದೇ ಹೆಸರು ನಿಂತಿತು...

ಭಾರತೀಯ ಸಂಸ್ಕೃತಿಯಿಂದ ಒಡಮೂಡಿದ ಹೆಸರು ಗ್ಗಾಂವ್. ಅದೇ ಈಗಲೂ ಮುಂದುವರೆಯಬಹು ತ್ತು, ಆದರೇನು ಮಾಡ್ತೀರಿ. ಅಲ್ಲಿರುವುದು ಭಾಜಪ ರ. ಗುರು ದ್ರೋಣಾಚಾರ್ಯರು ನಡೆದಾಡಿದ ಅದು. ಭಾರತೀಯ ಪರಂಪರೆಯ ಪ್ರತಿನಿಧಿ ಅವನನ್ನು ನೆನೆಯದಿರಲಾದೀತೆ?

ಗ್ರಾಮೀಣ ಸಂಸ್ಕೃತಿ- ಭಾರತೀಯ ದಿವ್ಯ ಪರಂಪರೆ ಗಳಲ್ಲಿ ಯಾವುದು ಮುಖ್ಯ?

ಭಾಜಪ ಸರ್ಕಾರದ ನಿಲುವು ಸ್ಪಷ್ಟ ಆಗಿತ್ತು, 'ಗೂಡ್ ಗಾಂವ್' ಬದಲು 'ಗುರುಗಾಂವ್' ಎಂದು ನಾಮಕರಣ ಮಾಡಿದರು! ಆಡುಮಾತಿನ ಗ್ಗಾಂವ್', 'ಗುರ್ಗಾಂವ್' ಆಯಿತು!

ಯಾರು ಈ ದ್ರೋಣಾಚಾರ್ಯ?

ದಲಿತ ಏಕಲವ್ಯನಿಂದ ಗುರು ಕಾಣಿಕೆಯಾಗಿ ಬೆರಳನ್ನು ಪಡೆದು ಬಿಲ್ಲು ವಿದ್ಯೆ ಪಾರಂಗತನಾದರೂ ಉಪಯೋಗಿಸಲಾರದಂತೆ ಮಾಡಿದ ಮಹಾನ್ ಗುರು!

ಇದು ಆದದ್ದು ಏಪ್ರಿಲ್ 13 ರಂದು. ಮಾರನೆಯ ಅಂಬೇಡ್ಕರ್ ಅವರ 125ನೇ ಜನ್ಮದಿನ!

ಅಂಬೇಡ್ಕರ್‌ಗೆ ಭಾಜಪ ನೀಡಿದ ಬಳುವಳಿ ಇದು!

ಭಾರತ್ ಮಾತಾಕಿ ಜೈ!

ಹಿಂದೂ ಧರ್ಮಕ್ಕೆ ಶುಕ್ರದೆಸೆ ಹೊಡೆದಿರುವಂತಿದೆ. ಅದು ಈಗ ಸುದ್ದಿ ಅಂಗಳದಲ್ಲಿ ಮೆರೆದಾಡುತ್ತಾ ಇದೆ. ಅದರ ಪ್ರತಿಪಾದಕರು ಎಷ್ಟು ಸೊಗಸಾಗಿ, ತರ್ಕಬದ್ಧವಾಗಿ, ತಮ್ಮ ವಾದ ಮಂಡಿಸುತ್ತಾರೆ ಅಂತೀರಿ. ಕೇಳುಗರು ಅಹುದು ಅಹುದು ಎನ್ನುವಂತೆ ಇರುತ್ತೆ, ಅವರನ್ನು ಕಂಡರೆ ಆಗದವರು 'ಅವು ಹೇಳೋದೆಲ್ಲ ಬರೀ ಸುಳ್ಳು. ಬೊಗಳೆ ಬಿಡ್ತವೆ' ಅಂತಾರೆ ನಿಜ. ಸುಳ್ಳೇ ಆಗಲಿ. ಮನಸೂರೆಗೊಳ್ಳುವಂತೆ ಮಾತನಾಡುತ್ತಾರಲ್ಲಾ ಅದು ಮುಖ್ಯ. ಮಾತಿಗೆ ಹೇಳ್ತೀನಿ. ಮೋಹನ್ ಭಾಗವತರು ಇದಾರಲ್ಲ, ಅದೇ ಆರೆಸ್ಸೆಸ್ ಸರಸಂಚಾಲಕರು. ಅವರ ಮಾತನ್ನು ಕೇಳಬೇಕು. ಏನು ಮನಮೋಹಕವಾಗಿರುತ್ತೆ ಅಂತೀರಿ. ಯಾರು ಹಿಂದೂಗಳು ಅನ್ನೊ ಪ್ರಶ್ನೇನೆ ತಗೊಳ್ಳಿ. ಭಾಗವತರು ಹೇಳ್ತಾರೆ:

ಜರ್ಮನ್ ದೇಶದ ಪ್ರಜೆ ಜರ್ಮನ್ ಆಗಿರ್ತಾನೆ.

ಅಮೆರಿಕೆ ದೇಶದ ಪ್ರಜೆ ಅಮೆರಿಕನ್ ಆಗಿರ್ತಾನೆ.



ಪಾಕಿಸ್ತಾನದ ಪ್ರಜೆ ಪಾಕಿಸ್ತಾನಿ ಆಗಿರ್ತಾನೆ.

ಹಾಗೇನೆ ಹಿಂದೂಸ್ತಾನದ ಪ್ರಜೆ ಏನಾಗಿರ್ಬೇಕು....

ಹಿಂದೂ ಆಗಿರ್ಬೇಕು!

ಎಂತಹ ಸೊಗಸಾದ ತರ್ಕ ಅಲ್ವಾ.

ಭಾಗವತರ ಕಂಡರೆ ಕೆಲವರಿಗೆ ಆಗವಲ್ತು. ಅವು ಮೊಸರಿನಲ್ಲೂ ಕಲ್ಲು ಹುಡುಕೋ ಜಾತಿಯವು. ಅಂಥ ತಲೆಹರಟೆ ಮುಂಡೇವು ಹಿಂದೂಸ್ತಾನ ಅನ್ನೋದು ಎಲ್ಲೈತೆ? ವೇದ ಉಪನಿಷತ್ತಿನಲ್ಲಿ ಐತಾ? ಸಂವಿಧಾನದಲ್ಲಿ ಐತಾ? ಇಲ್ವಲ್ಲ. ಅದಿರೋದು ಭಾಗವತರ ಮೆದುಳಿನ ಒಳಗೆ ಅಂತ ಗೇಲಿ ಮಾಡ್ತವೆ. ಏನೋ ಅವನ್ನೆಲ್ಲ ಅದ್ದು ಕುಡ್ದಿರೋದಂಗೆ ಆಡ್ತವೆ. ನಾಯಿ ಬೊಗಳುತ್ತಲೇ ಇರುತ್ತವೆ. ದೇವಲೋಕ ಇದ್ದಂತೆ ಇರುತ್ತೆ ಅಲ್ವಾ. ಹಂಗೇ ಇವು ಬೊಮ್ಡ ಬಜಾಯಿಸುತ್ತಾ ಇದ್ರೂ ಭಾಗವತದಂತಹವರು ತಮ್ಮ ವಾಗ್ಝರಿಯನ್ನೇನೂ ಬದಲಾಯಿಸಿಕೊಂಡಿಲ್ಲ ದಿರುವುದು ಹಿಂದೂ ಧರ್ಮದ ಪುಣ್ಯ ವಿಶೇಷವೇ ಸರಿ!

ಇಂತಹದ್ದೇ ತರ್ಕ ತುಮಕೂರಿನ ಕಾಲೇಜೊಂದರಲ್ಲಿ ಪ್ರತಿಫಲಿಸಿದೆ. ಅಲ್ಲಿನ ಒಂದು ವಿದ್ಯಾರ್ಥಿ ಸಂಘಟನೆಯ ಪ್ರಶ್ನೆ: ಭಾರತ ಮಾತೆಗೆ ಇಲ್ಲಿ ಜಾಗ ಇಲ್ವಾ?

ಸೊಗಸಾದ ಪ್ರಶ್ನೆ. ಭಾರತ ದೇಶದಲ್ಲಿ ಭಾರತ ಮಾತೆಗೆ ಸ್ಥಳ ಇಲ್ಲ ಅಂದ್ರೆ!

ಈ ಪ್ರಶ್ನೆ ಯಾಕೆ ಬಂತು?

ಸಂಕ್ಷಿಪ್ತ ವಿವರ ಇದು.

ಕ್ರಿಶ್ಚಿಯನ್ನರ ಆಡಳಿತ ಇರುವ ಕಾಲೇಜು ಅದು.

ಅದರ ವಾರ್ಷಿಕೋತ್ಸವ ಸಮಾರಂಭ ಇತ್ತು.

ಕೆಲವು ವಿದ್ಯಾರ್ಥಿಗಳಿಗೆ ದೇಶಭಕ್ತಿ, ರಾಷ್ಟ್ರಪ್ರೇಮ ಎಲ್ಲ ಉಕ್ಕುಕ್ಕಿ ಹರೀತು.

ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾರತ ಮಾತೆಯ ಪೂಜೆ ಆಗಬೇಕು ಎಂದು ಒತ್ತಾಯಿಸಿದರು.

'ಪೂಜೆ ಮಾಡುವುದು ನಮ್ಮ ಧರ್ಮಕ್ಕೆ ವಿರೋಧ.'

ಆಡಳಿತಮಂಡಳಿಯ ನಿಲುವು.

'ಭಾರತಾಂಬೆಯ ಪೂಜಿಸದವರು ದೇಶದ್ರೋಹಿಗಳು.'

ವಿದ್ಯಾರ್ಥಿಗಳ ಏರುದನಿಯ ಖಂಡನೆ.

'ಭಾರತ ಅಂದ್ರೆ ಈ ಫೋಟೋ ಅಲ್ಲ. ಇಲ್ಲಿನ ಜನ. ಅವರ ಸೇವೆ ನಿಜವಾದ ದೇಶಭಕ್ತಿ. ಅದನ್ನ ಮಾಡ್ತಿದೀವಿ' ಅಂತ ಅವರು. 'ಭಾರತ ಮಾತೆಯ ಪೂಜಿಸದವರು ದೇಶದ್ರೋಹಿಗಳು' ಅಂತ ಇವರು.

ಈ ಹಗ್ಗಜಗ್ಗಾಟ ಏನಾದರೂ ಆಗಲಿ. ಹಿಂದೂ ಧರ್ಮದ ಉಳಿವಿಗೆ ವಿದ್ಯಾರ್ಥಿಗಳೂ ಇಳಿದಿದ್ದಾರಲ್ಲ ಅದೇ ಪುಣ್ಯ!


ಈ ನಡುವೆ ಏನಾಗದೆ. ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ. ಅವನಲ್ಲ ಕನ್ಹಯ್ಯ ಕುಮಾರ್ ಅಂತ್ಲೋ ಏನೋ. ಅದ್ಕೆ ಮೈಕೇರಿಯಾ ರೋಗ ಇರ್ಬೇಕು. ಭಾಷಣ ಬಿಗೀತಾನೆ ಇರುತ್ತೆ. ಜೈಲಿಗೆ ಹೋಗಿ ಬಂದಿದ್ದು ಮತ್ತೇ ಬಿಟ್ಟಿರೋ ಹಂಗದೆ. ಮತ್ತೆ ಹೋಗ್ಬೇಕು ಅಂತ ಆಸೆಯಾಗಿರ್ಬೇಕು. ಅದ್ಕೇಯ ಅದೇನ್ ಮಾತಾಡದೆ ಗೊತ್ತಾ....

"ನಾನು ನನ್ನ ಹೆಸರನ್ನು 'ಭಾರತ್ ಮಾತಾ ಕಿ ಜೈ' ಅಂತ ಬದಲಾಯಿಸಿಕೊಳ್ತೀನಿ. ಮದುವೆಯಾದ ಮೇಲೆ ನನ್ನ ಹೆಂಡತಿ ಹೆಸರನ್ನೂ 'ಭಾರತ ಮಾತಾಕಿ ಜೈ' ಅಂತ ಬದಲಾಯಿಸ್ತೀವಿ. ಹುಟ್ಟೊ ಮಗುವಿಗೂ 'ಭಾರತ್ ಮಾತಾಕಿ ಜೈ' ಅಂತ ಹೆಸರಿಡ್ತೀನಿ. ಮಗು ಶಾಲೆಗೆ ಸೇರುವ ವಯಸ್ಸಾಗುತ್ತೆ. ಶಾಲೆಗೆ ಸೇರಿಸೋಕೆ ಹೋಗ್ತೀನಿ. ಮಗುವಿನ ಹೆಸರೇನು ಅಂತ ಕೇಳ್ತಾರೆ. 'ಭಾರತ ಮಾತಾಕಿ ಜೈ' ಅಂತೀನಿ. ತಂದೆಯ ಹೆಸರು ಕೇಳ್ತಾರೆ. 'ಭಾರತ ಮಾತಾಕಿ ಜೈ' ಅಂತೀನಿ. ತಾಯಿಯ ಹೆಸರು ಕೇಳ್ತಾರೆ. 'ಭಾರತ್ ಮಾತಾಕಿ ಜೈ' ಅಂತೀನಿ. ಮುಂದೇನು ಆಗುತ್ತೆ ಗೊತ್ತಾ. ಮಗುವಿನ ವಿದ್ಯಾಭ್ಯಾಸಕ್ಕೆ ನಾನು ಒಂದು ಪೈಸೇನೂ ಖರ್ಚು ಮಾಡುವ ಹಾಗಿರಲ್ಲ, ಯಾಕೆ ಅಂತೀರಾ? ಭಾರತ ಮಾತಾಕಿ ಜೈ ಮಹಾತ್ಮೆ. ದೇಶಭಕ್ತರ ಕುಟುಂಬ ಇದು ಅಂತ ಎಲ್ಲಾನೂ ಫ್ರೀ ಆಗಿ ಒದಗಿಸ್ತಾರೆ. ಮಗುವಿನ ಭವಿಷ್ಯ ಉಜ್ವಲವಾಗಿರುವಂತೆ ಮಾಡ್ತಾರೆ....

ಹಿಂಗೆಲ್ಲ ಆ ಪೋಲಿ ಬಡ್ಡೆತ್ತುದು ಭಾರತ ಮಾತಾಕಿ ಜೈ ಅನ್ನೋದು ದೇಶಭಕ್ತಿಯ ಪ್ರತೀಕ ಅನ್ನೋ ಸಂಘ ಪರಿವಾರದ ದಿವ್ಯವಾಕ್ಯವನ್ನು ಗೇಲಿ ಮಾಡದಲ್ಲ... ಇದೇನು ಒಳ್ಳೇದಕ್ಕಲ್ಲ, ಹಿಂಗೆಲ್ಲ ಮಾತಾಡ್ದೋನ ನಾಲಿಗೆ ಹಿಂಗೋಗದೆ ಇದ್ದಾತಾ...!

■ ಎಚ್ಚೆಲ್ಕೆ

ಸಿಗರನಹಳ್ಳಿ: ಇನ್ನೂ ಬೂದಿ ಮುಚ್ಚಿದ ಕೆಂಡ



ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಸಿಗರನಹಳ್ಳಿ ಈಗ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿರುವ ಗ್ರಾಮ. ಕಳೆದ ಏಳೆಂಟು ತಿಂಗಳಿನಿಂದ ಅಸಮಾನತೆ, ಅಸ್ಪೃಶ್ಯತೆ ಹೆಸರಿನಲ್ಲಿ ನೆಮ್ಮದಿ ಕಳೆದುಕೊಂಡಿದ್ದ ಗ್ರಾಮ ಇದು. ಎಲ್ಲಕ್ಕಿಂತ ಹೆಚ್ಚಾಗಿ ಜಾತ್ಯತೀತ ಜನತಾ ದಳದ ನಾಯಕರಾದ ದೇವೇಗೌಡ ಮತ್ತವರ ಪುತ್ರ ರೇವಣ್ಣನ 'ಜಾತೀಯತೆ'ಯನ್ನು ಬಹಿರಂಗಪಡಿಸಿದ ಗ್ರಾಮ ಸಿಗರನಹಳ್ಳಿ.

ಈ ಗ್ರಾಮದಲ್ಲಿ 331 ಕುಟುಂಬಗಳಿವೆಯಾದರೂ ಊರಿನ ಪಾರುಪತ್ಯ ಒಕ್ಕಲಿಗರ ಪಾಳಯದಲ್ಲಿಯೇ ಇದೆ. ಸುಮಾರು 300 ಒಕ್ಕಲಿಗ ಕುಟುಂಬಗಳು, 30 ದಲಿತ ಕುಟುಂಬಗಳು, ಒಂದು ಆಚಾರಿ ಮನೆತನದ ಕುಟುಂಬ ನೆಲೆಸಿರುವ ಊರಿನಲ್ಲಿ ಇದ್ದಕ್ಕಿದ್ದಂತೆ ಜಾತಿಯ ಭೂತ ಹೊಕ್ಕಿ, ರಾಷ್ಟ್ರಮಟ್ಟದ ಸುದ್ದಿಗೆ ಗ್ರಾಸವಾಗಿದೆ. ಎಲ್ಲಕ್ಕಿಂತ ಮೇಲಾಗಿ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ನಾಯಕರಾಗಿ ಮೆರೆದ ಮಾಜಿ ಪ್ರಧಾನಿ ದೇವೇಗೌಡ ಮತ್ತು ಅವರ ಪುತ್ರ ಮಾಜಿ ಸಚಿವ ಮತ್ತು ಹಾಲಿ ಶಾಸಕ ರೇವಣ್ಣ ಇಂದಿಗೂ ಜಿಲ್ಲೆಯ ರಾಜಕಾರಣವನ್ನು ತಮ್ಮ ವಂಶಕ್ಕೆ ಮಾತ್ರ ಮೀಸಲು ಎಂದು ಭಾವಿಸಿದ್ದಾರೆ. ಆದರೆ ಅಂತಹ ಭಾವನೆಯಿಂದಾಗಿಯೇ ಇವತ್ತು ಸಿಗರನಹಳ್ಳಿ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ನಿಮಗೆಲ್ಲ ಗೊತ್ತಿರಲಿ, ಬೇರೆ ಊರುಗಳಂತೆ ದಲಿತರು ಇಲ್ಲಿ ಭೂಹೀನರಲ್ಲ. ಇಲ್ಲಿರುವ ಪ್ರತಿ ಕುಟುಂಬಕ್ಕೆ ಕನಿಷ್ಠವೆಂದರೂ ಐದರಿಂದ 10 ಎಕರೆ ಕೃಷಿ ಭೂಮಿ ಈ ಊರಿನ ದಲಿತ ಜನಾಂಗಕ್ಕೂ ಇದೆ. ಹಲವಾರು ದಶಕಗಳಿಂದ ದಲಿತರ ವ್ಯವಸಾಯಕ್ಕೆ ಒಕ್ಕಲಿಗರು, ಒಕ್ಕಲಿಗರ ವ್ಯವಸಾಯಕ್ಕೆ ದಲಿತ ಕುಟುಂಬಗಳ ಸಮ್ಮಿಲನ ಇಲ್ಲಿ ಸಾಮಾನ್ಯವಾಗಿತ್ತು.

ವರ್ಷಗಳ ಕಾಲ ಅಣ್ಣ ತಮ್ಮಂದಿರಂತೆ-ಬಂಧು ಬಾಂಧವರಂತೆ ಬದುಕಿದ್ದವರು ದಾಯಾದಿಗಳಾದದ್ದು ಕುತೂಹಲಕರವಾಗಿದೆ.

ತಲೆತಲಾಂತರದಿಂದ ಸಿಗರನಹಳ್ಳಿಯಲ್ಲಿ ದಲಿತರು ಹಾಗೂ ಸವರ್ಣೀಯರು ಅರ್ಥಾತ್ ಒಕ್ಕಲಿಗರು ಅಣ್ಣತಮ್ಮಂದಿರಂತೆ ಬದುಕಿ ಬಂದಿದ್ದಾರೆ. ಅವರ ಮನೆ ಕೆಲಸಕ್ಕೆ ಇವರು, ಇವರ ಮನೆ ಕೆಲಸಕ್ಕೆ ಅವರು ಹೋಗುವುದು ಸಾಮಾನ್ಯ. ಊರಿನ ಹಬ್ಬ, ಮನೆಯ ಮದುವೆ, ಸಾವು, ಬೀಗರ ಊಟ, ವ್ಯವಸಾಯ... ಹೀಗೆ ಎಲ್ಲಾ ವಿಚಾರಗಳಿಗೂ ದಲಿತ ಕುಟುಂಬಗಳು ತಮ್ಮ ನೆಚ್ಚಿನ ಒಕ್ಕಲಿಗ ಕುಟುಂಬಗಳೊಂದಿಗೆ, ಹಾಗೆಯೇ ಒಕ್ಕಲಿಗ ಕುಟುಂಬಗಳು ತಮ್ಮ ಆಪ್ತ ದಲಿತ ಕುಟುಂಬಗಳೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಂಡು ಬದುಕಿ ಬಂದಿದ್ದವು.

ಊರಿನ ದಲಿತ ಕುಟುಂಬದ ಹುಡುಗರು, ಒಕ್ಕಲಿಗ ಕುಟುಂಬದ ಯುವಕರು ಒಟ್ಟಾಗಿ ಸೇರಿ ಊರಿನಲ್ಲಿ ಪೌರಾಣಿಕ ನಾಟಕಗಳನ್ನು ಏರ್ಪಡಿಸಿ ಒಟ್ಟಿಗೆ ನಟಿಸಿ ಅಭಿನಯಿಸಿದ್ದವು. ಹೀಗೆ ಊರು ಎಂದಮೇಲೆ ಸಾಮರಸ್ಯದ ಸಂಕೇತವಾಗಿತ್ತು ಸಿಗರನಹಳ್ಳಿ! ಎಲ್ಲಾ ಜಾತಿಯ ಜನರು ಎಲ್ಲಾ ದೇವಸ್ಥಾನಗಳಿಗೆ ಹೋಗುತ್ತಿದ್ದರು.

ಆದೊಂದು ಘಟನೆಯವರೆಗೆ ಯಾರಿಗೆ ಯಾರದ್ದೂ ತಕರಾರಿರಲಿಲ್ಲ. ಯಾಕೆಂದರೆ ಆ ಒಂದು ಘಟನೆ ಸಾಮರಸ್ಯದ ಸಂಕೇತವಾಗಿದ್ದ ಸಿಗರನಹಳ್ಳಿ ಇದ್ದಕ್ಕಿದ್ದಂತೆ ಜಾತಿಯ ಹೆಸರಿನಲ್ಲಿ ಒಡೆದು ಹೋಗುವಂತೆ ಮಾಡಿತು.

ಅದು ಬಸವೇಶ್ವರ ಸ್ತ್ರೀ ಶಕ್ತಿಸಂಘ. ಅದೇ ಬಸವೇಶ್ವರ ದೇವಸ್ಥಾನ ಮತ್ತು ಸಾರ್ವಜನಿಕರ ಹಣದಲ್ಲಿ ನಿರ್ಮಾಣವಾಗಿದ್ದರೂ 'ಒಕ್ಕಲಿಗರ ಸಮುದಾಯ ಭವನ' ಎಂದು ಹೆಸರು ಪಡೆದಿದ್ದ ಸಮುದಾಯ ಭವನಕ್ಕೆ ಸಂಬಂಧಿಸಿದ ವಿಚಾರ.

ಸಿಗರನಹಳ್ಳಿಯ ಬಸವೇಶ್ವರ ಸ್ತ್ರೀ ಶಕ್ತಿ ಸಂಘಕ್ಕೆ ದಲಿತ ಜನಾಂಗದ ತಾಯಮ್ಮ ಮುಖ್ಯಸ್ಥೆ. ಆ ಸಂಘದಲ್ಲಿ ದಲಿತ ಮಹಿಳೆಯರೊಂದಿಗೆ ಒಕ್ಕಲಿಗರ ಮಹಿಳೆಯರು ಸೇರಿ ಸಂಘ ನಡೆಸಿಕೊಂಡು ಬರುತ್ತಿದ್ದರು. ಕಳೆದ 2015ರಲ್ಲಿ ಸಂಘಕ್ಕೆ ಮೂರು ಲಕ್ಷ ರೂಪಾಯಿ ಸಾಲ ಮಂಜೂರಾಗಿತ್ತು. ಎಲ್ಲಾ ಸದಸ್ಯರು ಸಾಲ ಹಂಚಿಕೊಂಡ ನಂತರ ಸಂಘದಲ್ಲಿ 1,500 ರೂ. ಹೆಚ್ಚುವರಿ ಹಣ ಉಳಿದಿತ್ತು. ಈ ಹಣದಲ್ಲಿ ಬಸವೇಶ್ವರ ದೇವರಿಗೆ ಪೂಜೆ ಮಾಡಿಸಲು ಇಡೀ ಸಂಘದ ಸದಸ್ಯೆಯರು ನಿರ್ಧರಿಸಿದರು.

ಕುಡುಕ ಊರಿಗೆ ಬೆಂಕಿ ಇಟ್ಟ

ಒಕ್ಕಲಿಗ ಮತ್ತು ದಲಿತ ಮಹಿಳೆಯರು ಪೂಜೆ ನಡೆಸುತ್ತಿದ್ದ ವೇಳೆ ದೇವಸ್ಥಾನಕ್ಕೆ ಅದೇ ಗ್ರಾಮದ ಕುಡುಕನೊಬ್ಬ ಬಂದ. ಆತನ ಹೆಸರು ದೇವರಾಜ್. ಆದರೆ ಆತನಿಗೆ ಅಡ್ಡ ಹೆಸರು ಒಂದಿದೆ: ಆತ ಮಹಾನ್ ಪೆದ್ದನಾದ್ದರಿಂದ ಗ್ರಾಮದ ಜನ ಆತನನ್ನು ಕೋಣನ ತಲೆ ದೇವರಾಜ್ ಅಂತ ಲೇವಡಿ ಮಾಡುತ್ತಾರೆ.

ಹೀಗೆ ದೇವಸ್ಥಾನಕ್ಕೆ ಬಂದ ದೇವರಾಜ ದೇವಸ್ಥಾನದೊಳಕ್ಕೆ ದಲಿತ ತಾಯಮ್ಮನ ಪ್ರವೇಶದ ವಿರುದ್ಧ ಗಲಾಟೆ ಮಾಡಿದ. ಅಷ್ಟರಲ್ಲಾಗಲೇ ಇದೇ ತಾಯಮ್ಮ ಚೀಟಿ ವ್ಯವಹಾರದ ಹಣ ಕೊಡುವ ವಿಚಾರದಲ್ಲಿ ಕೆಲವರೊಂದಿಗೆ ಸಣ್ಣ ಮನಸ್ತಾಪ ಮಾಡಿಕೊಂಡಿದ್ದರು ಎಂಬ ಮಾತು ಹಬ್ಬಿತ್ತು. ಈ ಮನಸ್ತಾಪವೇ ಹಳ್ಳಿಯಲ್ಲಿ ಹಿಂದೆಂದೂ ಇಲ್ಲದಿದ್ದ ಅಸ್ಪೃಶ್ಯತೆಯನ್ನು ಮುಖ್ಯ ವಿಷಯವಾಗಿ ಜನರ ಮಧ್ಯೆ ತಂದು ನಿಲ್ಲಿಸಿತು.

ಸುದ್ದಿ ಆಯಿತು



ದೇವಸ್ಥಾನವನ್ನು ತಾಯಮ್ಮ ಪ್ರವೇಶಿಸಿದ್ದರ ಬಗ್ಗೆ ಗಲಾಟೆ ಮಾಡಿದ ಕುಡುಕನ ವಿರುದ್ಧ ಪೊಲೀಸರಿಗೆ ದೂರು ನೀಡಲಾಯಿತು. ಆಗ ಆತ ನೇರವಾಗಿ ಅರಸಿದ್ದು ಹೊಳೆನರಸೀಪುರದ 'ರಾಜಾಶ್ರಯ' ವನ್ನು. ಅಲ್ಲಿ ಆತನಿಗೆ ಕೊಂಚ ರಕ್ಷಣೆ ಸಿಕ್ಕಿದ್ದೇ ತಡ ಇಲಿಯಂತಿದ್ದ ಆತ ಹುಲಿಯಂತಾಗಿಹೋದ. ಅದಕ್ಕೆ ಸರಿಯಾಗಿ ಹಾಸನದ ಪತ್ರಿಕೆಯಲ್ಲಿ ಅದೇ ಗ್ರಾಮದ ದಲಿತ ಜನಾಂಗದ ಪತ್ರಕರ್ತ ವಿಜಯಕುಮಾರ ಬರೆದ 'ಸವರ್ಣೀಯರಿಂದ ದಲಿತರ ಮೇಲೆ ದೌರ್ಜನ್ಯ, ದೇವಸ್ಥಾನಕ್ಕೆ ದಲಿತರ ಪ್ರವೇಶ ನಿಷೇಧ' ಸುದ್ದಿಯು ಗ್ರಾಮದ ದಲಿತರು ಮತ್ತು ಸವರ್ಣೀಯರ ನಡುವೆ ನೇರಾನೇರ ಕಂದಕಕ್ಕೆ ಕಾರಣವಾಯಿತು.

ಊರಿನಲ್ಲಿ ಅನಾದಿಕಾಲದಿಂದಲೂ ಅಸ್ಪೃಶ್ಯತೆ ಆಚರಣೆಯಲ್ಲಿ ಇದೆ ಎಂದು ಬಿಂಬಿಸಲಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ಊರಿನ ವಿಚಾರಕ್ಕೆ ಹೊರಗಿನವರ ಎಂಟ್ರಿ ಇಡೀ ಊರಿನ ವಾತಾವರಣವನ್ನೇ ಕಲುಷಿತಗೊಳಿಸಿತು. ಅಲ್ಲಿ ಪ್ರಗತಿಪರರ ಹೆಸರಿನಲ್ಲಿ ಒಕ್ಕಲಿಗರ ಒಳಪಂಗಡಗಳನ್ನೇ ಸಹಿಸಿಕೊಳ್ಳದ ಮಂದಿ, ವಿವಿಧ ದಲಿತ ಪರ ಸಂಘಟನೆಗಳು, ಜೊತೆಗೆ ಸಿಐಟಿಯು ಸೇರಿದಂತೆ ಸ್ವತಃ ಶಾಸಕ ರೇವಣ್ಣ ಅವರಂತಹವರ ಹೆಸರಿದ್ದದ್ದು ಮತ್ತೊಂದು ವಿಪರ್ಯಾಸಕ್ಕೆ ಕಾರಣವಾಯಿತು.

ಮರುದಿನ ಊರಿನಲ್ಲಿ ಸಭೆ ನಡೆಸಲಾಯಿತು. ಸಮಾಜ ಕಲ್ಯಾಣಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿದರು. ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಣೆ ವಿಷಯವು ಒಬ್ಬ ಕುಡುಕ ಆಡಿದ ಮಾತಾಗಿ ಉಳಿಯದೆ ಊರಿನ ಇಡೀ ಸಮುದಾಯಕ್ಕೆ ಮಾಡಿದ ಅವಮಾನವೆಂಬಂತೆ ಬಿಂಬಿಸಲಾಯಿತು. ಅಧಿಕಾರಿಗಳು ಕಾಟಾಚಾರಕ್ಕೆ ಸಭೆ ನಡೆಸಿದರಾದರೂ ಅಲ್ಲಿ ಒಕ್ಕಲಿಗಾರಾರು ಸಭೆಗೆ ಬಾರದೆ ಗೈರುಹಾಜರಾದರು.

ಸಿಗರನಹಳ್ಳಿ ಸವರ್ಣೀಯರ ವಿರುದ್ಧ ರೋಷ

ಹೊಳೆನರಸೀಪುರದ ಸಿಗರನಹಳ್ಳಿಯಲ್ಲಿ ನಡೆದ ಗಲಾಟೆಗೆ ಸಂಬಂಧಿಸಿದಂತೆ ಅತಿಹೆಚ್ಚು ಪ್ರತಿಭಟನೆ ನಡೆದದ್ದು ಪತ್ರಿಕಾಗೋಷ್ಠಿಗಳು ಜರುಗಿದ್ದು ಹಾಸನದಲ್ಲಿ. ಹಾಸನದ ಕೆಲ ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳ ಮುಖಂಡರು ಎಲ್ಲರೂ ಸಿಗರನಹಳ್ಳಿಯ ಇಡೀ ಒಕ್ಕಲಿಗ ಜಾತಿ ಜನರ ವಿರುದ್ಧ ರೋಷಾವೇಷ ತೋರಿದರು. ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆಗಿಳಿದರು. ಹೊಳೆನರಸೀಪುರದಿಂದ ಹಾಸನದವರೆಗೆ ಸವರ್ಣೀಯರ ವಿರುದ್ಧ ಘೋಷಣೆ ಕೂಗುತ್ತಾ ಪಾದಯಾತ್ರೆ ನಡೆಸಿ ಗ್ರಾಮದ ಕಂದಕವನ್ನು ಮತ್ತಷ್ಟು ದೊಡ್ಡದು ಮಾಡಲಾಯಿತು.

ಯಾವಾಗ ಗ್ರಾಮದ ಒಕ್ಕಲಿಗರ ವಿರುದ್ಧ ಹಾಸನದಲ್ಲಿ ಪ್ರತಿಭಟನೆ ಆರಂಭವಾಯಿತೋ ಅಂದು ಹಾಸನಕ್ಕೆ ಆಗಮಿಸಿದ ಸಿಗರನಹಳ್ಳಿ ಒಕ್ಕಲಿಗರು ಮತ್ತು ಕೆಲ ದಲಿತ ಕುಟುಂಬಗಳು ಹಾಸನದ ಜಿಲ್ಲಾಧಿಕಾರಿ ಕಚೇರಿ ಎದುರು ಕೂತು ಗ್ರಾಮದಲ್ಲಿ ಅಶಾಂತಿ ಸೃಷ್ಟಿಸಲಾಗುತ್ತಿದೆ ಎಂದು ಪ್ರತಿಭಟನೆ ನಡೆಸಿದರು.

ಜಾತಿ ಬೆಂಕಿಯಲ್ಲಿ ರಾಜಕೀಯ ಲೆಕ್ಕಾಚಾರ

ಹೀಗೆ ಸಿಗರನಹಳ್ಳಿಯಲ್ಲಿ ನಡೆದ ಜಾತಿಸಂಘರ್ಷ ಈ ಭಾಗದ ಪ್ರಚಂಡ ಶಾಸಕ ರೇವಣ್ಣನಿಗೆ ಗೊತ್ತಿರಲಿಲ್ಲವೆಂದಲ್ಲ. ಆದರೆ ಅದರ ಪೂರ್ಣ ಲಾಭ ಪಡೆಯಲು ಜೆಡಿಎಸ್ ಮುಂದಾಯಿತು. ಅರ್ಥಾತ್ ರೇವಣ್ಣ ಮುಂದಾದರು.


ತನ್ನ ಒಂದು ಮಾತಿನಲ್ಲಿ ಊರಿನ ಅಸಮಾನತೆಯನ್ನು ಹೋಗಲಾಡಿಸಬಹುದಾಗಿದ್ದ ರೇವಣ್ಣ ತನ್ನ ಒಕ್ಕಲಿಗ ಜಾತಿ ಬಾಂಧವರೊಂದಿಗೆ ನಾನಿದ್ದೇನೆ ಎಂಬಂತಹ ಆಶ್ವಾಸನೆ ನೀಡಿದರು. ಪೊಲೀಸರಿಗೆ, ಅಧಿಕಾರಿಗಳಿಗೆ ತನ್ನ ಅನುಮತಿ ಇಲ್ಲದೆ ಯಾರೂ ಸಿಗರನಹಳ್ಳಿಗೆ ಹೋಗದಂತೆ ತಾಕೀತು ಮಾಡಿದರು. ರೇವಣ್ಣನೆಂದರೆ ಸರ್ಕಾರ ಎಂದುಕೊಂಡವರಿಗೆ ರೇವಣ್ಣನ ಮಾತು ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ಆಯಿತು.

ಹಳ್ಳಿಯಲ್ಲಿ ಇರುವ 30 ದಲಿತರ ಮನೆಯ ಮತಗಳಿಗಿಂತ 300 ಒಕ್ಕಲಿಗರ ಮನೆಯ ಮತಗಳು ಜೆಡಿಎಸ್ ಪರವಾಗಿ ನಿಂತುಬಿಟ್ಟವು. ಊರು ಅಕ್ಷರಶಃ ಇಬ್ಭಾಗವಾಗಿ ಹೋಯಿತು. ಆಗ ಪ್ರಾರಂಭವಾಯಿತು ನಿಜವಾದ ಅಸ್ಪೃಶ್ಯತೆಯ ಆಚರಣೆ!

ಊರ ದೇವಸ್ಥಾನದ ವಿಚಾರ, ಸಮುದಾಯ ಭವನದ ವಿಚಾರ ಕುರಿತು ಮಾತನಾಡಲು ಬಂದ ಅಧಿಕಾರಿಗಳಿಗೆ ರೇವಣ್ಣನ ಪರ ನಿಂತವರು ನೇರವಾಗಿಯೇ ಧಮಕಿ ಹಾಕಿದರು. ಒಕ್ಕಲಿಗರ ಅಂಗಡಿಗಳಿಗೆ ದಲಿತರ ನಿಷೇಧವಾಯಿತು. ಉಳುಮೆಗೆ ಟ್ರ್ಯಾಕ್ಟರ್ ದೊರಕದಂತಾಯಿತು. ಮಿಲ್ ಬಿಡಿಸಲು ಮಿಲ್ ಇಲ್ಲದಂತಾಯಿತು. ಕೊನೆಗೆ ದಲಿತರನ್ನು ಸವರ್ಣೀಯರು ಮಾತನಾಡಿಸದಂತಾಯಿತು.

ನಂತರ ಊರಿನಲ್ಲಿ ನಡೆದ ಶಾಂತಿಸಭೆಗೆ ಆಗಮಿಸಿದ ರೇವಣ್ಣ ಇಡೀ ಊರಿನವರ ಮುಂದೆ ಮಾಧ್ಯಮದವರನ್ನು, ಪೊಲೀಸರನ್ನು, ಸ್ವತಃ ಜಿಲ್ಲಾಧಿಕಾರಿಯನ್ನು ಏಕವಚನದಲ್ಲಿ ನಿಂದಿಸುತ್ತಾ ತನ್ನ ಆಡಳಿತ ತೋರಿಸಿದರು. ದಲಿತರಿಗೆ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಬದಲಾಗಿ ಹೊಸ ದೇವಸ್ಥಾನ ಕಟ್ಟಿಸಿಕೊಡುವ ಮಾತನಾಡಿದರು. "ನೀವು ನಿಮ್ಮ ಪಾಡಿಗೆ ಇರಿ. ನೀವು ನಿಮ್ಮ ಪಾಡಿಗೆ ಇರಿ. ಊರು ಈಗ ಹೇಗಿದೆಯೋ ಹಾಗೆ ಮುಂದುವರೆಯಲಿ" ಎಂದು ರೇವಣ್ಣ ಆಜ್ಞಾಪಿಸುವ ಮೂಲಕ ಶಾಂತಿಸಭೆಗೆ ಅಂತ್ಯ ಹಾಡಲಾಯಿತು. ಅರ್ಥಾತ್ ಶಾಸಕ ರೇವಣ್ಣ ಸಮಸ್ಯೆಯನ್ನು ಪರಿಹರಿಸುವ ಬದಲು ಸಮಸ್ಯೆಯನ್ನು ಜೀವಂತ ಇರಿಸಿ ರಾಜಕೀಯ ತಂತ್ರಗಾರಿಕೆ ಮೆರೆದರು.

ಇದು ಸಹಜವಾಗಿಯೇ ಒಕ್ಕಲಿಗ ಜನಾಂಗಕ್ಕೆ ಹಾಲು ಉಂಡಷ್ಟು ಸಂತಸ ತರಿಸಿದರೆ, ದಲಿತ ಜನಾಂಗಕ್ಕೆ ವಿಷಪ್ರಾಶನ ಮಾಡಿಸಿದಂತಾಯಿತು. ಅಷ್ಟರಲ್ಲಿ ಮನಃ ಮತ್ತೊಮ್ಮೆ ಸಭೆ ಸೇರಿಸಲಾಯಿತು. ದಲಿತ ಜನಾಂಗಕ್ಕೆ ಬಸವೇಶ್ವರ ದೇವಸ್ಥಾನ ಪ್ರವೇಶ ಸಾಧ್ಯವೇ ಇಲ್ಲವೆಂಬುದು ಸವರ್ಣೀಯರ ವಾದವಾದರೆ, "ನಾವೂ ಮನುಷ್ಯರೇ. ನಮಗೆ ದೇವಸ್ಥಾನಕ್ಕೆ ಪ್ರವೇಶ ಬೇಕು, ಸಮುದಾಯ ಭವನ ಒಂದು ಜಾತಿಗೆ ಸೀಮಿತವಾಗಿರಬಾರದು ಮತ್ತು ನಮ್ಮೆಲ್ಲರಿಗೆ ಸಮಾನ ಹಕ್ಕು ಬೇಕು" ಎಂದು ದಲಿತರು ಪಟ್ಟು ಹಿಡಿದರು. ಪರಿಣಾಮ ಮತ್ತೊಮ್ಮೆ ಸಭೆ ಸೇರಿಸಿದ ಅಧಿಕಾರಿಗಳು ಅಂತಿಮವಾಗಿ ದೇವಸ್ಥಾನದ ಕೀಲಿಯನ್ನು ಅಲ್ಲಿಯ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕರಿಗೆ ನೀಡಿ ಯಾರು ಬೇಕಾದರೂ ದೇವಸ್ಥಾನಕ್ಕೆ ಹೋಗಿ ಎಂದು ಇಡೀ ಪ್ರಕರಣಕ್ಕೆ ಎಳ್ಳುನೀರು ಬಿಟ್ಟರು.



ಬಾಗಿಲು ಮುಚ್ಚಿದ ದೇವಸ್ಥಾನ

ಕಳೆದ ಆಗಸ್ಟ್ 31 ರಂದು ಪ್ರಾರಂಭವಾದ ಈ ವಿವಾದ ಅದೇ ಬಸವೇಶ್ವರ ದೇವಸ್ಥಾನಕ್ಕೆ ಏಳು ತಿಂಗಳು ಬೀಗ ಹಾಕಿಸಿತು. ಯಾರೊಬ್ಬರೂ ದೇವಸ್ಥಾನದ ಮೆಟ್ಟಿಲು ಹತ್ತಲಿಲ್ಲ. ದೇವಸ್ಥಾನ ಬೇಕು ಎಂದ ದಲಿತರೇ ಹೋಗಿ ದೇವಸ್ಥಾನಕ್ಕೆ ಪೂಜೆ ಮಾಡಿಕೊಳ್ಳಲಿ ಎಂದ ಒಕ್ಕಲಿಗರೂ, ಒಕ್ಕಲಿಗರೇ ಹೋಗಿ ಪೂಜೆ ಮಾಡಲಿ ಎಂದು ದಲಿತರೂ ಪಟ್ಟು ಹಿಡಿದಿದ್ದರಿಂದ ದೇವಸ್ಥಾನದ ಬಾಗಿಲು ಎಲ್ಲರಿಗೂ ಮುಚ್ಚಿಕೊಂಡಿತು.

ಊರಿನ ಜಾತ್ರೆ ಹೊತ್ತಿಗೆ ಮತ್ತೆ ಎದ್ದುನಿಂತಿತು ದೇವಸ್ಥಾನ ಪ್ರವೇಶ ವಿವಾದ. ಕಳೆದ ಮಾರ್ಚ್ 31 ಮತ್ತು ಏಪ್ರಿಲ್ 1 ರಂದು ಸಿಗರನಹಳ್ಳಿ, ಹರಿಹರಪುರ ಸೇರಿದಂತೆ ಸುತ್ತಲಿನ ಏಳು ಹಳ್ಳಿಗಳ ರಥೋತ್ಸವದ ಹಿನ್ನೆಲೆಯಲ್ಲಿ ಅತ್ತ ಸವರ್ಣೀಯರು ಬಸವೇಶ್ವರ ದೇಗುಲದ ಬಾಗಿಲು ತೆಗೆದು ದೇವಸ್ಥಾನ ಸಿದ್ಧಗೊಳಿಸುತ್ತಿರುವಂತೆ ಇತ್ತ ದಲಿತ ಪತ್ರಕರ್ತ ವಿಜಯ್‌ಕುಮಾರ್ ಮತ್ತೊಮ್ಮೆ ದಲಿತ ಕುಟುಂಬಗಳಿಗೆ ದೇವಸ್ಥಾನ ಮತ್ತು ಸಮುದಾಯ ಭವನಕ್ಕೆ ಪ್ರವೇಶ ಕೊಡಿಸುವಂತೆ ತಾಲ್ಲೂಕು ಹಾಗೂ ಜಿಲ್ಲಾಡಳಿತಕ್ಕೆ ಅರ್ಜಿ ಕೊಟ್ಟು ಬಂದರು.

ರೇವಣ್ಣನ ಪಿತ್ಥ ನೆತ್ತಿಗೇರಿತು

ಈ ಅರ್ಜಿ ವಿಚಾರ ರೇವಣ್ಣನಿಗೆ ಗೊತ್ತಾಗಿದ್ದೆ ತಡ, ಅವರು ಕೆಂಡಮಂಡಲವಾದರು. ತನ್ನ ಅನುಮತಿ ಇಲ್ಲದೆ ಗ್ರಾಮಕ್ಕೆ ಬರುವ ಅಧಿಕಾರಿಗಳನ್ನು ತರಾಟೆ ತೆಗೆದುಕೊಳ್ಳುವಂತೆ ತಮ್ಮ ಬೆಂಬಲಿಗರಿಗೆ ರೇವಣ್ಣ ಸೂಚಿಸಿದ್ದರೆಂಬ ಮಾತಿದೆ.

ದಲಿತ ಕುಟುಂಬಗಳು ದೇವಸ್ಥಾನ ಪ್ರವೇಶ ಕುರಿತಂತೆ ಸಲ್ಲಿಸಿದ್ದ ಅರ್ಜಿ ವಿಚಾರವಾಗಿ ಗ್ರಾಮಕ್ಕೆ ತೆರಳಿದ ಹಾಸನದ ಎಸಿ ವಿಜಯ ಹಾಗೂ ಎಎಸ್ಪಿ ಶೋಭಾರಾಣಿ ಮತ್ತಿತರರು ಶಾಸಕ ರೇವಣ್ಣನಿಗೆ ಮಾಹಿತಿ ನೀಡಿ ಸಭೆ ನಡೆಸಲು ಮುಂದಾದರು. ಆದರೆ ಅಂದು ಸಭೆಗೆ ಹಾಜರಾಗಿದ್ದು ಕೇವಲ ದಲಿತ ಕುಟುಂಬಗಳು ಮಾತ್ರ! ಅವರೊಂದಿಗೆ ಮಾತನಾಡಿದ ವಿಜಯ ಸವರ್ಣೀಯರ ವಿರುದ್ಧ ಉದ್ವೇಗಕ್ಕೆ ಒಳಗಾಗಿ ಹಲವು ಮಾತುಗಳನ್ನಾಡಿಬಿಟ್ಟರು.

ಪರಿಸ್ಥಿತಿ ಕೈ ಮೀರಿತು


ಮೊದಲೇ ರೇವಣ್ಣನ ಬೆಂಬಲದ ಹೆಸರಿನಲ್ಲಿ ಕುರುಡರಾಗಿದ್ದ ಸವರ್ಣೀಯರ ಸಿಟ್ಟು ದಲಿತರ ಕಡೆಯಿಂದ



ಎಸಿ ವಿಜಯ ಮತ್ತು ಎಸ್ಪಿ ಶೋಭಾರಾಣಿ ದಲಿತ ಮುಖಂಡರೊಂದಿಗೆ ಸಭೆ ನಡೆಸಿದ ಸಂದರ್ಭ



ಕೊನೆಗೂ ಈಡೇರಿದ ದಲಿತ ಕುಟುಂಬಗಳ ದೇವಸ್ಥಾನ ಪ್ರವೇಶ ಬೇಡಿಕೆ



ಗ್ರಾಮದಲ್ಲಿ ಗಲಾಟೆ ನಂತರ ಬಂದ ಪೊಲೀಸರು



ವೇಗೌಡ

...ಗಿ ಅಧಿಕಾರಿಗಳ ಮೇಲೆ ಬಿತ್ತು. ಅದರಲ್ಲೂ ಇಬ್ಬರು ...ಳಾ ಅಧಿಕಾರಿಗಳ ಮೇಲೆ! ಗ್ರಾಮದ 50ಕ್ಕೂ ಹೆಚ್ಚು ...ಳೆಯರು ಎಸಿ ವಿಜಯ ಹಾಗೂ ಎಎಸ್ಪಿ ಶೋಭಾ ... ವಿರುದ್ಧ ದಂಗೆ ಎದ್ದರು. ಅವಾಚ್ಯ ಶಬ್ದಗಳಿಂದ ...ಕಾರಿಗಳನ್ನು ನಿಂದಿಸಿದರು. ಪರಿಸ್ಥಿತಿ ಕೈ ...ರುತ್ತಿರುವುದನ್ನು ಅರಿತ ಪೊಲೀಸರು ಈ ಇಬ್ಬರು ...ಕಾರಿಗಳನ್ನು ಸರ್ಕಾರಿ ಶಾಲೆಯ ಒಳಗೆ ಕರೆದುಕೊಂಡು ...ೇಗಿ ಅವರನ್ನು ಕಾಪಾಡಿ ಗ್ರಾಮಸ್ಥರ ವಿರುದ್ಧ ಲಾಠಿ ...ಸಲಾರಂಭಿಸಿದರು.

...ಪೊಲೀಸ್ ವಾಹನದ ಮೇಲೆ ಕಲ್ಲುಗಳು ...ರಿಬಂದವು. ಪೊಲೀಸರು ಸಿಕ್ಕಸಿಕ್ಕವರ ಮೇಲೆ ಮುಗಿ...ದ್ದು ಲಾಠಿ ಬೀಸಿದರು. ಊರು ಪ್ರಕ್ಷುಬ್ಧಗೊಂಡಿತು. ...ಅಷ್ಟರಲ್ಲಿ ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ನೂತನ ...ಪಿ ರಾಹುಲ್ ಕುಮಾರ್ ಶಹಪುರವಾಡ್ ಕೂಡಲೇ ...ಲೀಸರ ಲಾಠಿ ಚಾರ್ಜ್ ನಿಲ್ಲಿಸಿದರು. ಅದೇ ಹೊತ್ತಿಗೆ ...ಕ ರೇವಣ್ಣನವರೇ ಆಗಮಿಸಿದರು. ಅಷ್ಟರಲ್ಲಾಗಲೇ ...ಲೀಸರು, ಪತ್ರಕರ್ತರಿಬ್ಬರ ಮೇಲೆ ಹಲ್ಲೆ ನಡೆದಿತ್ತು. ...ತರು ವರ್ಸಸ್ ಸವರ್ಣೀಯರ ನಡುವಿದ್ದ ಹಗೆತನ ...ಲೀಸರು ಮತ್ತು ಅಧಿಕಾರಿಗಳ ಮೇಲೆ ತಿರುಗಿ ...ಶಾಂತವಾಯಿತು.

...ಮಾಧ್ಯಮಗಳನ್ನು ತಬ್ಬಿಕೊಂಡ ರೇವಣ್ಣ

...ಅಂದು ಸಿಗರನಹಳ್ಳಿಗೆ ಅಧಿಕಾರಿಗಳು ಹೋಗುತ್ತಾರೆ ...ಮೂ, ಅಲ್ಲಿ ಗಲಾಟೆ ಆಗುತ್ತದೆ ಎಂದೂ ಮೊದಲೇ ...ಗಂಡಿದ್ದ ರೇವಣ್ಣ ಆ ಸ್ಥಳಕ್ಕೆ ಯಾವುದೇ ಟಿ.ವಿ ...ಧ್ಯಮದವರು ತೆರಳದಂತೆ ನೋಡಿಕೊಂಡರು!

...ಅದೇ ದಿನ ಹೊಳೆನರಸೀಪುರ ಕಾಮಗಾರಿ ವೀಕ್ಷಣೆ ...ನಲ್ಲಿ ಎಲ್ಲಾ ಟಿವಿ ಮಾಧ್ಯಮದವರನ್ನು ಟಿಟಿ ವಾಹನಕ್ಕೆ ...ಸಿಕೊಂಡಿದ್ದ ರೇವಣ್ಣ ಅವರುಗಳೊಂದಿಗೆ ಒಂದು ಟ್ರಿಪ್ ...ಕೊಂಡಿದ್ದರು. ಅಲ್ಲಿ ಯಾವ ವೀಕ್ಷಣೆಯೂ ...ಲ್ಲವೆಂಬುದು ಬೇರೆ ಮಾತು!

...ರೇವಣ್ಣ ತಮ್ಮನ್ನು ತಬ್ಬಿಕೊಂಡಿದ್ದಕ್ಕೆ ಸಂತಸಪಟ್ಟ ಕೆಲ ... ಮಾಧ್ಯಮದ ಮಂದಿ ರೇವಣ್ಣನ ಜೊತೆ ಊಟ ...ಡಿದ್ದು, ತಬ್ಬಿಕೊಂಡ ಸೆಲ್ಫಿ ತೆಗೆದುಕೊಂಡು ಸಂತಸಪಟ್ಟರು.

ಧಮಕಿ ಹಾಕಿದ ರೇವಣ್ಣ

...ಇತ್ತ ರೇವಣ್ಣನ ಟ್ರಿಪ್ ಮುಗಿಸಿ ಹಾಸನಕ್ಕೆ ಬರುವ ...ತ್ತಿಗೆ ಸಿಗರನಹಳ್ಳಿ ಹೊತ್ತಿ ಉರಿದ ವಿಷಯ ತಿಳಿಯಿತು. ...ಡಲೇ ದೃಶ್ಯ ಮಾಧ್ಯಮದ ಮಂದಿ ಹೊಳೆನರಸೀಪುರ ...ತ್ರೆಗೆ ಭೇಟಿ ನೀಡಿ ಗಾಯಾಳು ಪೊಲೀಸರ ಚಿತ್ರಣ ...ಡಲಾರಂಭಿಸಿದರು. ಅದೇ ಆಸ್ಪತ್ರೆಗೆ ಹಾಜರಾದ ರೇವಣ್ಣ ...ವಿಡೀ ತಾನೆ ಕರೆದೊಯ್ದಿದ್ದ ದೃಶ್ಯ ಮಾಧ್ಯಮದ ಮಂದಿಗೆ ...ಮರಾ ಮುಚ್ಕೋ ಬೋ. ..." ಎಂದು ಧಮಕಿ ...ಬಿಟ್ಟರು. ಬೆಳಗ್ಗೆಯಿಂದ ರೇವಣ್ಣ ಅಂದ್ರೆ ಹಂಗೆ, ...ಣ್ಣ ಅಂದ್ರೆ ಹಿಂಗೆ ಅಂದುಕೊಂಡಿದ್ದ ಕ್ಯಾಮರಾ ...ಡುಗರು ರಾತ್ರಿ ವೇಳೆ ರೇವಣ್ಣನ ದಿವ್ಯದರ್ಶನ ಕಂಡು ...ಬಿದ್ದರು.

ಕೇಸು ಜಡಿದ ಪೊಲೀಸರು

...ಯಾವಾಗ ಪೊಲೀಸರು, ಅಧಿಕಾರಿಗಳ ಮೇಲೆ ...ರ್ಣೀಯರ ಗುಂಪು ಹಲ್ಲೆ ನಡೆಸಿತೋ ಆಗ ಅಧಿಕಾರಿಗಳು ...ು ಜಡಿದರು. ಸರಿಸುಮಾರು 59 ಮಂದಿಯ ಮೇಲೆ ... 6 ಎಫ್.ಐ.ಆರ್ ದಾಖಲಿಸಿರುವ ಪೊಲೀಸರು ...ೇಬರಿ 30ಕ್ಕೂ ಹೆಚ್ಚು ಮಹಿಳೆಯರನ್ನು ಮೊದಲ ...ನಲ್ಲಿ ಬಂಧಿಸಿ ಕರೆತಂದರು.

...ಆ ಮಹಿಳೆಯರನ್ನು ಬಂಧಿಸಲು ಕಾರಣವೂ ಇತ್ತು! ...ಕೆಂದರೆ ಅಂದು ಸಭೆ ನಡೆಸುವ ವೇಳೆ ಇದೇ ...ಳೆಯರು ಎಸಿ ವಿಜಯ ಹಾಗೂ ಎಎಸ್ಪಿ ಶೋಭಾರಾಣಿ ...ರ ಮೇಲೆ ಮುಗಿಬಿದ್ದಿದ್ದರು. ಮಹಿಳೆಯರು ಅದ್ಯಾದ ...ಅಧಿಕಾರಿಗಳನ್ನು ನಿಂದಿಸಿದ್ದರೋ ಅದರನ್ನು ಬಂಧಿಸದೆ ...ೇಸರಿಗ ವಿಧಿ ಇರಲಿಲ್ಲ ಎಂಬಂತಾಗಿತ್ತು.

ಕುದ್ದು ಹೋದ ರೇವಣ್ಣ

...ರೇವಣ್ಣನ ಮಾತಿಗೆ ಕಾಸೆ ಎಣ್ಣದ ಸಿಗರನಹಳ್ಳಿಗೆ ...ಕಾರಿಗಳು ಹೋಗಿ ಸಭೆ ನಡೆಸಿದ್ದು, ಗಲಾಟೆ ಆದನಂತರ ...ಗ ಜನರ ಮೇಲೆ ಕೇಸು ಜಡಿದು ಸುಮಾರು 40 ಮಂದಿಯನ್ನು ಬಂಧಿಸಿದ್ದು ರೇವಣ್ಣ ಕುದ್ದು ಹೋಗುವಂತೆ ಮಾಡಿತು. ಮರುದಿನ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರೇವಣ್ಣ ಹಾಸನ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ಕುಳಿತು ಹಾಸನ ಡಿಸಿ, ಎಸಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾಡಳಿತದ ಯಡವಟ್ಟು ಇಷ್ಟಕ್ಕೆ ಕಾರಣ

ಗ್ರಾಮದ ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಣೆ ಹಾಗೂ ಸಮುದಾಯ ಭವನಕ್ಕೆ ಒಕ್ಕಲಿಗರ ಸಮುದಾಯ ಭವನ ಎಂಬ ನಾಮಕರಣಕ್ಕೆ ಸಂಬಂಧಿಸಿದಂತೆ ದೂರು ಬಂದ ದಿನವೇ ಕಾನೂನುಪ್ರಕಾರ ಅಧಿಕಾರಿಗಳು ತಮ್ಮ ಕೆಲಸ ಮಾಡಿದ್ದರೆ ಎಂಟು ತಿಂಗಳ ತನಕ ಈ ಪ್ರಕರಣ ಇಷ್ಟು ದೊಡ್ಡದಾಗಿ ಬೆಳೆದು ರಾಷ್ಟ್ರದ ಗಮನ ಸೆಳೆಯುತ್ತಲೇ ಇರಲಿಲ್ಲವೆಂಬುದು ಅಕ್ಷರಶಃ ಸತ್ಯ.

ಒಂದೆಡೆ ಜಿಲ್ಲಾಡಳಿತಕ್ಕೂ ಈ ಸಮಸ್ಯೆ ಬಗೆಹರಿಸುವ ತಾಕತ್ತಾಗಲಿ, ಮನಸ್ಸಾಗಲಿ ಇಲ್ಲ. ಮತ್ತೊಂದೆಡೆ ಹಾಸನದ ಜಿಲ್ಲಾ ಉಸ್ತುವಾರಿ ಸಚಿವ ಎ. ಮಂಜುಗೆ ಸಿಗರನಹಳ್ಳಿ ವಿಚಾರದಲ್ಲಿ ತಾವಿಡುವ ಒಂದು ಹೆಜ್ಜೆಯೂ ತಮಗೆ ತಮ್ಮ ಅರಕಲಗೂಡು ಕ್ಷೇತ್ರದಲ್ಲಿ ಮಾರಕವಾಗುವ ಭಯ. ಮತ್ತೊಂದೆಡೆ ಇದೇ ಪ್ರಕರಣದಲ್ಲಿ ದೇವೇಗೌಡರು ಮತ್ತು ರೇವಣ್ಣನ ವಿರೋಧಕ್ಕೆ ಒಕ್ಕಲಿಗರು ಬಳಕೆಯಾಗುತ್ತಿರುವ ಪ್ರಕರಣದಲ್ಲಿ ತಾವೇಕೆ ಮೂಗು ತೂರಿಸಬೇಕೆಂಬ ಬುದ್ಧಿವಂತಿಕೆ. ಇದೆಲ್ಲಾ ಸೇರಿ ಸಿಗರನಹಳ್ಳಿ ಪ್ರಕರಣ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಸುದ್ದಿಗೆ ಗ್ರಾಸವಾಗಿದೆ.

ಮಾಜಿ ಪ್ರಧಾನಿ ಎಂಟ್ರಿ

ಸಿಗರನಹಳ್ಳಿ ದೇವೇಗೌಡರ ಹುಟ್ಟೂರು ಹರದನಹಳ್ಳಿಗೆ ಅಂಟಿಕೊಂಡಿರುವ ಹಳ್ಳಿ. ಮೇಲಾಗಿ ತಮ್ಮದೇ ಅಚ್ಚುಮೆಚ್ಚಿನ ಕ್ಷೇತ್ರ ಹೊಳೆನರಸೀಪುರ ತಾಲ್ಲೂಕಿನ ಹಳ್ಳಿ. ಆದರೂ ಕಳೆದ ಏಳೆಂಟು ತಿಂಗಳಿನಿಂದ ಮಾಜಿ ಪ್ರಧಾನಿ ಮತ್ತು ಹಾಲಿ ಸಂಸದರಾದ ದೇವೇಗೌಡರು ಮೌನಕ್ಕೆ ಶರಣಾಗಿದ್ದರು. ಆದರೆ ಯಾವಾಗ ಇಡೀ ಪ್ರಕರಣ ತಮ್ಮ ಮಗ ರೇವಣ್ಣನ ಕೊರಳನ್ನೇ ಸುತ್ತಲಾರಂಭಿಸಿತೋ ಆಗ ಅವರು ಕನಲಿಹೋದರು. "ನ್ಯಾಯಾಂಗ ತನಿಖೆ ನಡೆಯಲಿ" ಎಂದು ಅಬ್ಬರಿಸಿದರು. ತಮ್ಮ 58 ವರ್ಷಗಳ ರಾಜಕೀಯ ಜೀವನದಲ್ಲಿ ಇದೇ ಮೊದಲ ಬಾರಿಗೆ ಹೀಗಾಗುತ್ತಿದೆ ಎಂದು ಬೇಸರಿಸಿದರಲ್ಲದೆ ಹಾಸನಕ್ಕೆ ಬಂದು ಇದಕ್ಕೆ ಕಾರಣಕರ್ತರಾದ ಹಾಗೂ ತಮ್ಮ ವಿರುದ್ಧ ವಾಟ್ಸ್ ಆಪ್‌ನಲ್ಲಿ ಮೆಸೇಜ್ ಮಾಡುವವರ ಹೆಸರಿಡಿದು ಅಬ್ಬರಿಸಿದರು.

ಎಸ್ಪಿ ಎಂಟ್ರಿ ಎಲ್ಲವೂ ಸುಖಾಂತ್ಯ

ಮಾಜಿ ಪ್ರಧಾನಿ ಮತ್ತು ಸಂಸದರು ಹೀಗೆ ಅಬ್ಬರಿಸುತ್ತಿರುವಾಗಲೇ ಎಸ್ಪಿ ರಾಹುಲ್ ಕುಮಾರ್ ಶಹಪುರವಾಡ್ ಕಾರ್ಯಪ್ರವೃತ್ತರಾದರು. ಅಧಿಕಾರಿಗಳ ತಂಡವನ್ನು ಸಿಗರನಹಳ್ಳಿಗೆ ಕಳುಹಿಸಿ ಪೊಲೀಸ್ ಬಂದೋಬಸ್ತ್ ಮಾಡಿಸಿದ ಎಸ್ಪಿ ಸಿಗರನಹಳ್ಳಿ ಬಸವೇಶ್ವರ ದೇಗುಲಕ್ಕೆ ದಲಿತರ ಪ್ರವೇಶ ಮಾಡಿಸಿ, ಅವರಿಂದ ಅಲ್ಲಿ ಪೂಜೆ ಮಾಡಿಸಿದರಲ್ಲದೆ "ಇನ್ನು ಮುಂದೆ ಯಾರು ಬೇಕಾದರೂ ಪೂಜೆ ಮಾಡಿ. ಸಮುದಾಯ ಭವನವನ್ನು ಯಾರು ಬೇಕಾದರು ಬಳಸಿ" ಎಂದು ಆದೇಶಿಸುವ ಮೂಲಕ ದಲಿತರ ಕೂಗಿಗೆ ನ್ಯಾಯ ಕೊಡಿಸುವಲ್ಲಿ ಯಶಸ್ವಿಯಾದರು. ಕೊನೆಗೂ ಸಿಗರನಹಳ್ಳಿಯಲ್ಲಿ ಕಾನೂನು ಗೆದ್ದಿತು.

ಇನ್ನು ಬೂದಿ ಮುಚ್ಚಿದ ಕೆಂಡ

ಸದ್ಯ ಇಡೀ ಗ್ರಾಮದಲ್ಲಿ ಸವರ್ಣೀಯರ ಸಂಖ್ಯೆ ಕ್ಷೀಣವಾಗಿದೆ. ಹಲವಾರು ಮನೆಗಳಿಗೆ ಇಂದಿಗೂ ಬೀಗ ಬಿದ್ದಿದೆ. ಪೊಲೀಸರ ಭಯದ ನೆರಳಲ್ಲಿ ಹೆಂಗಸರು, ಮಕ್ಕಳು, ಗಂಡಸರೆನ್ನದೆ ಊರು ತೊರೆದಿದ್ದಾರೆ. ದನಕರುಗಳು ಕಂಡವರ ಪಾಲಾಗಿವೆ. ಈಗ ಸಿಗರನಹಳ್ಳಿಯಲ್ಲಿ ಕಾನೂನು ತನ್ನ ಕೆಲಸವನ್ನು ಮಾಡಿದೆ. ಆದರೆ ರಾಜಕಾರಣಿಗಳು ಜನರ ಮನಸ್ಸನ್ನು ಒಂದುಗೂಡಿಸುವ ಕೆಲಸ ಮಾಡಬೇಕಿದೆ. ಆದರೆ ಹಾಗೆ ಮಾಡುವ ಬದಲು ಮಾಜಿ ಪ್ರಧಾನಿ ದೇವೇಗೌಡರು "ನಾನು ಸಿ.ಎಂ. ಮನೆ ಮುಂದೆ ಧರಣಿ ಮಾಡ್ತೀನಿ" ಅನ್ನುತ್ತಿರುವುದು ವಿಪರ್ಯಾಸವೇ ಸರಿ.

ಉಗುರಲ್ಲಿ ಹೋಗೋದಕ್ಕೆ ಕೊಡ್ಲಿ ತಗೊಂಡರು

ಇಷ್ಟೆಲ್ಲಾ ಆದ ಮೇಲೆ ಹೊಳೆನರಸೀಪುರದ ಪ್ರಶ್ನಾತೀತ ಸರ್ಕಾರದ ಅನಭಿಷಕ್ತ ದೊರೆ ಮಾಜಿ ಸಚಿವ ರೇವಣ್ಣನಿಗೆ ಜಿಲ್ಲೆಯಾದ್ಯಂತ ದಲಿತ ವಿರೋಧಿ ಎಂಬ ಹಣೆಪಟ್ಟಿ ಸಿಕ್ಕಿದೆ. ಏನೋ ಮಾಡಲು ಹೋದ ರೇವಣ್ಣ ಇನ್ನೇನೋ ಮಾಡಿ ಜಿಲ್ಲೆಯಲ್ಲಿ ದಲಿತರನ್ನು ಎದುರು ಹಾಕಿಕೊಂಡಂತಾಗಿದೆ. ಅವರದ್ದೇ ಪಕ್ಷದ ದಲಿತ ಮುಖಂಡರು ರೇವಣ್ಣನ ವಿರುದ್ಧ ಹರಿಹಾಯಲಾರಂಭಿಸಿದ್ದಾರೆ. ಇದೆಲ್ಲಾ ಕಂಡ ಜನ 'ಅಲ್ಲಾ ಉಗುರಲ್ಲಿ ಹೋಗೋದಕ್ಕೆ ಕೊಡ್ಲಿ ತಗೊಂಡು ರಂಪಾ ಮಾಡಿಕೊಂಡು, ಅಂತರಲ್ಲಾ ಅದು ಇದಕ್ಕೇನಾ' ಅಂತಾ ನಗುತ್ತಿದ್ದಾರೆ.

■ ವರದಿಗಾರ

ಹೂವಿನಂತ ಹುಡುಗಿ ರನ್ನದಂಥ ರಾಜ

ಹೋಗಿ ಹೋಗಿ ಯಾಕಾದ್ರೂ ಈ ತಲೆತಿರುಕನ್ನ ಕಟ್ಕೊಂಡ್ಲೋ ಗೊತ್ತಿಲ್ಲ, ಆದ್ರೆ ತಲೆನೋವಂತೂ ತಪ್ಪಿದ್ದಲ್ಲ... ಯಾಕಂದ್ರೆ ಅವನ ಕೈಹಿಡಿದ ಯಾವ ಹುಡುಗಿ ತಾನೇ ಕೋರ್ಟು, ಪೊಲೀಸ್ ಸ್ಟೇಷನ್ನು ಅಂತ ಬಾಧೆ ಬಿದ್ದಿಲ್ಲ...?

ಅನು ಪ್ರಭಾಕರ್-ರಘು ಮುಖರ್ಜಿ ಮದುವೆಯಾದರೆಂಬ ಸುದ್ದಿ ಹೊರಬಿದ್ದ ಮರುದಿನದ ಸಿನಿಮಾ ಪಾರ್ಟಿಯೊಂದರಲ್ಲಿ ಈ ರೀತಿ ಬಾಯಿಹರಿಬಿಟ್ಟದ್ದು ಬೇರೆ ಯಾರೂ ಅಲ್ಲ ಓರ್ವ ಸೀನಿಯರ್‌ಮೋಸ್ಟ್ ಸಿನಿಮಾ ಪತ್ರಕರ್ತ!

ರಘು ಮುಖರ್ಜಿಯ ಮುಂಗೋಪ, ಶಾರ್ಟ್ ಟೆಂಪರ್, ಒರಟು ವ್ಯಕ್ತಿತ್ವ ಮತ್ತು ಚಂಚಲ ಮನಸ್ಥಿತಿಯನ್ನು ಬಲ್ಲ ಯಾರಿಗಾದರೂ ಇಂಥದೊಂದು ಪ್ರಶ್ನೆ ಮೂಡುವುದು



ಸಹಜವೇ. ಅನು ಕನ್ನಡದ ಹೂವಿನಂಥ ಹುಡುಗಿ. ಸದಾ ಮುಗುಳ್ನಗೆ. ಎಂಥಾ ಒತ್ತಡದ ಜಂಜಾಟದಲ್ಲೂ ತನ್ನ ಲವಲವಿಕೆಯನ್ನು ಕಳೆದುಕೊಂಡವಳಲ್ಲ, ಅವಳು ಕಾಲಿಟ್ಟಲ್ಲೆಲ್ಲ ಹೂವರಳಿದಂತೆ ಸಂತಸದ ಗಾಳಿಯಂತೆ. ಇಂಥಾ ಹುಡುಗಿಗೆ ಜಗಮೊಂಡನಂತ ರಘು ಮುಖರ್ಜಿ ಇಷ್ಟವಾಗಿದ್ದಾದರೂ ಹೇಗೆ, ಕಣ್ಣುಕಣ್ಣು ಕಲೆತದ್ದು ಅದ್ಯಾವ ಗಳಿಗೆ?

ಯಾರಿಗೂ ಅರ್ಥವಾಗದ ಪ್ರಶ್ನೆಗಳಿವು. ಹುಡುಗ ಸ್ಥಳೀಕನಲ್ಲ, ಯಾವ ಸಿನಿಮಾದಲ್ಲೂ ಒಟ್ಟೊಟ್ಟಿಗೆ ನಟಿಸಿದವರಲ್ಲ, ಇಬ್ಬರದ್ದೂ ತದ್ವಿರುದ್ಧ ಸ್ವಭಾವ. ಹಿಂದೆಂದೂ ಒಡನಾಟವಿರಲಿಲ್ಲ. ಅಭಿರುಚಿ, ಆಸಕ್ತಿ, ಹಿತಾಸಕ್ತಿ ಮತ್ತು ಪ್ರವೃತ್ತಿಯಲ್ಲೆಂದೂ ಪರಸ್ಪರ ತಾಳೆಯೇ ಹೊಂದದ ಎಲ್ಲಿಯ ಅನು ಅದೆಲ್ಲಿಯ ರಘು ಮುಖರ್ಜಿ? ಹೀಗೆಂದು ಟೀವಿ ಚಾನಲ್ಲುಗಳು ನಡೆಸಿದ ಗಂಟೆಗಟ್ಟಲೆ ಹರಟೆ ದಿನಗಟ್ಟಲೆ ಚರ್ಚೆ ಇತ್ಯಾದಿಗಳೆಲ್ಲವೂ ಬೇಧಿಸಲಾಗದ ಏಕೈಕ ಒಗಟೆಂದರೆ ಅನು-ರಘು ಮಧ್ಯೆ ಪ್ರೀತಿ ಮೊಳೆತದ್ದೆಲ್ಲಿ, ಎಂಥ ಪರಿಸ್ಥಿತಿಯಲ್ಲಿ?

ಅನು ದಕ್ಷಿಣ ಭಾರತದ ಹೆಸರಾಂತ ನಟಿಯೇನಲ್ಲ, ಹಾಗೇ ರಘು ಮುಖರ್ಜಿ ಹಿಂದಿಯ ಜಾನ್ ಅಬ್ರಹಾಂ, ಮಿಲಿಂದ್ ಸೋಮನ್ ಮಟ್ಟದವನೂ ಅಲ್ಲ. ಹಾಗಿದ್ದೂ ದಿನಗಟ್ಟಲೆ ಚಾನಲ್ಲುಗಳು ಈ ಬಗ್ಗೆ ಹರಟೆ ಶೋ ನಡೆಸುತ್ತವೆಯೆಂದರೆ ಅದು ಚಾನಲ್ಲುಗಳ ದಾರಿದ್ರ್ಯ ಮತ್ತು ವೀಕ್ಷಕರ ಕರ್ಮವಲ್ಲದೆ ಮತ್ತೇನೂ ಅಲ್ಲ. ಕೆಲವೊಮ್ಮೆ ಮಾಡಲು ಬೇರೇನೂ ಸುದ್ದಿಗಳಿಲ್ಲವೆಂದಾದಾಗ ಈ ಥರದ ಮಸ್ಕಿರಿಗಳೂ ನಡೆದುಬಿಡುತ್ತವೆ. ರಘು ಮುಖರ್ಜಿಗೆ ಇದು ಮೂರನೇ ಮದುವೆ. ಅನುಗೆ ಇದು ಬಿಡುಗಡೆಯ ನಂತರ ಸಿಕ್ಕ ಹೊಸ ಕೊಡುಗೆ. ಇದಕ್ಕಿಂತ ಇನ್ನಾವುದಾದರೂ ಕಾರಣವಾದರೂ ಏಕಿದ್ದೀತೆಂಬುದೇ ಈ ಸಮ್ಮಿಲನದ ಅಸಲೀ ಪ್ರಶ್ನೆ.

ಅನು ಇತ್ತೀಚಿನ ಕನ್ನಡ ತೆರೆಯ ಅಪ್ಪಟ ಪ್ರತಿಭೆ. ನಟಿಸಿದ್ದು ಹೆಚ್ಚೂಕಮ್ಮಿ ಐವತ್ತು ಚಿತ್ರಗಳು. ರಮ್ಯಾ, ರಾಧಿಕಾ, ಶೃತಿ, ಚಂದ್ರಿಕಾ ಮಟ್ಟಕ್ಕಲ್ಲದೇ ಹೋದರೂ ಅನು ತೆರೆಮರೆಯಲ್ಲೇ ಸಾಗಿಬಂದ ನಟಿ. ಅದಕ್ಕೊಂದು ತಳಪಾಯದಂತಿದ್ದದ್ದು ತಾಯಿ ಗಾಯಿತ್ರಿ ಪ್ರಭಾಕರ್. ಆಕೆ ಕನ್ನಡ ಚಿತ್ರಲೋಕ ಕಂಡ ಅಭಿಜಾತ ಕಂಠದಾನ ಕಲಾವಿದೆ. ಹಿಂದೆಲ್ಲಾ ವರನಟ ರಾಜ್‌ಕುಮಾರ್‌ಗೆ ನಾಯಕಿಯರಾಗಿರುತ್ತಿದ್ದ ಸರಿತಾ, ಮಾಧವಿ, ಜಯಪ್ರದಾ, ಗೀತಾ ಮುಂತಾದ ತಮಿಳು, ತೆಲುಗು ಮೂಲದ ಹೀರೋಯಿನ್‌ಗಳಿಗೆ ಕಂಠದಾನ ಮಾಡುತ್ತಿದ್ದುದ್ದೇ ಗಾಯತ್ರಿ ಪ್ರಭಾಕರ್. ತದನಂತರದ ಮಾಲಾಶ್ರೀ, ಖುಷ್ಬೂ, ಮೀನಾ ಇತ್ಯಾದಿ ನಟಿಯರಿಗೂ ಗಾಯಿತ್ರಿಯವರೇ ದನಿದಾನ ಮಾಡಬೇಕಾಗಿತ್ತು, ಗಾಯಿತ್ರಿ ಬಿಟ್ಟರೆ ಪೌರಾಣಿಕ ಹೀರೋಯಿನ್ ಪಾತ್ರಗಳಿಗೆ ಕಂಠ ನೀಡುತ್ತಿದ್ದದ್ದು ಜಯಶ್ರೀಯವರು.

ತಂದೆ ಪ್ರಭಾಕರ್ ಯಾವುದೋ ಖಾಸಗಿ ಕಾರ್ಖಾನೆಯೊಂದರ ನೌಕರರಾಗಿದ್ದು ಇಲ್ಲಿಗೆ ಆರು ವರ್ಷಗಳ ಹಿಂದೆಯೇ ಕಿಡ್ನಿ ವೈಫಲ್ಯಕ್ಕೆ ಸಿಲುಕಿ ಕೊನೆಯುಸಿರೆಳೆದಾಗ ಅನು ಅಭಿನಯ ಶಾರದೆ ಜಯಂತಿಗೆ ಸೊಸೆ!

ಬದುಕು ಎಲ್ಲಿಗೋ ಮುಟ್ಟಬೇಕೆಂದರೆ ಇನ್ನೆಲ್ಲಿಂದಲೋ ಸಾಗಿ ಬರಲೇಬೇಕಂತೆ. ಹಾಗೆಯೇ ಅನು ಬಾಳಿಗೆ ಮೊದಲ ಬಾರಿಗೆ ಪ್ರವೇಶಿಸಿದವನು ಕೃಷ್ಣಕುಮಾರ್. ಆತ ಅಭಿನಯ ಶಾರದೆ ಜಯಂತಿಯವರ ಏಕಮಾತ್ರ ಕುಡಿ. ಕಂಠದಾನ ಕಲಾವಿದೆಯಾಗಿದ್ದ ತಾಯಿ ಜೊತೆ ಕನ್ನಡದ ಬಹುತೇಕ ಕಲಾವಿದರು, ತಂತ್ರಜ್ಞರ ಒಡನಾಟದಲ್ಲೇ ಬೆಳೆದವಳು ಅನು. 1990ರ ಹೊತ್ತಿಗೆ ಆಕೆ ಕನ್ನಡದ ಅತೀ ಬೇಡಿಕೆಯ ಬಾಲನಟಿ. ಆಕೆ ಮೊದಲ ಬಾರಿಗೆ ಹೀರೋಯಿನ್ನಾಗಿದ್ದು ಶಿವಣ್ಣ ಮತ್ತು ರಮೇಶ್ ಅರವಿಂದ್ ಇಬ್ಬರೂ ಹೀರೋಗಳಾಗಿದ್ದ 'ಹೃದಯ ಹೃದಯ' ಚಿತ್ರದಲ್ಲಿ, ಅದು 1999ರ ಕಾಲ. ರಾಮ್‌ಕುಮಾರ್, ಶಶಿಕುಮಾರ್, ಅಭಿಜಿತ್, ರವಿಚಂದ್ರನ್ ಮುಂತಾದವರೆದುರು ಯಾವ ವಲಸೆ ನಟಿಯರಿಗೂ ಕಮ್ಮಿಯಿಲ್ಲದಂತೆ ನಟಿಸುವ ಅನು ಪಾಲಿಗೆ ಸ್ಮರಣೀಯ ಪಾತ್ರ ಅಂತ ಸಿಕ್ಕಿದ್ದು ಕವಿತಾ ಲಂಕೇಶ್‌ರ 'ಪ್ರೀತಿ ಪ್ರೇಮ ಪ್ರಣಯ'ದಲ್ಲಿ, ಸುನೀಲ್ ರಾವ್‌ನಂಥ ಪಡ್ಡೆ ನಟನಿಗೆ ಹೀರೋಯಿನ್ನಾಗಿ ಅನು ಚೆಲ್ಲುಚೆಲ್ಲಾಗಿ ನಟಿಸಿದ ರೀತಿಯೇ ಹುಬ್ಬೇರಿಸುವಂತಿತ್ತು.

ತಾಯಿ ಗಾಯಿತ್ರಿ ಪ್ರಭಾಕರ್ ಮತ್ತು ಅಭಿನಯ ಶಾರದೆ ಜಯಂತಿಯವರ ಸುದೀರ್ಘ ಸ್ನೇಹದ ಫಲಶ್ರುತಿಯೆಂಬಂತೆ ಅನು-ಕೃಷ್ಣಕುಮಾರ್ ಮದುವೆಯಾಗಿತ್ತು. ಒಬ್ಬನೇ ಮಗನಿಗೆ ಒಬ್ಬಳೇ ಮಗಳು ಎಂಬಂತೆ ಅದ್ದೂರಿಯಾಗೇ ಮದುವೆ ನಡೆದಿತ್ತು. ಮದುವೆಗೆ ಕನ್ನಡ ಚಿತ್ರರಂಗದ ಹಿರಿಯಣ್ಣ ರಾಜ್‌ಕುಮಾರ್ ಮತ್ತು ಹಿರಿಯಮ್ಮ ಪಾರ್ವತಮ್ಮ ರಾಜ್‌ಕುಮಾರ್‌ರಿಂದ ಹಿಡಿದು ಬಹುತೇಕ ಕಲಾವಿದರೆಲ್ಲರೂ ಬಂದು ಆಶೀರ್ವದಿಸಿದ್ದರು. ಮದುವೆಯ ನಂತರವೂ ಅನು ನಟನೆಗೆ ತೊಂದರೆಯಿರಲಿಲ್ಲ. ಕೃಷ್ಣಕುಮಾರ್ ಈ ವಿಷಯದಲ್ಲಿ ಧಾರಾಳಿಯೇ ಆಗಿದ್ದ.

ಆದರೆ ಕಾಲ ಉರುಳಿದಂತೆ ಅನು ಮತ್ತು ಕೃಷ್ಣಕುಮಾರ್ ನಡುವೆ ಯಾಕೆ ಬಿರುಕು ಮೂಡಿತು ಎಂಬುದು ಯಾರಿಗೂ ಗೊತ್ತಿಲ್ಲ. ಅದೇ ಹೊತ್ತಿಗೆ ಸಿನಿಮಾ ಮತ್ತು ಟಿವಿಗಳಲ್ಲೂ ಅನುಗೆ ಅವಕಾಶಗಳು ಕ್ಷೀಣಿಸಲಾರಂಭಿಸಿದವು. ಇತ್ತ ವೃತ್ತಿ ಬದುಕಿನಲ್ಲೂ ಸಂತೋಷವಿಲ್ಲ, ಅತ್ತ ಖಾಸಗಿ ಬದುಕಿನಲ್ಲೂ ನೆಮ್ಮದಿ ಇಲ್ಲ ಎಂಬಂದಾಯಿತು ಅನು ಬದುಕು.


ಅದು 2014ರ ಮಾರ್ಚ್ ತಿಂಗಳು. ಗಟ್ಟಿ ಮನಸ್ಸು ಮಾಡಿ ಡೈವರ್ಸ್ ಪಡೆಯಲು ಅನು ನಿರ್ಧರಿಸಿದಳು.

ಅದು ಅಂತಿಮವಾಗಿ ಬಿಡುಗಡೆಗೆ ದಾರಿಯಾಯಿತು. ಇದಾಗಿ ಮೂರೇ ತಿಂಗಳಿಗೆ ವಿಚ್ಛೇದನವೂ ದೊರೆಯಿತು. ವಿಚ್ಛೇದನ ಸಿಕ್ಕ ದಿನ ಬಿಡುಗಡೆಯ ನಿಟ್ಟುಸಿರಿಟ್ಟಳು. ಇತ್ತ ಸಿನಿಮಾಗಳ ಹಾದಿಯೂ ಅಸ್ಪಷ್ಟ. ಅತ್ತ ಬದುಕಿನ ದಾರಿಯೂ ಅಗೋಚರ. ಸಣ್ಣಪುಟ್ಟ ಟೀವಿ ಷೋಗಳು, ಸಿನಿಮಾದ ಚಿಕ್ಕಪುಟ್ಟ ಪಾತ್ರಗಳು ಇವಿಷ್ಟೇ ಆಕೆಯ ಪಾಲಿಗಿದ್ದ ಭರವಸೆಯ ಬೆಳಕು. ಅದೊಂದು ದಿನ ಆಕೆಯ ಸಹನಟಿಯಾಗಿದ್ದ ಗೆಳತಿಯೊಬ್ಬಳಿಂದ ಕರೆ ಬಂತು. ಇವತ್ತು ನನ್ನ ಬರ್ತ್‌ಡೇ ಪಾರ್ಟಿ. ನೀನು ಬರಲೇಬೇಕು...!

ಯಾವುದಕ್ಕೂ ಇರಲೆಂದು ಅನು ಪಾರ್ಟಿಗೆ ನಡೆದೇಬಿಟ್ಟಳು. ತೀರ ಗ್ಲಾಮರಸ್ ಅಲ್ಲದಿದ್ದರೂ ತಕ್ಕಮಟ್ಟಿಗೆ ಫ್ರೆಶ್ ಮೂಡ್‌ನಲ್ಲಿಯೇ ಪಾರ್ಟಿಯಲ್ಲಿ ಪ್ರತ್ಯಕ್ಷಳಾದರೆ ಅಲ್ಲಿದ್ದದ್ದು ಕನ್ನಡ ಗ್ಲಾಮರ್ ಲೋಕದ ಹಿರಿಕಿರಿ ತಾರೆಯರೆ. ಈ ಪೈಕಿ ವಿಶೇಷವಾಗಿ ಆಕೆಯ ಗಮನ ಸೆಳೆದದ್ದು ರಘು ಮುಖರ್ಜಿ.

ಪಾರ್ಟಿಯೇನೋ ಮುಗಿಯಿತ್ತಾದರೂ ಪಾರ್ಟಿಯಲ್ಲಾಡಿದ ಮಾತು ಮುಗಿಯಲೇ ಇಲ್ಲ, ಮರುದಿನ ರಘು ಮುಖರ್ಜಿಯೇ ಫೋನ್ ಮಾಡಿದನಂತೆ. ಈಕೆಯದೂ ಒಂಟಿ ಪಯಣ. ಆತನದ್ದೂ ಏಕಾಕಿ ಯಾನ. ಖಾಲಿ ಬಿದ್ದ ಹೃದಯ. ಏಕಾಂಗಿತನದ ಕಾತರ. ಜೊತೆಗೂಡುವ ಆತುರ. ಎಲ್ಲವೂ ಪರಸ್ಪರ ಸಂಗಮಿಸಿದ ಫಲವೇ ಅನು-ರಘು ಸಮ್ಮಿಲನ. ಶುಭವಾಗಲೆಂದು ಹಾರೈಸುವುದರ ಹೊರತಾಗಿ ಅವರಿಬ್ಬರ ತಾಯಂದಿರಿಗೂ ಬೇರೆ ಏನು ತಾನೇ ಉಳಿದಿತ್ತು?

■ ರಾ. ಸೋಮನಾಥ್



94 ವರ್ಷ ಬದುಕಿ ತಮಿಳುನಾಡನ್ನು ಸಂಪೂರ್ಣ ಬದಲಿಸಿದ, ತಮಿಳುನಾಡು ಜನರು 'ತಂದೆ ಪೆರಿಯಾರ್' ಎಂದು ಗೌರವಿಸುವ ಮಹಾನಾಯಕ ಪೆರಿಯಾರ್ ಈ ವಿ ರಾಮಸ್ವಾಮಿ ಅವರು ದಿನಾಂಕ 19-12-1973 ರಂದು ಚೆನ್ನೈನ ತ್ಯಾಗರಾಯ ನಗರದಲ್ಲಿ ಕೊಟ್ಟ ಕೊನೆಯ ಭಾಷಣದ ಮೊದಲ ಭಾಗವನ್ನು ಈ ವಾರ ಪ್ರಕಟಿಸುತ್ತಿದ್ದೇವೆ. ಉಳಿದ ಭಾಗವನ್ನು ಕಂತುಗಳಲ್ಲಿ ಬರುವ ಸಂಚಿಕೆಗಳಲ್ಲಿ ಪ್ರಕಟಿಸಲಾಗುವುದು.

ಅನುವಾದ : ಕೆ.ಎಸ್. ಭಗವಾನ್



ಬ್ರಾಹ್ಮಣ ವಾದದ ಮೇಲೆ ಯುದ್ಧ ಘೋಷಣೆ ಭಾಗ-1

ಸನ್ಮಾನ್ಯ ಅಧ್ಯಕ್ಷರೆ, ಮಹಿಳೆಯರೆ ಮತ್ತು ಮಹನೀಯರೇ,

ಇತ್ತೀಚೆಗೆ ನಡೆದ ಸಮ್ಮೇಳನದಲ್ಲಿ ಸಾಮಾಜಿಕ ಅವನತಿ ನಿರ್ಮೂಲ ಮಾಡಲು ತೆಗೆದುಕೊಂಡ ನಿರ್ಣಯಗಳನ್ನು ವಿವರಿಸುವುದಕ್ಕಾಗಿ ಈ ಸಮಾರಂಭ ಏರ್ಪಡಿಸಿದೆ. ಈ ಸ್ಥಳದಲ್ಲಿ ಬಹಳ ಕಾಲ ಆದಮೇಲೆ ನಾನು ಭಾಷಣ ಮಾಡುತ್ತಿದ್ದೇನೆಂದು ಅನ್ನಿಸುತ್ತಿದೆ. ಹತ್ತು ವರ್ಷಗಳಾದ ನಂತರ ಈ ಜಾಗದ ಜನರು ನನ್ನ ಮಾತು ಕೇಳುತ್ತಿದ್ದಾರೆ. ಅಂದರೆ ಈಚಿನ ದಿನಗಳಲ್ಲಿ ನನ್ನ ಭಾಷಣ ಕೇಳುವ ಅವಕಾಶ ಅವರಿಗೆ ಸಿಕ್ಕಿರಲಿಲ್ಲ. ಈ ಸಭೆ ಪ್ರಾರಂಭವಾಗುವುದಕ್ಕೆ ಮುನ್ನ ಒಡನಾಡಿ ಕೆ.ವೀರಮಣಿ ದೇವರ ಅಸ್ತಿತ್ವದ ನಿರಾಕರಣೆಯ ನಾಂದಿಯನ್ನು ಹೇಳಿದರು:

"ದೇವರು ಇಲ್ಲ,
ದೇವರು ಇಲ್ಲ,
ದೇವರು ಇಲ್ಲವೇ ಇಲ್ಲ,
ದೇವರನ್ನು ಸೃಷ್ಟಿಸಿದವನು ಮೂರ್ಖ,
ದೇವರನ್ನು ಪ್ರಚಾರ ಮಾಡುವವನು ಘಟಿಂಗ,
ದೇವರನ್ನು ಪೂಜಿಸುವವನು ಅನಾಗರಿಕ."

ಅವರು ಏನು ಪಠಿಸಿದರೆಂದು ಆಮೇಲೆ ಪದಶಃ ನಾನು ವಿವರಿಸುತ್ತೇನೆ.

ಬ್ರಾಹ್ಮಣರು ಈ ದೇಶದ ಸ್ಥಳೀಯರಲ್ಲ, ಅಲೆಮಾರಿ ಜನಾಂಗವಾಗಿ ಅವರು ಭಾರತಕ್ಕೆ ಬಂದರು. ಆದರೂ ವಿರೋಧಿಸುತ್ತಾರೆ. ಈ ಶಾಸ್ತ್ರಗಳನ್ನು ಬರೆದವನು ಯಾಜ್ಞವಲ್ಕ್ಯ ಎಂದು ಅವರ ಅನ್ನಿಸಿಕೆ. ಇದರಿಂದ ಗೊತ್ತಾಗುವುದೇನೆಂದರೆ ಜನರಿಗೆ ಗೊತ್ತಿಲ್ಲದ ಯಾರೋ ಬರೆದಿದ್ದಾನೆ ಎಂಬುದು. ಆದ್ದರಿಂದಲೇ ಈ ಶಾಸ್ತ್ರಗಳ ನಿಜವಾದ ಲೇಖಕ ಯಾರು? ಎಂದು ಸ್ಪಷ್ಟವಾಗಿ ಹೇಳಲು ಅವರು ಅಸಮರ್ಥರಾಗಿದ್ದಾರೆ. ಇದರಿಂದ ನಮಗೆ ತಿಳಿಯುವುದೇನೆಂದರೆ ಈ ಶಾಸ್ತ್ರಗಳನ್ನು ಯಾರೋ ವೆಂಕ ನಾಣಿ ಸೀನ ಬರೆದಿದ್ದಾನೆ ಎಂಬುದು.

ಈ ಶಾಸ್ತ್ರಕಾರರ ಆಯುಃ ಪ್ರಮಾಣದ ಬಗ್ಗೆ ಹೆಚ್ಚು ಹೇಳಲಾಗಿದೆ. ನಾರದ ಐದು ಕೋಟಿ ವರ್ಷಗಳವರಗೆ ಬದುಕಿದ್ದನಂತೆ. ಅವನು ಹುಟ್ಟಿದ್ದು ಎಲ್ಲಿ? ಅಷ್ಟು ದೀರ್ಘಕಾಲ ಅವನು ಎಲ್ಲಿ ವಾಸವಾಗಿದ್ದ? ಈ ಕಲಿಯುಗಕ್ಕೆ ಮೊದಲು ಎರಡು ಮೂರು ಕಲ್ಪಗಳ ಹಿಂದೆ ಬದುಕಿದ್ದನೆಂದು ಅವರು ಹೇಳುತ್ತಾರೆ. ಒಂದು ಕಲ್ಪ ಎಂದರೆ ಐದು ಕೋಟಿ ವರ್ಷಗಳಿಗೆ ಸಮ.

ಅವರ ಹೇಳಿಕೆಗೆ ಐತಿಹಾಸಿಕ ದಾಖಲೆ ಎಲ್ಲಿದೆ? ಅಷ್ಟೊಂದು ವರ್ಷಗಳು ಒಬ್ಬ ವ್ಯಕ್ತಿ ಬದುಕುತ್ತಾನೆಂದು ನಂಬಲು ಯಾರಿಗಾದರೂ ಸಾಧ್ಯವೇ? ಇಂಥ ಆಧಾರ ಹೀನ ಹೇಳಿಕೆಗಳನ್ನು ಒಪ್ಪುವುದು ಸರಿ ಎಂದು ನಿಮಗೆ ಅನ್ನಿಸುತ್ತದೆಯೇ?

ಸಂಗಾತಿಗಳೇ! ಇಂಥ ಪುರಾಣಗಳ ಆಧಾರ ಮೇಲೇ ನ್ಯಾಯಾಲಯದಲ್ಲಿ ಇಂದು ತೀರ್ಪು ಕೊಡುತ್ತಾರೆಂದು

ಯಾರೂ ಯೋಚಿಸುವುದಿಲ್ಲ

ಹಿಂದೂ ಮತದಲ್ಲಿ ಎರಡು ಸಮುದಾಯಗಳಿವೆ. ಒಂದು ಬ್ರಾಹ್ಮಣ ಸಮುದಾಯ; ಇನ್ನೊಂದು ಶೂದ್ರ ಸಮುದಾಯ. ಬ್ರಾಹ್ಮಣರು ಮೇಲುಜಾತಿಗೆ ಸೇರಿದವರಾಗಿದ್ದಾರೆ. ಶೂದ್ರರು ಕೆಳಜಾತಿಗೆ ಸೇರಿದ್ದಾರೆ. ಯಾವುದೇ ಶೂದ್ರನ ಹೆಂಡತಿಯು ಬ್ರಾಹ್ಮಣನ ಸೂಳೆ ಅಥವಾ ಉಪಪತ್ನಿ ಎಂದು ಪರಿಗಣಿಸಲಾಗಿದೆ.

ಇದೆಲ್ಲ ಶಾಸ್ತ್ರಗಳಲ್ಲಿ ನಿರೂಪಿತವಾಗಿರುವುದು. ನಮ್ಮ ಕಾನೂನು ಪುಸ್ತಕಗಳಲ್ಲಿ ಇವು ಸೂಚಿತವಾಗಿವೆ. ಇದು ಸತ್ಯ ಅಲ್ಲವೇ? ಈ ಕರಾಳ ಅವಮಾನಕರ ಸ್ಥಿತಿಯಿಂದ ನಾವು ಬಿಡುಗಡೆಗೊಳ್ಳುವುದು ಯಾವಾಗ? ತನ್ನ ತಾಯಿಯ ಶೀಲದ ಬಗ್ಗೆ ಯಾರಾದರೂ ಕೆಟ್ಟ ಮಾತಾಡಿದರೆ ಮನುಷ್ಯ ಚೂರಿ ಎಳೆಯುತ್ತಾನೆ. ಆದರೆ ಇಡೀ ಸಮುದಾಯವನ್ನೇ ಸೂಳೆಯರ ಸಂತಾನ ಎಂದು ನಿಂದಿಸಿದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲವಲ್ಲ, ಇದರಿಂದ ನಮ್ಮ ಸಮುದಾಯದ ಬಗ್ಗೆ ನಾವೇನು ತೀರ್ಮಾನ ತೆಗೆದುಕೊಳ್ಳಬಹುದು?


ನಮ್ಮಲ್ಲಿ ನಿಜವಾಗಿಯೂ ಆತ್ಮಗೌರವ ಭಾವನೆ ಇದ್ದಿದ್ದರೆ, ನಮ್ಮನ್ನು ಶಾಶ್ವತವಾಗಿ ಸೂಳೆ ಮಕ್ಕಳು ಎಂದು ಕರೆಯುವ ಬ್ರಾಹ್ಮಣರನ್ನು ಸುಮ್ಮನೆ ಬಿಡುವುದು ಸರಿಯೇ? ನಮ್ಮ ಆತ್ಮಗೌರವವನ್ನು ಕಾಪಾಡಲು ನಾವು ಎದ್ದು ನಿಂತರೆ ಬ್ರಾಹ್ಮಣ ತನ್ನ ಜನಿವಾರ ನೀವುತ್ತಾ ನಮ್ಮ ಮುಂದೆ ಜನರಾಗಿದ್ದಾರೆ. ನಾವು ಹೇಗಿದ್ದೇವೆ? ನಮ್ಮದು ಬಹಳ ದೊಡ್ಡ ಸಮಾಜ. ನಾವು ತೂಗಾಡುವಷ್ಟಾದರೂ ಪ್ರಗತಿ ಮಾಡಬೇಕಿತ್ತು, ಆದರೆ ನಾವು ನಿರ್ಗತಿಕ ತಾತ್ಸಾರದ ಅನಾಗರಿಕ ಜೀವನ ನಡೆಸುತ್ತಿದ್ದೇವೆ.

ವಿಜ್ಞಾನಿಗಳು ಅದ್ಭುತ ಕೆಲಸಗಳನ್ನು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅವರು ಕೃತಕ ಶಿಶುಗಳನ್ನು ಉತ್ಪಾದಿಸುತ್ತಾರೆ. ಅಮೆರಿಕದವನ ವೀರ್ಯಾಣು ಮತ್ತು ಚೀನೀ ಹೆಂಗಸಿನ ಅಂಡಾಣು ಪಡೆದು ಕೃತಕ ಗರ್ಭಧಾರಣೆ ಮಾಡಿಸಲು ವಿಜ್ಞಾನದ ಸಂಶೋಧಕರು ಪ್ರಯತ್ನಿಸುತ್ತಿದ್ದಾರೆ. ಒಂದೆರಡು ದಿನಗಳ ಹಿಂದೆ ಒಂದು ಸುದ್ದಿ ಪ್ರಕಟವಾಯಿತು. ಅದೇನೆಂದರೆ ವೀರ್ಯಾಣು ಮತ್ತು ಅಂಡಾಣುಗಳನ್ನು ಹತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಸಂರಕ್ಷಿಸಲು ಸಂಪೂರ್ಣ ಸಾಧ್ಯ ಎಂಬುದೇ ಆಗಿದೆ. ಅವನ್ನು ಯಾವುದೇ ಸಮಯದಲ್ಲಿ ಗರ್ಭಧಾರಣೆಗೆ ಬಳಸಲು ಸಾಧ್ಯ ಎಂದು ಹೇಳುತ್ತಾರೆ.

ದೂರದ ಅಮೆರಿಕೆಯಲ್ಲಿ ಇರುವ ವ್ಯಕ್ತಿಯ ಜೊತೆ ದೂರವಾಣಿಯಲ್ಲಿ ಇಂದು ನಾವು ಇಲ್ಲಿಂದ ಮಾತನಾಡಬಹುದು. ವಿದೇಶಗಳಲ್ಲಿ ಅನೇಕ ಗಮನ ಸೆಳೆಯುವ ಸಾಧನೆಗಳನ್ನು ನಾವು ಕಾಣಬಹುದು. ಇಲ್ಲಿ ನಾವೇನು ನೋಡುತ್ತೇವೆ? ಏನೂ ಇಲ್ಲ, ಅಂದಮೇಲೆ ನಾವು ನೂರಾರು ದೇವರುಗಳನ್ನು ಇಟ್ಟುಕೊಂಡಿರುವುದರಿಂದ ಏನು ಪ್ರಯೋಜನ? ನಮ್ಮ ಜನರು ತಾವು ಕಷ್ಟಪಟ್ಟು







ಅವರು ನಮ್ಮನ್ನು ಹೀನಸ್ಥಿತಿಗೆ ತಳ್ಳಿದ್ದಾರೆ. ಅವರು ನಮ್ಮನ್ನು ಕೀಳು ಜಾತಿಯವರೆಂದು ಕೆಳಕ್ಕೆ ನೂಕಿದ್ದಾರೆ. ಹಿಂದೂ ದೇವಸ್ಥಾನಗಳ ಗರ್ಭಗುಡಿ ಒಳಗೆ ಕಾಲಿಡಲು ನಮಗೆ ಹಕ್ಕಿಲ್ಲ, ನಾವು ಮುಟ್ಟಿದರೆ ದೇವರು ಮಲಿನವಾಗುತ್ತಾನೆಂದು ಅವರು ಹೇಳುತ್ತಾರೆ. ಶೂದ್ರರಿಗೆ ಮದುವೆ ಆಗಲು ಹಕ್ಕಿಲ್ಲ ಎಂದು ಅವರು ದೃಢವಾಗಿ ಹೇಳುವರು. ನಮ್ಮ ದೇಶ ಸ್ವಾತಂತ್ರ್ಯ ಗಳಿಸಿತೆಂದು ಅವರು ಹೆಮ್ಮೆಯಿಂದ ಸಾರುತ್ತಾರೆ. ಆದರೆ ಸ್ವಾತಂತ್ರ್ಯ ಬಂದ ಮೇಲೂ ಅವರು ನಮ್ಮನ್ನು ಶೂದ್ರರೆಂದು ಕರೆಯುವರು. ಶೂದ್ರರು ಎಂದರೆ ಸೂಳೆ ಮಕ್ಕಳು. ನಮ್ಮ ತಾಯಂದಿರೆಲ್ಲ ಸೂಳೆಯರು ಎಂದು ನಾವು ಒಪ್ಪಬೇಕೆ? ನಾವು ಬ್ರಾಹ್ಮಣರಿಗೆ ಹುಟ್ಟಿದವರೆಂದು ಒಪ್ಪಬೇಕೆ? ಹಿಂದೂ ಶಾಸ್ತ್ರಗಳೆಲ್ಲ ನಮ್ಮನ್ನು ಶೂದ್ರರೆಂದು ಮಾತ್ರ ವರ್ಗೀಕರಿಸುತ್ತವೆ. ಹಿಂದೂ ಮತವಷ್ಟೇ ನಮ್ಮನ್ನು 'ಶೂದ್ರ'ರೆಂದು ಕರೆಯುವುದಿಲ್ಲ, ಭಾರತದ ಸಂವಿಧಾನ ಕೂಡ 'ಶೂದ್ರ' ಎಂಬ ಹೆಸರನ್ನು ನಮ್ಮ ಮೇಲೆ ಹೇರಿದೆ. ಈಗಿನ ಸಂವಿಧಾನದ ಪ್ರಕಾರ ನಾವೆಲ್ಲ ಶೂದ್ರರು. ಈ ಶಾಸ್ತ್ರಗಳನ್ನು ಯಾರು ಬರೆದರೋ ಗೊತ್ತಿಲ್ಲ, ಈ ಶಾಸ್ತ್ರಗಳನ್ನು ಯಾವಾಗ ಬರೆದರೆಂದೂ ಹೇಳಲು ಯಾರು ಸಮರ್ಥರಿಲ್ಲ, ಇದಕ್ಕಿಂತ ಹೆಚ್ಚು ಅಪ್ರಮಾಣಿಕವಾದದ್ದು, ಮೋಸಗಾರಿಕೆಯದು ಪ್ರಪಂಚದಲ್ಲಿ ಎಲ್ಲಾದರೂ ಇದೆಯೇ?

ಮಾನವನ ಇತಿಹಾಸದ ಆರಂಭದಲ್ಲಿ ಯಾರೋ ಋಷಿಗಳು ಶಾಸ್ತ್ರವನ್ನು ಬರೆದರು ಎಂದು ಕೆಲವರು ಹೇಳುತ್ತಾರೆ. ವಶಿಷ್ಠ ಎಂಬ ವ್ಯಕ್ತಿ ಈ ಶಾಸ್ತ್ರಗಳ ಕರ್ತೃ ಎಂದು ಕೆಲವರು ಹೇಳುವರು. ಈ ಬಗ್ಗೆ ವಿವಾದ ಹುಟ್ಟಿಕೊಂಡಿದೆ. ಈ ಶಾಸ್ತ್ರಗಳನ್ನು ಸೃಷ್ಟಿಸಿದವನು ನಾರದ ಎಂದು ಇನ್ನೂ ಕೆಲವರು ಹೇಳುತ್ತಾರೆ. ಇದನ್ನು ಕೆಲವರು ನಿಮಗೆ ಗೊತ್ತೇ? ಅದು ಸರಿಯಾದ ನ್ಯಾಯ ಕ್ರಮವೇ? ಇದು ಅರ್ಥಹೀನ ರೂಢಿ ಅಲ್ಲವೇ? ಆದ್ದರಿಂದಲೇ ನಾನು ಹೇಳುತ್ತಿರುವುದು: ಆಡಳಿತಗಾರರು ಬೇಜವಾಬ್ದಾರಿಗಳು. ಅವರು ನಾಚಿಕೆ ಹೇಸಿಕೆ ಇಲ್ಲದ ಮಂದಿ. ಇನ್ಯಾವ ರೀತಿಯಲ್ಲಿ ಅವರನ್ನು ನಾನು ವರ್ಣಿಸಲಿ?

ಹಿಂದೂ ಕಾನೂನನ್ನು ಕುರಿತು ಒಡನಾಡಿ ವೀರಮಣಿ ಹೇಳಿದ್ದನ್ನು ನೀವು ಕೇಳಿದಿರಿ. ಹಿಂದೂ ಎಂದರೆ ಯಾರು? ಹಿಂದೂ ಶಬ್ದದ ಅರ್ಥ ಏನು? ಈ ಪದ ಯಾವಾಗ ಅಸ್ತಿತ್ವಕ್ಕೆ ಬಂತು? ಹಿಂದೂ ಸಾಹಿತ್ಯದಲ್ಲಿ ವಿವಿಧ ವಿವರಣೆ ಕೊಟ್ಟಿರುವುದನ್ನು ನೀವು ನೋಡಬಹುದು.

ಬ್ರಾಹ್ಮಣ ಸಾಹಿತ್ಯವು ರಾಮಾಯಣ, ಮಹಾಭಾರತ, ವಿಷ್ಣು ಪುರಾಣ, ಸ್ಕಂದ ಪುರಾಣ ಮುಂತಾದವುಗಳನ್ನು ಒಳಗೊಳ್ಳುತ್ತದೆ. ನಮ್ಮ ತಮಿಳು ಪಂಡಿತರಿಗೆ ಪಂಚಕವಿಯಂ, ಐಯಿಂತು ಇಳಕ್ಕನಂ ಇತ್ಯಾದಿ ಅವರ ಸಾಹಿತ್ಯ ಇದೆ. ಈ ಯಾವುದಾದರೂ ಗ್ರಂಥಗಳಲ್ಲಿ 'ಹಿಂದೂ' ಎಂಬ ಶಬ್ದ ಇದೆಯೇ?

'ಹಿಂದೂ' ಎಂಬ ಶಬ್ದ ಹೇಗೆ ಬಳಕೆಗೆ ಬಂತು? ಎಂಬುದನ್ನು ಈಗ ಪರಿಶೀಲಿಸೋಣ. ಹಿಂದೂ ಶಬ್ದದ ಉಗಮ ಸಿಂಧೂ ಪದದಲ್ಲಿ ಇದೆ ಎಂದು ಹೇಳಲಾಗಿದೆ. ಸಿಂಧೂ ನದಿ ಹರಿಯುತ್ತಿದ್ದ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರನ್ನು 'ಹಿಂದೂ'ಗಳೆಂದು ಕಾಲಾಂತರದಲ್ಲಿ ಕರೆಯಲಾಯಿತು. ಈಗ ನಾನು ನಿಮಗೆ ಈ ಪ್ರಶ್ನೆಯನ್ನು ಕೇಳುತ್ತೇನೆ. ಸಿಂಧೂ ನದಿಗೂ ದ್ರಾವಿಡರಿಗೂ ಏನಾದರೂ ಸಂಬಂಧ ಇದೆಯೇ? ಆರ್ಯರು ಈ ದೇಶಕ್ಕೆ ಬಂದ ಮೇಲೆಯೇ ನಾವು ಸಿಂಧೂ ನದಿಯ ಬಗ್ಗೆ ಕೇಳುವುದು.

ತಿರುಗಾಡಲು ಸಾಧ್ಯವೇ? ಜನಿವಾರ ಹಾಕಿಕೊಳ್ಳುವ ಅರ್ಥ ಏನು? ನಾವೆಲ್ಲ ಅವನ ಉಪಪತ್ನಿಯರ ಮಕ್ಕಳು ಎಂದು ಸ್ಥಾಪಿಸುವುದಕ್ಕಾಗಿ ಅಲ್ಲವೇ? ಅನ್ಯ ಪುರುಷನ ಜೊತೆ ಸಂಬಂಧ ಇಟ್ಟುಕೊಂಡಿದ್ದಾರೆ ಎಂದರೆ ನಮ್ಮ ಹೆಂಗುಸರೆಷ್ಟು ಸಿಟ್ಟಾಗುತ್ತಾರೆ? ನಮ್ಮನ್ನು ಶೂದ್ರರೆಂದು ಕರೆದರೆ ನಾವು ಕೆರಳಬಾರದೇ? ಆದರೆ ದುರದೃಷ್ಟವಶಾತ್ ಈ ಅಪಮಾನವನ್ನು ಯಾರೊಬ್ಬರೂ ಅರಿತಂತೆ ಕಾಣುವುದಿಲ್ಲ, ಪ್ರತಿಯೊಬ್ಬರೂ ಈ ಬಗ್ಗೆ ನಿರ್ಲಕ್ಷ್ಯದಿಂದ ಇದ್ದಾರೆ.

ರಾಜಕಾರಣಿಗಳು

ಅಧಿಕಾರದ ಆಸೆಯುಳ್ಳ ರಾಜಕಾರಣಿಗಳು ಓಟುಗಳನ್ನು ಕಿತ್ತುಕೊಳ್ಳಲು ಏನು ಬೇಕಾದರೂ ಕೊಡುತ್ತಾರೆ. ಚುನಾವಣೆಯಲ್ಲಿ ಗೆಲ್ಲುವುದನ್ನು ಬಿಟ್ಟರೆ ಯಾವುದರಲ್ಲೂ ಅವರಿಗೆ ಪೇಚಾಟ ಇಲ್ಲ, ಡಿಎಂಕೆ ಪಕ್ಷ ಕೂಡ ಹಿಂದೂ ದೇವಸ್ಥಾನಗಳನ್ನು ದುರಸ್ತಿ ಮಾಡುವುದು ಅಗತ್ಯ ಎಂದು ಭಾವಿಸುತ್ತದೆ. ಅವರಿಗೆ ಮತದಾರರೇ ಅತ್ಯಂತ ಮುಖ್ಯ ಅಂಶ.

ಕಾಲಾಂತರದಲ್ಲಿ ಓಟುಗಳನ್ನು ಗಳಿಸಲು ಹೆಂಡತಿಯರನ್ನು ಕೊಟ್ಟರೂ ಸೋಜಿಗ ಪಡಬೇಕಾಗಿಲ್ಲ. ಏಕೆ ನಾನು ಹೀಗೆ ಹೇಳುತ್ತಿದ್ದೇನೆ? ಅಂದರೆ ಅಧಿಕಾರ ಮತ್ತು ಅಂತಸ್ತುಗಳು ಮಾತ್ರ ರಾಜಕಾರಣಿಗಳಿಗೆ ಬೇಕಾಗಿವೆ.

ಅಭಿವೃದ್ಧಿ ಆಗುತ್ತಿರುವ ಪ್ರಪಂಚ

ಪ್ರಪಂಚದಲ್ಲಿ ಬಿಳಿಯ ಜನರು ಪ್ರಗತಿ ಹೊಂದುತ್ತಿರುವುದನ್ನು ನೋಡಿ. ಅವರು ಒಂದು ಕಾಲದಲ್ಲಿ ಕಾಡು ಜನರಾಗಿದ್ದರು. ಈಗ ಅವರು ಅಂತರಿಕ್ಷದಲ್ಲಿ ಪ್ರಯಾಣ ಮಾಡುವ ಮತ್ತು ಚಂದ್ರ ಲೋಕಕ್ಕೆ ಕಾಲಿಡುವ ದುಡಿದ ಹಣವನ್ನು ಈ ಅಸಂಖ್ಯಾತ ದೇವರುಗಳ ಹೆಸರಿನಲ್ಲಿ ಹಾಳು ಮಾಡುತ್ತಾರೆ. ದೇವರು ಮತ್ತು ದೇವತೆಗಳ ಮದುವೆಗೆಂದು ಎಷ್ಟೊಂದು ಅಪಾರ ಹಣವನ್ನು ಖರ್ಚು ಮಾಡಲಾಗುತ್ತಿದೆ. ಹಬ್ಬಗಳು ಮತ್ತು ದೇವರುಗಳ ಹೆಸರಿನಲ್ಲಿ ಹಣವನ್ನು ನಾವು ವಿಪರೀತ ವೆಚ್ಚ ಮಾಡುತ್ತಿಲ್ಲವೇ? ಈ ಕಲ್ಲು ದೇವರುಗಳಿಗೆ ನಿಯಮಿತ ಅಂತರದಲ್ಲಿ ಆಹಾರದ ರೂಪದಲ್ಲಿ ನೈವೇದ್ಯ ಮಾಡಲಾಗುತ್ತದೆ. ಸರ್ಕಾರ ತೆರಿಗೆಗಳನ್ನು ಹಾಕಿದರೆ ಗಂಟಲು ಬಿರಿಯುವಂತೆ ವಿರೋಧಿಸುವ ಜನರಿದ್ದಾರೆ. ಆದರೆ ದೇವರುಗಳ ಹೆಸರಿನಲ್ಲಿ ಹಣ ಹಾಳುಮಾಡುವುದನ್ನು ಯಾರಾದರೂ ವಿರೋಧಿಸುವುದನ್ನು ನೀವು ನೋಡಿದ್ದೀರಾ?

ಧಾರ್ಮಿಕ ಜನರು ತೀರ್ಥಯಾತ್ರೆ ಹೋಗುತ್ತಾರೆ. ಅವರು ಕೆರೆಗಳಲ್ಲಿ ನದಿಗಳಲ್ಲಿ ಮುಳುಗು ಹಾಕುವರು. ಎಲ್ಲಾ ಮಡಿಗಳನ್ನು ಮಾಡಿಕೊಂಡು ದೇವಸ್ಥಾನಕ್ಕೆ ಹೋದರೆ ಒಂದು ಗೊತ್ತಾದ ಸ್ಥಳದಲ್ಲಿ ಅವರನ್ನು ತಡೆದು ನಿಲ್ಲಿಸಲಾಗುತ್ತದೆ. ಅಲ್ಲಿಂದ ಮುಂದಕ್ಕೆ ಅವರು ಗರ್ಭಗುಡಿಯ ಕಡೆಗೆ ಒಂದು ಹೆಜ್ಜೆಯನ್ನೂ ಇಡುವಂತಿಲ್ಲ, ಏಕೆ ಅವರು ಹೊರಗೆ ನಿಂತಿದ್ದಾರೆಂದು ನೀವು ಕೇಳಿದರೆ ಅದಕ್ಕೆ ಅವರು ಶೂದ್ರರು; ಅವರು ಒಳಗೆ ಹೋಗಬಾರದು ಎಂದು ಹೇಳುತ್ತಾರೆ. 1973 ನೇ ಇಸವಿಯಲ್ಲಿಯೂ ಎಂಥ ಅವಮಾನಕರ ನೋಟ! ಇಂಥ ದೇಶವನ್ನು ನಮ್ಮ ತಾಯಿನಾಡು ಎಂದು ಹೇಳಿಕೊಳ್ಳಲು ನಮಗೆ ನಾಚಿಕೆ ಇಲ್ಲ, ನಮ್ಮ ಸಮಾಜದ ಬಗ್ಗೆ ನಮಗೆ ವಿಷಾದವಿಲ್ಲ, ನಮ್ಮ ಸಮಾಜವನ್ನು ಮೇಲೆತ್ತಲು ಮುಂದೆ ಯಾರು ಬರುತ್ತಿದ್ದಾರೆ? ನಮ್ಮಂಥ ಕೆಲವರು ಸ್ವಾಭಿಮಾನಿಗಳು ಮಾತ್ರ ಸಮಾಜದ ಬಗ್ಗೆ ಚಿಂತನೆ ಮಾಡುತ್ತಿರುವರು.

ಭಾರತದ ಕಮ್ಯುನಿಸ್ಟರು

ರಷ್ಯಾ ದೇಶದ ಕಮ್ಯುನಿಸ್ಟರನ್ನು ನೋಡಿ. ಅವರು ದೇವಸ್ಥಾನಗಳನ್ನ ಧ್ವಂಸ ಮಾಡಿದರು. ಮತೀಯ ಮುಖಂಡರನ್ನು ಅವರು ಕೊಂದು ಹಾಕಿದರು. ಅದೇ ಭಾರತೀಯ ಕಮ್ಯುನಿಸ್ಟರು ಮಾಡುತ್ತಿರುವುದನ್ನು ನೋಡಿ. ಅವರು ನಮ್ಮ ಹಾಗೆ ಯಾವುದನ್ನೂ ಧೈರ್ಯವಾಗಿ ಹೇಳುತ್ತಿಲ್ಲ. ಅವರು ಲಾಭದಾಯಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಯಾರೂ ಮನುಷ್ಯನ ಬಗ್ಗೆ ಧೈರ್ಯದಿಂದ ಮಾತನಾಡುತ್ತಿಲ್ಲ. ನಾವು ಅನೇಕ ಸಮ್ಮೇಳನಗಳನ್ನು ನಡೆಸಿದ್ದೇವೆ. ನಿಮಗೆ ನಮ್ಮ ಕಾರ್ಯವಿಧಾನಗಳು ಗೊತ್ತು. ನಮ್ಮ ಉದಾತ್ತ ಕಾರ್ಯಕ್ರಮಗಳಿಗೆ ಕಮ್ಯುನಿಸ್ಟರು ಬೆಂಬಲ ಕೂಡ ಕೊಟ್ಟಿಲ್ಲ. ಓಟುಗಳನ್ನು ಕಳೆದುಕೊಳ್ಳುತ್ತೇವೆಂದು ಅವರಿಗೆ ಹೆದರಿಕೆ. ಅಧಿಕಾರ ಮತ್ತು ಸ್ಥಾನಮಾನಗಳಿಗಾಗಿ ಮಾತ್ರ ಕಮ್ಯುನಿಸ್ಟರು ಹುಚ್ಚರಾಗಿದ್ದಾರೆ. ಅವರಿಗೆ ಸಮಾಜದ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲ.

ಒಡನಾಡಿಗಳೇ, ಈ ಕಾರಣದಿಂದಲೇ ನಾನು ನಮ್ಮ ಸಮಾಜದ ದುರ್ಗತಿ ಕುರಿತು ಆಳವಾಗಿ ಚಿಂತನೆ ಮಾಡುತ್ತಿದ್ದೇನೆ. ನಮ್ಮ ಜನರ ಅವನತಿಯ ಹೀನ ಸ್ಥಿತಿಯ ಬಗ್ಗೆ ನಾನು ವ್ಯಥೆ ಪಡುತ್ತಿರುವೆ. ಇದೇ ಎಲ್ಲಕ್ಕಿಂತ ಮೊದಲು ಪರಿಹರಿಸಬೇಕಾದ ಪ್ರಮುಖ ಸಮಸ್ಯೆ ಎಂದು ನಾನು ಪರಿಗಣಿಸಿದ್ದೇನೆ. ಪ್ರತಿಯೊಬ್ಬ ಮನುಷ್ಯನೂ ಗರಿಷ್ಠ ಐದು ನೂರು ವರ್ಷಗಳವರೆಗೆ ಬದುಕಬಹುದು. ಈಗ ನಮ್ಮ ಜನರ ಆಯುಷ್ಯವನ್ನು ಐವತ್ತೆರಡು ವರ್ಷಗಳೆಂದು ಲೆಕ್ಕ ಹಾಕಲಾಗಿದೆ. ಈ ಆಯುಃ ಪ್ರಮಾಣ ಸಹ ವಿದೇಶಿಗರಿಂದ ಆಗಿರುವುದು. ಬ್ರಿಟಿಷರ ಆಳ್ವಿಕೆ ಬರುವ ಮೊದಲು ಮನುಷ್ಯನ ಸಾಧಾರಣ ಜೀವಮಾನ ತುಂಬ ಕಡಿಮೆ ಇತ್ತು. ಇಂಗ್ಲಿಷರು ತುಂಬಾ ಆಸಕ್ತಿ ವಹಿಸಿ ನಮ್ಮ ಜನರಿಗೆ ಒಳ್ಳೆಯ ವೈದ್ಯಕೀಯ ಮತ್ತು ಆರೋಗ್ಯದಾಯಕ ಅನುಕೂಲಗಳನ್ನು ಒದಗಿಸಿದರು. ಅವರಿಂದಾಗಿ ನಾವು ಹೆಚ್ಚು ವರ್ಷಗಳು ಬದುಕಲು ಸಾಧ್ಯವಾಗಿದೆ. ಮನುಷ್ಯ ಐದು ನೂರು ವರ್ಷಗಳು ಬದುಕಬಹುದೆಂದು ವಿಜ್ಞಾನಿಗಳು ಯೋಚಿಸುತ್ತಿದ್ದಾರೆ. ರಷ್ಯಾ ದೇಶದಲ್ಲಿ ಜನರು ನೂರು ವರ್ಷಗಳಿಗೂ ಹೆಚ್ಚು ಕಾಲ ಬದುಕುವುದನ್ನು ಈಗ ನಾವು ನೋಡಬಹುದು. ಈಗಿನ ಸಮಸ್ಯೆ ದೀರ್ಘಕಾಲ ಬದುಕುವುದಲ್ಲ; ನಿಜವಾದ ಸಮಸ್ಯೆ ಎಂದರೆ ಹೇಗೆ ಸಾಯಬೇಕೆಂಬುದೇ ಆಗಿದೆ.

ಮುಂದಿನ ಹತ್ತು ವರ್ಷಗಳಲ್ಲಿ ಕೊನೆ ಪಕ್ಷ ನಾವು ಎಪ್ಪತ್ತೈದು ವರ್ಷಗಳು ಬದುಕಲು ಸಮರ್ಥರಾಗುತ್ತೇವೆ. ಕಾಲಾಂತರದಲ್ಲಿ ನಾವು ಐದು ನೂರು ವರ್ಷಗಳು ಬದುಕಬಹುದು. ಅದು ಕಷ್ಟದ ವಿಷಯ ಅಲ್ಲ. ವಿಜ್ಞಾನ ಕ್ಷೇತ್ರದಲ್ಲಿ ಇಂಥ ಆಶ್ಚರ್ಯಕರ ಬೆಳವಣಿಗೆ ನಡೆಯುತ್ತಿದೆ.

ಸ್ವಾಭಿಮಾನ ಚಳವಳಿ

ನಮ್ಮ ಏಳಿಗೆ ಹಾದಿಯಲ್ಲಿ ಒಂದೇ ಒಂದು ಅಡಚಣೆ ಇದೆ. ಅದೇನೆಂದರೆ ನಮ್ಮನ್ನು ಶೂದ್ರರು, ಸೂಳೆಮಕ್ಕಳು, ಹಾದರದ ಮಕ್ಕಳು ಎಂದು ಕರೆದಿರುವುದು. ಸ್ವಾಭಿಮಾನಿ ಚಳವಳಿಯನ್ನು ಶುರು ಮಾಡದಿದ್ದರೆ ನಾವೆಲ್ಲ ಅವಿದ್ಯಾವಂತರಾಗಿರುತ್ತಿದ್ದೆವು. ನಮ್ಮ ಜನರಲ್ಲಿ ಪ್ರತಿಶತ ಹತ್ತು ಜನರೂ ಅಕ್ಷರಸ್ಥರಾಗುತ್ತಿರಲಿಲ್ಲ. ಸ್ವಾಭಿಮಾನಿ ಚಳವಳಿಯನ್ನು ಆರಂಭಿಸಿದ್ದರಿಂದ ಜನರಲ್ಲಿ ಜಾಗೃತಿ ಉಂಟಾಯಿತು. ಜನರು ಓದಲು ಯೋಚಿಸಲು ಆರಂಭಿಸಿದರು. ಅದರಿಂದ ಅವರಿಗೆ ಸ್ವಲ್ಪ ತಿಳಿವಳಿಕೆ ಬಂತು.

ಸ್ವಾಭಿಮಾನಿ ಚಳವಳಿಯ ಮೂಲ ತತ್ವಗಳು ನಿಮಗೆ ಗೊತ್ತೇ? ನಿಮಗೆ ಹೇಳುತ್ತೇನೆ. ಅವು ಐದು ತತ್ವಗಳು - ಪಂಚಶೀಲ:

1. ದೇವರನ್ನು ನಿರ್ಮೂಲ ಮಾಡಿ
2. ಮತವನ್ನು ನಿರ್ಮೂಲ ಮಾಡಿ
3. ಕಾಂಗ್ರೆಸನ್ನು ನಿರ್ಮೂಲ ಮಾಡಿ
4. ಗಾಂಧಿ ವಾದವನ್ನು ನಿರ್ಮೂಲ ಮಾಡಿ
5. ಬ್ರಾಹ್ಮಣಿಕೆಯನ್ನು ನಿರ್ಮೂಲ ಮಾಡಿ.

ಸ್ವಾಭಿಮಾನ ಚಳವಳಿಯನ್ನು ಪ್ರಾರಂಭಿಸಿದ ದಿನದಿಂದ ಈ ಹೊತ್ತಿನ ವರೆಗೆ ಇವೇ ನಮ್ಮ ಧ್ಯೇಯಗಳಾಗಿವೆ.

ನಾವು ಇಂದಿನವರೆಗೆ ಹೇಳುತ್ತಿರುವುದನ್ನೇ ಗಾಂಧಿ ತಮ್ಮ ಕೊನೆಯ ದಿನಗಳಲ್ಲಿ ಬೋಧಿಸಿದರು. ಅವರು ನಮ್ಮ ಚಳವಳಿ ಕಡೆ ಬಂದರು. ಕಾಂಗ್ರೆಸ್‌ಗೂ ದೇವರಿಗೂ ಏನೂ ಸಂಬಂಧ ಇಲ್ಲ ಎಂದು ಅವರು ಬಹಿರಂಗವಾಗಿ ಘೋಷಿಸಿದರು. ತಕ್ಷಣವೇ ಹಾರುವರು ಗಲಾಟೆ ಮಾಡಿದರು. ಅವರು ಘೋಷಣೆ ಮಾಡಿದ ಮೂವತ್ತು ದಿನಗಳೊಳಗೆ ಎಂ.ಕೆ.ಗಾಂಧಿಯವರ ಕೊಲೆ ಆಯಿತು. ಅವರನ್ನು ಗುಂಡಿಕ್ಕಿ ಕೊಲ್ಲಲು ಏನು ಕಾರಣ? ಈ ಮಹಾ ಅಪರಾಧದ ಪಿತಾಮಹರಿಗೆ ಎಂ.ಕೆ.ಗಾಂಧಿಯವರು ದೊಡ್ಡನಾಯಕ ಎಂಬುದು ಬಹಳ ಚೆನ್ನಾಗಿ ಗೊತ್ತಿತ್ತು. ಗಾಂಧಿಯವರನ್ನು ಬದುಕಲು ಬಿಟ್ಟರೆ ಅವರು ಇನ್ನೊಬ್ಬ ಈ.ವಿ.ರಾಮಸ್ವಾಮಿ ಆಗಿ ಅಪಾಯಕಾರಿ ಆಗುವರೆಂದು ಹಾರುವರು ಅರ್ಥಮಾಡಿಕೊಂಡರು. ಆದ್ದರಿಂದ ಗಾಂಧಿಯವರನ್ನು ಕೊಂದು ಹಾಕಿದರು.

ಮೂಲ: ಪೆರಿಯಾರ್ ಈ ವಿ ರಾಮಸ್ವಾಮಿ

ಕನ್ನಡಕ್ಕೆ: ಕೆ.ಎಸ್.ಭಗವಾನ್

‘ನಮ್ಮ ಶಾಮಣ್ಣ’ ಬಿಡುಗಡೆ




ಕಡಿದಾಳು ಶಾಮಣ್ಣನವರ ಇತಿಹಾಸ ಬಹಳ ದೊಡ್ಡದಿದೆ. ನಮ್ಮ ಓದುಗರಿಗೆ ಗೊತ್ತಿರುವಂತೆ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು ಲಂಕೇಶ್‌ರ ಒತ್ತಾಯದಂತೆ ಕುವೆಂಪು ಕುರಿತ ‘ಅಣ್ಣನ ನೆನಪು’ ಲೇಖನ ಮಾಲೆ ಶುರು ಮಾಡಿದಾಗ ಅವರ ಲೇಖನ ಮಾಲೆಯನ್ನು ಆವರಿಸಿಕೊಂಡವರು ಶಾಮಣ್ಣ. ಆದರೆ ಅದೆಲ್ಲಾ ಅವರು ಸಹಪಾಠಿಗಳಾಗಿ ಮೈಸೂರಿನಲ್ಲಿ ಮಾಡಿದ ಸಾಹಸಗಳನ್ನೊಳಗೊಂಡ ಲೇಖನಗಳಾಗಿದ್ದವು. ಆದರೆ ಶಾಮಣ್ಣನವರು ಮುಂದೆ ಭಗವತಿಕೆರೆಗೆ ಬಂದು ನೆಲ ಹಿಡಿದು, ಗುಡಿಸಲು ಹಾಕಿಕೊಂಡು, ಬೇಸಾಯ ಮಾಡುತ್ತಲೇ ತೀರ್ಥಹಳ್ಳಿ ರಾಜಕಾರಣದಲ್ಲಿ ಭಾಗವಹಿಸಿದ್ದು, ಕೋಣಂದೂರು ಲಿಂಗಪ್ಪನವರ ಚುನಾವಣಾ ಜಮಾಖರ್ಚಿನ ಖಜಾಂಚಿಯಾಗಿದ್ದು, ಆ ನಂತರ ಸ್ಥಾಪನೆಗೊಂಡ ಕಬ್ಬು ಬೆಳೆಗಾರರ ಸಂಘದಲ್ಲಿ ಸಕ್ರಿಯವಾಗಿದ್ದು, ಮುಂದೆ ರೈತಸಂಘ ಸ್ಥಾಪನೆಯಾದಾಗ ಅದರ ಆತ್ಮದಂತೆ ಕೆಲಸ ಮಾಡಿದ್ದು, ಅಲ್ಲಿಂದ ಉಚ್ಚಾಟನೆಗೊಂಡಿದ್ದು ಒಂದು ಬೇರೆ ಇತಿಹಾಸ. ಎಲ್ಲಕ್ಕಿಂತ ಮುಖ್ಯವಾಗಿ ಅವರು ಭಗವತಿಕೆರೆ ಪ್ರಾಂತ್ಯದಲ್ಲಿ ಕಾಣಿಸಿಕೊಂಡು ಹಳ್ಳಿಗರೊಂದಿಗೆ ಬೆರೆತು ಸಾರಾಯಿಯನ್ನು ಊರಿಂದ ಹೊರಗಾಕಿದ್ದು, ಕಕ್ಕಸ್ಸು ಮನೆಗಳನ್ನು ಕಟ್ಟಿಸಿ ಅವುಗಳು ಹಾಳು ಬಿದ್ದಿದ್ದೂ ಒಂದು ವಿಫಲ ಕ್ರಾಂತಿ. ಆದರೂ ಸೋಲೊಪ್ಪದೆ ಅಂದಿನ ಗ್ರಾಮೀಣ ಸಚಿವ ಎಂ.ಪಿ. ಪ್ರಕಾಶ್‌ಗೆ ಅಂಟಿಸಿದರು. ಇವೆಲ್ಲವನ್ನು ಗಮನಿಸಿ ಒಂದು ಅಭಿನಂದನಾ ಗ್ರಂಥ ತಂದರೆ ಹೇಗೆ ಎಂಬ ಆಲೋಚನೆ ಶಾಮಣ್ಣನವರನ್ನು ಬಲ್ಲ ಆಪ್ತರಲ್ಲಿ ಬೀಜಾಂಕುರವಾಯಿತು. ಅಭಿನಂದನಾ ಗ್ರಂಥ ಮತ್ತು ಅಭಿನಂದನೆಯ ಸಮಾರಂಭವೆಂದರೆ ಅತ್ತ ಸುಳಿಯದ ಶಾಮಣ್ಣನವರ ಗಮನಕ್ಕೆ ಬಾರದಂತೆ ಈ ಕೆಲಸ ನಡೆಯಬೇಕಾಗಿತ್ತು. ಕೆ.ಆರ್. ದಯಾನಂದರ ಸೂಚನೆಯಂತೆ ಡಿ.ಎಸ್. ನಾಗಭೂಷಣ, ಎಂ.ಬಿ. ನಟರಾಜ್ ಮತ್ತು ನನ್ನ ಸಂಪಾದಕತ್ವದಲ್ಲಿ ಶಾಮಣ್ಣನವರ ಗೌರವ ಗ್ರಂಥವೊಂದು ತಯಾರಾಗತೊಡಗಿ ಶಾಮಣ್ಣನವರನ್ನು ಬಲ್ಲವರಿಗೆ ಲೇಖನ ಕಳುಹಿಸಲು ಕೋರಿಕೊಳ್ಳಲಾಯ್ತು. ನಮ್ಮ ನಿರೀಕ್ಷೆಯಂತೆ 90% ಲೇಖನ ಬಂದವು. ಅವುಗಳಲ್ಲಿನ ವೈವಿಧ್ಯತೆಯನ್ನು ಗಮನಿಸಿದಾಗಷ್ಟೇ ಶಾಮಣ್ಣನ ವಿರಾಟರೂಪ ನಮ್ಮ ಗಮನಕ್ಕೆ ಬಂದದ್ದು.

ಪುಸ್ತಕದ ಬಿಡುಗಡೆಗೆ ಬಂದ ಶಾಮಣ್ಣ ಕರ್ನಾಟಕ ಸಂಘದಲ್ಲಿನ ಸಾಹಿತಿ, ಕಲಾವಿದರ ಫೋಟೋಗಳ ನಡುವೆ ದೇವನೂರು ಮಹಾದೇವರ ಫೋಟೋ ಹುಡುಕಿದ್ದು ವಿಶೇಷವಾಗಿತ್ತು. ಸದ್ಯದ ಕರ್ನಾಟಕ ಸಂಘದ ಒಳಗೋಡೆಗೆ ದೇವನೂರರ ಫೋಟೋ ಹಾಕಿ ಎಂದು ಕೇಳಲೂಬಾರದು ಎಂದು ನಂತರ ಅವರಿಗೆ ಹೊಳೆಯಿತು.

ಪುಸ್ತಕ ಬಿಡುಗಡೆಗೆ ಬಂದ ರವಿವರ್ಮಕುಮಾರ್ ಮತ್ತು ಕಿಮ್ಮನೆಯವರ ಭಾಷಣ ಮತ್ತು ಇನ್ನೂ ಅನೇಕರ ಅಭಿಪ್ರಾಯ ಕೇಳಿದರೆ ಶಾಮಣ್ಣನ ಬಗ್ಗೆ ಮತ್ತೊಂದು ಪುಸ್ತಕ ಬಂದರೆ ಪೂರ್ಣವಾಗಬಹುದೇನೋ ಅನ್ನಿಸಿತು. ಕಿಮ್ಮನೆ ರತ್ನಾಕರ್ ಹೇಳಿದ ಪ್ರಸಂಗವನ್ನಿಲ್ಲಿ ದಾಖಲಿಸುವುದಾದರೆ ಇತ್ತೀಚೆಗೆ ಅವರು ಎದುರಿಸಿದ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಅತ್ಯಂತ ಸಹನೆಯಿಂದ ವರ್ತಿಸಿದ್ದು ಮತ್ತು ಇನ್ನೊಬ್ಬರು ಹೇಳುವುದನ್ನು ಕೇಳಿಸಿಕೊಳ್ಳುವುದನ್ನು ಕಲಿತದ್ದೇ ಶಾಮಣ್ಣನವರಿಂದ. ಅವರೊಮ್ಮೆ ಕಡಿದಾಳರ ಮನೆಗೋಗಿ ನೋಡಿದಾಗ, ಕಳ್ಳರ ಭಯದಿಂದ ಕಣದಲ್ಲಿನ ಬತ್ತ ತಂದು ಇಡೀ ಮನೆ ತುಂಬ ತುಂಬಿಕೊಂಡಿದ್ದರಂತೆ. ಇದನ್ನು ನೋಡಿದ ರತ್ನಾಕರ್ "ಶಾಮಣ್ಣ, ಎಲ್ಲಿ ಮಲಗುತ್ತೀರಿ?" ಎಂದಾಗ "ಇನ್ನೆಲ್ಲಿ ಮಲಗುವುದು? ಬತ್ತದ ಮೇಲೆ ಮಲಗುತ್ತೇವೆ" ಎಂದರಂತೆ. “ಸ್ನಾನ ಎಲ್ಲಿ ಮಾಡುತ್ತೀರಿ?” ಎಂದಾಗ, “ಕತ್ತಲಾದ ಮೇಲೆ ಈ ಲೋಕವೇ ಸ್ನಾನಗೃಹವಾಗುತ್ತೆ” ಎಂದರಂತೆ.

ಇವೆಲ್ಲಕ್ಕಿಂತ ಮುಖ್ಯವಾಗಿ ರೈತಸಂಘದ ಚಳವಳಿಗಳು ಶಿವಮೊಗ್ಗದ ಎಲ್ಲ ತಾಲ್ಲೂಕುಗಳಿಗಿಂತ ತೀರ್ಥಹಳ್ಳಿಯಲ್ಲಿ ತುಂಬ ಬಿರುಸಾಗಿ ನಡೆಯುತ್ತಿತ್ತು. ಸುಂದರೇಶ್ ಮತ್ತು ನಂಜುಂಡಸ್ವಾಮಿಯವರ ಪ್ರಭಾವಕ್ಕೊಳಪಟ್ಟ ಕೋಡ್ಲು ವೆಂಕಟೇಶ್, ರಾಜೇಂದ್ರ, ನಾಗೇಶ್ ಮುಂತಾದ್ದ ಮರಿ ಲೀಡರುಗಳು ತುಂಬ ಆಗ್ರೆಸ್ಸಿವಾಗಿ ಸರ್ಕಾರಿ ಕಚೇರಿ ಮೇಲೆ ದಾಳಿ ಮಾಡುವುದು, ಅರಣ್ಯ ಇಲಾಖೆಯ ಖದೀಮರಿಗೆ ತದುಕುವುದು ಮಾಡುತ್ತಿದ್ದರು. ಇವರ ಮೇಲೆ ಬೀಳುವ ಕೇಸುಗಳನ್ನು ನಡೆಸುತ್ತಾ ಕೋರ್ಟಿನಿಂದ ಬಿಡುಗಡೆ ಮಾಡಿಸುವ ಜವಾಬ್ದಾರಿ ರತ್ನಾಕರ್ ಅವರದ್ದಾಗಿತ್ತು. ಆದರೆ ಯಾರೂ ಎಂದೂ ಫೀಜು ಕೊಡಲಿಲ್ಲ, ಕೋರ್ಟಿಗೂ ಸರಿಯಾಗಿ ಹಾಜರಾಗುತ್ತಿರಲಿಲ್ಲ. ಆದರೂ ಅವರ್‍ಯಾರಿಗೂ



ಶಿಕ್ಷೆಯಾಗದಂತೆ ವಾದಿಸಿ ಗೆಲ್ಲುವುದೇ ಒಂದು ಸಾಹಸವಾಗಿತ್ತು. ಒಮ್ಮೆ ಮಾತ್ರ ತುಂಬ ಸ್ಟ್ರಿಕ್ಟಾಗಿದ್ದ ಜಡ್ಜ ಒಬ್ಬರು, ಚಳವಳಿಗಾರರನ್ನೆಲ್ಲಾ ಜೈಲಿಗೆ ದಬ್ಬಿದರು. ರತ್ನಾಕರ್ ಬಿಡುಗಡೆಗೆ ಯತ್ನಿಸಿದರೂ ರೈತರು ಒಪ್ಪದೆ ಜೈಲಿಗೆ ಹೊರಟರು. ಅವರಲ್ಲಿ ಒಬ್ಬ ಮುಸ್ಲಿಂ ಮಹಿಳೆಯೂ ಇದ್ದರು. ಅವರ ಕಂಕುಳಲ್ಲಿದ್ದ ಎರಡು ವರ್ಷದ ಮಗುವನ್ನು ಜೈಲಿಗೆ ಕಳುಹಿಸುವಂತಿರಲಿಲ್ಲ. ಆದ್ದರಿಂದ ಶಾಮಣ್ಣನವರ ಸುಪರ್ದಿಗೆ ಮಗು ವಹಿಸಿ ಅವರು ಜೈಲಿಗೆ ಹೋದರು. ಶಾಮಣ್ಣನವರು ಮಗುವನ್ನು ದತ್ತು ಪಡೆದಂತೆ ಖುಷಿಯಿಂದ ಎತ್ತಿಕೊಂಡು ಬಂದರು. ಆದರೆ ಎರಡು ದಿನ ಕಳೆಯುವುದರಲ್ಲಿ ಆ ಮಗುವಿಗೆ ಕೇಳಿದ್ದನ್ನೆಲ್ಲಾ ಕೊಡಿಸಿ ಕಕ್ಕಸ್ಸು ಮಾಡಿಸಿ, ತಿಕ ತೊಳೆಯುವುದರಲ್ಲಿ ಸಾಕಾಗಿಹೋಗಿತ್ತು. ಆದರೂ ಹೆತ್ತವರಿಗಿಂತಲೂ ಚೆನ್ನಾಗಿ ನೋಡಿಕೊಳ್ಳುವುದರಲ್ಲಿ ಶಾಮಣ್ಣನವರ ಅಸಾಮಾನ್ಯ ತಾಳ್ಮೆ ಪರೀಕ್ಷೆಗೀಡಾಗಿತ್ತು.

ಹೀಗೆ ಕಿಮ್ಮನೆಯವರು ಆಗಿನ ರೈತ ಹೋರಾಟದ ಹಲವು ಪ್ರಸಂಗ ಮುಂದಿಟ್ಟರು. ಜೊತೆಗೆ ಶಾಮಣ್ಣನವರನ್ನು ಚಳವಳಿಗೆ ಬಿಟ್ಟುಕೊಟ್ಟು, ಬೇಸಾಯದ ಜೊತೆಗೆ ಮಕ್ಕಳನ್ನು ನೋಡಿಕೊಂಡ ಶ್ರೀದೇವಕ್ಕನವರ ಸಾಧನೆಯನ್ನು ಮೆಚ್ಚಿಕೊಂಡರು.

‘ನಮ್ಮ ಶಾಮಣ್ಣ’ ಗೌರವ ಗ್ರಂಥಕ್ಕೆ ಸುಮಾರು ಎಪ್ಪತ್ತೆರಡು ಜನ ತಮ್ಮ ಲೇಖನ ಕಳುಹಿಸಿದ್ದಾರೆ. ಅಷ್ಟು ಜನರಿಗೂ ವೈವಿಧ್ಯಮಯವಾಗಿ ಕಾಣಿಸಿರುವ ಶಾಮಣ್ಣ ಅವರ ಮಾನವೀಯ ಗುಣಗಳ ವಿಷಯದಲ್ಲಿ ಮಾತ್ರ ಒಂದೇ ತರ ಕಾಣಿಸಿದ್ದಾರೆ. ಇಷ್ಟಾದರೂ ಶಾಮಣ್ಣ ಕೆದಕಿದಷ್ಟೂ ಬದುಕಿನ ಬಣ್ಣಗಳಲ್ಲಿ ತೆರೆದು ಕೊಳ್ಳುವಂತಹ ನಿಧಿಯಿದ್ದಂತೆ. ನಾನೇ ಬರೆಯದೆ ಬಿಟ್ಟ ಪ್ರಸಂಗವೊಂದನ್ನು ಇಲ್ಲಿ ದಾಖಲಿಸುತ್ತೇನೆ.

ಶಾಮಣ್ಣನವರು ಸಕಲ ಪ್ರಾಣಿಪಕ್ಷಿಗಳ ವಿಷಯದಲ್ಲಿ ವಿಶೇಷ ಕುತೂಹಲವುಳ್ಳವರು. ಹಾಗಾಗಿ ಅವರೊಮ್ಮೆ ದಕ್ಷಿಣ ಕನ್ನಡದ ಕಾಳಗದ ಕೋಳಿಯೊಂದನ್ನು ತಂದು ಅದಕ್ಕೆ ವೀರಭದ್ರ ಎಂದು ಹೆಸರಿಟ್ಟರು. ಆಗ ಮಗುವಾಗಿದ್ದ ಲಾಜವಂತಿ ಎತ್ತರಕ್ಕಿದ್ದ ವೀರಭದ್ರ, ತಂದಾಗ ಚೆನ್ನಾಗಿಯೇ ಇದ್ದವನು ನಂತರ ಮೈಮೇಲೆ ವೀರಭದ್ರ ದೇವರು ಬಂದಂತೆ ಬಲಗಾಲನ್ನು ಮುಂದಿಕ್ಕಿ ಕತ್ತನ್ನು ಕೊಂಕಿಸಿ ಶನಿ ಪಾತ್ರಧಾರಿಯಂತೆ ಸೂರ್ಯನನ್ನು ನೋಡತೊಡಗಿದ. ಅಕ್ಕಪಕ್ಕ ಸುಳಿದವರನ್ನು ಅಹಂಕಾರದಿಂದಲೇ ನೋಡಿ ಕ್ವಕಾಕ್ ಎಂಬ ವೀರಗಾಸೆ ಧ್ವನಿಯಿಂದ ಗದರುತ್ತಿದ್ದ. ಅನುಮಾನಗೊಂಡ ಶಾಮಣ್ಣನವರು, ಡಾಕ್ಟರನ್ನು ಕರೆದು ತೋರಿದಾಗ ಕಾಳಗದಲ್ಲಿ ಕಣ್ಣಿಗೆ ಏಟು ಮಾಡಿಕೊಂಡಿದ್ದ ವೀರಭದ್ರನ ಕಣ್ಣಿಗೆ ಕ್ರಮೇಣ ಕತ್ತಲಾವರಿಸಿತ್ತು. ಆದರೆ ಸೂರ್ಯಕಿರಣ ಯಾವುದೋ ಹೊಳಪನ್ನು ಝಳಪಿಸಿದಂತಾಗಿ ಅತ್ತ ನೋಡುತ್ತಿತ್ತು. ಅಂತೂ ವೀರಭದ್ರ ಕುರುಡನಾಗಿದ್ದು ಶಾಮಣ್ಣನವರಿಗೆ ಬಹಳ ನೋವುಂಟುಮಾಡಿತ್ತು. ಇಂತಹ ಅದೆಷ್ಟೊ ಪ್ರಸಂಗಗಳು ಇನ್ನೂ ಶಾಮಣ್ಣನವರಲ್ಲಿವೆ.

ಶಾಮಣ್ಣನವರ ಗುಣಗಳನ್ನು ವಿಶ್ಲೇಷಿಸಿದ ರವಿವರ್ಮಕುಮಾರ್ “ಅವರೊಬ್ಬ ಶ್ರೇಷ್ಠ ಸಮಾಜವಾದಿ. ಸಮಾಜವಾದವನ್ನು ಅರಿಯದೆ ಟೀಕಿಸುವ ಜನ ಕಡಿದಾಳು ಶಾಮಣ್ಣನವರ ಬದುಕನ್ನು ನೋಡಿ ಮಾತನಾಡುವುದು ಒಳ್ಳೆಯದು. ಇದರ ಜೊತೆಗೆ ಅವರ ಶ್ರೀಮತಿ ಶ್ರೀದೇವಕ್ಕನವರ ಬದುಕು ಕೂಡ ಶ್ರೇಷ್ಠವಾದದ್ದು” ಎಂದರು.

ಈ ಗೌರವ ಗ್ರಂಥದಲ್ಲಿ ಲೇಖಕರಲ್ಲದ ಲೈಬ್ರರಿ ವಿಶ್ವನಾಥ್ ಶಾಮಣ್ಣನವರ ಬಗ್ಗೆ ತಮ್ಮ ಅಭಿಪ್ರಾಯ ದಾಖಲಿಸಿದ್ದಾರೆ. ಇವು ಡಿ.ಎಸ್. ನಾಗಭೂಷಣರಿಗೂ ಮೆಚ್ಚುಗೆಯಾದ ಸಾಲುಗಳಾದ್ದರಿಂದ ಇಲ್ಲಿ ಕೊಡಲಾಗಿದೆ.

“ಮೈದೊಳಲು, ಅಗರದಳ್ಳಿ, ಭಗವತಿಕೆರೆ ಈ ಪ್ರದೇಶಗಳಲ್ಲಿ ಅಪರೂಪದ ವ್ಯಕ್ತಿಯೊಂದು ನಮ್ಮ ಹಳ್ಳಿಗರ ಜೊತೆ ಬೆರೆಯುತ್ತಾ ಓಡಾಡುತ್ತಿರುವುದು ತಾರುಣ್ಯದಲ್ಲಿ ಪ್ರಾಪ್ತಿಯಾದ ನಮ್ಮ ಹೊಸ ಕಣ್ಣುಗಳಿಗೆ ಗೋಚರಿಸಿತು. ಅವರ ಸರಳತೆ, ವಿಶ್ವಾಸ ತುಂಬಿದ ಮಾತುಕತೆಗಳು ನಮ್ಮನ್ನು ಆಕರ್ಷಿಸಿದವು. ಅವರ ಆಕಾರದಿಂದಲೇ ನಮಗೆ ಎಲ್ಲಿಂದಲೋ ಬಂದ ಪ್ರವಾದಿಯಂತೆ ಕಾಣುತ್ತಿದ್ದರು. ಅವರ ನಡವಳಿಕೆಯಲ್ಲಿ ಜಾತಿಪಾತಗಳ ವಾಸನೆಯಿರಲಿಲ್ಲ, ದೇವರು ದಿಂಡರ ಸಹವಾಸವಿರಲಿಲ್ಲ. ಪ್ರೀತಿ, ಪ್ರೇಮ, ಸಹಬಾಳ್ವೆಯ ವಿವೇಕ ಅವರ ಬಾಯಿಂದ ಬರುತ್ತಿದ್ದವು. ಸಹಜವಾಗಿ ನಮಗೆ ಶಾಮಣ್ಣನವರನ್ನು ಕಂಡರೆ ಇವರೇ ನಮ್ಮ ನಿಜವಾದ ನಾಯಕರು ಅನ್ನಿಸಿತು.

ಶಾಮಣ್ಣನವರು ಮಲೆನಾಡನ್ನು ಬಿಟ್ಟು ನಮ್ಮ ಪ್ರದೇಶಕ್ಕೆ ಬಂದು ನೆಲೆಸಿದ್ದೆ ನಮ್ಮ ಭಾಗ್ಯ ಎಂದುಕೊಂಡಿದ್ದೇವೆ. ಶ್ರೀದೇವಕ್ಕ ಮತ್ತು ಶಾಮಣ್ಣನವರು ನಮ್ಮಲ್ಲಿ ಇರುವುದೇ ನಮಗೊಂದು ಹೆಮ್ಮೆಯ ಸಂಗತಿ.

ನಾವು ಎಲ್ಲೇ ಹೋದರೂ ಶಾಮಣ್ಣನವರ ಜೊತೆಗಿದ್ದೇವೆ ಎಂದು ಹೇಳಿಕೊಳ್ಳುವುದೇ ಸಂಭ್ರಮವೆನಿಸಿದೆ. ತಾಲ್ಲೂಕಾಫೀಸು, ಡಿ.ಸಿ. ಕಚೇರಿ, ಪೊಲೀಸ್ ಠಾಣೆ ಹೀಗೆ ಸರ್ಕಾರಿ ಕಚೇರಿಗಳಲ್ಲಿ “ಶಾಮಣ್ಣನವರು ಕಳುಹಿಸಿದ್ದಾರೆ” ಎಂದರೆ ಸರ್ಕಾರಿ ಜನ ನಮ್ಮ ಕಡೆ ತುಸು ಗಮನ ಕೊಡುತ್ತಾರೆ. ಅವರ ಮನೆಗೆ ಹೋಗಿಬಂದರೆ, ಹೊಸ ಆಲೋಚನೆಯನ್ನು ನಮ್ಮ ತಲೆಗೆ ತುಂಬಿ ಕಳುಹಿಸುತ್ತಾರೆ. ಅವರ ತೋಟ, ಮನೆ, ಜಾತಿ, ಮತಗಳನ್ನು ಮೀರಿ ಇದು ನಮ್ಮ ಅಯ್ಯನವರ ಮನೆ ತೋಟ ಎಂಬ ಭಾವನೆ ಬರುವಂತೆ ಅವರು ಇಲ್ಲಿ ಬಾಳಿದ್ದಾರೆ. ನಾವೀಗಲೂ ಅವರ ಜೊತೆ ಇದ್ದೇವೆ. ಮೈದೊಳಲಿಗೆ ಬಂದರೆ ನಮ್ಮ ಲೈಬ್ರರಿಗೆ ಬರದೆ ಹೋಗುವುದಿಲ್ಲ.”

ಈ ಅಭಿಪ್ರಾಯಕ್ಕೆ ಸಮನಾದ ಹಲವು ಲೇಖನಗಳು ಈ ಗೌರವ ಗ್ರಂಥದಲ್ಲಿವೆ. ಜೊತೆಗೆ ಲಂಕೇಶ್, ತೇಜಸ್ವಿ, ರಾಜೀವ್ ತಾರಾನಾಥ್, ಅನಂತಮೂರ್ತಿ ಅಭಿಪ್ರಾಯಗಳು ಶಾಮಣ್ಣನವರ ವರ್ಣರಂಜಿತ ಗುಣಗಳನ್ನು ಕರಾರುವಾಕ್ಕಾಗಿ ಹಿಡಿದಿಟ್ಟಿವೆ. ನಮ್ಮ ಹೊಸ ತಲೆಮಾರಿನ ಮಕ್ಕಳಿಗೆ ಈ ಪುಸ್ತಕವನ್ನು ಓದಿಸಬೇಕಿದೆ. ಜಾತ್ಯತೀತ ಮನಸ್ಸಿನ ಸದಾ ಕ್ರಿಯಾಶೀಲ ಮನಸೊಂದು ತನ್ನ ಸಹಜ ಬದುಕಿನಿಂದಲೇ ಎಲ್ಲರನ್ನು ಬೆರಗುಗೊಳಿಸಿದ್ದು ಹೇಗೆ ಎಂಬುದನ್ನು ತಿಳಿಯಲು ‘ನಮ್ಮ ಶಾಮಣ್ಣ’ನನ್ನು ಓದಬೇಕಿದೆ. ಬಹಳ ಅಪರೂಪದ ಪುಸ್ತಕಗಳನ್ನಷ್ಟೇ ಪ್ರಕಟಿಸುತ್ತ ಬರುತ್ತಿರುವ ಅಹರ್ನಿಶಿ ಪ್ರಕಾಶನದ ಕೆ. ಅಕ್ಷತಾ ಈ ಗೌರವ ಗ್ರಂಥವನ್ನು ಪ್ರಕಟಿಸಿದ್ದಾರೆ.

■ ಬಿ. ಚಂದ್ರೇಗೌಡ

ಶೂದ್ರರ ಬಗ್ಗೆ ವೈದಿಕರ ಕೀಳುಭಾವನೆಯ ಅಭಿವ್ಯಕ್ತಿ

ಕೆಲದಿನಗಳ ಹಿಂದೆ ನಾನು ಮೈಸೂರಿನ ಕೇಂದ್ರ ಬಸ್ ನಿಲ್ದಾಣದಲ್ಲಿ ಮಂಗಳೂರು ಬಸ್ಸಿಗಾಗಿ ಕಾಯುತ್ತಾ ಕುಳಿತಿದ್ದೆ. ನಾನು ಟಿಕೆಟ್ ಬುಕ್ ಮಾಡಿದ್ದ ರಾಜಹಂಸ ಬಸ್ಸು ಬರಲು ಇನ್ನೂ ಅರ್ಧ ಗಂಟೆ ಇತ್ತು. ಬೆಂಚ್ ಮೇಲೆ ಅಲ್ಲಿ ಯಾರೋ ಬಿಟ್ಟುಹೋಗಿದ್ದ ಹಿಂದಿ ಭಾಷೆಯ ವಾರಪತ್ರಿಕೆಯನ್ನು ನಾನು ತೆಗೆದು ಓದುತ್ತಿದ್ದೆ. ಆಗ ನಾನು ಕುಳಿತಿದ್ದ ಬೆಂಚಿನ ಹತ್ತಿರ ಇನ್ನೂ ಮೂರು ಜನರು ಬಂದು ಕುಳಿತರು. ಅವರೂ ಬೇರೊಂದು ಉಡುಪಿ ಬಸ್ಸಿಗೆ ಹೋಗುವವರಾಗಿದ್ದರು. ಅವರು ತುಳುವಿನಲ್ಲಿ ಮಾತಾಡುತ್ತಿದ್ದರು. ನನ್ನ ಕೈಯಲ್ಲಿದ್ದ ಹಿಂದಿ ಪತ್ರಿಕೆ ನೋಡಿ ನನ್ನನ್ನು ಉತ್ತರ ಭಾರತೀಯ ಎಂದು ತಿಳಿದ ಅವರು ತುಳುವಿನಲ್ಲಿ ಮುಕ್ತವಾಗಿ ಮಾತನಾಡತೊಡಗಿದರು. ಅವರೆಲ್ಲ ಸಂಘ ಪರಿವಾರದ ಸದಸ್ಯರು ಎಂಬುದು ಅವರ ಮಾತಿನಿಂದ ಸ್ಪಷ್ಟವಾಗಿತ್ತು. ಬಹುಶಃ ಅವರು ಮಂಡ್ಯದ ಆಶಿತಾ-ಶಕಿಲ್ ಮದುವೆಯಲ್ಲಿ ಲವ್ ಜಿಹಾದ್ ಗಲಾಟೆ ಮಾಡುವುದು ಹೇಗೆ ಎಂದು ಮಂಡ್ಯದ ಚೆಡ್ಡಿಗಳಿಗೆ ಮಾರ್ಗದರ್ಶನ ಮಾಡಲು ಬಂದ ಕರಾವಳಿಯ-ಅನುಭವಿ ಚೆಡ್ಡಿಗಳಿದ್ದಿರಬಹುದು.

ಅವರಲ್ಲಿ ಮೊದಲನೆಯವ ಹೇಳಿದ "ಭಾರತದಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಇರದೇ ಇದ್ದರೆ ಎಲ್ಲರೂ ಹಿಂದೂಗಳೇ ಆಗಿದ್ದರೆ ನಮಗೆ ಯಾವ ಸಮಸ್ಯೆ ಇರುತ್ತಿರಲಿಲ್ಲ ಅಲ್ಲವೇ."

ಆಗ ಇನ್ನೊಬ್ಬ ಹಿರಿಯ ವಯಸ್ಸಿನ ವ್ಯಕ್ತಿ ಹೇಳಿದ "ಇಲ್ಲ ಇಲ್ಲ, ಮುಸ್ಲಿಮರು ಮತ್ತು ಕ್ರೈಸ್ತರು ಇದ್ದರೇನೇ ನಮಗೆ ಒಳ್ಳೆಯದು. ಒಂದು ವೇಳೆ ಇಲ್ಲಿ ಎಲ್ಲರೂ ಹಿಂದೂಗಳಾಗಿದ್ದರೆ ಆಗ ಬ್ರಾಹ್ಮಣರಿಗೆ ಹೆಚ್ಚು ಸಮಸ್ಯೆಗಳಿರುತ್ತಿದ್ದವು. ಈಗ ನಾವು ಮುಸ್ಲಿಮರ ಬೆದರುಬೊಂಬೆ ಹಾಗೂ ಕ್ರೈಸ್ತರ ಮತಾಂತರದ ಭಯ ತೋರಿಸಿ ಹಿಂದೂ ಒಗ್ಗಟ್ಟಿನ ನೆಪದಲ್ಲಿ ಈ ದಡ್ಡ ಶೂದ್ರರನ್ನೆಲ್ಲಾ ನಮ್ಮ ಮುಷ್ಟಿಯಲ್ಲಿ ಸುಲಭವಾಗಿ ಇಟ್ಟುಕೊಳ್ಳಬಹುದು. ಆದರೆ ಮುಸ್ಲಿಮರು- ಕ್ರೈಸ್ತರು ನಮ್ಮ ದೇಶದಲ್ಲಿ ಇರದೇ ಇದ್ದರೆ ಈ ಬೆದರುಬೊಂಬೆಗಳನ್ನು ತೋರಿಸಿ ಈ ಶೂದ್ರರನ್ನು ಮಂಗ ಮಾಡಲು ಎಲ್ಲಿ ಸಾಧ್ಯವಾಗುತ್ತಿತ್ತು? ಮೇಲಾಗಿ ಕೇವಲ ನೂರಕ್ಕೆ ನೂರು ಹಿಂದೂಗಳೇ ಇದ್ದರೆ ಆಗ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಪ್ರಬಲರಾಗಿರುವ ಈ ಮಧ್ಯಮ ಜಾತಿಯ ಶೂದ್ರರು ಬ್ರಾಹ್ಮಣರ ವಿರುದ್ಧವೇ ಏನಾದರೊಂದು ಕಾರಣದಿಂದ ತಿರುಗಿಬೀಳುತ್ತಿದ್ದರು. ಮುಸ್ಲಿಮರನ್ನು-ಕ್ರೈಸ್ತರನ್ನು ಹಾಗೂ ಕೆಳಜಾತಿಯ ಹಿಂದೂಗಳನ್ನು ಬೇಕಾದರೆ ಹೆದರಿಸಿ ಬೆದರಿಸಿ ನಮ್ಮ ಕಂಟ್ರೋಲಿನಲ್ಲಿ ಇಟ್ಟುಕೊಳ್ಳಬಹುದು. ಆದರೆ ಈ ಜಮೀನ್ದಾರ ಜಾತಿಯ ಹಾಗೂ ರಟ್ಟೆಬಲದಲ್ಲಿ ನಂಬಿಕೆಯಿರುವ ಮಧ್ಯಮ ಜಾತಿಗಳವರು ಬ್ರಾಹ್ಮಣರ ಜೀವನ ನರಕ ಮಾಡುತ್ತಿದ್ದರು. ಲವ್ ಜಿಹಾದ್ ಹೆಸರಲ್ಲಿ ಈಗ ಈ ಮಧ್ಯಮ ಜಾತಿಯ ಶೂದ್ರರ ದ್ವೇಷವನ್ನು ನಾವು ಸುಲಭವಾಗಿ ಮುಸ್ಲಿಮರ ಅಥವಾ ಕ್ರೈಸ್ತರ ವಿರುದ್ಧ ತಿರುಗಿಸುತ್ತಿದ್ದೇವೆ. ಆದರೆ ಮುಸ್ಲಿಮರು-ಕ್ರೈಸ್ತರು ಇರದಿದ್ದರೆ ಶೂದ್ರರ ದ್ವೇಷಕ್ಕೆ ನಾವೇ ಬಲಿಯಾಗುತ್ತಿದ್ದೆವು. ಈಗ ಚುನಾವಣೆ ಸಮಯದಲ್ಲಿ ಮುಸ್ಲಿಮ್-ಕ್ರೈಸ್ತರನ್ನು ವಿಲನ್‌ಗಳೆಂದು ಬಿಂಬಿಸಿ ಹಿಂದೂಗಳ ಮತವನ್ನೂ ನಮ್ಮ ಕಡೆ ತಿರುಗಿಸುವುದು ಸುಲಭ. ಒಂದು ವೇಳೆ ಮುಸ್ಲಿಮ್-ಕ್ರೈಸ್ತರು ಇರದಿದ್ದರೆ ನಾವು ಯಾರನ್ನು ವಿಲನ್ ಎಂದು ತೋರಿಸಿ ಹಿಂದೂಗಳ ಮತ ನಮ್ಮ ಕಡೆ ಸೆಳೆಯಲು ಸಾಧ್ಯವಿತ್ತು?"

ಆಗ ಇನ್ನೊಬ್ಬ ನಡುವಯಸ್ಕ ಹೇಳಿದ "ಹೌದು ಮುಸ್ಲಿಮರು ಇರದಿದ್ದರೆ ಮೋದಿ ಭಾರತದ ಪ್ರಧಾನಿ ಆಗಲು ಸಾಧ್ಯವೇ ಇರಲಿಲ್ಲ. ನಮ್ಮವರೇ ಗೋಧ್ರಾದಲ್ಲಿ ರೈಲು ಸುಟ್ಟು ಅದನ್ನು ಮುಸ್ಲಿಮರ ಮೇಲೆ ಹಾಕಿ ಅವರ ಶವವನ್ನೇ ಮೆಟ್ಟಿಲು ಮಾಡಿದಕ್ಕೆ ನಮ್ಮ ಪಕ್ಷ ದೇಶದೆಲ್ಲೆಡೆ ಗೆಲ್ಲುವುದು ಸಾಧ್ಯವಾಯಿತು. ಮುಸ್ಲಿಮರು ಇರದಿದ್ದರೆ ಮೋದಿಜಿ ಗೋಧ್ರಾ ಕಾಂಡ ಮಾಡಲೂ ಅವಕಾಶವಿರುತ್ತಿರಲಿಲ್ಲ ಹಾಗೂ ಅಧಿಕಾರಕ್ಕೆ ಏರುತ್ತಲೂ ಇರಲಿಲ್ಲ ಅಲ್ಲವೇ. ಪ್ರೀತಿಯಿಂದ ಸಾಧಿಸಲಾಗದ್ದನ್ನು ದ್ವೇಷದಿಂದ ಸಾಧಿಸಲು ಸಾಧ್ಯ ಎಂಬುದನ್ನು ಮೊಟ್ಟ ಮೊದಲು ಸಾಬೀತುಮಾಡಿ ತೋರಿಸಿದ್ದು ಹಿಟ್ಲರ್. ಈಗ ಎರಡನೆಯವರೇ ನಮ್ಮ ಮೋದಿಜಿ. ಜರ್ಮನಿಯಲ್ಲಿ ಯಹೂದಿಗಳು ಇದ್ದಿದ್ದು ಕೇವಲ ಶೇ.2 ಮಾತ್ರ. ಅವರು ತಮ್ಮಷ್ಟಕ್ಕೆ ವ್ಯಾಪಾರ, ಉದ್ಯೋಗ ಮಾಡಿಕೊಂಡು ಶ್ರಮಪಟ್ಟು ಸಿರಿವಂತರಾಗಿದ್ದರು. ಆದರೆ ಅವರ ಶ್ರೀಮಂತಿಕೆ ನೋಡಿ ಸಾಮಾನ್ಯ ಜರ್ಮನ್ ಕ್ರೈಸ್ತರು ಮತ್ಸರ ಪಡುತ್ತಿದ್ದರು. ಈ ಜರ್ಮನ್ ಕ್ರೈಸ್ತರ ಮತ್ಸರವನ್ನೇ ಬಂಡವಾಳ ಮಾಡಿಕೊಂಡ ಹಿಟ್ಲರ್ ಯಾವುದೇ ಕಾರಣವಿಲ್ಲದೇ ಯಹೂದಿಗಳನ್ನು ಹಿಂಸಿಸಲು ತೊಡಗಿದಾಗ ಜರ್ಮನ್ ಕ್ರೈಸ್ತರೆಲ್ಲ ಹಿಟ್ಲರ್‌ನನ್ನು ಮಹಾಪುರುಷ ಎಂದು ಭಾವಿಸತೊಡಗಿದರು ಹಾಗೂ



ಅವನ ಮಹತ್ವಾಕಾಂಕ್ಷಿ ಯೋಜನೆಗಳಿಗೆಲ್ಲಾ ಕಣ್ಣು ಮುಚ್ಚಿ ಅನುಮೋದಿಸತೊಡಗಿದರು. ಈ ರೀತಿ ಕ್ರೈಸ್ತರಲ್ಲಿದ್ದ ಯಹೂದೀ ದ್ವೇಷವನ್ನೇ ಬಂಡವಾಳ ಮಾಡಿಕೊಂಡು ಹಿಟ್ಲರ್ ಸರ್ವಾಧಿಕಾರಿಯೂ ಆಗಿಬಿಟ್ಟನು. ಜರ್ಮನಿಯಲ್ಲಿ ಯಹೂದಿಗಳೇ ಇರದಿದ್ದರೆ ಹಿಟ್ಲರ್ ತನ್ನ ಕ್ರೈಸ್ತ ಜನತೆಯ ಬೆಂಬಲ ಗಳಿಸಲು ಯಾರನ್ನು ಗ್ಯಾಸ್ ಚೇಂಬರಿಗೆ ಹಾಕಿ ಕೊಲ್ಲುತ್ತಿದ್ದ? ಅದರಂತೆಯೇ ಈಗ ಭಾರತದಲ್ಲಿ ನಮ್ಮ ಸಂಘ ಪರಿವಾರವು ಮುಸ್ಲಿಮರ ಮತ್ತು ಕ್ರೈಸ್ತರ ವಿರುದ್ಧ ಸಾಮಾನ್ಯ ಹಿಂದೂಗಳಿಗಿರುವ ಕೆಲವು ಪೂರ್ವಾಗ್ರಹ ಹಾಗೂ ಮತ್ಸರವನ್ನೇ ಬಂಡವಾಳ ಮಾಡಿಕೊಂಡು ಹಿಂದೂಗಳ ವಿಶ್ವಾಸ ಗೆದ್ದುಕೊಳ್ಳಲು ಪ್ರಯತ್ನಿಸಿ ಹಿಟ್ಲರನ 'ಪ್ರೀತಿಯಿಂದ ಗೆಲ್ಲಲಾಗದಿದ್ದರೆ ದ್ವೇಷದಿಂದ ಗೆಲ್ಲು' ಎಂಬ ಮನೋವೈಜ್ಞಾನಿಕ ಮಾರ್ಗವನ್ನೆ ಆಯ್ದುಕೊಂಡಿದೆ. ಒಂದು ವೇಳೆ ನಮ್ಮ ದ್ವೇಷ ಸಾಧಿಸಲು ಮುಸ್ಲಿಮರು ಇಲ್ಲದೇ ಇದ್ದರೆ ಭಾರತದಲ್ಲಿ ಅಧಿಕಾರಕ್ಕೆ ಬರುವ ಅವಕಾಶ ಹಿಂದೂತ್ವವಾದಿಗಳಿಗೆ ಎಂದೂ ಸಿಗುತ್ತಲೇ ಇರಲಿಲ್ಲ ಹಾಗೂ ಬಜರಂಗದಳ ರಾಮಸೇನೆಯಂತಹ ಅರೆಸಾಕ್ಷರ ಶೂದ್ರರ ಗುಂಪು ಕಟ್ಟಿ ನಮ್ಮ ಕೆಲಸ ಸಾಧಿಸುವುದು ನಮ್ಮವರಿಂದ ಸಾಧ್ಯವೂ ಆಗುತ್ತಿರಲಿಲ್ಲ. ಮುಸ್ಲಿಮರು ಇರದಿದ್ದರೆ ರಾಮಜನ್ಮಭೂಮಿ ವಿವಾದವೂ ಇರುತ್ತಿರಲಿಲ್ಲ, ರಥಯಾತ್ರೆ ಕರಸೇವಾ ಸಹ ಇರುತ್ತಿರಲಿಲ್ಲ, ಗೋಹತ್ಯಾ ಗಲಾಟೆಯೂ ಇರುತ್ತಿರಲಿಲ್ಲ ಹಾಗೂ ಇವೆಲ್ಲಾ ಇರದಿದ್ದರೆ ಹಿಂದೂತ್ವದ ಹೆಸರಲ್ಲಿ ಹಿಂದೂ ಶೂದ್ರರನ್ನು ಪ್ರಚೋದಿಸಿ ವೋಟು ಬಾಚುವುದು ನಮಗೆ ಸಾಧ್ಯವೂ ಆಗುತ್ತಿರಲಿಲ್ಲ. ಹಾಗೆಯೇ ಹಿಂದೂತ್ವದ ಹೆಸರಲ್ಲಿ ನಮ್ಮ ಆರ್‌ಎಸ್‌ಎಸ್‌ನವರು ದೇಶದ ಅಧಿಕಾರ ಕೈವಶ ಮಾಡಿಕೊಳ್ಳುವ ಅವಕಾಶ ಈ ಕಲಿಯುಗದಲ್ಲಿಯೇ ಬರುತ್ತಿರಲಿಲ್ಲ. ಹಾಗಾಗಿ ನಮಗೆ ಭಾರತದಲ್ಲಿ ಮುಸ್ಲಿಮರು ಬೇಕೇ ಬೇಕು."

"ಹೌದು ಮುಸ್ಲಿಮರು ಇಲ್ಲದಿದ್ದರೆ ನಮ್ಮ ಅಡಿಕೆ ಕೊಯ್ಯಲೂ ಕಾರ್ಮಿಕರಿಲ್ಲ, ಬಾವಿ ತೋಡಲು ಯಾರೂ ಇಲ್ಲ, ಪಂಪ್ ರಿಪೇರಿ ಮಾಡಲು ಜನ ಇಲ್ಲ, ಕೊನೆಗೆ ಸೈಕಲ್ ರಿಪೇರಿ ಮಾಡಲು ಅಥವಾ ರದ್ದಿ ಹಳೆ ಸಾಮಾನು ಕೊಳ್ಳಲೂ ಯಾರೂ ಸಿಗುತ್ತಿರಲಿಲ್ಲ. ಅವನ್ನೆಲ್ಲಾ ನಾವೇ ಮಾಡಿಕೊಳ್ಳಬೇಕಾಗುತ್ತಿತ್ತು. ಮುಸ್ಲಿಮರಿರುವುದರಿಂದ ಹಳ್ಳಿಗಳಲ್ಲಿ ನಮ್ಮ ಅನೇಕ ಕೆಲಸಗಳು ಸುಲಭವಾಗಿ ಆಗುತ್ತಿವೆ. ನಮ್ಮ ಸೋಮಾರಿ ಹಿಂದೂ ಶೂದ್ರ ಯುವಕರಿಗೆ ಶ್ರಮ ಬೇಡುವ ಈ ಎಲ್ಲಾ ಕೆಲಸ ಮಾಡಲು ಶಕ್ತಿಯೇ ಇಲ್ಲ, ಕೇವಲ ಬೈಕಿನಲ್ಲಿ ತಿರುಗಾಡಿ ಪಾಲಕರ ಹಣ ಉಡಾಯಿಸುವುದು ಮಾತ್ರ ಶೂದ್ರ ಯುವಕರಿಗೆ ಗೊತ್ತು" ಎಂದು ದನಿಗೂಡಿಸಿದನು ಮೊದಲನೆಯ ವ್ಯಕ್ತಿ.

ಆಗ ಆ ಹಿರಿಯ ವ್ಯಕ್ತಿ "ನಾವು ಮುಸ್ಲಿಮರನ್ನು ವಿದೇಶಿ ಅರಬೀ ಮೂಲದವರೆಂದು ದ್ವೇಷಿಸುತ್ತೇವೆ ನಿಜ. ಆದರೆ ನಮ್ಮ ಕರಾವಳಿಯ ಹಿಂದೂ ಶೂದ್ರರಲ್ಲೂ ಅದೇ ಅರಬಿ ರಕ್ತವಿದೆ ಗೊತ್ತೇ" ಎಂದನು. "ಹಿಂದಿನ ಕಾಲದಲ್ಲಿ ತುಳುವ ಶೂದ್ರರಲ್ಲಿ ಮತ್ತು ಕೇರಳದಲ್ಲಿ ಮಾತೃಪ್ರಧಾನ ಕುಟುಂಬಗಳಿದ್ದಾಗ ಮಹಿಳೆಯರು ತಮಗೆ ಬೇಕಾದ ಗಂಡಸಿನಿಂದ ಮಗು ಪಡೆಯಬಹುದಾಗಿತ್ತು, ಇದು ಬಂಟ, ಬಿಲ್ಲವ, ಮೊಗವೀರ, ಕೊಟ್ಟಾರಿ, ಕುಲಾಲ ಸಹಿತ ಎಲ್ಲಾ ತುಳುವ ಶೂದ್ರರಲ್ಲೂ ಸಮಾಜವೇ ಅನುಮೋದಿಸಿದ್ದ ಪದ್ಧತಿಯಾಗಿತ್ತು. ಇದರಲ್ಲಿ ಶೀಲ-ಅಶ್ಲೀಲದ ಪ್ರಶ್ನೆಯೇ ಆಗ ಉದ್ಭವಿಸುತ್ತಿರಲಿಲ್ಲ, ಯಾಕೆಂದರೆ ಎಲ್ಲಾ ಶೂದ್ರ ಕುಟುಂಬಗಳು ಇದೇ ಪದ್ಧತಿ ಅನುಸರಿಸುತ್ತಿದ್ದವು. ಬಂಟರನ್ನು ಹೊರತುಪಡಿಸಿ ಬೇರೆ ಜಾತಿಯ ಶೂದ್ರರೆಲ್ಲಾ ತಮ್ಮತಮ್ಮ ಜಾತಿಯೊಳಗೆಯೇ ಇಷ್ಟವಾದ ಗಂಡಸಿನಿಂದ ಮಗು ಪಡೆಯಬಹುದಾಗಿತ್ತು. ಆದರೆ ಬಂಟರು ಮಾತ್ರ ವಿದೇಶದೊಂದಿಗೆ ಹಾಗೂ ಉತ್ತರ ಭಾರತದೊಂದಿಗೆ ಕರಿಮೆಣಸು, ಮಸಾಲೆ ಸಾಮಾನು, ಅಕ್ಕಿ ಮತ್ತು ತಾಳೆ ಬೆಲ್ಲದ ವ್ಯಾಪಾರ ಮಾಡುತ್ತಿದ್ದುದರಿಂದ ಇಲ್ಲಿಗೆ ವ್ಯಾಪಾರಕ್ಕೆಂದು ನಾಲ್ಕಾರು ತಿಂಗಳ ಮಟ್ಟಿಗೆ ಬರುತ್ತಿದ್ದ ಅರಬಿ ವ್ಯಾಪಾರಿ ಅಥವಾ ಉತ್ತರ ಭಾರತೀಯ ವ್ಯಾಪಾರಿಗೆ ತಮ್ಮ ಗುತ್ತಿನ ಮನೆಯಲ್ಲಿಯೇ ವಾಸದ ವ್ಯವಸ್ಥೆ ಮಾಡಿ ಅವನೊಂದಿಗೆ ಬಂಟ ಹೆಂಗಸರು ಹಂಗಾಮಿ ಸಂಸಾರ ನಡೆಸಿ ಅವನಿಂದ ಮಗು ಪಡೆಯಬಹುದಾಗಿತ್ತು. ಬಂಟರಲ್ಲಿಯ ಈ ಅರಬಿ ಜೀನ್ಸ್‌ನಿಂದಾಗಿಯೇ ಈಗ ಬಂಟ ಹುಡುಗ ಹುಡುಗಿಯರು ದಕ್ಷಿಣ ಭಾರತದಲ್ಲಿ ಎಲ್ಲರಿಗಿಂತ ಹೆಚ್ಚು ರೂಪವಂತರು ಎನಿಸಿಕೊಂಡಿದ್ದಾರೆ. ಬಂಟ ಬಾಲಿವುಡ್ ನಟಿಯೊಬ್ಬಳು ಶುದ್ಧ ಯುರೋಪಿಯನ್ನಳಂತೆ ಕಾಣಲು ಇದೇ ಕಾರಣ. ಅಷ್ಟೇ ಅಲ್ಲ, ಉತ್ತರ ಭಾರತೀಯ ಕುಲನಾಮಗಳಾದ – ಪೂಂಜಾ, ಬಂಗ, ಮೇಂಡ, ಗಂಭೀರ್, ಭಂಡಾರಿ, ಕೊಟ್ಟಾರಿ, ರೈ, ಶೇಕಾ, ಮುದ್ಯ, ವಾಲ್ಯ, ಸೇನವಾ ಮುಂತಾದವುಗಳು ಬಂಟರಲ್ಲೂ ಉಪನಾಮವಾಗಿ ಬರಲು ಕಾರಣ ಇಲ್ಲಿಗೆ ವ್ಯಾಪಾರಕ್ಕೆ ಬಂದ ಉತ್ತರ ಭಾರತೀಯರೊಂದಿಗೆ ತಾತ್ಕಾಲಿಕ ಸಂಸಾರ ಮಾಡಿ ಮಕ್ಕಳನ್ನು ಪಡೆದಿದ್ದರ ಪರಿಣಾಮ. ಹೀಗೆ ಬಂಟರಲ್ಲಿ ಅರಬಿ ಮತ್ತು ಉತ್ತರ ಭಾರತೀಯ ಮಿಶ್ರ ರಕ್ತ ಇರುವುದರಿಂದಲೇ ಅವರಲ್ಲಿಯ ಆಕ್ರಮಣಾತ್ಮಕ ಮತ್ತು ಕ್ರಿಮಿನಲ್ ಗುಣ ಕಂಡು ನಮ್ಮ ಕಲ್ಲಡ್ಕ ಪ್ರಭಾಕರ ಭಟ್ಟರು ಯಾವಾಗಲೂ ಹೇಳುತ್ತಾರೆ 'ಮುಸ್ಲಿಮರನ್ನು ನಾಲ್ಕು ಹೆಜ್ಜೆಗಾದರೂ ನಂಬಬಹುದು ಆದರೆ ಈ ಬಂಟ ಶೆಟ್ಟಿಗಳನ್ನು ಒಂದು ಹೆಜ್ಜೆಗೂ ನಂಬಲಾಗದು' ಎಂದು."

ಹೀಗೆ ಆ ಹಿರಿಯ ವ್ಯಕ್ತಿ ಹೇಳಿ ಮುಗಿಸುವಾಗ ಅವರ ಉಡುಪಿ ಬಸ್ಸು ಬಂದದ್ದರಿಂದ ಆ ಮೂವರೂ ಹೊರಟುಹೋದರು.

ಅವರು ಹೋದಮೇಲೆ ನಾನು ಆಲೋಚನೆ ಮಾಡಿದಾಗ ನನಗೆ ಅನಿಸಿದ್ದು: ಸಂಘ ಪರಿವಾರದವರು ಮಾತುಮಾತಿಗೆ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಹೋಗಿ ಅನ್ನುವುದೆಲ್ಲಾ ಬರೀ ನಾಟಕ ಅಷ್ಟೇ. ನಿಜವಾಗಿ ಅವರಿಗೆ ಮುಸ್ಲಿಮರು ಮತ್ತು ಕ್ರೈಸ್ತರು ಇಲ್ಲಿಯೇ ಇರುವುದು ಬೇಕು. ಯಾಕೆಂದರೆ ಅವರ ಬಗ್ಗೆ ಸಮಸ್ತ ಹಿಂದೂ ಸಮಾಜದಲ್ಲಿ ದ್ವೇಷ ಹುಟ್ಟಿಸಿ ಆ ದ್ವೇಷವನ್ನು ಬಂಡವಾಳ ಮಾಡಿ ಹಿಂದೂ ಸಮಾಜವನ್ನು ತಮ್ಮ ಮುಷ್ಟಿಯಲ್ಲಿ ಇಟ್ಟುಕೊಳ್ಳಬಹುದು ಎಂಬುದು ಅವರ ಲೆಕ್ಕಾಚಾರ. ಒಂದು ವೇಳೆ ಇಲ್ಲಿ ಮುಸ್ಲಿಂ-ಕ್ರೈಸ್ತರು ಇಲ್ಲದೇ ಇದ್ದರೆ ಅದು ಸಾಧ್ಯವಾಗುತ್ತಿರಲಿಲ್ಲ ತಾನೇ.

ಕರಾವಳಿಯ ಬಂಟರು ಮಿಶ್ರ ಜನಾಂಗ ಎಂದು ಅವರು ಹೇಳಿದ್ದರಲ್ಲಿ ಸತ್ಯಾಂಶವಿದ್ದುದರಿಂದ ನನ್ನ ರಕ್ತ



ಕುದಿಯಲಿಲ್ಲ ನಿಜ. ಆದರೆ ಕರಾವಳಿಯ ಬ್ರಾಹ್ಮಣ[...] ಈ ಮಿಶ್ರ ರಕ್ತವಿದ್ದುದನ್ನು ಅವರು ಮರೆತಿದ್ದಾರೆ. ಬ್ರಾ[...] ಕರಾವಳಿಗೆ ಕದಂಬರ ಕಾಲದಲ್ಲಿ ಉತ್ತರ ಭಾರತ[...] ವಲಸೆ ಬಂದಾಗ ಕೇವಲ ಗಂಡಸರೇ ಬಂದಿದ್ದು [...] ಇಲ್ಲಿಯ ಶೂದ್ರ ಹೆಣ್ಣುಗಳನ್ನು ಮದುವೆಯಾಗಿ ಹು[...] ಮಕ್ಕಳಿಂದಲೇ ಮುಂದಿನ ತಲೆಮಾರಿನ ತುಳು ಬ್ರಾ[...] ಹುಟ್ಟಿದ್ದು ತಾನೇ. ಈ ವಿಷಯ ನಾವು ಯಾರಾ[...] ಬ್ರಾಹ್ಮಣರಿಗೆ ಹೇಳಿದರೆ "ಅದು ನಿಜ. ಆದರೆ[...] ಮಹಿಳೆಯರೆಲ್ಲಾ ಒಬ್ಬನೇ ಬ್ರಾಹ್ಮಣ ಗಂಡನಿಂದ [...] ಮಕ್ಕಳಾಗಿರುವುದರಿಂದ ಹಾಗೂ ಅಂತಹ ಶೂದ್ರ ಮ[...] ಹುಟ್ಟಿದ ಮಕ್ಕಳಲ್ಲಿ ಮೊದಲ ಏಳು ಮಕ್ಕಳನ್ನು ಶೂದ[...] ಮರಳಿ ಕೊಟ್ಟು ಕೇವಲ ಕೃಷ್ಣನಂತೆ ಎಂಟನೇ ಗರ್ಭ[...] ಹುಟ್ಟಿದವರನ್ನು ಮಾತ್ರ ನಾವೇ ಇಟ್ಟುಕೊಂಡಿದ್ದರಿಂ[...] ಮಗು ಮಾತ್ರ ಶುದ್ಧ ಬ್ರಾಹ್ಮಣ ಎಂದು ಪರಿ[...] ಶುದ್ಧ ರಕ್ತ ಉಳಿಸಿಕೊಂಡಿರುವುದರಿಂದ ನಾವು [...] ಜನಾಂಗವಲ್ಲ" ಎಂದು ವೈದಿಕರು ವಾದಿಸು[...] ಎಂಟನೆಯ ಮಗು ಅಥವಾ ನಂತರದ ಮಗು ಕೆ[...] ತಂದೆಯ ಅನುವಂಶಿಕತೆ (ಜೀನ್ಸ್) ಮಾತ್ರ ಹೊಂದಿರು[...] ಎಂದು ವೈಜ್ಞಾನಿಕವಾಗಿ ಯುರೋಪಿನಲ್ಲೂ ಸಾಬೀತಾ[...] ಎಂಬ ಕುತರ್ಕ ವೈದಿಕರು ಮಂಡಿಸುತ್ತಾರೆ. ಹೀಗೆ ಎಂ[...] ಗರ್ಭದಿಂದ ಹುಟ್ಟಿದ ತಮ್ಮ ಮೂಲ ಪುರುಷರು ದೈವ[...] ಸಂಭೂತರು ಎಂದು ವಾದಿಸಿ ತಾವು ಮಿಶ್ರ ಜನ[...] ಅಲ್ಲ ತಮ್ಮದು ಶುದ್ಧ ಆರ್ಯ ರಕ್ತ ಎಂಬ ಅವೈಜ್ಞಾ[...] ತರ್ಕ ವೈದಿಕರು ಮುಂದಿಡುತ್ತಾರೆ. ಈ ರೀತಿ ಭಾರತ[...] ಒಬ್ಬ ಯಾದವ ಕೃಷ್ಣ ಮಾತ್ರ ಅಲ್ಲ ಅನೇಕ ಬ್ರಾ[...] ಕೃಷ್ಣರೂ ಹುಟ್ಟಿದ್ದು ಅದರಲ್ಲಿ ಒಬ್ಬ ಬ್ರಾಹ್ಮಣ [...] ತುಳುನಾಡಿನ ಮೂಡಬಿದ್ರಿಯ ಹತ್ತಿರದ ಪುತ್ತಿಗೆ [...] ಗ್ರಾಮದಲ್ಲಿ ಹುಟ್ಟಿದ್ದನು ಎಂಬ ವಾದವನ್ನು ಇ[...] ಎಲ್ಲಾ ಬ್ರಾಹ್ಮಣರು ಮುಂದಿಡುತ್ತಾರೆ.

ಮೂಲತಃ ಆರ್ಯರು ಬರುವುದಕ್ಕೆ ಮುಂಚೆ ಇ[...] ಸಮಾಜ ಮಹಿಳೆಯರಿಗೆ ಮುಕ್ತ ಸಮಾಜವಾಗಿತ್ತು. ಕೇ[...] ನಮ್ಮ ಕರಾವಳಿ ಮಾತ್ರವಲ್ಲ ಭಾರತದ ಅನೇಕ ಪ್ರದೇಶ[...] ಇಂತಹದ್ದೇ ಮಾತೃ ಪ್ರಧಾನ ಬುಡಕಟ್ಟು ಜನಾಂಗ[...] ಹೀಗೆ ಹಲವು ಗಂಡಂದಿರನ್ನು ಹೊಂದುವ ಅ[...] ಮಹಿಳೆಯರಿಗಿತ್ತು. ಆರ್ಯರೇ ಬರೆದಿರುವ ಮಹಾಭಾ[...] ಕಥೆಯಲ್ಲೂ ಕುಂತಿ ಆರು ಜನ ಬೇರೆ ಬೇರೆ ಗಂಡಸರಿ[...] ಆರು ಮಕ್ಕಳನ್ನು ಪಡೆದಿದ್ದು (ಕರ್ಣ ಸಹಿತ) ಹಾ[...] ದ್ರೌಪದಿ ಐದು ಜನ-ಗಂಡಂದಿರನ್ನು ಹೊಂದಿ ಅವರ[...] ಐದು ಜನ ಮಕ್ಕಳನ್ನು (ಉಪ ಪಾಂಡವರನ್ನು) ಪಡೆದಿರು[...] ನಮ್ಮ ದೇಶದೆಲ್ಲೆಡೆಯೂ ಮಾತೃಪ್ರಧಾನ ಕುಟುಂಬಗಳಿ[...] ಹಾಗೂ ಕೌರವ ಪಾಂಡವರು ಮೂಲತಃ ಆರ್ಯರಾಗಿ[...] ದ್ರಾವಿಡ ಬುಡಕಟ್ಟು ಜನಾಂಗದವರಾಗಿದ್ದರು ಎಂಬು[...] ಸಾಕ್ಷಿ. ಗಂಡಸರಿಗೆ ಶುದ್ಧ ಶೀಲದ ಅಗತ್ಯವಿಲ್ಲ, ಅ[...] ಬೇಕಾದಷ್ಟು ಹೆಣ್ಣನ್ನು ಭೋಗಿಸಬಹುದು, ಆದರೆ ಕೇ[...] ಮಹಿಳೆಯರಿಗೆ ಮಾತ್ರ ಶೀಲವಿದ್ದು ಅವರು ಮ[...] ಪತಿವ್ರತೆಯರಾಗಿರಬೇಕು ಎಂಬ ಪರಿಕಲ್ಪನೆ ಮೂಡಿ[...] ನಂತರದ ಕಾಲದಲ್ಲಿ ಇರಬೇಕು. ಈಗಿನ ಕಾ[...] ತಲೆಮಾರಿನವರಿಗೆ ಇವೆಲ್ಲಾ ವಿಚಿತ್ರ ಅಥವಾ ಅಪವಿತ್ರ[...] ಕಾಣಬಹುದು. ಆದರೆ ಮೂಲ ಭಾರತದ ಮಾತೃ ಪ್ರಧಾ[...] ವ್ಯವಸ್ಥೆಯಲ್ಲಿ ಇವೆಲ್ಲಾ ಸಾಮಾನ್ಯವಾಗಿತ್ತು. ಗ್ರೀಸ್ ಹಾ[...] ಈಜಿಪ್ಟಿನಲ್ಲಿ ನಾಡಿನ ರಾಜ ಸತ್ತರೆ ಸಿಂಹಾಸನ ಏರುವ[...] ರಾಜನ ಹಿರಿಮಗ ಪಟ್ಟದ ರಾಣಿಯನ್ನೇ ಅಂದರೆ [...] ಸ್ವಂತ ತಾಯಿ ಅಥವಾ ಚಿಕ್ಕಮ್ಮನನ್ನು ಮದುವೆಯಾಗುವ[...] ಆ ದೇಶಗಳ ಸಾಮಾಜಿಕ ಪದ್ಧತಿಯಾಗಿತ್ತು ಅಥವಾ ರ[...] ಕುಟುಂಬದ ಶುದ್ಧ ರಕ್ತ (ಬ್ಲೂ ಬ್ಲಡ್) ಉಳಿಸಿಕೊಳ್ಳ[...] ಆ ಯವನ ದೇಶಗಳಲ್ಲಿ ಸ್ವಂತ ತಂಗಿ ಅಥವಾ ಅಕ್ಕನ[...] ರಾಜ ಮದುವೆಯಾಗುವ ಪದ್ಧತಿ ಇತ್ತು.

ಇದನ್ನೆಲ್ಲಾ ಕೇಳುವಾಗ ಈಗಿನ ತಲೆಮಾರಿಗೆ ಶಾ[...] ಆಗುತ್ತದೆ ನಿಜ, ಆದರೆ ಹಿಂದಿನ ಕಾಲದಲ್ಲಿ ಜಗತ್ತಿನಾದ[...] ಸಮಾಜದ ಕಟ್ಟಲೆಗಳು ಬೇರೆಯಾಗಿದ್ದು ಅ[...] ಮಹಿಳೆಯರಿಗೆ ಅಪಾರ ಸ್ವಾತಂತ್ರ್ಯವಿದ್ದು ಅದನ್ನು ಅಲ್ಲಿ[...] ಸಮಾಜ ಶ್ರದ್ಧೆಯಿಂದ ಗೌರವಿಸುತ್ತಿತ್ತು.

ಇದೆಲ್ಲಾ ಯಾಕೆ ಬರೆಯಬೇಕಾಯಿತೆಂದರೆ ಹಿಂದೂ [...] ಲ್ಯಾಬ್ ಆದ ಕರಾವಳಿಯ ಶೂದ್ರ ಸಂಸ್ಕೃತಿ ಮತ್ತು ಶೂ[...] ಹಿರಿಯರ ಬಗ್ಗೆ, ವಿಶೇಷತ ಬಂಟರ ಬಗ್ಗೆ ಅಲ್ಲಿ[...] ವೈದಿಕರು ಎಷ್ಟೊಂದು ಕೀಳುಭಾವನೆ ಹೊಂದಿದ[...] ಎಂಬುದನ್ನು ನಿರೂಪಿಸುವುದಾಗಿತ್ತು. ಜತೆಗೆ [...] ಶೂದ್ರರನ್ನೆಲ್ಲಾ ತಮ್ಮ ಕೈಗೊಂಬೆ ಮಾಡಿಕೊಂಡು ತ[...] ಸ್ವಾರ್ಥ ಸಾಧನೆಗಾಗಿ ಮುಸ್ಲಿಮರ ಮತ್ತು ಕ್ರೈಸ್ತರ ವಿರು[...] ಹೇಗೆ ಆಯುಧವಾಗಿ ಬಳಸುತ್ತಿದ್ದಾರೆ ಎಂಬುದೆಲ್ಲಾ ಅ[...] ಬಾಯಿಂದಲೇ ಕೇಳಿದ್ದನ್ನು ಜನರಿಗೆ ತಿಳಿಸಿ ಅವರ ಕ[...] ತೆರೆಸಬೇಕು ಎಂಬುದಷ್ಟೇ ನನ್ನ ಈ ಲೇಖನದ ಉದ್ದೇ[...]

- ಜೆ. ರವಿಕಿರಣ ರೈ, ಮೈಸೂ[...]

ಚುನಾವಣಾ 'ಜುಮ್ಲಾ'ಗಳೂ ತಿರುಗುಮುರುಗುಗಳೂ

ನರೇಂದ್ರ ಮೋದಿಯ ಚುನಾವಣಾಪೂರ್ವದ ...ಷಣೆ, ಭರವಸೆಗಳೆಲ್ಲವೂ ಬರೀ 'ಜುಮ್ಲಾ' ಎಂಬುದನ್ನು ...ೀದಿ ಸರ್ಕಾರದ ನಡೆಗಳೆ ಬಹಳ ಸ್ಪಷ್ಟವಾಗಿ ...ೀತುಪಡಿಸುತ್ತಿವೆ. ಮೋದಿಯ ಅಂದಿನ ಮಾತು ಮತ್ತು ...ದಿನ ನಡೆಗಳ ನಡುವಿನ ವೈರುಧ್ಯಗಳನ್ನು ತೋರಿಸುವ ...ವೊಂದು ನಿದರ್ಶನಗಳು ಇಲ್ಲಿವೆ:

1. ವಿದೇಶಿ ನೇರ ಹೂಡಿಕೆ

ಅಂದು: ನರೇಂದ್ರ ಮೋದಿ ಗುಜರಾತಿನ ...ಖ್ಯಮಂತ್ರಿಯಾಗಿದ್ದ ಕಾಲವನ್ನು ಕೊಂಚ ಜ್ಞಾಪಿಸಿಕೊಳ್ಳಿ. ...ದು ಆತ ಸಣ್ಣದು, ದೊಡ್ಡದು, ಸತ್ಯ ಅಸತ್ಯ ಯಾವುದನ್ನೂ ...ಡದೆ ಸಿಕ್ಕಸಿಕ್ಕ ವಿಷಯಗಳಲ್ಲಿ ಯುಪಿಎ ಸರಕಾರವನ್ನು ...ಂತ ಕಟುವಾಗಿ ಟೀಕಿಸುತ್ತಿದ್ದ. ಅದೂ ಜನ ನಂಬುವ ...ಯಲ್ಲಿ. ಪ್ರಧಾನಿ ಮನಮೋಹನ ಸಿಂಗ್‌ರನ್ನಂತೂ ...ಾ ಅಸಭ್ಯ ಭಾಷೆಯಲ್ಲಿ ಜರಿಯುತ್ತಾ ಇದ್ದುದನ್ನು ...ರಿಗೆ ತಾನೆ ಮರೆಯಲು ಸಾಧ್ಯ? ಹೀಗೆ ಒಮ್ಮೆ ...ಪಿಎ ಸರಕಾರದ ವಿದೇಶಿ ನೇರ ಹೂಡಿಕೆ ನೀತಿಯನ್ನು ...ವಾಗಿ ಖಂಡಿಸುತ್ತಾ "ನೀವು ಚಿಲ್ಲರೆ ವ್ಯಾಪಾರದಲ್ಲಿ ...ೇಶಿ ನೇರ ಹೂಡಿಕೆಗೆ ಅನುಮತಿ ನೀಡುವ ಮೂಲಕ ...ೇಶಿ ವ್ಯಾಪಾರಿಗಳಿಗೆ ಭಾರತದೊಳಗೆ ಪ್ರವೇಶಿಸಲು ...ವು ಮಾಡಿಕೊಡುತ್ತಿರುವಿರಿ. ಈ ನಿರ್ಧಾರದಿಂದಾಗಿ ...ಲಿಯ ಎಷ್ಟು ಮಂದಿ ವ್ಯಾಪಾರಿಗಳಿಗೆ ಪ್ರಯೋಜನ ...ಗಲಿದೆ ಎಂದು ದೇಶ ತಿಳಿಯಬಯಸುತ್ತಿದೆ" ಎಂದು ...ಸಿದ್ದ. ಸಿಂಗ್ ತಾನು ಆರ್ಥಿಕ ಸುಧಾರಣೆಗಳನ್ನು ...ಗೊಳಿಸುವ ನಿಟ್ಟಿನಲ್ಲಿ ಹೋರಾಡುತ್ತ ಸಾಯಲಿಚ್ಛಿಸುವೆ ...ದಾಗ ಮೋದಿಯ ಚುಚ್ಚುಮಾತುಗಳು ಹೇಗಿದ್ದುವು ...ೋಡಿ: "ನಿಮ್ಮ ಮೂಳೆಗಳು ಹೋರಾಟ ಮಾಡುತ್ತ ...ಯುವಷ್ಟು ಗಟ್ಟಿ ಇಲ್ಲ..... ನೀವು ಇದನ್ನೆಲ್ಲ ...ಡುತ್ತಿರುವುದು ವಿದೇಶೀಯರಿಗಾಗಿ. ಅವರು ಇಲ್ಲಿ ...ಪಾರದಲ್ಲಿ ಮೇಲುಗೈ ಸಾಧಿಸಿ 'ಸ್ಥಳೀಯರಿಗೆ' ...ದ್ಯೋಗಾವಕಾಶಗಳು ಲಭ್ಯವಾಗದಂತೆ ಮಾಡಲಿದ್ದಾರೆ...." ...12ರ ಸೆಪ್ಟಂಬರ್ 15).

ಇಂದು: ಇದೇ ಮೋದಿ ಪ್ರಧಾನಿಯಾದ ಒಂದು ...ರ್ಷದೊಳಗಾಗಿ ಯುಪಿಎ ಸರಕಾರದ ಅದೇ ಎಫ್‌ಡಿಐ ...ೀತಿಯನ್ನು ಗಪ್‌ಚಿಪ್ ಎನ್ನದೆ ತಾನೂ ಅಳವಡಿಸಿಕೊಂಡಿರು ...ನ್ನು ಏನೆಂದು ಕರೆಯಬೇಕು? ಮೋದಿ ಅಂದು ...ಗೆ ಹಾಕಿದ ಅದೇ ಪ್ರಶ್ನೆಗಳನ್ನು ಮತದಾರರು ಇಂದು ...ೋದಿಗೆ ಹಾಕಬೇಡವೆ?

2. ಗುಜರಾತ್ ಭಯೋತ್ಪಾದನೆ ಮತ್ತು ಸಂಯೋಜಿತ ಅಪರಾಧಗಳ ನಿಯಂತ್ರಣ ಮಸೂದೆ

ಅಂದು: 2012ರ ಗಣತಂತ್ರ ದಿನಾಚರಣೆಯ ಮುನ್ನಾ ... ಮಾತನಾಡಿದ ಮೋದಿ "ಗುಜರಾತಿನ ಶಾಸನಸಭೆ ...ಜರಾತ್ ಭಯೋತ್ಪಾದನೆ ಮತ್ತು ಸಂಯೋಜಿತ ...ರಾಧಗಳ ನಿಯಂತ್ರಣ ಮಸೂದೆ'ಯನ್ನು (Gujarat ...ontrol of Terrorism and Organised ...rime Bill 'GUJCOC') ಮೂರು ಮೂರು ...ರಿ ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿದೆ. ಆದರೆ ಆ ...ಸೂದೆ ಕಳೆದ 4 ವರ್ಷಗಳಿಂದಲೂ ಅಲ್ಲೇ ಬಿದ್ದಿದೆ. ...ಗೆ ನೋಡಿದರೆ ಕಾನೂನು ಸುವ್ಯವಸ್ಥೆಯ ವಿಚಾರ ...ವಾಗಿ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟುದಾಗಿದೆ. ಆದರೂ ...ಗಾಗಿದೆ. ಮತಗಟ್ಟೆಯ ಧೂರ್ತ ರಾಜಕಾರಣದ ಆಧಾರ ... ಹಸನಾಗಿ ಬಾಳುವ ಸರಕಾರದಿಂದ ಇದಕ್ಕಿಂತ ಉತ್ತಮ ...ದುದೇನನ್ನು ನಿರೀಕ್ಷಿಸಬಹುದು? ನಮ್ಮ ದೇಶಕ್ಕೆ ಬೇಕಿರು ...ದು ಸಹಕಾರಿ ಒಕ್ಕೂಟ ವ್ಯವಸ್ಥೆ ಹೊರತು ಬಲಾತ್ಕಾರದ ...ಕ್ಕೂಟ ವ್ಯವಸ್ಥೆ ಅಲ್ಲ" ಎಂದು ಉದ್ಧುದ್ಧ ಮಾತನಾಡಿದ್ದ.

ಇಂದು: 2014ರ ಮೇಯಲ್ಲಿ ಅಧಿಕಾರಕ್ಕೆ ಬರುತ್ತಲೆ ...ಸೂದೆಗೆ ಸಂಬಂಧಿಸಿದಂತೆ ಮೋದಿ ಸರ್ಕಾರದ ...ಿಲುವುಗಳಲ್ಲಿ 180 ಡಿಗ್ರಿ ಬದಲಾವಣೆಯಾಗಿದೆ! ರಾಷ್ಟ್ರಪತಿ ...ೇರಿಯ ಕಪಾಟಿನೊಳಗಿದ್ದ ಮಸೂದೆಯನ್ನು ಸದ್ದಿಲ್ಲದೆ ...ಪಾಸ್ ಪಡೆದುಕೊಳ್ಳಲಾಗಿದೆ.

3. ಒಕ್ಕೂಟ ವ್ಯವಸ್ಥೆಯ ಪಾವಿತ್ರ್ಯ

ಅಂದು: 2012ರ ಗಣತಂತ್ರ ದಿನಾಚರಣೆಯ ಮುನ್ನಾ ... ಮೋದಿಯ ಬ್ಲಾಗ್‌ನಲ್ಲಿ ಕೇಂದ್ರ ಮತ್ತು ರಾಜ್ಯಗಳ ...ನಡುವಿನ ಸಂಬಂಧಗಳ ಬಗ್ಗೆ ಅದೆಂಥಾ ಅವಿಸ್ಮರಣೀಯ ...ಮಾತುಗಳನ್ನು ಬರೆಯಲಾಗಿತ್ತೆಂದು ನೋಡೋಣ:

"ದಿಲ್ಲಿಯಲ್ಲಿರುವ ಆಡಳಿತಗಾರರು ರಾಜ್ಯಗಳೊಂದಿಗೆ ...ಸಹಕಾರ, ಸಹಕಾರ ತೋರ್ಪಡಿಸಬೇಕಾಗಿರುವ ಕ್ಷೇತ್ರಗಳಲ್ಲಿ ...ದೇಕಪದೇ ಬಲಪ್ರದರ್ಶನ ಮಾಡಿರುವುದು ...ಸಂಬದ್ಧವಾಗಿದೆ. ಇದರಲ್ಲಿ ಅವರು ಯಾವುದೇ ...ವಿಧಾನಿಕ ಹುದ್ದೆಯನ್ನೂ ಬಿಟ್ಟಿಲ್ಲ. ರಾಜ್ಯಪಾಲರುಗಳ ...ಬಿಜೆಪಿಯೇತರ ರಾಜ್ಯಗಳನ್ನು ಗುರಿಯಾಗಿಸಿರುವ ಅನೇಕ ...ಉದಾಹರಣೆಗಳಿವೆ. ಕೇಂದ್ರ ಸರಕಾರ ರಾಜಕೀಯ ...ಪ್ರೇರಿತವಾಗಿ ಸ್ವಾಯತ್ತ ಹಲವಾರು ಸಂಸ್ಥೆಗಳನ್ನೂ ದುರುಪ ...ಯೋಗಪಡಿಸಿ, ಪ್ರತಿಪಕ್ಷಗಳ ಆಳ್ವಿಕೆಯಲ್ಲಿರುವ ರಾಜ್ಯಗಳನ್ನು



ದುರ್ಬಲಗೊಳಿಸುತ್ತಿದೆ. ನಿರ್ಣಾಯಕ ಹುದ್ದೆಗಳಿಗೆ ನೇಮಕಾತಿ ನಡೆಸುವ ಮುನ್ನ ಮುಖ್ಯಮಂತ್ರಿಗಳ ಸಲಹೆ ಪಡೆಯಲಾಗುತ್ತಿಲ್ಲ. ಬದಲು ನೆಲದ ಕಾನೂನಿನ ಆಶಯಗಳನ್ನು ಉಲ್ಲಂಘಿಸಿ ನೇಮಕಾತಿಗಳನ್ನು ಹೇರಲಾಗುತ್ತಿದೆ. ಒಕ್ಕೂಟ ವ್ಯವಸ್ಥೆಯ ಮೇಲೆ ನಾನಾ ಸ್ವರೂಪದ ವ್ಯವಸ್ಥಿತ ದಾಳಿಗಳು ನಡೆಯುತ್ತಿವೆ. ಮತ್ತೆಮತ್ತೆ ನಡೆಯುತ್ತಿರುವಂತಹ ಈ ದಾಳಿಗಳ ಬಗ್ಗೆ ಪಕ್ಷಾತೀತವಾಗಿ ಮುಖ್ಯಮಂತ್ರಿಗಳೆಲ್ಲ ಗಂಭೀರ ಆತಂಕ ವ್ಯಕ್ತಪಡಿಸುತ್ತಿರುವುದು ಯಾತಕ್ಕಾಗಿ?"


ಇಂದು: ರಾಜ್ಯಗಳಿಗೆ ಅನ್ಯಾಯ ಆಗುತ್ತಿರುವ ಬಗ್ಗೆ ಕಣ್ಣೀರಿಟ್ಟಿದ್ದ ಇದೇ ಮುಖ್ಯಮಂತ್ರಿ ಮೋದಿ ದೇಶದ ಪ್ರಧಾನಿಯಾದ ತಕ್ಷಣ ಅದೆಲ್ಲವನ್ನು ಮರೆತು ಹಿಂದಿನವರಿಗಿಂತ ಅದೆಷ್ಟೋ ಪಾಲು ಹೆಚ್ಚು ಅನ್ಯಾಯ ಮಾಡುತ್ತಿರುವುದನ್ನು ಕಂಡ ಮತದಾರರು ಸ್ಥಂಭೀಭೂತರಾಗಿದ್ದಾರೆ! ಆತ ಮುಖ್ಯಮಂತ್ರಿ ಆಗಿದ್ದಾಗ ಸಂವಿಧಾನಕ್ಕೆ ತೋರಿದ್ದ ಒಲವು, ನೈತಿಕತೆಯ ಕುರಿತ ಉಪದೇಶಗಳೆಲ್ಲವೂ ಮೇ 2014ರ ನಂತರ ಯಾವ ಗುಡ್ಡವನ್ನೇರಿವೆಯೊ ತಿಳಿಯದು. ಮೋದಿ ಸರ್ಕಾರ ಗದ್ದುಗೆಗೆ ಏರಿದ ಬೆನ್ನಿಗೆ ಮದವೇರಿದ ಮದಗಜಗಳಂತಾಡುತ್ತಿರುವ ಸಂಘಿಗಳು ಭಾರತವನ್ನು ಕಾಂಗ್ರೆಸ್‌ಮುಕ್ತ ನಾಡಾಗಿ ಪರಿವರ್ತಿಸುತ್ತೇವೆ ಎನ್ನುವ ಸಂವಿಧಾನ ವಿರೋಧಿ, ಪ್ರಜಾತಂತ್ರ ವಿರೋಧಿ ಘೋಷಣೆಯೊಂದನ್ನು ಹೊರಡಿಸಿ ದ್ದಾರೆ. ಹೀಗಾಗಿ ಇವತ್ತು ಪ್ರತಿಪಕ್ಷಗಳ ಆಳ್ವಿಕೆಯಲ್ಲಿರುವ ಎಲ್ಲಾ ರಾಜ್ಯಗಳ ಭವಿಷ್ಯ ಅತ್ಯಂತ ಡೋಲಾಯಮಾನವಾಗಿದೆ. ಅಂದು ಮನಮೋಹನ್ ಸಿಂಗ್ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದ್ದ ಮೋದಿ ಇಂದು ಒಕ್ಕೂಟ ವ್ಯವಸ್ಥೆಯನ್ನು ಯಾವ ರೀತಿಗಳಲ್ಲಿ, ಯಾವ ಮಟ್ಟದಲ್ಲಿ ಅಸ್ಥಿರಗೊಳಿಸಲು ಮುಂದಾಗಿದ್ದಾನೆಂದರೆ ಅದನ್ನು ಊಹಿಸಲೂ ಸಾಧ್ಯವಿಲ್ಲ. ರಾಜ್ಯ ಸರಕಾರಗಳನ್ನು ಉರುಳಿಸಲು ಮೋದಿ ಸರ್ಕಾರ ನಡೆಸಿರುವ/ನಡೆಸುತ್ತಿರುವ ವಿಕೃತ ಕಸರತ್ತುಗಳು ಹೇಗಿವೆಯೆಂದರೆ ಅವುಗಳನ್ನು ಸರಿಗಟ್ಟಲು ಯಾರಿಂದಲೂ ಸಾಧ್ಯವಿಲ್ಲ! ಇದರ ಮೊದಲ ಹೆಜ್ಜೆಯಾಗಿ ಯುಪಿಎ ಸರಕಾರ ನೇಮಿಸಿದ್ದ ರಾಜ್ಯಪಾಲರನ್ನೆಲ್ಲ ಒಬ್ಬೊಬ್ಬರನ್ನಾಗಿ ಕಿತ್ತೆಸೆದು ಅವರ ಜಾಗದಲ್ಲಿ ಆರೆಸ್ಸೆಸ್, ಬಿಜೆಪಿ ನಿಷ್ಠರನ್ನು ಕೂರಿಸಲಾಗಿದೆ. ಇಲ್ಲಿ ಸಾಂವಿಧಾನಿಕ ಹುದ್ದೆಗಳಲ್ಲಿರುವವನ್ನು ಅವರ ಅಧಿಕಾರದ ಪೂರ್ಣಾವಧಿ ಮುಗಿಸುವತನಕ ತೆಗೆದುಹಾಕುವಂತಿಲ್ಲ ಎನ್ನುವ ಹಲವಾರು ಕೋರ್ಟು ತೀರ್ಪುಗಳನ್ನು ಕಸಕ್ಕಿಂತಲೂ ಕೀಳಾಗಿ ಪರಿಗಣಿಸಿರುವುದನ್ನು ಗಮನಿಸಬೇಕು.

ದಿಲ್ಲಿ ಬಿಹಾರಗಳಲ್ಲಿ ಹೀನಾಯ ಚುನಾವಣಾ ಸೋಲು ಅನುಭವಿಸಿದ ನಂತರದಲ್ಲಂತೂ ಬಿಜೆಪಿ ವತಿಯಿಂದ ಹಿಂಬಾಗಿಲಿನ ರಾಜಕಾರಣ ಶುರುವಾಗಿದೆ. ಅರುಣಾಚಲ ಪ್ರದೇಶದ ಕಾಂಗ್ರೆಸ್ ಸರಕಾರವನ್ನು "ಆಪರೇಷನ್ ಕಮಲ" ಮುಖಾಂತರ ಅಸ್ಥಿರಗೊಳಿಸಿ ಉರುಳಿಸಲಾಯಿತು. ಇದೀಗ ಉತ್ತರಾಖಂಡದ ಸರದಿ. ಆಡಳಿತದಲ್ಲಿದ್ದ ಸರಕಾರವನ್ನು ವಿಶ್ವಾಸಮತ ಎದುರಿಸುವುದಕ್ಕೂ ಬಿಡದೆ ಒಂದು ದಿನ ಮೊದಲು ರಾಷ್ಟ್ರಪತಿ ಆಳ್ವಿಕೆ ಹೇರಿದವರಿಗೆ "ಬ್ಲಾಗ್ ಉಪದೇಶ"ದ ನೆನಪಾಗದಿರುವುದು ಸೋಜಿಗವಲ್ಲವೆ? ಅಷ್ಟೇ ಅಲ್ಲ, ರಾಜ್ಯದ ಬಜೆಟಿಗೆ ರಾಜ್ಯಸಭೆಯ ಅಂಗೀಕಾರ ದೊರೆಯುವುದು ಕಷ್ಟಸಾಧ್ಯವೆಂದು ಅರಿತಾಗ ಸ್ವಲ್ಪವೂ ನಾಚಿಕೆಯಿಲ್ಲದೆ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿ ಆಡಳಿತಾತ್ಮಕ ಆದೇಶದ ಮೂಲಕ ಬಜೆಟಿಗೆ ಅನುಮೋದನೆ ಪಡೆದುಕೊಳ್ಳಲಾಗಿದೆ. ರಾಜ್ಯದ ಹೈಕೋರ್ಟು ಇದೀ ಪ್ರಕರಣದ ಕುರಿತು ಆಡಿರುವ ಕಟುಮಾತುಗಳು ಇವರನ್ನು ಸ್ವಲ್ಪವೂ ವಿಚಲಿತಗೊಳಿಸಿದಂತಿಲ್ಲ, ಇದೀಗ ಹೈಕೋರ್ಟು ತೀರ್ಪಿನ ವಿರುದ್ಧ ಸುಪ್ರೀಂಕೋರ್ಟಿಗೆ ಮೇಲರ್ಜಿ ಸಲ್ಲಿಸಲಾಗಿದೆ. ಬಹುಶಃ ಮುಂದಿನ ಸರದಿ ಮಣಿಪುರ ಮತ್ತು ಹಿಮಾಚಲ ಪ್ರದೇಶಗಳದ್ದಾಗಿರಬಹುದು. ಕರ್ನಾಟಕದಲ್ಲೂ ಹಾದಿ ಸುದ್ದಿಯ ಮಾಧ್ಯಮಗಳ ಮೂಲಕ ಕ್ಷುಲ್ಲಕ ವಿಚಾರಗಳನ್ನು ಅತಿಯಾಗಿ ಹಿಗ್ಗಿಸುತ್ತ ರಾಜ್ಯ ಸರಕಾರದ ವಿರುದ್ಧ ನಡೆಸಲಾಗುತ್ತಿರುವ ಆಂದೋಳನದ ಹಿಂದೆ ಸಂಘ ಪರಿವಾರದ ಕೈವಾಡವನ್ನು ಗುರುತಿಸಬಹುದು. "ಭಾರತ್ ಮಾತಾ ಕಿ ಜೈ" ಎಂದು ಘೋಷಣೆ ಕೂಗುವುದೇ ದೇಶಭಕ್ತಿ ಎನ್ನುವವರು ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಯೋಜನೆಗಳಿಗೆ ಎಷ್ಟೊಂದು ಕಪ್ಪುಹಣ ಸುರಿಯುತ್ತಿದ್ದಾರೆ ಎಂಬುದನ್ನು ಸ್ಥೂಲವಾಗಿ ಅಂದಾಜಿಸಲು ಹೆಚ್ಚು ಕಷ್ಟಪಡಬೇಕಿಲ್ಲ. ಅಹಮದಾಬಾದ್ ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಅಡ್ಡಮತದಾನದ ಬೆಲೆ ಎಷ್ಟಿತ್ತೆಂದು ನೋಡಿದರೆ ಸಾಕು. ವರದಿಗಳ ಪ್ರಕಾರ ಸ್ವಪಕ್ಷಕ್ಕೆ ವಿರುದ್ಧವಾಗಿ ಚಲಾಯಿಸಿದ ಒಂದೊಂದು ಮತಕ್ಕೂ ಎರಡು ಕೋಟಿಯಷ್ಟು ಸುರಿಯಲಾಗಿದೆಯಂತೆ!

4. ಕೃಷಿ ಉತ್ಪನ್ನಗಳ ಖರೀದಿ ಬೆಲೆ

ಅಂದು: ಚುನಾವಣಾ ಪ್ರಚಾರದ ಕಾಲದಲ್ಲಿ ರೈತ ರ‍್ಯಾಲಿಗಳಲ್ಲಿ ರಂಗುರಂಗಿನ ಭರವಸೆಗಳನ್ನು ಕೊಟ್ಟಿದ್ದ ಮೋದಿ ಬಿಜೆಪಿಯನ್ನು ಗೆಲ್ಲಿಸಿದರೆ ಕೃಷಿ ಉತ್ಪನ್ನಗಳ ಖರೀದಿ ಬೆಲೆಯನ್ನು ಸ್ವಾಮಿನಾಥನ್ ಸಮಿತಿಯ ವರದಿಗೆ ಅನುಸಾರವಾಗಿ (ರೈತರಿಗೆ ಶೇಕಡಾ 50ರಷ್ಟು ಲಾಭ ಸಿಗುವ ಹಾಗೆ) ನಿಗದಿಪಡಿಸಲಾಗುವುದೆಂದು ವಾಗ್ದಾನ ಮಾಡಿದ್ದ.

ಇಂದು: 2032ರ ತನಕ ಶೇಕಡಾ 10ರಷ್ಟು ವಾರ್ಷಿಕ ಅಭಿವೃದ್ಧಿ ಸಾಧಿಸಿ ಸಂಪೂರ್ಣ ದಾರಿದ್ರ್ಯ ನಿರ್ಮೂಲನೆ ಮತ್ತು ಮಿಲಿಯಾಂತರ ಉದ್ಯೋಗಗಳ ಸೃಷ್ಟಿಯ ನಿಟ್ಟಿನಲ್ಲಿ ಪ್ರತಿಯೊಂದು ಸಚಿವಖಾತೆ ಏನೆಲ್ಲಾ ಸುಧಾರಣೆಗಳನ್ನು ಮಾಡಬೇಕೆಂಬ ಎಂಟಂಶಗಳ ಸೂತ್ರದ "ಭಾರತದ ಪರಿವರ್ತನೆ" ಯೋಜನೆಯೊಂದು ಮೋದಿ ಸರ್ಕಾರದಿಂದ ಹೊರಬಿದ್ದಿದೆ. ಈ ಎಂಟಂಶಗಳಲ್ಲಿ ಒಂದು ರೈತರಿಗೆ ಸಂಬಂಧಪಟ್ಟುದಾಗಿದ್ದು ಅದರ ಪ್ರಕಾರ ಭಾರತದ ಕೃಷಿ ಉತ್ಪನ್ನ ಖರೀದಿ ನೀತಿ ಮಾರ್ಚ್ 2018ರೊಳಗಾಗಿ ವಿಶ್ವ ವಾಣಿಜ್ಯ ಮಂಡಳಿಯ ನಿಯಮಗಳಿಗೆ ಅನುಸಾರವಾಗಿರ ಬೇಕಂತೆ! ಇದರರ್ಥ ಮೋದಿ ಅಂದು ರೈತರಿಗೆ ಕೊಟ್ಟಿದ್ದ ಭರವಸೆಗಳೆಲ್ಲವೂ ಬರೀ ಸುಳ್ಳಿನ ಕಂತೆ ಎಂದಾಯಿತು. ಆದರೆ ವಾಸ್ತವವಾಗಿ ಮುಗ್ಧ ರೈತರಿಗೇನು ಗೊತ್ತು, ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮೋದಿಯ ನೀತಿ ಯಾವತ್ತೂ ಕಾರ್ಪೊರೇಟ್ ಧಣಿಗಳನ್ನು ಸಂಪ್ರೀತಗೊಳಿಸುವುದರ ಸುತ್ತ ಗಿರಕಿ ಹೊಡೆಯುತ್ತಿರುತ್ತದೆ ಎಂದು. ಆದುದರಿಂದಲೆ ಆತ ಅಧಿಕಾರಕ್ಕೆ ಬಂದ ಮರುಕ್ಷಣ ಕುಖ್ಯಾತ ರೈತವಿರೋಧಿ ಭೂಸ್ವಾಧೀನ ಕಾಯ್ದೆಯನ್ನು ತರಲು ಯತ್ನಿಸಿದ. ಆದರೆ ಇದಕ್ಕೆ ರಾಷ್ಟ್ರಮಟ್ಟದಲ್ಲಿ ಭಾರಿ ಅನಿರೀಕ್ಷಿತ ಪ್ರತಿರೋಧ ಎದುರಾದ ಬಳಿಕ ಅದನ್ನು ಹಿಂತೆಗೆದುಕೊಳ್ಳಬೇಕಾಯಿತು. ಇಷ್ಟಾದರೂ ಪಟ್ಟುಬಿಡದ ತ್ರಿವಿಕ್ರಮನಂತೆ ಮತ್ತೆ ಅದೇ ಬೇತಾಳವನ್ನು ಹೊರಲು ಸಿದ್ಧವಾಗಿದೆ ಮೋದಿ ಸರ್ಕಾರ. ಮೋದಿ ಸರ್ಕಾರದ ಮೇಲೆ ಕಾರ್ಪೊರೇಟುಗಳ ಒತ್ತಡ ಎಷ್ಟಿದೆಯೆಂದು ಇದರಿಂದಲೆ ಊಹಿಸಬಹುದು. ಈಗ ಮುನ್ನೆಲೆಯಲ್ಲಿ ಭಾಷಣ, ಘೋಷಣೆ, ಮನ್ ಕಿ ಬಾತ್ ಮೊದಲಾದ ವೇದಿಕೆಗಳ ಮೂಲಕ ರೈತರ ಓಲೈಕೆಗೆ ಯತ್ನಿಸುತ್ತಾ ಹಿನ್ನೆಲೆಯಲ್ಲಿ ರೈತ ವಿರೋಧಿ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ. ಇದಕ್ಕೆ ಸಾಕ್ಷಿಯಾಗಿ ನಮ್ಮ ಮುಂದಿದೆ ಉದ್ದೇಶಿತ ನೂತನ "ಕೃಷಿ ಭೂಮಿ ಗೇಣಿ ಕಾಯ್ದೆ 2016". ಕೃಷಿತಜ್ಞ ಡಾ. ಜೀವಾನಂದ ರೆಡ್ಡಿಯವರ ಅಭಿಪ್ರಾಯದಲ್ಲಿ ಇದು ಭೂಸ್ವಾಧೀನವನ್ನು ಹಿಂಬಾಗಿಲ ಮೂಲಕ ಸಾಧಿಸುವ ಪ್ರಯತ್ನವಲ್ಲದೆ ಇನ್ನೇನೂ ಅಲ್ಲ. ಯುಪಿಎ, ಎನ್‌ಡಿಎ ಸರಕಾರಗಳ ಕೃಷಿನೀತಿಗಳಿಂದಾಗಿ ಅನೇಕ ರೈತರು ಗುಳೇ ಹೋಗಿರುವುದನ್ನು ನಾವೆಲ್ಲರೂ ಬಲ್ಲೆವು. ಈಗ ಏನಾಗಿದೆಯೆಂದರೆ ರೈತರ ಭೂಮಿಗಳನ್ನು ಗೇಣಿಗೆ ಪಡೆದು ವಾಣಿಜ್ಯ ಬೆಳೆಗಳನ್ನು ಬೆಳೆಸುವ ಪರಿಪಾಠ ಜಾರಿಯಲ್ಲಿದೆ. ಈ ಹೊಸ "ಕೃಷಿಭೂಮಿ ಗೇಣಿ ಕಾಯ್ದೆ 2016"ರಿಂದಾಗಿ ಕೃಷಿ ಹೆಚ್ಚು ಫಲಕಾರಿಯಾಗಲಿದೆ; ಗ್ರಾಮೀಣ ಪ್ರದೇಶಗಳಲ್ಲಿ ಶೀಘ್ರ ಪರಿವರ್ತನೆ ಆಗಲಿದೆ ಮತ್ತು ಅದೇ ವೇಳೆ ಭೂಮಾಲಿಕರ ಮತ್ತು ಗೇಣಿದಾರರ ಹಕ್ಕುಗಳು ಸುರಕ್ಷಿತವಾಗುಳಿಯಲಿವೆ ಎಂಬುದು ಮೋದಿ ಸರ್ಕಾರದ ಅಂಬೋಣ. ಆದರೆ ಕಾಯ್ದೆಯ ಕೆಲವೊಂದು ನಿಯಮಗಳು ಹೇಗಿವೆಯೆಂದರೆ ಭೂಮಿ ಮೂಲ ಮಾಲಿಕನ ಕೈಯಿಂದ ತಪ್ಪಿಹೋಗುವ ಸಾಧ್ಯತೆಗಳೆ ಹೆಚ್ಚು. ವಾಸ್ತವವಾಗಿ




ಉದ್ದೇಶಿತ ನೂತನ ಕಾಯ್ದೆ ಮಹಾರಾಷ್ಟ್ರದ ಬಾಡಿಗೆದಾರರ ಕಾಯ್ದೆಯ ಮಾದರಿಯಲ್ಲಿದೆ. ಇದರ ಪ್ರಕಾರ ಅಂತಿಮವಾಗಿ ಬಾಡಿಗೆದಾರ ಮಾಲಿಕನನ್ನು ಹೊರದಬ್ಬಿ ತಾನೇ ಮಾಲಿಕನಾಗಬಲ್ಲ. ಇಂತಹ ಸನ್ನಿವೇಶದ ಲಾಭವನ್ನು ಕಾರ್ಪೊರೇಟು ಗೇಣಿದಾರರು ಪಡೆಯಲಿದ್ದಾರೆ. ಬರ ಇರಲಿ, ನೆರೆ ಇರಲಿ ವ್ಯವಸ್ಥೆಯಲ್ಲಿ ಈಗಾಗಲೆ ಸುಖವಾಗಿರುವ ರಾಸಾಯನಿಕ ಮತ್ತು ಬೀಜ ಕಂಪನಿಗಳು ಮತ್ತು ಮಧ್ಯಮವರ್ತಿಗಳ ಪಟ್ಟಿಗೆ ಇನ್ನು ಮುಂದೆ ಕಾರ್ಪೊರೇಟು ಗೇಣಿದಾರರೂ ಸೇರಿದರೆಂದಾದರೆ ಅಲ್ಲಿಗೆ ಇಡೀ ಕೃಷಿವ್ಯವಸ್ಥೆಯನ್ನು ಕಾರ್ಪೊರೇಟುಗಳ ಪದತಲಕ್ಕೆ ಅರ್ಪಿಸುವ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಅತ್ತ ಗುಜರಾತ್ ರಾಜ್ಯದಲ್ಲೂ ಇಂತಹದೇ ಕಾಯ್ದೆಯೊಂದನ್ನು ಜಾರಿಗೆ ತರುವ ಪ್ರಯತ್ನಗಳಾಗುತ್ತಿವೆ. ಇದೇ ಏಪ್ರಿಲ್ 1ರಂದು ಗುಜರಾತ್ ಸದನ 'ಭೂಸ್ವಾಧೀನ, ಮರುನೆಲೆ ಮತ್ತು ಪುನರ್ವಸತಿಗಳಲ್ಲಿ ನ್ಯಾಯವಾದ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕು, 2016' ("Right to Fair Compensation and Transparency in Land Acquisition, Rehabilitation and Resettlement (Gujarat Amendment) Bill, 2016") ಮಸೂದೆಯನ್ನು ಅನುಮೋದಿಸುವ ಸಂದರ್ಭದಲ್ಲಿ ಪ್ರತಿಪಕ್ಷಗಳನ್ನು ಅಮಾನತು ಮಾಡಲಾಗಿತ್ತು. ಒಂದು ವೇಳೆ ಮಸೂದೆಗೆ ರಾಷ್ಟ್ರಪತಿಗಳು ಅಂಕಿತಹಾಕಿದಲ್ಲಿ ಸರಕಾರ ಲಂಗುಲಗಾಮಿಲ್ಲದೆ ಯಾವಾಗ ಬೇಕಿದ್ದರೂ ಯಾವುದೇ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಹುದಾದ ಪರಿಸ್ಥಿತಿ ನಿರ್ಮಾಣವಾಗಲಿದೆ. ಏಕೆಂದರೆ ಈ ನೂತನ ಕಾಯ್ದೆಯಡಿ ರೈತರಿಗೆ ಮಾತಾಡುವ ಯಾವುದೇ ಹಕ್ಕು ಇರುವುದಿಲ್ಲ, ಸಮುದಾಯಗಳ ಮೇಲಾಗುವ ಪರಿಣಾಮಗಳನ್ನು ಅಂದಾಜಿಸುವ ಪ್ರಕ್ರಿಯೆಯೂ ಇರುವುದಿಲ್ಲ ಮತ್ತು ಸಮುದಾಯದ ಸಮ್ಮತಿಯೂ ಬೇಕಾಗುವುದಿಲ್ಲ. ಅರ್ಥಾತ್ ಸರಕಾರ ಯಾರ ಒಪ್ಪಿಗೆಗೂ ಕಾಯದೆ ನೇರವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಆರಂಭಿಸಬಹುದು ಎಂದಾಗಲಿದೆ.

ಅಂದಹಾಗೆ ಮತದಾರರಿಗೆ ಪಂಗನಾಮ ಹಾಕುವ ವಿಷಯದ ಮೇಲೆ ಸ್ಪರ್ಧೆಯೇನಾದರೂ ನಡೆದಲ್ಲಿ ಪ್ರಥಮ ಸ್ಥಾನ ಯಾರದಾಗಲಿದೆಯೆಂದು ಊಹಿಸಿದವರಿಗೆ ಬಹುಮಾನ ಇಲ್ಲವಂತೆ!

(ಆಧಾರ: 14.4.16ರ OrissaPost ನಲ್ಲಿ ಆರ್.ಕೆ.ಮಿಶ್ರಾ ಲೇಖನ; 17.4.16ರಂದು ಡಾ. ಎಸ್.ಜೀವಾನಂದ ರೆಡ್ಡಿಯವರು ಮೋದಿಗೆ ಬರೆದ ಪತ್ರ; 20.4.16ರ Sabrang India ದಲ್ಲಿನ ಲೇಖನ)

ಬಾಯಿಮಾತಿನ ತಲಾಖ್ ತಪ್ಪು



ಮಹಿಳೆಯರ ದೈಹಿಕ ದುರವಸ್ಥೆಯಲ್ಲೊಂದಾಗಿ ಮಾತ್ರ ನಾವು ತಿಳಿದುಕೊಂಡಿರುವ ಅವಳ ತಿಂಗಳ ಮುಟ್ಟು ಕೌಟುಂಬಿಕ ಜೀವನವನ್ನೋ, ಸಾಮೂಹಿಕವಾದ ಅಂತಸ್ತನ್ನೋ ಬಾಧಿಸುವ ಒಂದಾಗಿದೆಯೇ ಎಂದು ಯೋಚಿಸಲಾರಂಭಿಸುವ ಸಮಯ ಬಂದಿದೆ. ತಿಂಗಳ ಮುಟ್ಟು ಬಹುಪತ್ನಿತ್ವವನ್ನು ನ್ಯಾಯಸಮ್ಮತವಾಗಿಸುತ್ತದೆಯೆಂದು ಕೇರಳದ ಇಸ್ಲಾಂ ಮತ ವಿದ್ವಾಂಸರಲ್ಲಿ ಓರ್ವರಾದ ಕಾಂತಪುರಂ ಎ.ಪಿ. ಅಬೂಬಕ್ಕರ್ ಮೌಲವಿಯವರು ಫತ್ವಾ ಹೊರಡಿಸಿದ್ದಾರೆ. ಹೊಸ ಶರಿಯತ್ ವಿವಾದದಲ್ಲಿ ಬಹಳ ಗಮನ ಸೆಳೆಯುವ ಭಾಗ ಇದೇ ಆಗಿದೆಯೆಂಬುದು ನನ್ನ ವಿಶ್ವಾಸವಾಗಿದೆ.

ಈ ವಿವಾದ 2008ರ ಅಕ್ಟೋಬರ್ 22ರಂದು ಕೇರಳದ ಉಚ್ಚ ನ್ಯಾಯಾಲಯ ನೀಡಿದ ಒಂದು ತೀರ್ಪಿನ ಮುಂದುವರಿಕೆಯಾಗಿದೆ.

ಗುರುವಾಯೂರಿನ ಕೆ.ಎಚ್. ಸೈದಾಲಿ ನೀಡಿದ ಒಂದು ಅಪೀಲ್ ಪರಿಗಣಿಸಿ ನ್ಯಾಯಾಧೀಶ ಕುರ್ಯೆನ್ ಜೋಸೆಫ್ ಮತ್ತು ನ್ಯಾಯಾಧೀಶ ಹಾರೂನ್ ಅಲ್‌ರಶೀದ್ ಎಂಬುವರನ್ನೊಳಗೊಂಡ ಡಿವಿಷನ್ ಬೆಂಚಿನ ತೀರ್ಪಾಗಿತ್ತು. ಸೈದಾಲಿ ಇನ್ನೊಬ್ಬಳನ್ನು ಮದುವೆಯಾಗಿದ್ದಾನೆಂಬ ಕಾರಣ ನೀಡಿ ಪ್ರಥಮ ಪತ್ನಿ ಸೆಲೀನಾಗೆ ತ್ರಿಶ್ಶೂರ್ ಕುಟುಂಬ ನ್ಯಾಯಾಲಯ ಅನುಮತಿ ನೀಡಿದ ವಿವಾಹ ವಿಚ್ಛೇದನವನ್ನು ಉಚ್ಚ ನ್ಯಾಯಾಲಯ ರದ್ದುಪಡಿಸಿ, ಗಂಡನ ಎರಡನೇ ವಿವಾಹವೆಂಬ ಒಂದೇ ಕಾರಣದಿಂದ ಮುಸ್ಲಿಂ ಪತ್ನಿಗೆ ವಿಚ್ಛೇದನ ನೀಡಲು ಇಂದು ಜಾರಿಯಲ್ಲಿರುವ ಮುಸ್ಲಿಂ ವ್ಯಕ್ತಿ ನಿಯಮ ಒಪ್ಪಿಗೆ ನೀಡಲಾರದು ಎಂಬುದು ಕಾರಣವಾಗಿದೆ.

ಇದರಲ್ಲಿ ಧಾರ್ಮಿಕ ತತ್ವಗಳಿಗೋ, ಸಾಮಾಜಿಕ ನೀತಿಗೋ ಅನ್ವಯವಾಗುವ ರೀತಿಯಲ್ಲಿ ಮುಸಲ್ಮಾನರಲ್ಲಿ ಬಹುಪತ್ನಿತ್ವ ಮತ್ತು ಏಕಪಕ್ಷೀಯವಾದ ತಲಾಖ್ ನೀಡುವುದು ಸಮಾಜದಲ್ಲಿದೆಯೆಂದು ಊಹಿಸಿದ ನ್ಯಾಯಾಲಯ ಇದನ್ನು ನಿಯಂತ್ರಿಸಲು ಪ್ರಾದೇಶಿಕವಾಗಿಯೂ ರಾಷ್ಟ್ರೀಯವಾಗಿಯೂ ಸಮಿತಿಗಳನ್ನು ರಚಿಸಬೇಕೆಂದೂ ಇದಕ್ಕಾಗಿ ನಿಯಮ ನಿರ್ಮಿಸಬೇಕಾದುದು ಅಗತ್ಯವೆಂದೂ ನಿರ್ದೇಶನ ನೀಡಿತು.

ಇಂತಹ ಸಮಿತಿ ನಿರ್ಮಿಸಬೇಕೆಂದದ್ದು ಹೊಸ ವಿವಾದದ ಬೀಜವಾಗಿದೆ. ಮುಸ್ಲಿಮರಲ್ಲಿರುವ ಸುನ್ನಿ ವಿಭಾಗ, ಅದು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ಹಸ್ತಕ್ಷೇಪವೆಂದೂ ಅದನ್ನು ವಿರೋಧಿಸಬೇಕೆಂದೂ ಪ್ರಸ್ತಾಪಿಸಿದ್ದಾರೆ. ಮುಜಾಹಿದ್ ವಿಭಾಗ ಮೌನವಾಗಿದೆ. ಜಮಾಅತೆ ಇಸ್ಲಾಮಿ ಈ ನಿರ್ದೇಶನವನ್ನು ಸ್ವಾಗತಿಸಿದೆ. ವಿರೋಧಿಸುವವರೂ, ಮೌನವಾಗಿರುವವರೂ, ಸ್ವಾಗತಿಸುವವರೂ ಒಟ್ಟು ಸೇರಿ ಇನ್ನು ಯಾವಾಗ ಯುದ್ಧಕ್ಕೆ ಹೊರಡುವರೆಂಬುದು ನನ್ನ ಸಂದೇಹವಾಗಿದೆ.

ನ್ಯಾಯಾಲಯದ ತೀರ್ಪನ್ನು ವಿರೋಧಿಸುತ್ತಾ ಸುನ್ನಿಗಳ ಒಂದು ವಿಭಾಗದ ನಾಯಕನೂ ಮತ ಪಂಡಿತನೂ ಆದ ಕಾಂತಪುರಂ ನಡೆಸಿದ ಪ್ರಸ್ತಾಪ ಕೇರಳೀಯರನ್ನು ಸಾಮಾನ್ಯವಾಗಿಯೂ ಮುಸ್ಲಿಮರನ್ನು ವಿಶೇಷವಾಗಿಯೂ ನಾಚಿಕೆಯಿಂದ ಮುದುಡುವಂತೆ ಮಾಡಿದೆ. ಅವರು ಹೀಗೆಂದರು: "ಸ್ತ್ರೀಯರು ಪ್ರತಿ ತಿಂಗಳೂ ಮುಟ್ಟಾಗುತ್ತಾರೆ. ಆ ಸಮಯದಲ್ಲಿ ಐದಾರು ದಿವಸ, ಕೆಲವೊಮ್ಮೆ ಎಂಟು, ಹತ್ತು ದಿವಸ ಅವರೊಡನೆ ಸುಖಿಸಲು ಗಂಡನಿಗೆ ಸಾಧ್ಯವಾಗುವುದಿಲ್ಲ, ಆದುದರಿಂದ ಆತ ಇನ್ನೊಬ್ಬಳನ್ನು ವಿವಾಹವಾಗಬೇಕಾಗಬಹುದು. ಅದನ್ನು ಇಸ್ಲಾಂ ಅನುಮತಿಸಿದೆ."

ಯಾವಾಗಲೂ ಸ್ತ್ರೀ ವಿರುದ್ಧವೇ ಮಾತನಾಡುವವರಾಗಿದ್ದಾರೆ ಕಾಂತಪುರಂ. ಮಹಿಳೆಯರೆಂದರೆ ಬರೇ ಲೈಂಗಿಕ ಉಪಕರಣ ಮಾತ್ರವಾಗಿದೆ ಎಂಬ ನೀಚ ಯೋಚನೆ ಇರುವಲ್ಲಿ ಮಾತ್ರ ಇಂತಹ ಪ್ರಸ್ತಾಪಗಳು ಹೊರಡುತ್ತವೆ.

ಪುರುಷರ ದೈಹಿಕ ಅಗತ್ಯಕ್ಕೆ ಬಹುಪತ್ನಿತ್ವ ಎಂಬ ಕಾಂತಪುರಂ ಅವರ ವ್ಯಾಖ್ಯಾನ ಖುರ್‌ಆನ್ ವಿರುದ್ಧವೂ ಆದರಿಂದಾಗಿಯೇ ಅನಿಸ್ಲಾಮಿಕವೂ ಆಗಿದೆ.

ವಿಶದೀಕರಣ

ಇಸ್ಲಾಂ ಮಾಡಿದ್ದು ಬಹುಪತ್ನಿತ್ವವನ್ನು ಪರಿಚಯಿಸಿದ್ದಲ್ಲ, ಬಹುಪತ್ನಿತ್ವವನ್ನು ಮಿತಿಗೊಳಿಸಿದ್ದಾಗಿದೆ. ಅರಬ್ ದೇಶದ ಗೋತ್ರಗಳ ಸಂದರ್ಭದಲ್ಲಿ ಮಿತಿ ಇಲ್ಲದೆ ಮೊದಲೇ ನಡೆದ ಬಹುಪತ್ನಿತ್ವಕ್ಕೆ ಖುರ್‌ಆನ್ ಮಿತಿ ತೀರ್ಮಾನಿಸಿದ್ದಾಗಿದೆ. ಹೆಚ್ಚೆಂದರೆ ನಾಲ್ಕು ಜನ. ಇದಕ್ಕೆ ಶರತ್ತುಗಳೂ ಇವೆ. ನಾಲ್ಕು ಜನ ಪತ್ನಿಯರಿದ್ದರೆ ಅವರಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡದೆ ಅವರಲ್ಲಿ ಸಮಾನತೆಯ ನೀತಿ ಪಾಲಿಸಬೇಕು. ನೀತಿ ಪಾಲಿಸಲು ಸಾಧ್ಯವಿಲ್ಲವೆಂದಾದರೆ ಒಬ್ಬಳನ್ನು ಮಾತ್ರ ವಿವಾಹವಾಗಿರಿ ಎಂಬುದು ಖುರ್‌ಆನ್ ವಾಕ್ಯವಾಗಿದೆ (4:3) ಎಷ್ಟು ಪ್ರಯತ್ನಿಸಿದರೂ ಸ್ತ್ರೀಯರಲ್ಲಿ ತಾರತಮ್ಯವಿಲ್ಲದೆ ಸಮಾನತೆಯನ್ನು ಪಾಲಿಸಲು ನಿಮ್ಮಿಂದ ಸಾಧ್ಯವಾಗದು. ಆದುದರಿಂದ ಓರ್ವಳಲ್ಲಿ ತೃಪ್ತಿಪಡಿರಿ. (4:129).

ಪ್ರವಾದಿಗಳ ಕಾಲದಲ್ಲಿ ಆಗಾಗ ಯುದ್ಧಗಳಾಗುತ್ತಿದ್ದು ಬಹಳಷ್ಟು ಪುರುಷರು ಮೃತಪಟ್ಟು ಬಹಳಷ್ಟು ಅನಾಥಮಕ್ಕಳೂ ವಿಧವೆಯರೂ ನಿರ್ಗತಿಕರಾಗುತ್ತಿದ್ದರು. ಈ ಅನಾಥಮಕ್ಕಳ ರಕ್ಷಣೆಗಾಗಿ ಆ ಮಕ್ಕಳ ತಾಯಂದಿರನ್ನು ನಾಲ್ಕರ ಮಿತಿಯಲ್ಲಿ ವಿವಾಹವಾಗಿರಿ ಎಂದು ಪ್ರವಾದಿಗಳು ಬೋಧಿಸಿದರು. ಅನಾಥಮಕ್ಕಳ ರಕ್ಷಣೆಯ ಸಂದರ್ಭದಲ್ಲಿ ಈ ಮಕ್ಕಳ ತಾಯಂದಿರೊಡನೆ ಅನೈತಿಕ ಸಂಬಂಧವಿರಬಾರದೆಂಬುದೂ ಈ ವಿವಾಹಕ್ಕೆ ಕಾರಣವಾಗಿದೆ.

ಪುರುಷರ ಕಾಮಪೂರ್ತಿಯಲ್ಲ, ಅನಾಥರ ರಕ್ಷಣೆಯ ಮುಖಾಂತರ ಸಾಧ್ಯವಾಗುವ ಸಾಮೂಹಿಕ ಕ್ಷೇಮ ಕೂಡಾ ಗುರಿಯಾಗಿರಬೇಕು.

ಮುಸ್ಲಿಂ ಸಮಾಜದಲ್ಲಿ ಬಹುಪತ್ನಿತ್ವ ಮತ್ತು ಏಕಪಕ್ಷೀಯವಾದ ತಲಾಖ್ (ವಿವಾಹ ವಿಚ್ಛೇದನ)ನ ಹೆಸರಿನಲ್ಲಿ ಸ್ತ್ರೀಯರು ಬಹಳಷ್ಟು ಅನ್ಯಾಯ ಮತ್ತು ಸಂಕಷ್ಟಗಳಿಗೆ ತುತ್ತಾಗುತ್ತಿದ್ದಾರೆ ಎಂಬುದು ವಾಸ್ತವವಾಗಿದೆ. ಇದಕ್ಕೆ ದೂರಬೇಕಾದುದು ಧರ್ಮವನ್ನಲ್ಲ, ಮನುಷ್ಯರನ್ನು ಎಂದು ಧಾರ್ಮಿಕ ಪಂಡಿತರು ವಾದಿಸುತ್ತಾರೆ. ಧಾರ್ಮಿಕ ನಿಯಮಗಳ ದುರುಪಯೋಗದಿಂದ ಸ್ತ್ರೀಯರು ಅನುಭವಿಸುತ್ತಿರುವ ನೋವುಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲದಿರುವುದು ಆ ದುರುಪಯೋಗಗಳಿಗೆ ಕಾನೂನಿನ ರಕ್ಷಣೆ ಇರುವುದರಿಂದಲೇ ಆಗಿದೆ.

ಇಂಡಿಯಾದ ಶಿಕ್ಷಾ ನಿಯಮಗಳ ಪ್ರಕಾರ ಓರ್ವನಿಗೆ ಹೆಂಡತಿ ಇರುವಾಗ ಇನ್ನೊಂದು ವಿವಾಹವಾಗುವುದು ಅಪರಾಧವಾಗಿದೆ (Crime). ಅದನ್ನು ರದ್ದುಪಡಿಸುವುದೋ, ಶಿಕ್ಷಿಸುವುದೋ ಅಥವಾ ಎರಡೂ ಸೇರಿಕೊಂಡೋ ಶಿಕ್ಷೆ ದೊರೆಯಬಹುದು (IPC-494) ಆದುದರಿಂದ ಹೆಂಡತಿಗೆ ವಿಚ್ಛೇದನ ದೊರೆಯುತ್ತದೆ.

ಇದು ಯಾವುದೂ ಮುಸ್ಲಿಂ ಪುರುಷರಿಗೆ ಅನ್ವಯಿಸುವುದಿಲ್ಲ, ಯಾಕೆಂದರೆ ಅವರ ವ್ಯಕ್ತಿ ನಿಯಮ ಇವೆಲ್ಲಕ್ಕೂ ಅನುಮತಿ ನೀಡುತ್ತದೆ. ಆದುದರಿಂದ ಆ ರೀತಿಯಲ್ಲಿ ನಡೆಯುತ್ತಿರುವ ಅನ್ಯಾಯಗಳಿಗೆ ಪರಿಹಾರ ಕಂಡುಕೊಳ್ಳಲು ನಮ್ಮ ನೀತಿ ನ್ಯಾಯ ನಿರೂಪಕರಿಗೆ ಸಾಧ್ಯವಾಗುವುದಿಲ್ಲ, ಈ ಅನ್ಯಾಯಗಳಿಗೆ ಉತ್ತರ ಹೇಳಬೇಕಾದುದು ಧಾರ್ಮಿಕ ನಿಯಮಗಳಾಗಿವೆ. ಯಾಕೆಂದರೆ ಇಲ್ಲಿ ಅಪರಾಧಗಳಿಗೆ ಮನುಷ್ಯರೊಡನೆ ಕೈ ಜೋಡಿಸುವುದು ಧರ್ಮವಾಗಿದೆ.

ಮೇಲೆ ಹೇಳಿದ ಮೊಕದ್ದಮೆಯಲ್ಲಿ ಸೆಲೀನ ಎಂಬ ಮಹಿಳೆ ಬೇರೆ ಯಾವುದೇ ಧರ್ಮಾನುಯಾಯಿಯಾಗಿದ್ದರೂ ಅವರಿಗೆ ವಿವಾಹ ವಿಚ್ಛೇದನ ದೊರೆಯುತ್ತಿತ್ತು. ಬಹುಪತ್ನಿತ್ವಕ್ಕೆ ಧರ್ಮ ವಿಧಿಸಿದ ನಿಯಮಗಳನ್ನು ಅವರ ಗಂಡ ಪಾಲಿಸಿದ್ದಾನೆಯೇ ಎಂದು ನೋಡುವ ಜವಾಬ್ದಾರಿಯನ್ನು ಯಾವ ಧಾರ್ಮಿಕ ಸಂಘಟನೆಯೂ ಯಾವ ಪುರೋಹಿತರೂ, ಧಾರ್ಮಿಕ ವಿದ್ವಾಂಸರೂ ವಹಿಸಿಕೊಳ್ಳುವುದಿಲ್ಲ. ಪುರುಷರ ಸ್ವೇಚ್ಛಾಚಾರಕ್ಕೆ ಒಪ್ಪಿಗೆ ನೀಡುವ ರೀತಿಯಲ್ಲಿ ಮತಪಂಡಿತರು ಯಾವಾಗಲೂ ಧಾರ್ಮಿಕ ನಿಯಮಗಳಿಗೆ ವ್ಯಾಖ್ಯಾನ ನೀಡುತ್ತಾರೆ.

ಧಾರ್ಮಿಕ ತತ್ವಗಳಿಗೆ ಮತ್ತು ಸಾಮಾಜಿಕ ನೀತಿಗೆ ಅನ್ವಯವಾಗದ ರೀತಿಯಲ್ಲಿ ಮುಸಲ್ಮಾನರಲ್ಲಿ ಬಹುಪತ್ನಿತ್ವ ಮತ್ತು ಏಕಪಕ್ಷೀಯವಾದ ತಲಾಖ್ ನೀಡುವುದು ಸಮಾಜದಲ್ಲಿದೆಯೆಂದು ತಿಳಿದ ನ್ಯಾಯಾಲಯ ಇದನ್ನು ನಿಯಂತ್ರಿಸಲು ಪ್ರಾದೇಶಿಕವಾಗಿಯೂ, ರಾಷ್ಟ್ರೀಯವಾಗಿಯೂ ಸಮಿತಿಗಳನ್ನು ರಚಿಸಬೇಕೆಂದೂ ಇದಕ್ಕಾಗಿ ನಿಯಮ ರೂಪಿಸುವುದು ಅಗತ್ಯವೆಂದೂ ನಿರ್ದೇಶನ ನೀಡಿತು.


ನ್ಯಾಯಾಧೀಶ ವಿ.ಆರ್. ಕೃಷ್ಣಅಯ್ಯರ್ ಅ[illegible] ಅಧ್ಯಕ್ಷತೆಯಲ್ಲಿ ಇಂತಹ ಒಂದು ಸಮಿತಿ ಅಸ್ತಿತ್ವಕ್ಕೆ ಬಂದಿ[illegible] ಉಚ್ಚ ನ್ಯಾಯಾಲಯದ ಆಶಯದಂತೆ ನಿಯಮ ಸವೀ[illegible] ಕಮೀಷನ್ ನಿಯಮ ನಿರ್ಮಾಣದ ಕರಡು ಪ್ರತಿ[illegible] ರಚಿಸಿತು. ವಿವಾಹ ವಿಚ್ಛೇದನ ಮತ್ತು ಕೆಲವು ವಿ[illegible] ಸಂದರ್ಭಗಳಲ್ಲಿ ಬಹುಪತ್ನಿತ್ವಕ್ಕೆ ಸಂಬಂಧಪಟ್ಟ ತೀರ್ಪು[illegible] ಪ್ರತಿ ಜಿಲ್ಲೆಯಲ್ಲೂ ವಿವಾದ ಪರಿಹಾರ ಸಮಿತಿ[illegible] ಸ್ಥಾಪಿಸಬೇಕೆಂಬುದು ಮುಖ್ಯ ಸಲಹೆಯಾಗಿದೆ. ವಿ[illegible] ವಿಚ್ಛೇದನ ಮತ್ತು ಮೊದಲ ಹೆಂಡತಿ ಬದುಕಿರು[illegible] ಎರಡನೇ ವಿವಾಹವಾಗುವುದು ಈ ಸಮಿತಿಯ ತಿಳಿವ[illegible] ಮತ್ತು ಅನುಮತಿಯಿಂದ ಮಾತ್ರ ನಡೆಯುವಂತಿರಬೆ[illegible] ನಿವೃತ್ತ ಜಿಲ್ಲಾ ನ್ಯಾಯಾಧೀಶರೋ, ಜುಡಿಷಿಯ[illegible] ಮ್ಯಾಜಿಸ್ಟ್ರೇಟೋ ಅಥವಾ ಮುನ್‌ಶೀಫರು ಮೂರು ಸ[illegible] ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಉಳಿದ ಈರ್ವರು ಸದ[illegible] ವಿವಾದಿತ ಎರಡು ಕುಟುಂಬಗಳ ಒಬ್ಬೊಬ್ಬ ಸದಸ್ಯರಾ[illegible] ಬೇಕು. ಸಮಿತಿಯ ಈ ಇಬ್ಬರು ಸದಸ್ಯರು ಏನೇ ಆದ[illegible] ಒಟ್ಟಿಗೆ ಮುಂದುವರಿಯಲು ಸಾಧ್ಯವಾಗದು ಎ[illegible] ತೀರ್ಮಾನಕ್ಕೆ ಬಂದರೆ ಮಾತ್ರ ವಿವಾಹ ವಿಚ್ಛೇದ[illegible] ಅನುಮತಿ ದೊರೆಯುತ್ತದೆ. ಸಮಿತಿಯ ಅಂಗೀಕಾರವಿ[illegible] ಇನ್ನೋರ್ವಳನ್ನು ವಿವಾಹವಾಗುವುದು ಶಿಕ್ಷಾ[illegible] ಅಪರಾಧವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಪ್ರಥ[illegible] ಪತ್ನಿಗೆ ನಷ್ಟ ಪರಿಹಾರ ನೀಡಬೇಕಾಗುತ್ತದೆ.

ಮುಸ್ಲಿಂ ವಿವಾಹ ದಾಖಲೆಯಲ್ಲಿರುವ ಕರಾರಾಗಿರಬೆ[illegible] ಎಂಬುದು ಇನ್ನೊಂದು ಶಿಫಾರಸ್ಸಾಗಿದೆ. ಹಾಗೆಯೇ ವಿವ[illegible] ವಿಚ್ಛೇದನಕ್ಕೂ ದಾಖಲೆ ಇರಬೇಕು. ಬಾಯಿಮಾ[illegible] ತಲಾಖ್‌ಗೆ ಕಾನೂನಿನ ಅನುಮತಿ ದೊರೆಯದು. ಎ[illegible] ವಿವಾಹಗಳನ್ನೂ ನೋಂದಣಿ (ರಿಜಿಸ್ಟರ್) ಮಾಡಬೇ[illegible] ಇಂತಹ ಹಲವಾರು ನಿರ್ದೇಶಗಳನ್ನೊಳಗೊಂಡ ಕರ[illegible] ನಿಯಮದ ಪ್ರತಿಯನ್ನು ಮತ ಪಂಡಿತರು ಮತ್ತು ವಿದ್ವಾ[illegible] ಪರಿಗಣನೆಗಾಗಿ ಕಳುಹಿಸಿಕೊಡಲಾಗಿದೆ. ಅವರ ಪ್ರತಿಕ್ರಿ[illegible] ಬಂದ ಬಳಿಕವಷ್ಟೆ ಬಿಲ್ ಆಗಿ ಪಾರ್ಲಿಮೆಂಟಿನ ಮು[illegible] ಬರಬಹುದಾಗಿದೆ.

ಇಂತಹ ಬಿಲ್ ಏನಾದರೂ ಪಾರ್ಲಿಮೆಂಟಿನ ಹ[illegible] ಬಂದರೆ ದೇಶಾದ್ಯಂತದ ಮುಸ್ಲಿಮರಿಂದ ಇದರ ವಿ[illegible] ಹಲ್ಲು ಉಗುರುಗಳಿಂದ ಹೋರಾಡಿಸಿ ಅದು ನಿಯ[illegible] ವಾಗದಂತೆ ಮುಸ್ಲಿಂ ಪುರುಷರು ನೋಡಿಕೊಳ್ಳುತ್ತಾರೆ.

ಮಲಯಾಳಂ ಮೂಲ: ಪ್ರೊ. ಎಚ್.ಎನ್. ಕಾರಶ್ಶೇ[illegible]

ಅನುವಾದ : ಡಾ. ಸಾರಾ ಅಬೂಬಕ್ಕ[illegible]



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಜಾಮಿಳನ ಶಾರ್ಟ್‌ಕಟ್ ಭಕ್ತಿ

ಆಶ್ಚರ್ಯ ಮತ್ತು ವಿಚಿತ್ರ ಎನ್ನಿಸುವುದು ಎಂದರೆ ...ರಕ ಎಂಬ ಪರಿಕಲ್ಪನೆಯನ್ನು ಹುಟ್ಟಿಸಿದ್ದು ಅಥವಾ ...ದನ್ನು ಚಾಲ್ತಿಗೆ ತಂದಿದ್ದು ಯಾರೊಬ್ಬನೂ ನೈತಿಕಪತನ ...ೊಂದಬಾರದೆಂದು. ಆದರೆ, ಮಾಡಬಾರದ ಪಾಪವನ್ನೆಲ್ಲಾ ...ಾಡಿ ಕ್ಲೈಮ್ಯಾಕ್ಸ್ ಹಂತಕ್ಕೆ ಏನೋ ಒಂದು ನಾಮಸ್ಮರಣೆ ...ಾಡಿ ನರಕ ಪ್ರವೇಶದಿಂದ ಮುಕ್ತಿ ಹೊಂದಬಹುದು ...ಂಬ ತಂತ್ರವನ್ನು ಬೋಧಿಸಿದ ಉದ್ದೇಶವೇನಿರಬಹುದು ...ಂಬ ವಿಷಯ ನನಗೆ ತುಂಬಾ ತಲೆ ತಿಂದಿದೆ. ಸಣ್ಣ ...ುಡುಗನಾಗಿದ್ದಾಗ ಈ ತಂತ್ರಗಾರಿಕೆಯನ್ನು ಬಹಳ ...ಯೋಗಿಸುತ್ತಿದ್ದೆ. ಏನಾದರೊಂದು (ಎಷ್ಟೋ ಬಾರಿ ದೇವರ ...ುಂಡಿಯಿಂದಲೇ ಹಣ) ಕದ್ದು ಬಿಡುವುದು, ನಂತರ ...ೇವರಿಗೆ ತಪ್ಪು ಕಾಣಿಕೆಯನ್ನು ಕಟ್ಟಿಬಿಡುವುದು. ಸಾರಿ, ...ರಿ ಅಂತ ಮರೆಯಲ್ಲಿ ಕ್ಷಮಾಪಣೆ ಕೇಳಿಕೊಂಡು ...ಡುವುದು. ಈ ಗುಬ್ಬಿಯಂತಹ ಬಾಲಕನ ಮೇಲೆ ...ೇವರಂಥ ಅಲ್ಟಿಮೇಟ್ ಪರ್ಸನಾಲಿಟಿಯು ಬ್ರಹ್ಮಾಸ್ತ್ರ ...ಡಲಾರ. ಅಷ್ಟರಮಟ್ಟಿಗೆ ಅವನಿಗೆ ಪುರುಸೊತ್ತಾಗಲಿ, ...ಣ್ಣತನವಾಗಲಿ ಇರಲಾರದು ಎಂಬ ಗಾಢನಂಬಿಕೆ ...ನ್ನದಾಗಿತ್ತು, ಹಾಗೆಯೇ ಅದು ನಿರೂಪಿತವಾಗಿತ್ತು ಕೂಡ. ...ಯಾವ ಪಾಪದ ದೇವರೂ ಈ ಕಡುಪಾಪಿಯ ಮೇಲೆ ...ಂದೂ ತನ್ನ ಕ್ರೂರ ದೃಷ್ಟಿಯನ್ನು ಬೀರಲಿಲ್ಲ, ಶನಿಯನ್ನೂ ...ೇರಿಸಿದಂತೆ. ಬಾಲ್ಯದಲ್ಲಿ ನನಗೆ ಶನಿವಾರ ಬಂತೆಂದರೆ ...ಹಬ್ಬ. ನಮ್ಮ ಮನೆಯ ಸಮೀಪದ ದೇವಸ್ಥಾನದ ನವಗ್ರಹದ ...ಭಾಗಕ್ಕೆ ತಪ್ಪದೇ ಹೋಗುತ್ತಿದ್ದೆ. ದಿನಕ್ಕೆ ಹತ್ತು ಹಲವು ...ಲ ನವಗ್ರಹಕ್ಕೆ ಸುತ್ತುಬರುತ್ತಿದ್ದೆ. ಶನಿ ವಿಗ್ರಹದ ಪಾದದ ...ಮೇಲೆ ಒಂದು ಸಣ್ಣ ಗುಪ್ಪೆಯಾಗಿ ಬೀಳುತ್ತಿದ್ದ ಮೂರು ...ೈಸೆಯಿಂದ ಎಂಟಾಣೆಯವರೆಗಿನ ನಾಣ್ಯಗಳು ಒಂದೊಂದು ...ಮಸ್ಕಾರಕ್ಕೂ ನನ್ನ ಕೈ ಸೇರುತ್ತಿದ್ದವು ಮತ್ತು ಒಂದೊಂದು ...ುತ್ತಿಗೂ ನನ್ನ ಜೇಬು ಸೇರುತ್ತಿದ್ದವು. ಆ ನಾಣ್ಯಗಳನ್ನು ...ತ್ತಿಕೊಂಡು ಆ ಶನಿಯಾದರೂ ಯಾವ ಅಂಗಡಿಗೆ ...ೋದಾನು? ಅವನಿಗಾವ ಸಂಸಾರ ಎಂಬ ಧೋರಣೆಯ ...ೊತೆಗೆ, ಅವುಗಳನ್ನು ತೆಗೆದುಕೊಳ್ಳುವ ದೇವಸ್ಥಾನದ ...ರ್ಚಕನಿಗೆ ಏನೂ ಆಗಲಾರದು ಎಂದಮೇಲೆ ನನಗೇನು ...ದೀತು ಎಂಬ ಧೈರ್ಯವೂ ಕೂಡ.


ಬ್ರಾಹ್ಮಣ ಅರ್ಚಕರು ತಾವು ಮಾಡಬಹುದಾದುದನ್ನು ...ುಳಿದ ವರ್ಣದವರು ಕೂಡ ಮಾಡಬಹುದು. ಅವರ ...ರೀರ ರಚನೆಯೂ ನಮ್ಮ ರಚನೆಯೂ ಒಂದೇ ಎಂದು ...ಹಳಷ್ಟು ಜನರು ಆಲೋಚಿಸುವುದೂ ಇಲ್ಲ. ಹಾಗಾಗಿಯೇ ...ಷ್ಟೋ ಪದಾರ್ಥಗಳನ್ನು ಬ್ರಾಹ್ಮಣರು ಮಾತ್ರ ...ುಪಯೋಗಿಸಬಹುದು. ಶೂದ್ರಾದಿ ಇತರರು ಅದನ್ನು ...ುಪಯೋಗಿಸಕೂಡದೆಂದೂ, ಅದನ್ನು ಬ್ರಾಹ್ಮಣರಿಗೆ ದಾನ ...ೀಡಿ ಕೃತಾರ್ಥರಾಗಬೇಕೆಂದೂ ಭೂಸುರರು ನಿರ್ದೇಶಿಸಿದ್ದರು. ...ಅದನ್ನು ಮತಿಹೀನ ಶೂದ್ರರು (ಬ್ರಾಹ್ಮಣರ ಭಾಷೆಯಲ್ಲಿ: ...ಶ್ವಪಚ ಮುಂಡೇವು) ತಲೆಯ ಮೇಲೆ ಹೊತ್ತುಕೊಂಡು ...ಪಾಲಿಸುತ್ತಿದ್ದವು. ಉದಾಹರಣೆಯೊಂದನ್ನು ಗಮನಿಸಿ, ...ಬೂದುಗುಂಬಳಕಾಯನ್ನು ಶೂದ್ರಾದಿ ಬ್ರಾಹ್ಮಣೇತರರು ...ುಪಯೋಗಿಸುತ್ತಿರಲಿಲ್ಲ, ಅದರಲ್ಲಿ ರಂಧ್ರ ಮಾಡಿ, ಕುಂಕುಮ ...ುಂಬಿ, ನಾಣ್ಯಗಳನ್ನೂ ಇಟ್ಟು, ದೃಷ್ಟಿ ಪರಿಹಾರಕ್ಕೆ ಬಲಿ ...ೀಡುವ ಬದಲು ಅದನ್ನು ಒಡೆಯುವ ಪದ್ಧತಿ ಶೂದ್ರರಿಗೆ ...ಅಥವಾ ಅದನ್ನು ಬ್ರಾಹ್ಮಣರಿಗೆ ದಾನ ನೀಡಬೇಕು. ಅವರು ...ಅದರಲ್ಲಿ ತಂಬುಳಿ, ಹುಳಿ, ಹಲ್ವಾ ಏನು ಬೇಕಾದರೂ ...ಮಾಡಿಕೊಂಡು ಚೆನ್ನಾಗಿ ತಿನ್ನಬಹುದು. ಬೂದುಗುಂಬಳ ...ಕಾಯಿಯಲ್ಲಿ ಮೆದುಳಿನ ಆರೋಗ್ಯ ಮತ್ತು ಚೈತನ್ಯಕ್ಕೆ ...ಅಗತ್ಯವಿರುವಂತಹ ಔಷಧೀಯ ಅಥವಾ ಮೆದುಳನ್ನು ...ಉಪಚರಿಸುವಂತಹ ಅಂಶಗಳಿದ್ದು, ಈ ಶೂದ್ರ ಮುಂಡೇವು ...ಳೂ ಅಂಥವನ್ನು ಸೇವಿಸಿ ತಮ್ಮ ಸಮಕ್ಕೆ ಬುದ್ಧಿವಂತರಾಗಿ ...ಬಿಟ್ಟಾರು ಎಂಬ ಒಂದು ಎಚ್ಚರಿಕೆ ಅವರಲ್ಲಿದ್ದಿದ್ದರೂ ...ಆಶ್ಚರ್ಯವಿಲ್ಲ ಎಂದು ಅನ್ನಿಸದೇ ಇರುವುದಿಲ್ಲ. ಈಗಿಲ್ಲ ...ಬಿಡಿ. ಇಂತಹ ಬ್ರಾಹ್ಮಣ್ಯದ ತಂತ್ರಗಳು ಮುಕ್ಕಾಗಿವೆ. ...ಬೂದುಗುಂಬಳಕಾಯನ್ನು ಎಲ್ಲರೂ ತಿನ್ನುತ್ತಾರೆ. ಆದರೆ ...ಈಗಲೂ ಅಲ್ಲಲ್ಲಿ ಬೂದುಗುಂಬಳಕಾಯಿ ಬರೀ ಬ್ರಾಹ್ಮಣ ...ರಿಗೆ ದಾನ ನೀಡಲು ಇರುವುದು, ತಾವು ತಿನ್ನಬಾರದು ...ಎಂಬ ನಂಬಿಕೆ ಇರುವವರು ಬಹಳ ಮಂದಿ ಇದ್ದಾರೆ.

ಈ ದೇವರು ಎಂಬ ಪರಿಕಲ್ಪನೆ, ಆದರಲ್ಲೂ ...ಹಿಂದೂಗಳಲ್ಲಂತೂ ಬಹಳ ವಿಚಿತ್ರವಾಗಿ ಮತ್ತು ...ವಿಲಕ್ಷಣವಾಗಿಯೇ ಉಪಯೋಗಿಸಲ್ಪಡುವುದು. ಅದೆಷ್ಟೋ ...ಹುಡುಗಾಯಿಗಳನ್ನು ಒಡೆಯಿಸಿ ಪರೀಕ್ಷೆ ಪಾಸ್ ...ಮಾಡಿಸಿಕೊಳ್ಳುವುದು. ಗಣೇಶನಿಗೆ ಬೆಳ್ಳಿ ಅಲಂಕಾರ ಮಾಡಿಸಿ ...ವ್ಯಾಪಾರವನ್ನು ವೃದ್ಧಿಸಿಕೊಳ್ಳುವುದು. ಹನುಮಂತನಿಗೆ ವಡೆ ...ಹಾರ ಹಾಕಿಸಿ ಇಷ್ಟಾರ್ಥ ನೆರವೇರಿಸಿಕೊಳ್ಳುವುದು. ...ಯಾವುದೋ ಈಶ್ವರನ ಲಿಂಗಕ್ಕೆ, ಮುಖವಾಡ ...ಮಾಡಿಸುವುದು, ಇನ್ಯಾವುದೋ ದೇವಿಗೆ ಬೆಳ್ಳಿ ಪಚ್ಚಾಂಗಿ ತೊಡಿಸುವುದು. ಒಟ್ಟಾರೆ ಇವರ ಪ್ರಕಾರ ಈ ಹಿಂದೂ ದೇವರುಗಳು ತಿಂಡಿಪೋತರು ಮತ್ತು ಲಂಚಕೋರರು. ಏನೂ ಮಾಡಲಾಗದ ಬಡವರ ಕಡೆಗೆ ದೇವರು ಕಣ್ಣೆತ್ತಿಯೂ ನೋಡದಂತಹ ಅತ್ಯಾಶೆಯ ನಸೆಯ ವ್ಯಕ್ತಿತ್ವವುಳ್ಳವನು. ಇಂತಹ ಪರಿಕಲ್ಪನೆಯನ್ನು ಭಂಗ ಮಾಡಲೆಂದೇ ದಾಸರು, ಶರಣರು, ಭಕ್ತರು, ಸಂತರು, ಸೂಫಿಗಳು ಚಳವಳಿ ರೂಪದಲ್ಲಿ ದೇವರ ಪರಿಕಲ್ಪನೆಯನ್ನು ಸುಧಾರಿಸಲು ಯತ್ನಿಸಿದರು. ಸ್ವಲ್ಪಮಟ್ಟಿಗೆ ಯಶಸ್ವಿಯೂ ಆದರು. ಆದರೂ ಬ್ರಾಹ್ಮಣ್ಯದ ಅಥವಾ ಪುರೋಹಿತರ ಮೇಲುಗೈ ಮಾತ್ರ ಸ್ಥಿರವಾಗಿಯೇ ಉಳಿದಿತ್ತು ಮತ್ತು ಉಳಿದಿದೆ.

ಅಜಾಮಿಳನೆಂಬ ಬ್ರಾಹ್ಮಣ

ವೇದವ್ಯಾಸ ವಿರಚಿತ ಶ್ರೀಮದ್ಭಾಗವತ ಪುರಾಣದ ಆರನೇ ಸ್ಕಂದ, ಒಂದನೇ ಅಧ್ಯಾಯದಲ್ಲಿ ಅಜಾಮಿಳ ಕಥೆಯಿದೆ.

ಅಂದಿನ ಕನ್ಯಾಕುಬ್ಜದಲ್ಲಿ (ಇಂದಿನ ಕನೌಜ್) ಅಜಾಮಿಳನೆಂಬ ಬ್ರಾಹ್ಮಣನಿದ್ದ. ಆತನು ವೇದಾಂಗ ಪಂಡಿತನಾಗಿದ್ದ. ಉತ್ತಮ ನಡವಳಿಕೆಯುಳ್ಳವನಾಗಿದ್ದ. ಒಂದು ದಿನ ಅವನು




ಕಾಡಿನಲ್ಲಿ ದೇವರ ಪೂಜೆಗೆ ಹೂವನ್ನು ಸಂಗ್ರಹಿಸುತ್ತಿದ್ದಾಗ ಒಬ್ಬ ಶೂದ್ರ ಕುಡುಕನು ವೇಶ್ಯೆಯೊಂದಿಗೆ ಸರಸದಲ್ಲಿರುವುದನ್ನು ಕಂಡ. ಈ ಪ್ರೇರಕ ದೃಶ್ಯದಿಂದ ಮನಸೋತ ಅಜಾಮಿಳ ಆ ವೇಶ್ಯೆಯನ್ನು ತನ್ನ ಮನೆಯ ಸೇವಕಿಯನ್ನಾಗಿಸಿಕೊಂಡು ಅವಳೊಡನೆ (ಅಕ್ರಮ?) ಸಂಬಂಧವಿರಿಸಿಕೊಂಡ. ಅವನು ತನ್ನ ಪತಿವ್ರತಾ ಗರತಿಯಾಗಿದ್ದ ಹೆಂಡತಿಯನ್ನು ದೂರೀಕರಿಸಿದ. ತಾನು ಗಳಿಸಿದ್ದ ಪಿತ್ರಾರ್ಜಿತವಾಗಿ ಉಳಿದಿದ್ದ ಎಲ್ಲಾ ಸಂಪತ್ತನ್ನೂ ಆ ವೇಶ್ಯೆಯನ್ನು ತೃಪ್ತಿಪಡಿಸಲು ಯತ್ನಿಸುತ್ತಿದ್ದ. ಇನ್ನೂ ಹೆಚ್ಚಿನ ಹಣ ಬೇಕಾದಾಗ ಕದಿಯಲೂ ತೊಡಗಿದ. ಸುಳ್ಳುಗಾರನಾದ, ಕೊಲೆಗಾರನಾದ. ಒಟ್ಟಾರೆ ಓರ್ವ ಸದ್ಗೃಹಸ್ಥ ಬ್ರಾಹ್ಮಣನಾಗಿ ಇರಬೇಕಾಗಿದ್ದ ಎಲ್ಲಾ ಮೌಲ್ಯಗಳನ್ನೂ ಧೂಳೀಪಟ ಮಾಡಿಬಿಟ್ಟು ಪತಿತನಾದ ಅಪರಾಧಿಯೇ ಆಗಿಬಿಟ್ಟಿದ್ದ. ಆ ವೇಶ್ಯೆಯಿಂದ ಅಜಾಮಿಳನಿಗೆ ಹತ್ತು ಮಕ್ಕಳು ಹುಟ್ಟಿದವು. ಕೊನೆಯ ಐದು ವರ್ಷದ ಬಾಲಕ ಅವನಿಗೆ ಪರಮ ಪ್ರೀತ. ಅವನ ಹೆಸರು ನಾರಾಯಣ. ಅವನ ತೊದಲು ನುಡಿಗಳಿಂದ, ಬಾಲ ಸಹಜ ಚೇಷ್ಟೆಗಳಿಂದ ಅವನು ಮನೆಯಲ್ಲಿ ಲವಲವಿಕೆಯ ಕೇಂದ್ರಬಿಂದುವಾಗಿದ್ದ. ಅವನ ಕಂಡರೆ ವಿಶೇಷ ಆಕರ್ಷಣೆ ಮತ್ತು ಪ್ರೀತಿ ಅಜಾಮಿಳನಿಗೆ.

ಅಜಾಮಿಳನಿಗೆ ಸಾಯುವ ಸಮಯ ಬಂದಿತು. ಅಜಾಮಿಳನ ಕಣ್ಣಿನ ಮುಂದೆ ಕ್ರೂರ ಕಣ್ಣುಗಳಿಂದ ಕೈಯಲ್ಲಿ ಪಾಶವನ್ನು ಹಿಡಿದುಕೊಂಡಿರುವಂತಹ ಯಮದೂತರು ಬಂದುಬಿಟ್ಟರು. ಅವರನ್ನು ನೋಡಿ ಅಜಾಮಿಳ ಭಯಭೀತನಾದ. ಭಯದಿಂದಲೋ, ಹತ್ತಿರದಲ್ಲೇ ಮಗ ನಾರಾಯಣ ಆಡುತ್ತಿದ್ದರಿಂದಲೋ, "ನಾರಾಯಣಾ, ನಾರಾಯಣಾ" ಎಂದು ಕೂಗತೊಡಗಿದ. ಅನುದ್ದೇಶವಾಗಿಯೇ ಭಗವಂತ ನಾರಾಯಣ ಸ್ಮರಣೆಯನ್ನು ಮಾಡತೊಡಗಿದ್ದ. ತತ್‌ಕ್ಷಣವೇ ವಿಷ್ಣುದೂತರು ಬಂದರು. ಯಮದೂತರ ಸುಪರ್ದಿನಿಂದ ಬಿಡಿಸಿದರು.

"ಅಜ್ಞಾನದ್ ಅಥವಾ ಜ್ಞಾನದ್ ಉತ್ತಮಶ್ಲೋಕ ನಾಮ ಯತ್

ಸಂಕೀರ್ತಿತಂ ಅಘಂ ಪುಂಸೋ ದಹೇದ್ ಎದೋ ಯಥಾಗ್ನಿ"

ತಿಳಿದೋ, ತಿಳಿಯದೆಯೋ ನಾರಾಯಣನ ಪವಿತ್ರ ನಾಮವನ್ನು ಜಪಿಸಿದರೆ, ಬೆಂಕಿಯು ಒಣಹುಲ್ಲನ್ನು



ಬೂದಿಯಾಗಿಸುವಂತೆ ಆ ಜಪವು ಯಾರೊಬ್ಬನ ಪಾಪಗಳನ್ನು ನಾಶಪಡಿಸುತ್ತದೆ.

ಇನ್ನೂ ಮುಂದುವರಿದು ವಿಷ್ಣುದೂತರಿಗೂ ಮತ್ತು ಯಮದೂತರಿಗೂ ವಾಗ್ವಾದ ನಡೆಯುತ್ತದೆಯಂತೆ.

ಯಮಧರ್ಮನ ನ್ಯಾಯಬದ್ಧವಾದ ಅಣತಿಗೆ ಭಂಗ ತರುವುದಕ್ಕೆ ನೀವು ಯಾರು? ಎಂದು ಯಮದೂತರು ಗದರಿದರೆ, ವಿಷ್ಣುದೂತರು ಸವಾಲೆಸೆಯುತ್ತಾರೆ "ನೀವು ಯಮಧರ್ಮನ ಕಿಂಕರರಾದಲ್ಲಿ ಧರ್ಮದ ಸಾರ ಮತ್ತು ಸಂಕೇತಗಳನ್ನು ತಿಳಿಸಿ" ಎಂದು.

ವಿಷ್ಣುದೂತರಿಗೂ ಮತ್ತು ಯಮದೂತರಿಗೂ ವಾಗ್ವಾದ ನಡೆಯುವುದು. ಯಮದೂತರು ಅವನ ಪಾಪ ಮತ್ತು ಪುಣ್ಯಗಳನ್ನೆಲ್ಲಾ ತುಲನೆ ಮಾಡತೊಡಗಿದರು. ಆದರೆ ವಿಷ್ಣುದೂತರು ಬಿಡಲಿಲ್ಲ. ತಿಳಿಯದೇ ಅಥವಾ ತಿಳಿದೇ ನಾರಾಯಣನ ನಾಮವನ್ನು ಸ್ಮರಿಸಿದರೆ ಅವರ ಪಾಪಕರ್ಮಗಳೆಲ್ಲಾ ನಾಶವಾಗಿಬಿಡುತ್ತದೆ. ಒಂದು ಔಷಧವನ್ನು ತಿಳಿದೇ ಸೇವಿಸಲಿ ಅಥವಾ ತಿಳಿಯದೇ ಸೇವಿಸಲಿ. ಆ ಔಷಧವು ತನ್ನ ಕೆಲಸ ಮಾಡಿಯೇ ತೀರುತ್ತದೆ ಎಂದು



ಅವರ ವಾದ. ಒಟ್ಟಾರೆ ಯಮದೂತರನ್ನು ತಮ್ಮ ವಾದದಿಂದ ಮಂಡಿಸಿ ಕಳುಹಿಸಿಬಿಟ್ಟರು. ಇಷ್ಟಾದ ಮೇಲೆ ಯಮದೂತರಿಂದುಳಿದ ಅಜಾಮಿಳ ಹರಿದ್ವಾರಕ್ಕೆ ಹೋಗುತ್ತಾನೆ. ಅಲ್ಲಿ ನದಿಯ ದಂಡೆಯಲ್ಲಿ ಭಕ್ತಿಯೋಗ ಅಭ್ಯಾಸ ಮಾಡುತ್ತಾನೆ. ಮುಕ್ತಿ ಪಡೀತಾನೆ.

ಭಾಗವತ ಹೇಳೋದೇನಂದ್ರೆ, ಒಂದು ಸಲಕ್ಕೇ ನಾರಾಯಣನ ಜಪ ಅಷ್ಟು ಪವರ್‌ಫುಲ್ ಆಗಿ ಕೆಲಸ ಮಾಡಿತೆಂದರೆ, ಇನ್ನು ಶ್ರದ್ಧಾಭಕ್ತಿಯಿಂದ ಶುದ್ಧ ನೇಮದಲ್ಲಿ ಭಗವಂತ ನಾರಾಯಣನ ನಾಮಸ್ಮರಣೆ ಮಾಡಿಕೊಂಡಿದ್ದರೆ ಇನ್ನೆಷ್ಟು ಒಳಿತಾಗಬಹುದು!

ಈ ಕಥೆಯನ್ನು ಹೇಳುವುದಾದರೂ ಯಾರು? ಶುಕಾಚಾರ್ಯ (ಗಿಳಿಮುಖದ ಮುನಿ) ಪರೀಕ್ಷಿತ ರಾಜನಿಗೆ. ಪರೀಕ್ಷಿತ ನರಕ ಮತ್ತು ನರಕದ ಭಯಾನಕ ಅನುಭವಗಳಿಂದ ಪಾರಾಗುವುದು ಹೇಗೆಂದು ಕೇಳುತ್ತಾನೆ. ಆಗ ನರಕದಿಂದ ಪಾರಾಗುವ ಶಾರ್ಟ್‌ಕಟ್ಟನ್ನು ಶುಕಾಚಾರ್ಯನು ಕಥೆಯ ಮೂಲಕ ಹೇಳುತ್ತಾನೆ.

ಇನ್ನೊಂದು ಮಹತ್ತರವಾದ ವಿಷಯವನ್ನು ನಾವು ಗಮನಿಸಲೇಬೇಕು. ಇಂತಹ ಕಥೆಗಳು ಯಾರೋ ಯಾರಿಗೋ ಹೇಳಿರುತ್ತಾರೆ. ನೇರವಾಗಿ ಕೃತಿಕಾರನು ನಮಗೆ ಹೇಳುವುದಿಲ್ಲ. ಸನಕಾದಿ ಮುನಿಗಳೋ, ಶುಕಾಚಾರ್ಯರೋ, ಜನಮೇಜಯನಿಗೋ, ಪರೀಕ್ಷಿತನಿಗೋ ಅಥವಾ ಮತ್ಯಾರಿಗೋ ಹೇಳಿರುತ್ತಾರೆ. ಅದನ್ನ ಕೃತಿಕಾರ ದಾಖಲಿಸಿರುವಂತೆ ತೋರ್ಪಡಿಸಿಕೊಳ್ಳುತ್ತಾನೆ.

ನಾಮಬಲ

"ನೀನ್ಯಾಕೋ ನಿನ್ನ ಹಂಗ್ಯಾಕೋ, ನಿನ್ನ ನಾಮದ ಬಲವೊಂದಿದ್ದರೆ ಸಾಕೋ" ಎನ್ನುವಷ್ಟರಮಟ್ಟಿಗಿನ ಧೈರ್ಯ ದಾಸರು ತೋರಿದ್ದಾರೆಂದರೆ ಅದು ಅಜಾಮಿಳನಂತಹ ಕಥೆಗಳು ಕೊಟ್ಟಿರುವಂತಹ ಧೈರ್ಯವೇ ಇರಬೇಕು.

ಇಲ್ಲಿ ಅಜಾಮಿಳನ ಕಥೆಯನ್ನು ಗಮನಿಸುವ. ಅಜಾಮಿಳ ಬ್ರಾಹ್ಮಣನಾಗಿದ್ದು ದಾರಿ ತಪ್ಪಿದ್ದ. ಹಾಗಾಗಿ ನಾರಾಯಣನ ನಾಮಸ್ಮರಣೆಯು ಅವನ ಕಾಪಾಡಿತು. ಅವನ ಸಹವಾಸಕ್ಕೆ ಬಂದವಳನ್ನು ವೇಶ್ಯೆಯೆಂದು, ಆ ಶೂದ್ರ ಹೆಂಗಸನ್ನು ವೇಶ್ಯೆ ಎಂದು ಏಕೆ ಕರೆಯುತ್ತಾರೋ ತಿಳಿಯದು. ಏಕೆಂದರೆ ಅವಳು ಅವನೊಟ್ಟಿಗೆ ಬಾಳುತ್ತಾ ಹತ್ತು ಮಕ್ಕಳನ್ನು ಹಡೆದಿದ್ದಾಳೆ! ವೇಶ್ಯೆಯರು ಒಬ್ಬನೊಡನೆ ಹತ್ತು ಮಕ್ಕಳನ್ನು ಹೆರುವಷ್ಟು ಕಾಲ ಇರುತ್ತಾಳೆಯೇ? ಹೋಗಲಿ, ಆ ಹೆಂಗಸೂ (ನನ್ನ ದೃಷ್ಟಿಯಲ್ಲಿ ವೇಶ್ಯೆಯಲ್ಲ) ಕೂಡ ತನ್ನ ಮಗ ನಾರಾಯಣನನ್ನು ಕರೆಯುತ್ತಿರುತ್ತಾಳಲ್ಲವೇ? ಅವಳಿಗೆ ವಿಷ್ಣುದೂತರು ಅಟೆಂಡ್ ಮಾಡಿದರೋ ಇಲ್ಲವೋ ತಿಳಿಯದು. ಅಷ್ಟು ಯೋಚಿಸುವುದು ತಪ್ಪೇನೋ. ಏಕೆಂದರೆ ಬ್ರಾಹ್ಮಣ ಕುಲದಲ್ಲೇ ಹುಟ್ಟಿದರೂ ಸ್ತ್ರೀಯರು ಶೂದ್ರರಂತೆ! ಅವರಿಗೆ ವೇದಾಧಿಕಾರ ಮತ್ತು ಉಪನಯನಾದಿಗಳು ಇರುವುದಿಲ್ಲವಂತೆ!


ಅದೇನೇ ಇರಲಿ, ಈ ಕಥೆಗಳು ಹುಟ್ಟಿ ಬಂದಿರುವುದು ಬುದ್ಧನ ನಂತರ. ಬುದ್ಧನ ಜನ್ಮಾಂತರದ ಕಥೆಗಳು, ಕರ್ಮ ಸಿದ್ಧಾಂತದ ಕಥೆಗಳು ಜನಜನಿತವಾಗುತ್ತಿರುವ ಸಂದರ್ಭದಲ್ಲಿ ವೈಷ್ಣವ ಧರ್ಮವನ್ನು ಉದಾತ್ತೀಕರಿಸುವ ಅಗತ್ಯ ವೈದಿಕರಿಗಿತ್ತು. ವೇದಾನುಷ್ಠಾನ ಇತ್ಯಾದಿ ಕಷ್ಟಗಳ ಹೊರತಾಗಿಯೂ ಬ್ರಾಹ್ಮಣ್ಯವನ್ನು, ವೈಷ್ಣವ ಧರ್ಮವನ್ನು ಉಳಿಸಿಕೊಳ್ಳುವ ಅಗತ್ಯ ಅವರಿಗಿತ್ತು.

ರಾಮಾಯಣ, ಮಹಾಭಾರತ (ಅದರ ಭಾಗವಾದ ಭಗವದ್ಗೀತೆ) ಮತ್ತು ಭಾಗವತದಂತಹ ಕೃತಿಗಳು ಕಾಲದಿಂದ ಕಾಲಕ್ಕೆ ಸ್ಪಷ್ಟ ಮತ್ತು ಹೆಸರು ಹೇಳಿಕೊಳ್ಳುವ ಕೃತಿಕಾರನಿಲ್ಲದೆಯೇ ಪರಿಷ್ಕೃತಗೊಳ್ಳುತ್ತಲೇ ಬಂದಿವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳೋಣ. ಬೇಕಾದಷ್ಟು ಜನರು, ಆಯಾ ಕಾಲದ ಆಶೋತ್ತರಗಳಿಗೆ ಸ್ಪಂದಿಸುತ್ತಾ, ಸಂಗತಿಗಳಿಗೆ ಪ್ರತಿಕ್ರಿಯಿಸುತ್ತಾ, ತಮ್ಮ ಸಿದ್ಧಾಂತವನ್ನು ಎತ್ತಿ ಹಿಡಿಯಲು ಬೇಕಾದಂತಹ ಅಂಶಗಳನ್ನು ಸೇರಿಸುತ್ತಾ ಹೋಗಿದ್ದಾರೆ.

ನೀನು ಯಾವುದೇ ಕರ್ಮ ಮಾಡಿದ್ದರೂ, ನಿನಗೆ ಬ್ರಾಹ್ಮಣ್ಯದ ಹಿನ್ನೆಲೆ ಇದ್ದರೆ ನೀನು ನಿನ್ನ ಕುಕರ್ಮ ಬಂಧನದಿಂದ ಬರಿಯ ನಾಮಸ್ಮರಣೆ ಮಾಡಿಯೇ ತಪ್ಪಿಸಿಕೊಳ್ಳಬಹುದು ಎಂಬ ಧಾರ್ಷ್ಟ್ಯದ ಸಿದ್ಧಾಂತ ಹುಟ್ಟಿದ್ದು ಬಲು ವಿಷಾದನೀಯ. ಇದು ಬೇಕಾದ ತಪ್ಪುಗಳನ್ನು ಮಾಡಿ ಭಗವಂತನಿಗೆ ಶರಣಾಗಿ ಅವುಗಳೆಲ್ಲದರಿಂದ ತಪ್ಪಿಸಿಕೊಳ್ಳಬಹುದೆಂಬ ಅಪಾಯಕರ ಅನೈತಿಕ ಪಾಠ ಹೇಳಿಕೊಡುತ್ತದೆ.

ಮಾಡಬಾರದ ಕೆಲಸ (ಅವರ ಪ್ರಕಾರವೇ) ಮಾಡಿ ಮಗನ ಕರೆದಾಗ ಅಜಾಮಿಳನ ರಕ್ಷಿಸಲು ಓಡೋಡಿ ಬಂದ ಮಾನಗೇಡಿ ವಿಷ್ಣುದೂತರ ನೈತಿಕ ಬದ್ಧತೆಯ ಬಗ್ಗೆ ಯೋಚಿಸುವಾಗಲೇ, ಯಾಕೋ ಜನಾರ್ದನ ರೆಡ್ಡಿಯೆಂಬ ಮಾಜಿ ಸಚಿವ ತಿರುಪತಿ ತಿಮ್ಮಪ್ಪನಿಗೆ ವಜ್ರದ ಕಿರೀಟವಿಟ್ಟರೂ, ತಾನು ಮಾಡಿದ ಕರ್ಮಾನುಸಾರ ಜೈಲಿನ ಚೊಂಬು ಧರಿಸುವುದು ತಪ್ಪಿಲ್ಲದಿರುವುದು ನೆನಪಿಗೆ ಬರುತ್ತದೆ. ■

ದಲಿತರ 'ಎನಿಮಿ ಸಂಗ್ರಹಾಲಯ' ಈಗ ಎಷ್ಟು ಪ್ರಸ್ತುತ?



ಕಳೆದ ಡಿ. 6ರ ಅಂಬೇಡ್ಕರ್ ಪರಿನಿರ್ವಾಣದ ದಿನ ದಂದು ಆ ವರ್ಷ ಸುದ್ದಿಯಲ್ಲಿದ್ದ ದಲಿತ ಯುವ ಕವಿಯೊಬ್ಬ ರನ್ನು ಗೌರಿ ಲಂಕೇಶರ ನೆರವಿನೊಂದಿಗೆ ಉಡುಪಿಗೆ ಆಹ್ವಾನಿಸಲಾಗಿತ್ತು, ನನ್ನ ಅಣ್ಣನ ಕಾರಿನಲ್ಲಿ ಬ್ರಹ್ಮಾವರದಿಂದ ಉಡುಪಿಗೆ ಹೋಗೋ ಸಮಯದಲ್ಲಿ ನನಗಿಂತ ಕಿರಿಯರಾದ ಅವರನ್ನು ಕುತೂಹಲಕ್ಕಾಗಿ ಗಾಂಧಿಯವರ ಬಗ್ಗೆ ಕೇಳಿದಾಗ ಸಕಾರಾತ್ಮಕವಾಗೇ ಅವರು ಉತ್ತರಿಸಿದರು. ಈ ಬಗ್ಗೆ ದಲಿತ ಸಮುದಾಯದಲ್ಲಿರುವ ಗೊಂದಲಗಳ ಬಗ್ಗೆಯೂ ಮಾತುಗಳು ಬಂದು ನಾನು "ನಮ್ಮ ಬಹಳ ದೊಡ್ಡ ಸಮಸ್ಯೆಯೆಂದರೆ ಇದೇನೇ. ನಮ್ಮ ನಿಜ ವೈರಿ ಯಾರು? ಎಂಬುವುದರ ಬಗ್ಗೆಯೇ ನಮಗೆ ಸ್ಪಷ್ಟತೆ ಇಲ್ಲ. ಆ ಗೊಂದಲವನ್ನಿಟ್ಟುಕೊಂಡೇ ನಾವು ಹೋರಾಟಕ್ಕಿಳಿದಿದ್ದೇವೆ. ಹಾಗಾಗಿ ಎಲ್ಲ (ಜನ ಸಂಖ್ಯೆ ಕೆಚ್ಚು ಪ್ರಾಮಾಣಿಕತೆ ಇತ್ಯಾದಿ) ಇದ್ದೂ ಕೂಡ ನಮಗೆ ಸ್ವಲ್ಪವೂ ಗುರಿಯೆಡೆಗೆ ಸಾಗಲಾಗುತ್ತಿಲ್ಲ. ಇದಕ್ಕೂ ಹೀನವಾಗಿ ಸ್ಪಷ್ಟತೆ ಇರದ ಕಾರಣ ಸುಲಭದಲ್ಲಿ ಪಟ್ಟಭದ್ರರಿಂದ ಮುಖ್ಯವಾಗಿ ಯುವ ಪೀಳಿಗೆ ದಾರಿ ತಪ್ಪಿಸಲ್ಪಡುತ್ತಿದೆ ಯಾವತ್ತೂ ನಮ್ಮ ಪ್ರಾಮಾಣಿಕ ಹಿತಚಿಂತನೆ ಮಾಡದ ಸಮಯಸಾಧಕ ಆರೆಸೆಸ್ ಕೂಡ ನಮಗೆ ಆಪ್ಯಾಯಮಾನ ವಾಗಿ ತೋರುವುದು ಇಂತಹ ಗೊಂದಲದ ಕಾರಣಕ್ಕೆ" ಎಂದೆ.


ಹೌದು, ದಲಿತರ ಪಾಲಿಗೆ ಇದೊಂದು ದೊಡ್ಡ ಮಟ್ಟದ ವೈಚಾರಿಕ ತಡೆಯಾಗಿದೆ. ಯುವ ಜನಾಂಗ ಹೊಸ ಪೀಳಿಗೆಗೆ ದಲಿತ ಇತಿಹಾಸದ ಸ್ಪಷ್ಟ ಚಿತ್ರಣ ಸಿಗದೇ ಈ ಗೊಂದಲದಲ್ಲಿ ಅವರೂ ಕೂಡ ಎಬಿವಿಪಿಗಳ ಗಾಳದ ಹುಳುಗಳಾಗುತ್ತಿದ್ದಾರೆ. ದಲಿತ ಚಳವಳಿಗಳಲ್ಲಿ ಕಾಣಿಸಿಕೊಳ್ಳುವ ಯುವ ಜನಾಂಗದ ಸಂಖ್ಯೆಯೂ ಕಡಿಮೆಯಾಗುತ್ತಿದೆ.

ಹೌದು, ಗಾಂಧೀಜಿಯಿಂದ, ಕಾಂಗ್ರೆಸ್‌ನಿಂದ, ಕಮ್ಯುನಿಸ್ಟ್‌ರಿಂದ ದಲಿತರಿಗೆ ಅನ್ಯಾಯವೇ ಆಗಲಿಲ್ಲ; ಅವರೆಲ್ಲರೂ ದಲಿತರನ್ನು ತಲೆ ಮೇಲೆ ಹೊತ್ತು ಮೆರೆದರು ಎಂದು ಸಾಧಿಸುವುದು ಈ ಲೇಖನದ ಉದ್ದೇಶ ಖಂಡಿತಾ ಅಲ್ಲ. ಮೇಲಿನವುಗಳನ್ನು ಸಾಂದರ್ಭಿಕವಾಗಿ ಸಾಕಷ್ಟು ಬಾರಿ ಟೀಕಿಸಿಯೂ ಇರುವ ನನಗೆ ಅವುಗಳ ನಿಶ್ಯರ್ಥ ಭಜನೆಯೂ ವರ್ಜ್ಯವೇ. ಬಿಜೆಪಿಯ ಯಾವುದೋ ಹುಚ್ಚು ಹೆಂಗಸೊಬ್ಬಳು ಇತ್ತೀಚೆಗೆ ಬಹಿರಂಗಸಭೆಯಲ್ಲಿ "ನಮ್ಮ ಪಾದ ಸೇವೆ ಮಾಡುವಂತವವರನ್ನೆಲ್ಲ ಈಗ ನಾವು 'ಜೀ ಹುಜೂರ್....' ಎನ್ನುವಂತ ದರಿದ್ರ ಕಾಲ ಬಂದಿದೆಯಲ್ಲ" ಎಂದು ಮರುಗುತ್ತಾಳೆ. ಇವಳ ತಪ್ಪೇನಿಲ್ಲ, ಎಲ್ಲ ಮೇಲ್ವರ್ಗದವರ ಮನದಲ್ಲಿನ ಮಾತುಗಳು ಬಹಿರಂಗವಾಗಿ ಈ ಕೋಣಪಿಯ ಬಾಯಿಂದ ಹೊರ ಬಂದಿದೆಯೇ ವಿನಹ ಇದು ಇವತ್ತೇ ಹುಟ್ಟಿದಂತಹ ಹೊಸ ಸಂಗತಿಯೇನಲ್ಲ, ಶಿವರಾಮ ಕಾರಂತರ ಅಣ್ಣ ಕೋಟ ವಾಸುದೇವ ಕಾರಂತರೂ ಸಹ ಇಂತಹ ಅಭಿಪ್ರಾಯಗಳನ್ನು ಬಹಳ ಹಿಂದೆಯೇ ತಮ್ಮ ಪುಸ್ತಕಗಳಲ್ಲಿ ದಾಖಲಿಸಿದ್ದರು.

ಎರಡು ಶತಮಾನಗಳ ಕಾಲ ಭಾರತವನ್ನಾಳಿದ ಬ್ರಿಟಿಷರ ಕೊಡುಗೆ ದೇಶಕ್ಕೆ ಸಾಕಷ್ಟಿದೆ. ಆದರೆ ಅವರು ಸನಾತನ ಧರ್ಮಕ್ಕೆ ಮಾಡಿದ ದೊಡ್ಡ ಹಾನಿಯೆಂದರೆ ವಿದ್ಯೆಯ ಬೇಲಿಯನ್ನು ಮುರಿದು ಅದನ್ನು ಎಲ್ಲರಿಗೂ ಸಿಗುವಂತೆ ಮಾಡಿದ್ದು. (ಕುದ್ಮುಲ್ ರಂಗರಾಯರ ದಲಿತ ಶಿಕ್ಷಣ ಕ್ರಾಂತಿಗೆ ಬ್ರಿಟಿಷ್ ನ್ಯಾಯಾಧೀಶರ ಸಲಹೆಯೇ ಮುಖ್ಯ ಕಾರಣವಾಗಿತ್ತು) ಚಿಡ್ಡಿ ಕೋಣಪಿಯದ್ದೇ ಮನಸ್ಥಿತಿಯ ಆವತ್ತಿನ ಸನಾತನ ಮಂದಿ ಇದರಿಂದ ತೀವ್ರ ಉರಿದು 'ಚಲೇ ಜಾವ್'ಗೆ ಕೈ ಜೋಡಿಸಿದ್ದು ಇತಿಹಾಸ.

ಬಾವಿಯೊಳಗಿನ ಕಪ್ಪೆಯಂತಿದ್ದ ಅಂದಿನ ವ್ಯಕ್ತಿಗಳಿಗೆ ಪಾಶ್ಚಾತ್ಯ ಶಿಕ್ಷಣ ಹೊಸ ದಿಕ್ಕನ್ನು ತೋರಿದವು. ಗಾಂಧಿ, ನೆಹರು, ಅಂಬೇಡ್ಕರ್, ರಾಜಾ ರಾಮಮೋಹನ ರಾಯ್‌ರಂತವರು ಹೊಸ ಜಗತ್ತಿಗೆ ತೆರೆದುಕೊಂಡು ಸಾಮಾಜಿಕ ಬದಲಾವಣೆಗಾಗಿ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿದರು. ಕೆಲವರನ್ನು ಮಾರ್ಕ್ಸ್ ವಾದ ತಟ್ಟಿತು. ಇಂತಹ ಬದಲಾವಣೆಯ ಫಲಿತಾಂಶವನ್ನೇ ನಾವೀಗ (ಶೂದ್ರರು ಸ್ತ್ರೀಯರು) ಉಣ್ಣುತ್ತಿದ್ದೇವೆನ್ನುವುದು ವಸ್ತುಸ್ಥಿತಿ. ಬ್ರಾಹ್ಮಣ ಕ್ಷತ್ರಿಯ ಪುರುಷರಿಗಷ್ಟೇ ಸೀಮಿತವಿದ್ದ ಭಾರತದ ವೈದಿಕ ಧಾರ್ಮಿಕ ಶಿಕ್ಷಣ ಪಡೆದವರಿಂದ ಇಂತಹ ಸಾಮಾಜಿಕ ಬದಲಾವಣೆ, ಹೊಸ ಸುಧಾರಣಾ ಹರಿಕಾರರ ಹುಟ್ಟು ಹಾಕುವಿಕೆ ಕಷ್ಟ ಸಾಧ್ಯ.

ವಿವಾದಕ್ಕೆ ದೀರ್ಘ ಇತಿಹಾಸವಿರುವ ಗಾಂಧೀಜಿಯ ಕತೆ ಬಿಡಿ ಸ್ವಾಮಿ ವಿವೇಕಾನಂದರು ಯಾವುದೋ ಸಂದರ್ಭದಲ್ಲಿ ಶೂದ್ರರ ಬಗ್ಗೆ ಋಣಾತ್ಮಕವಾಗಿ ಮಾತನ್ನಾಡಿದ್ದರೆಂದು ಅವರ ಸಾವಿರಾರು ಪ್ರೋತ್ಸಾಹಕ ಸಾಮಾಜಿಕ ಕಳಕಳಿಯ ಮಾತನ್ನೇ ನಾವು ಮರೆಯುತ್ತೇವೆ. ಯಾವುದೋ ಸಂದರ್ಭದಲ್ಲಿ ಇಲ್ಲಿನ ಕಮ್ಯುನಿಸ್ಟರು ಅಂಬೇಡ್ಕರರ ಕಾಲೆಳೆಯುವಂತಹ ಕೆಲಸ ಮಾಡಿದ್ದರೆಂದು ಇದೀಗ ತಮ್ಮ ತಪ್ಪು ತಿದ್ದಿಕೊಳ್ಳಹೊರಟ ಕಮ್ಯುನಿಸ್ಟರನ್ನು ಇನ್ನೂ ಅಸ್ಪೃಶ್ಯರಂತೆ ಪರಿಭಾವಿಸುತ್ತೇವೆ. ಕನ್ನಯ್ಯ ದಲಿತರ ವೈರಿ ಭೂಮಿಹಾರ್ ಜಾತಿಯವನೆಂಬ ಒಂದೇ ಕಾರಣಕ್ಕಾಗಿ ಕನ್ನಯ್ಯನ ಕುರಿತಾಗಿ ಆರೆಸೆಸ್‌ನ ಖೊಟ್ಟಿ ಮಾತಿಗೆ ತಲೆಯಾಡಿಸುತ್ತಾ ಆತ ಹಾಗು ಆತನಂತವರು "ಜೈ ಭೀಮ್" ಎನ್ನಬಾರದೆಂದು ತಾಕೀತು ಮಾಡುವಂತಹ ಬೆಳವಣಿಗೆಗಳು ದಲಿತ ಚಳವಳಿಗೆ ಯಾವತ್ತೂ ಪೂರಕವೆಂದೆನಿಸದು. ಯಾವುದೋ ದುರ್ಬಲ ನೆವನದಲ್ಲೇ ಜೋತಾಡುತ್ತಾ ವಿವೇಕಾನಂದರು, ಕನ್ನಯ್ಯ ಕುಮಾರಂತವರನ್ನು ದೂರೀಕರಿಸುತ್ತಾ ಸಾಗಿದರೆ ಅದು ನಮ್ಮ ಹಿನ್ನಡೆಯೇ ಹೊರತು ಸಾಧನೆಯೆನಿಸಲಾರದು.




ಸಾಂಪ್ರದಾಯಿಕವಾಗಿ ಬ್ರಾಹ್ಮಣರು ದಲಿತರ ಪರಮ ಸೈದ್ಧಾಂತಿಕ ಶತ್ರುಗಳು. ಆದರೆ ಸಾರಾಸಗಟಾಗಿ ಎಲ್ಲರನ್ನೂ ಹಾಗೆ ನೋಡಲಾದೀತೆ? ಖಂಡಿತ ಇಲ್ಲ, ಅಂಬೇಡ್ಕರ್ ಹೆಸರಲ್ಲೇ ಅಂಬೇವಾಡೆಕರ ಎಂಬ ಬ್ರಾಹ್ಮಣ ಹೆಸರಿದೆ. ಕುದ್ಮುಲ್ ರಂಗರಾಯರಿಂದ ಹಿಡಿದು ಇವತ್ತಿಗೂ ದೇಶಾದ್ಯಂತ ದಲಿತಪರ ಅನೇಕ ಪ್ರಾಮಾಣಿಕ ಬ್ರಾಹ್ಮಣ ಹೋರಾಟಗಾರರಿದ್ದಾರೆ. ಅದೇರೀತಿ ಸ್ವಂತ ಮನೆಗೆ ಕನ್ನ ಕೊರೆಯುತ್ತಿರುವ ಚೆನ್ನಯ್ಯನಂತಹ ಸ್ವಾರ್ಥಿ ದಲಿತ ಖಾವಿ ವೇಷಧಾರಿಗಳು ರಾಜಕಾರಣಿಗಳೂ ಸಾಕಷ್ಟಿದ್ದಾರೆ. ಇವರನ್ನೆಲ್ಲ 'ಸರಿಯಾಗಿ' ಗ್ರಹಿಸಿ ಮುನ್ನಡೆಯುವ ಅವಶ್ಯಕತೆ ನಮ್ಮ ಮುಂದಿದೆಯೇ ಹೊರತು ಪೂರ್ವಾಗ್ರಹದ ತೀರ್ಮಾನಗಳಲ್ಲ.

ಐತಿಹಾಸಿಕವಾಗಿ ಒಡೆದು ಆಳುವ ನೀತಿಯನ್ನು ಅನುಸರಿಸಿದವರು ಚಾಣಕ್ಯ ಕುಲದ ವೈದಿಕರು. ಅವರು ಈಗ ಮಾಡುತ್ತಿರುವುದು ಕೂಡ ಇದನ್ನೇ. ಸ್ವಾಮಿಯೋ ರಾಜಕಾರಣಿಯೋ ಯಾರೋ ಒಬ್ಬನನ್ನು ಬುಟ್ಟಿಗೆ ಹಾಕಿಕೊಂಡು ದಲಿತರೊಳಗೆ ಭಿನ್ನವಾದ ಹಬ್ಬಿಸಿ ದಲಿತರನ್ನು ಸೈದ್ಧಾಂತಿಕವಾಗಿ ಒಡೆಯುತ್ತಿದ್ದಾರೆ. ದಲಿತರೆದುರು ಹಲವು ಹಳೆಯ ಹಾಗು ಹೊಸ ವೈರಿಗಳನ್ನು ಸೃಷ್ಟಿಸಿ ಜೀವಂತ ವಾಗಿರಿಸಿ ದಲಿತರ ಸಹಜ ವೈದಿಕ ದ್ವೇಷದ ತೀವ್ರತೆಯನ್ನು ಬೇರೆಡೆಗೆ ತಿರುಗಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಇವ್ಯಾವುದರ ಪರಿಗಣನೆ ಇಲ್ಲದೇ ಕೆಲವರು ಹೊಸ ಹೊಸ ವೈರಿ (ಕನ್ನಯ್ಯನಂತಹ)ಗಳ ಸಂಗ್ರಹದಲ್ಲೇ ತಮ್ಮನ್ನು ತೊಡಗಿಸಿಕೊಳ್ಳುತ್ತಿರುವುದು ಮಾತ್ರ ಒಗಟಿನಂತೆ ಕಾಡುತ್ತಿದೆ.

-ಆರ್ ಎಸ್ ಪಿ, ಮಂಗಳೂರು

ಮೋದಿ ಅಲೆ ಹೊಸ ವ್ಯಾಖ್ಯಾನ?

ಸಹಜವಾಗಿ ಬದುಕುವ ಮಾಮೂಲಿ ಜನರನ್ನು ಹೋಲಿಸಿದರೆ ಕಳ್ಳನಿಗೆ ಸುಳ್ಳನಿಗೆ ಕೊಲೆಪಾತಕಿಗೆ ತಾನು ಒಳ್ಳೆಯವನೆಂದು ಸಮಾಜಕ್ಕೆ ತೋರಿಸಿಕೊಳ್ಳುವ ಜರೂರತ್ತು ಸದಾ ಎಚ್ಚರಿಸುತ್ತಿರುತ್ತದೆ. ಈ ಕಾರಣಕ್ಕೆ ಇಂತವರು ಆಗಾಗ ದೇಗುಲಕ್ಕೆ ಸೇವೆ, ದಾನ, ರಥಸಮರ್ಪಣೆ ಇನ್ನೆಂಥದ್ದೋ



ಕಟ್ಟಿಸಿ ಕೊಡುವುದನ್ನು ಮಾಡುತ್ತಿರುತ್ತಾರೆ. ಅ... ಜನಸಾಮಾನ್ಯನಿಗೆ ಈ "ಪೋಷಿನ" ಅಗತ್ಯವಿರದು. ದೇ... ಬಡವರನ್ನು ಕಡೆಗಣಿಸಿ ಕಾರ್ಪೊರೇಟ್ ಕುಳ... ಶ್ರೇಯೋಭಿವೃದ್ಧಿಗಾಗಿ ಮಾರಿಷಸ್, ಲಂಡನ್, ಅಮೆ... ಸುತ್ತಾಡುವ ಮೋದಿ ಆಗಾಗ "ನಾನು ಚಾ ಅಂಗಡಿಯ... ಬೀಡಾ ಅಂಗಡಿಯಲ್ಲಿದ್ದೆ, ಕಳ್ಳಂಗಡಿಯಲ್ಲಿದ್ದೆ" ಎ... ಸಂದರ್ಭಕ್ಕೆ ತಕ್ಕಂತಹ ಹೊಸ ಹೊಸ ಕಥೆಕಟ್ಟಿ ಜನ... "ಮಂಕಿ ಬಾತ್" ಮಾಡಲು ಹವಣಿಸುವುದುಂಟು...

ಆದರೂ ಕೆಲವರು ಮೋದಿ ಹಿಂದಿನಂತಿಲ್ಲ, ... ಬದಲಾಗಿದ್ದಾರೆ ಎನ್ನುವುದುಂಟು. ಗುಜರಾತಿನ ಕಗ್ಗೊ... ಯನ್ನು ಅಲ್ಲಿ ಅಮಾನುಷವಾಗಿ ಸತ್ತ (ಅಥವ ಸಾಯಿಸ... ಒಂದು ಧರ್ಮದವರ ಬಗ್ಗೆ "ಕಾರಿನಡಿ ಸಿಕ್ಕ ಕುನ್ನಿಗ... ಎಂದು ತನ್ನ ಹೀನತನವನ್ನು ಜಾಹೀರು ಮಾಡಿದ್ದ ಮೋ... ಡೆಲ್ಲಿಯಲ್ಲಿ ನಡೆದ ಸಮ್ಮೇಳನದಲ್ಲಿ ಅದೇ ಧರ್ಮ... ಇನ್ನಿಲ್ಲದಂತೆ ಅಟ್ಟಕ್ಕೇರಿಸಿ ಹೊಗಳುತ್ತಾನೆ. ಅಜ್ಮೇ... ಚಾದರವನ್ನು ತನ್ನವರ ಮೂಲಕ ಸಮರ್ಪಿಸುತ್ತಾನೆ. ... ಇತ್ತೀಚಿನ ಚುನಾವಣಾ ಪ್ರಚಾರ ವೇಳೆಯಲ್ಲಿ ನಮಾಜಿ... ಬಾಂಗ್ (ಕರೆ) ಕೇಳಿಸಿದಾಗ ಅದು ಮುಗಿಯುವ ... ತನ್ನ ಭಾಷಣವನ್ನು ನಿಲ್ಲಿಸಿ ಗೌರವಿಸಿ ಅದನ್ನು



ಕನ್ನಡಿಗರು ಭಾಷಾ ದುರಭಿಮಾನಿಗಳೇ? ಜನಾಂಗೀಯ ದ್ವೇಷಿಗಳೇ

ಪ್ರತಿಬಾರಿ ಕನ್ನಡೇತರರ ಮೇಲೆ ಮತ್ತು ವಿದೇಶಿಯರ ಮೇಲೆ ಬೆಂಗಳೂರಿನಲ್ಲಿ ಹಲ್ಲೆಯಾದಾಗ ಇಂತಹ ಕೂಗು ಜೋರಾಗಿ ಉಚ್ಚಸ್ತರದಲ್ಲಿ ಕೇಳುತ್ತದೆ. ಕೆಲವು ಮಾಧ್ಯಮಗಳಲ್ಲಿ - ಮುಖ್ಯವಾಗಿ ದೆಹಲಿ ಮತ್ತು ಮುಂಬೈ ಮೂಲದ ರಾಷ್ಟ್ರೀಯ ಚಾನೆಲ್‌ಗಳು - ಹಲ್ಲೆಗೊಳಗಾದವರೆಂದು ಹೇಳಲಾದವರ ಧ್ವನಿಯಾಗಿ ಕನ್ನಡಿಗರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಇಂತಹ ವರದಿ ಬಂದತಕ್ಷಣ, ತಾನೇ ಮೊದಲು ಮತ್ತು ತಾನೊಬ್ಬನೇ ಎನ್ನುವ ಧಾವಂತದಲ್ಲಿ ಪ್ರಕರಣದ ಪೂರ್ಣ ವಿವರ ಪಡೆಯದೇ ಕನ್ನಡಿಗರನ್ನು ಖಳನಾಯಕರನ್ನಾಗಿ, ಭಾಷಾಂಧರರಾಗಿ ಮತ್ತು ಜನಾಂಗೀಯ ದ್ವೇಷಿಗಳಾಗಿ ಬಿಂಬಿಸುತ್ತಾರೆ. ಇಂತಹ ಘಟನೆಗಳನ್ನು ರಾಷ್ಟ್ರೀಯ ವಿಪತ್ತು ಎನ್ನುವಂತೆ ಈ ಚಾನೆಲ್‌ಗಳು ಬಿತ್ತರಿಸುತ್ತವೆ. ಚರ್ಚೆಗಳಲ್ಲಿ ಕೆಲವು ಪೂರ್ವಗ್ರಹಪೀಡಿತ, ಚಿಂತಕರು, ಬುದ್ಧಿಜೀವಿಗಳು, ರಾಜಕಾರಣಿಗಳು ತುಂಬಿರುತ್ತಿದ್ದು, ಕನ್ನಡಿಗರ ಮಾನವನ್ನು ಹರಾಜು ಹಾಕುತ್ತಾರೆ. ಈ ಚರ್ಚೆಯಲ್ಲಿ ಕನ್ನಡ ಪರ ಧ್ವನಿ ಎತ್ತುಪವರು ಯಾರೂ ಇರುವುದಿಲ್ಲ ಮತ್ತು ಇದ್ದರೂ ಏಕಪಕ್ಷೀಯ ಚರ್ಚೆಯಲ್ಲಿ ಇವರ ಧ್ವನಿಯನ್ನು ಹತ್ತಿಕ್ಕಲಾಗುತ್ತದೆ. ಈ ಕಾರ್ಯಕ್ರಮಗಳು ದಿನಗಟ್ಟಲೇ ಪ್ರಸಾರವಾಗುತ್ತವೆ. ಕರ್ನಾಟಕದ ಯಾವ ಸಮಸ್ಯೆಗಳಿಗೂ ತಕ್ಷಣ ಸ್ಪಂದಿಸದ ದೆಹಲಿ ಸರ್ಕಾರ ಇಂತಹ ಪ್ರಕರಣಗಳಿಗೆ ಕೂಡಲೇ ಪ್ರತಿಕ್ರಿಯಿಸುತ್ತದೆ. ಈ ಪಟ್ಟಿಗೆ ಇತ್ತೀಚೆಗೆ ಸೇರಿದ ಪ್ರಕರಣ ತಾಂಜಾನಿಯಾ ವಿದ್ಯಾರ್ಥಿಗಳ ಮೇಲೆ ಹಲ್ಲೆ ಮತ್ತು ಆ ದೇಶದ ಹುಡುಗಿಯೊಬ್ಬಳನ್ನು ಅರೆನಗ್ನವಾಗಿಸಿ ರಸ್ತೆಯಲ್ಲಿ ಓಡಿಸಿದ ಆಪಾದನೆ.

ಐಟಿ ಸಿಟಿ, ಪಬ್ ಸಿಟಿ ಮತ್ತು ಜಾಗತಿಕ ಸಿಟಿ ಎಂದೆಲ್ಲಾ ಹಣೆಪಟ್ಟಿ ಅಂಟಿಸಿಕೊಂಡಿರುವ ಬೆಂಗಳೂರನ್ನು ಸ್ವಚ್ಛಂದ ಜೀವನಕ್ಕೆ ಹೇಳಿ ಮಾಡಿಸಿದ ಸ್ಥಳ ಎನ್ನುವ ಟೀಕೆಯಲ್ಲಿ ಅರ್ಥವಿಲ್ಲದಿಲ್ಲ, ಇಲ್ಲಿಯ ಕಾಸ್ಮೋಪೊಲಿಟನ್ ಸಂಸ್ಕೃತಿ ಮತ್ತು ಆಹ್ಲಾದಕರ ಹವಾಮಾನಕ್ಕೆ ಮನಸೋತು ಇಲ್ಲಿಗೆ ಬಂದವರು ಯಾರೂ ತಿರುಗಿ ಹೋಗುವದಿಲ್ಲ. ನಾಲ್ಕೈದು ವರ್ಷಗಳ ಕೋರ್ಸನ್ನು 14-15 ವರ್ಷ ಓದುವವರೂ ಇದ್ದಾರೆ. ಇತ್ತೀಚೆಗೆ 14 ವರ್ಷಗಳಿಂದ ಬಿಬಿಎಸ್ ಓದುತ್ತಿರುವ ವಿದ್ಯಾರ್ಥಿಯ ಇಂತಹ ಪ್ರಕರಣ ನ್ಯಾಯಾಲಯದಲ್ಲಿ ಪ್ರಸ್ತಾಪವಾಗಿತ್ತು, ಭಾರತವು ಶೈಕ್ಷಣಿಕ ಸೌಲಭ್ಯದ ದೃಷ್ಟಿಯಲ್ಲಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸುವಂತಿದೆ. ಅಂತೆಯೇ, ತಾಂಜಾನಿಯಾ, ನೈಜೀರಿಯಾ, ಸೂಡಾನ್ ಮುಂತಾದ ಆಫ್ರಿಕನ್ ದೇಶಗಳಿಂದ ಹಿಂಡು-ಹಿಂಡಾಗಿ ವಿದ್ಯಾರ್ಥಿಗಳು ಬರುತ್ತಿದ್ದು, ಹಲವರು ದೊರೆತ ಅವಕಾಶವನ್ನು ಸದುಪಯೋಗಮಾಡಿಕೊಂಡು ಹಿಂತಿರುಗಿ ಹೋಗುತ್ತಾರೆ. ಓದಲು ಬಂದ ನೈಜೀರಿಯಾದ ಹುಡುಗನೊಬ್ಬ ಕನ್ನಡವನ್ನಲ್ಲದೇ, ಕನ್ನಡ ಸಂಗೀತ ಕಲಿತು, ಜಿ ಕನ್ನಡ ವಾಹಿನಿಯವರು ನಡೆಸುವ ಸಂಗೀತ ಸ್ಪರ್ಧೆಯಲ್ಲಿ ಕನ್ನಡಿಗರಿಗೇ ಚಾಲೆಂಜ್ ಕೊಡುವಷ್ಟು ಸಾಧನೆ ತೋರುತ್ತಿದ್ದಾ... ಆದರೆ, ಕೆಲವರು ದುಶ್ಚಟಗಳ ದಾಸರಾಗಿ, ಕುಡಿತ, ಹೊಡೆದಾಟ, ಡ್ರಗ್ಸ್ ಇತ್ಯಾ... ಚಟುವಟಿಕೆಗಳಲ್ಲಿ ತೊಡಗುತ್ತಾರೆ.



ಕಾಳರಾತ್ರಿಯ ಅವರ ಚಟುವಟಿಕೆಗಳನ್ನು ನೋಡಿ ಬಡಾವಣೆಯ ಜನ ರೋ... ಹೋಗಿದ್ದಾರೆ. ಪಬ್‌ನಲ್ಲಿ, ಬಾರ್‌ನಲ್ಲಿ, ಹೋಟೆಲ್ಲಿನಲ್ಲಿ, ಮಾಲ್‌ನಲ್ಲಿ, ಮಲ್ಟಿಪ್ಲೆಕ್ಸ್‌ನ... ಟ್ರಾಫಿಕ್ ಪೊಲೀಸರೊಂದಿಗೆ ಅವರ ತಗಾದೆ, ಜಗಳ, ಪುಂಡಾಟಿಕೆ, ಹೊಡೆದಾ... ಬಡಿದಾಟ, ಘರ್ಷಣೆ ತೀರಾ ಮಾಮೂಲಾಗಿ ಹೋಗಿದೆ. ಬದುಕುತ್ತಿರುವ ಸ್ಥ... ಕಾನೂನನ್ನು, ಸಂಸ್ಕೃತಿಯನ್ನು, ನೀತಿ-ನಿಯಮಾವಳಿಯನ್ನು ಪಾಲಿಸಬೇಕು ಎನ್ನುವ ಪರಿಜ್ಞಾನ... ಅವರಲ್ಲಿ ಇಲ್ಲ. ಇತ್ತೀಚೆಗೆ ಮನೆಮಾಲಿಕನ ತುಳಸಿಕಟ್ಟೆಯ ಮೇಲೆ ಕುಳಿತು ... ಕುಡಿಯುತ್ತಿರುವದನ್ನು ಮನೆಮಾಲಿಕ ವಿರೋಧಿಸಿದಾಗ, ನಾಲ್ಕಾರು ಜನರು ಸೇರಿ ಪುಂಡಾ... ಮಾಡಿದರಂತೆ. ಜನರು ಇಂದು ಅವರಿಗೆ ಬಾಡಿಗೆ ಮನೆ ಕೊಡಲೂ ಹಿಂಜರಿಯುತ್ತಾ... ತಮ್ಮ ನಿತ್ಯ ಪುಂಡಾಟಿಕೆಯಿಂದ ಅವರು ಸ್ಥಳೀಯರ ಅನುಕಂಪವನ್ನು ಕಳೆದುಕೊಳ್ಳುತ್ತಿದ್ದಾ... ನೈಜೀರಿಯಾ ಲಾಟರಿ ಹೆಸರಿನಲ್ಲಿ ಲಕ್ಷಾಂತರ ಅಮಾಯಕರನ್ನು ಬೀದಿಗೆ ತಳ್ಳಿದರು ಅವರನ್ನು ಕೇಳುವವರಿಲ್ಲ.

ವರ್ಷಗಳ ಹಿಂದೆ ಈಶಾನ್ಯ ಭಾರತದ ವಿದ್ಯಾರ್ಥಿ ಕೊಲೆಯಾದಾಗ ಇದೇ ರೀತಿ... ಪ್ರತಿಕ್ರಿಯೆ ವ್ಯಕ್ತವಾಗಿತ್ತು, ಕನ್ನಡಿಗರನ್ನು ಭಾಷಾಂಧರೆಂದು ಜರಿಯಲಾಗಿತ್ತು, ಕೇಂ... ಗೃಹಮಂತ್ರಿಗಳು ತಮ್ಮ ಕಾರ್ಯಬಾಹುಳ್ಯದ ಮಧ್ಯ ಅವಕಾಶಮಾಡಿಕೊಂಡು ಕರ್ನಾಟ... ಸರ್ಕಾರಕ್ಕೆ ಫೋನಾಯಿಸಿ ವಿಚಾರಿಸಿದ್ದರು. ಸಾವಿರಾರು ಜನರು ಗುಳೇ ಹೋಗಿದ್ದ... ಕರ್ನಾಟಕದ ಕೆಲವು ರಾಜಕಾರಣಿಗಳು ರೈಲು ನಿಲ್ದಾಣಕ್ಕೆ ಹೋಗಿ "ಹೋಗದಿರಿ ಸೋದರರ... ಎಂದು ಬೇಡಿಕೊಂಡಿದ್ದರು ಮತ್ತು ಈ ಶಾನ್ಯ ರಾಜ್ಯಗಳಿಗೆ ಹೋಗಿ ವಾಪಸ್ಸು ಬರುವ... ಕೇಳಿಕೊಂಡಿದ್ದರು. ಈಶಾನ್ಯ ರಾಜ್ಯದಲ್ಲಿ ಕರ್ನಾಟಕದ ವಿರುದ್ಧ ಪ್ರತಿಭಟನೆ ಮಾಡಿದ್ದ... ಮತ್ತು ಕರ್ನಾಟಕದ ವಸ್ತುಗಳನ್ನು ಬಹಿಷ್ಕರಿಸಲು ಕೇಳಿಕೊಂಡಿದ್ದರು. ಒಂದು ತೀ... ಸಾಮಾನ್ಯವಾದ ತ್ರಿಕೋನ ಪ್ರೇಮದ ವ್ಯವಹಾರ ಅಥವಾ ಚಾಟ್-ಚೀಟ್ ಗಲಾಟೆ... ಹಿನ್ನೆಲೆಯಲ್ಲಿ ನಡೆದ ಕೊಲೆಗೆ ಜನಾಂಗೀಯ ದ್ವೇಷದ ಬಣ್ಣವನ್ನು ಹಚ್ಚಿ ಕನ್ನಡಿ... ಮಾನವನ್ನು ಹರಾಜು ಹಾಕಲಾಗಿತ್ತು, ವಾಸ್ತವವಾಗಿ ಒಂದು ತಿಕ್ಕಾಟಕ್ಕೆ ನಡೆದ ... ತಿಕ್ಕಾಟಕ್ಕಿಂತ ಇನ್ನು ಯಾವ ವಿಶೇಷವೂ ಈ ಪ್ರಕರಣದಲ್ಲಿ ಇಲ್ಲ.

ದಶಕಗಳ ಹಿಂದೆ ಮುಂಬೈಯಲ್ಲಿ ಕನ್ನಡಿಗರ ಮೇಲೆ ಹಲ್ಲೆ ಮಾಡಿದಾಗ, ವರ್ಷಗ... ಹಿಂದೆ ಗೋವಾದಿಂದ ಕನ್ನಡಿಗರನ್ನು ಹೊರಕಳಿಸಿದಾಗ ಯಾರೂ ಅನುಕಂಪದ ಅಲೆಯ... ಹರಿಸಲಿಲ್ಲ, ದೆಹಲಿಯಿಂದ ಫೋನಾಯಿಸಿ ವಿಚಾರಿಸಲಿಲ್ಲ, ಟಿವಿ ವಾಹಿನಿಯವರು ಕಣ್ಣೀ... ಸುರಿಸಲಿಲ್ಲ, ಒಂದು ಸಾಮಾನ್ಯ ಘಟನೆಗೆ ಅಂತಾರಾಷ್ಟ್ರೀಯ ಪ್ರಚಾರ ಕೊಡುವ ಮ... ತನ್ಮೂಲಕ ಜಾಗತಿಕ ಸಿಟಿ ಎಂದು ಹೊರಹೊಮ್ಮುತ್ತಿರುವ ಬೆಂಗಳೂರಿನ ಮಾ... ಕಳೆಯುವ ಪ್ರಯತ್ನ ನಡೆದಿದೆ. ಇದರ ಹಿಂದೆ ಅಗೋಚರ ಶಕ್ತಿಯ ಕೈವಾಡವನ್ನು ಅಲ್ಲಗಳೆಯಲಾಗದು.

ಕಾಸ್ಮೋಪೊಲಿಟನ್ ಹೆಸರಿನಲ್ಲಿ ನಮ್ಮ ನಾಡು, ನುಡಿ, ಸಂಸ್ಕೃತಿ ನಶಿಸುತ್ತಿದ್ದರೂ ಹೊರಗಿನವರನ್ನು ಬರಮಾಡಿಕೊಳ್ಳುವ ಸಂಸ್ಕೃತಿ ನಮ್ಮದು. ಮನೆಯಲ್ಲಿರುವ ಬಾಡಿಗೆದಾರ... ಭಾಷೆಯನ್ನೇ ಕಲಿತು ಅವರಿಗೆ ಎಲ್ಲಾ ಅನುಕೂಲ ಮಾಡಿಕೊಡುವ ದೊಡ್ಡ ಮನಸ್ಸು ನಮ್ಮದು. ಹೊರಗಿನಿಂದ ಬಂದು ನಮ್ಮ ಮೇಲೆ ದಬ್ಬಾಳಿಕೆ ಮಾಡಿದರೂ ಸಹಿಸಿಕೊಳ್ಳುವವರು ನಾವು. ನಮ್ಮತನವನ್ನು ಸಂಪೂರ್ಣವಾಗಿ ಕಳೆದುಕೊಂಡು ಇಷ್ಟು ಉದಾರತೆ ತೋರಿಸಿದರೂ ಕನ್ನಡಿಗರನ್ನು ಜನಾಂಗೀಯ ದ್ವೇಷಿಗಳು ಎಂದು ಕರೆಯುವದು ತೀರಾ ವಿಷಾದಕರ.

-ರಮಾನಂದ ಶರ್ಮಾ, ಬೆಂಗಳೂ...

ವರಲಕ್ಷ್ಮೀ ಜತೆ ನಾನು ಕಂಡ ಕನಸು ನನಸಾಗಿದೆ

'ಮುಂಗಾರು ಮಳೆ' ಸಿನಿಮಾಗೆ ಕತೆ ಬರೆಯುವ ಮೂಲಕ ಸಿನಿಮಾ ಇಂಡಸ್ಟ್ರಿಗೆ ಪರಿಚಯ ಆದವರು ಪ್ರೀತಂ ಗುಬ್ಬಿ. ಅನಂತರ ಗಣೇಶ್‌ಗಾಗಿಯೇ ಸಿನಿಮಾ ನಿರ್ದೇಶನ ಮಾಡಿದರು. ಸದ್ಯ ಮತ್ತೊಂದು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಸಿನಿಮಾಗೆ ವಿಭಿನ್ನವಾದ ಶೀರ್ಷಿಕೆಯನ್ನೂ ಇಟ್ಟಿದ್ದಾರೆ.


ಕತೆಯನ್ನು ಬರೆಯುವ ಮೂಲಕ ಸಿನಿಮಾ ರಂಗದಲ್ಲಿ ಗುರುತಿಸಿಕೊಂಡವರು ನಿರ್ದೇಶಕ ಪ್ರೀತಂ ಗುಬ್ಬಿ. ಇವರು ಯೋಗರಾಜ್ ಭಟ್ ಗರಡಿಯಲ್ಲಿ ಬೆಳೆದವರು. ಅನಂತರ ಸ್ವತಂತ್ರವಾಗಿ ಸಿನಿಮಾ ನಿರ್ದೇಶನ ಮಾಡಿದರು. ಕೆಲವು ತಿಂಗಳ ಹಿಂದೆಯಷ್ಟೇ ಇವರ ನಿರ್ದೇಶನದ 'ಬಾಕ್ಸರ್' ಸಿನಿಮಾ ರಿಲೀಸ್ ಆಗಿದೆ. ಸದ್ಯ 'ನಾನು ಮತ್ತು ವರಲಕ್ಷ್ಮಿ' ಚಿತ್ರದ ಕೆಲಸದಲ್ಲಿ ಬಿಜಿ ಆಗಿದ್ದಾರೆ. ಇಲ್ಲಿ ತಮ್ಮ ಈ ಸಿನಿಮಾದ ಅನುಭವವನ್ನು ಹಂಚಿಕೊಂಡಿದ್ದಾರೆ.

** 'ನಾನು ಮತ್ತು ವರಲಕ್ಷ್ಮಿ' ಸಿನಿಮಾದ ಟೈಟಲ್ಲೇ ವಿಭಿನ್ನವಾಗಿದೆ. ಇಂತಹ ಯೋಚನೆ ಬಂದಿದ್ದು ಯಾವಾಗ?*

ಕತೆಯನ್ನು ಬರೆಯುವಾಗಲೇ ಟೈಟಲ್ ಕೂಡ ಹೊಳೆದದ್ದು. ಸಿನಿಮಾದ ಕತೆಗೂ ಮತ್ತು ಟೈಟಲ್‌ಗೂ ಸಂಬಂಧವಿದೆ. ಹೀಗಾಗಿಯೇ ಇಂಥದ್ದೊಂದು ಶೀರ್ಷಿಕೆ ಇಡಬೇಕಾಯಿತು. ಅಲ್ಲದೇ ಈ ಟೈಟಲ್ ಕ್ಯಾಚ್ ಆಗಿರುವುದರಿಂದ ಎಲ್ಲರಿಗೂ ಇಷ್ಟವಾಗಿದೆ.

** ಈ ಚಿತ್ರದ ಮೂಲಕ ಪೃಥ್ವಿ ಅನ್ನುವ ಹೊಸ ಹುಡುಗನನ್ನು ಸಿನಿಮಾ ರಂಗಕ್ಕೆ ಪರಿಚಯಿಸುತ್ತಿದ್ದೀರಿ. ಈ ಕುರಿತು ಹೇಳಿ.*

ಪೃಥ್ವಿಗೆ ಇದು ಹೊಸ ಸಿನಿಮಾ ಆಗಿರಬಹುದು.



ಆದರೆ, ಅವರಿಗೆ ಸಿನಿಮಾ ಹಿನ್ನೆಲೆ ಇದೆ. ಇವರು ಜಿ.ಕೆ.ವೆಂಕಟೇಶ್ ಅವರ ಮೊಮ್ಮಗ. ಹಾಗಂತ ಸುಮ್ಮನೆ ಸಿನಿಮಾ ರಂಗಕ್ಕೆ ಬರುತ್ತಿಲ್ಲ. ಪಾತ್ರಕ್ಕೆ ಬೇಕಿರುವ ಅಗತ್ಯ ತರಬೇತಿ ಪಡೆದುಕೊಂಡು ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದಾರೆ. ಅಲ್ಲದೇ ನಾಯಕನಾಗುವ ಎಲ್ಲಾ ಲಕ್ಷಣಗಳು ಅವರಿಗಿದೆ. ಹೀಗಾಗಿ ಸಿನಿಮಾ ರಂಗಕ್ಕೆ ಧೈರ್ಯವಾಗಿ ಪರಿಚಯಿಸುತ್ತಿದ್ದೇನೆ.

** ಸಿನಿಮಾದ ಕತೆ ಏನು? ಚಿತ್ರದಲ್ಲಿ ಏನೆಲ್ಲ ವಿಶೇಷತೆ ಇದೆ?*

ಸಿನಿಮಾದ ಹೆಸರೇ ಹೇಳುವಂತೆ ಇದೊಂದು ಪ್ರೇಮ ಕಥೆ. ಆ ಪ್ರೇಮ ಕಥೆಗೆ ಬೈಕ್ ರೇಸ್ ಕ್ರೇಜ್ ಅನ್ನು ಹೆಣೆದು ಚಿತ್ರಕಥೆ ಬರೆಯಲಾಗಿದೆ. ಭಾರತದಲ್ಲಿ ಮೋಟೋ ಕ್ರಾಸ್ ಬಗೆಗಿನ ಸಿನಿಮಾಗಳು ಬಂದಿರುವುದು ಬಹಳ ಕಡಿಮೆ. ಕನ್ನಡದಲ್ಲಿ ಇನ್ನಷ್ಟು ಕಡಿಮೆ. ಹಾಗಾಗಿ ಇಂತಹ ಕತೆಯನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಮೋಟೋ ಕ್ರಾಸ್ ಚಿತ್ರಗಳ ನಿರ್ಮಾಣ ಅಷ್ಟು ಸುಲಭವಲ್ಲ, ಸಾಕಷ್ಟು ಪರಿಶ್ರಮ ಬೇಕಾಗುತ್ತದೆ. ಅದಕ್ಕಾಗಿಯೇ ಹೊಸದಾಗಿ ಬೈಕ್ ಟ್ರ್ಯಾಕ್ ನಿರ್ಮಾಣ ಮಾಡಬೇಕಾಗಿ ಬಂತು. ಅಲ್ಲದೇ, ತುಂಬ ರಿಯಲಿಸ್ಟಿಕ್ ಆಗಿ ಶೂಟ್ ಮಾಡಿದ್ದೇವೆ. ದುಬೈ, ಶ್ರೀಲಂಕಾ ಹಾಗೂ ಭಾರತದ ಪ್ರಖ್ಯಾತ ಮೋಟೋ ಕ್ರಾಸ್ ಚಾಂಪಿಯನ್ಸ್ ಸಿನಿಮಾಗಾಗಿ ಕೆಲಸ ಮಾಡಿದ್ದಾರೆ. ಹತ್ತಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಮೋಟೋ ಕ್ರಾಸ್ ಚಾಂಪಿಯನ್ಸ್ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ.

** ನಿಮ್ಮ ಸಿನಿಮಾದಲ್ಲಿ ಪ್ರಕಾಶ್ ರೈ ಕೂಡ ವಿಭಿನ್ನ ಪಾತ್ರ ನಿರ್ವಹಿಸಿದ್ದಾರೆ. ಅವರ ಪಾತ್ರದ ಬಗ್ಗೆ ಹೇಳಿ?*

ನಾಯಕನ ಹೊರತಾಗಿ ಇನ್ನೆರಡು ವಿಭಿನ್ನ ಪಾತ್ರಗಳು ಬರುತ್ತವೆ. ಒಂದು ಪಾತ್ರವನ್ನು ಪ್ರಕಾಶ್ ರೈ ನಿರ್ವಹಿಸಿದ್ದಾರೆ. ಮತ್ತೊಂದು ಪಾತ್ರದಲ್ಲಿ ಮಧುಬಾಲ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ರೈ ಅವರು ರಿಟೈರ್ಡ್ ಮೋಟೋ ಕ್ರಾಸ್ ಚಾಂಪಿಯನ್ ಆಗಿ ಈ ಸಿನಿಮಾದಲ್ಲಿ ಕಾಣಿಸಿಕೊಂಡಿದ್ದು ವಿಶೇಷ. ಮಧುಬಾಲ ಅವರದ್ದು ಸ್ಪೆಷಲ್ ಅಪಿಯರೆನ್ಸ್ ಇದೆ.

** ರಿಯಲ್ ಚಾಂಪಿಯನ್ಸ್ ನಟಿಸಿದ್ದರಿಂದ ಶೂಟಿಂಗ್‌ಗೆ ಸಹಾಯ ಆಯಿತಾ? ಅಥವಾ ಕಷ್ಟ ಅನಿಸಿತಾ?*

ಕಷ್ಟವೂ ಆಯಿತು, ಸಹಾಯಕ್ಕೂ ಬಂತು. ರೇಸ್ ಅಂದರೆ ಅಲ್ಲಿ ಕೂಗಾಟ, ಗಲಾಟೆ ಇದ್ದದ್ದೆ. ಅಲ್ಲದೇ ಅವರು ವೃತ್ತಿನಿರತ ಚಾಂಪಿಯನ್ಸ್. ಆ್ಯಕ್ಷನ್ ಹೇಳಿದ್ದು ಮಾತ್ರ ಅವರಿಗೆ ಗೊತ್ತಾಗುತ್ತಿತ್ತು, ಕಟ್ ಹೇಳಿದ್ದು ಕೇಳಿಸ್ತಾನೇ ಇರಲಿಲ್ಲ. ಕಟ್ ಹೇಳಿದ್ದರೂ ಬೈಕ್ ಅದೆಷ್ಟೋ ದೂರ ಸಾಗಿರುತ್ತಿತ್ತು, ಅಲ್ಲದೇ, ಸಿನಿಮಾಗಾಗಿಯೇ ಅವರು ಹೊಸ ರೀತಿಯ ಟ್ರ್ಯಾಕ್ ರೆಡಿ ಮಾಡಿಸಿದ್ದರು. ಹೀಗಾಗಿ ಶೂಟಿಂಗ್‌ಗೂ ಅದು ಅನುಕೂಲ ಆಯಿತು.

** ಚಿತ್ರದ ಶೂಟಿಂಗ್‌ಗಾಗಿ ದುಬಾರಿ ಬೆಲೆಯ ಬೈಕ್‌ಗಳನ್ನು ತರಿಸಿದ್ದೀರಂತೆ?*

ನೀವು ನಂಬುತ್ತೀರೋ ಇಲ್ಲವೋ ಗೊತ್ತಿಲ್ಲ, ಐದೇ ಐದು ನಿಮಿಷದ ರೇಸ್ ದೃಶ್ಯಕ್ಕೆ ಬರೋಬ್ಬರಿ ಐವತ್ತು ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಅಲ್ಲದೇ ಅಲ್ಲಿ ಬಳಕೆಯಾದ ಬೈಕ್ ಕೂಡ ದುಬಾರಿಯವು. ಅಂತಹ ಬೈಕ್‌ಗಳನ್ನು ತರಿಸದೇ ಇದ್ದರೆ, ಶೂಟಿಂಗ್‌ಗೆ ಅರ್ಥವೇ ಇರುತ್ತಿರಲಿಲ್ಲ. ಹೀಗಾಗಿ ಸಾಕಷ್ಟು ಖರ್ಚು ಮಾಡಲಾಯಿತು. ■

ಭಾಷಣದಲ್ಲಿ ಉಲ್ಲೇಖಿಸುತ್ತಾ ಆ ಮೂಲಕ ತನ್ನ ಐವತ್ತಾರು ಇಂಚಿನ ಎದೆಗೂಡೊಳಗೆ ಇರುವ ಹೃದಯ ಐವತ್ತು ಇಂಚಿನ ಸುತ್ತಳತೆಗೂ ಕಮ್ಮಿಯಿಲ್ಲ ಎಂದು ತೋರಿಸುತ್ತಾನೆ. ಆದರೆ ಮೋದಿಯ ಹಿಂಬಾಲಕರೆನಿಸಿದವರು ಮಾತ್ರ ಈ ರೀತಿ ಬದಲಾಗುವುದನ್ನ ಬಿಟ್ಟು ಈಗ ಮಾಡುತ್ತಿರುವುದಾದರೂ ಏನು?

ಮಂಡ್ಯದಲ್ಲಿ ದಶಕಕ್ಕೂ ಹೆಚ್ಚುಕಾಲ ಒಡನಾಟ ಹೊಂದಿದ್ದ ಸ್ನೇಹಿತರು ಎರಡೂ ಕಡೆಯ ಪೋಷಕರ ಒಪ್ಪಿಗೆಯೊಂದಿಗೆ ಮದುವೆಯಾಗಹೊರಟಾಗ ಲವ್ ಜೆಹಾದ್ ಹೆಸರಲ್ಲಿ ಇದೇ ಚೆಡ್ಡಿ ಪಡೆ ರಂಪಾಟ ನಡೆಸಿತು, ಪುತ್ತೂರು ಮಹಾಲಿಂಗೇಶ್ವರನ ಜಾತ್ರೆಯ ಆಮಂತ್ರಣ ಪತ್ರಿಕೆಯಲ್ಲಿ ಡಿ ಸಿ ಇಬ್ರಾಹಿಂರ ಹೆಸರಿದ್ದುದಕ್ಕೆ ರಂಪಾಟ ತೆಗೆದು ದೊಡ್ಡ ರಾದ್ಧಾಂತವನ್ನೇ ಸೃಷ್ಟಿಸಿದವು. ಕಾಟಿಪಳ್ಳದ ಮಹಾಗಣಪತಿ ದೇವಸ್ಥಾನದ ವಠಾರದಲ್ಲಿ ಜಾತ್ರೆಗೆ ಸಂಬಂಧಿಸಿ ಅನ್ಯಮತೀಯರು ಅಂಗಡಿಯಿಡಲೇ ಕೂಡದೆಂದು ಬಹಿರಂಗವಾಗಿ ಬ್ಯಾನರ್ ಪ್ರದರ್ಶಿಸಿದರು. ಮೋದಿ ಬದಲಾದರೂ (?!!?) ಮೋದಿ ಹಿಂಬಾಲಕರು ಮಾತ್ರ ಬದಲಾಗಲೇ ಇಲ್ಲವೇ? ಅಥವ ಮೋದಿಯದ್ದೂ ಬರೀ ನಾಟಕ ಎಂಬುದು ಇವರಿಗೂ ಗೊತ್ತೇ? ಅಥವ ಸಾಬರನ್ನು ಕಂಡರೆ ಕರಗುವ ಮೋದಿಯೇ ಬೇರೆ (ಡುಬ್ಲಿಕೇಟ್) ಒರಿಜಿನಲ್ ಮೋದಿಯೇ ಬೇರೆಯೇ? ಮೋದಿ ಜೆರಾಕ್ಸ್ ಅಂದರೆ ಇದೇ ಏನು? ತಲೆ ಯಾವ ರೀತಿ ಕೆರೆದರೂ ಹೊಳೆಯುತ್ತಿಲ್ಲ ಛೇ..!!

ಬಹುಶಃ ಮೋದಿ ಜೆರಾಕ್ಸ್ ಕಥೆಯೇ ಸತ್ಯ ಇರಬಹುದೇನೋ. ಯಾಕೆಂದರೆ, ಸದ್ದಾಮ್, ಮುಸಲೋನಿ, ಹಿಟ್ಲರ್‌ನಂತಹ ಸರ್ವಾಧಿಕಾರಿಗಳು ಕ್ಲೋನಿಂಗ್ ತಂತ್ರಜ್ಞಾನ ಅಥವ ತಮ್ಮದೇ ಚಹರೆ ಹೋಲುವ ಡುಪ್ಲಿಕೇಟ್‌ಗಳ ಮೊರೆ ಹೋಗಿದ್ದರು (ಇತ್ತೀಚೆಗೆ ಸೈಮನಿ ರೇನೀ ಎನ್ನುವವರು ಬರೆದ **'Hitler in Brazil'** ಎನ್ನುವ ಪುಸ್ತಕ ಸುದ್ದಿ ಮಾಡಿತ್ತು, ಅದೆಂದರೆ ಹಿಟ್ಲರ್ ಸತ್ತಿಲ್ಲ, ಆತ ತನ್ನ ತೊಂಬತ್ತೈದನೇ ವಯಸ್ಸಿನವರೆಗೂ ಅಂದರೆ ಮೊನ್ನೆಮೊನ್ನೆವರೆಗೆ ಜೀವಂತವಿದ್ದ, ಅದೂ ಬ್ರೆಜಿಲ್‌ನ ಹಳ್ಳಿಯೊಂದರಲ್ಲಿ ಎಂದಿತ್ತು, ಹಾಗಾದರೆ ಜರ್ಮನಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ಹಿಟ್ಲರ್ ಯಾರು? ಡುಪ್ಲಿಕೇಟ್ ಹಿಟ್ಲರೇ? ಸದ್ದಾಮ್ ಮಗ ಉದ್ದೇ ಎಂಬಾತನ ಡುಪ್ಲಿಕೇಟ್ ಸೈನಿಕರೊಂದಿಗೆ ಸೇರಿ ಯುದ್ಧ ಮಾಡುತ್ತಾ ಸೈನಿಕರನ್ನು ಪ್ರೋತ್ಸಾಹಿಸುತ್ತಿದ್ದರೆ, ಒರಿಜಿನಲ್ ಉದ್ದೇ ಹುಡುಗಿಯರೊಂದಿಗೆ ಆ ಸಮಯದಲ್ಲಿ ಮಜಾ ಮಾಡುತ್ತಿದ್ದನಂತೆ) ಮೋದಿಯೂ ಹಿಟ್ಲರ್ ಭಕ್ತ ಸರ್ವಾಧಿಕಾರಿ ತಾನೆ? ಈ ದೇಶದಲ್ಲಿ ಹತ್ತಿಪ್ಪತ್ತು ಮೋದಿಗಳು ಇದ್ದರೂ ಇರಬಹುದು. ಅಂದರೆ ವಿದೇಶಿ ಟೂರ್ ಮೋದಿ, ಟ್ವೀಟ್ ಮಾಡುವ ಮೋದಿ, ಸಾಬರಿಗೆ ಬೈಯ್ಯುವ ಮೋದಿ, ಸಾಬರನ್ನು ಹೊಗಳುವ ಮೋದಿ... ಇತ್ಯಾದಿ ಇತ್ಯಾದಿ. ಮೋದಿ ಅಲೆ ಸಾರ್ ಇದು?

-ಅವಿನಾಶ್ ಎಮ್.ಎಸ್. ನೆಲ್ಲಿಕ್ಕಾರ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com ಗೆ ಮಿಡಿ
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ
ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.


ಯಡ್ಡಿಯ ಎರಡು ಬೆರಳುಗಳು ಮತ್ತು ಕರ್ಮಕಾಂಡಗಳು

ಯಡಿಯೂರಪ್ಪ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಅಮಿತ್ ಷಾನಿಂದ ನೇರವಾಗಿ ನೇಮಕಗೊಂಡ ಮೇಲೆ ಡಾ. ಅಂಬೇಡ್ಕರ್ ಜಯಂತಿಯಂದೇ ಅವರು ಅಧಿಕಾರ ಗ್ರಹಣ ಮಾಡಿದ್ದಾರೆ. ಮೊಟ್ಟಮೊದಲ ಬಾರಿಗೆ ಮುಖ್ಯಮಂತ್ರಿ ಆದಾಗ ವಿಧಾನಸಭೆಯ ಮುಖ್ಯಮಂತ್ರಿ ಚೇಂಬರ್‌ನಲ್ಲಿದ್ದ ಡಾ.ಅಂಬೇಡ್ಕರರ ಫೋಟೋ ತೆಗೆಸಿ ಬಿಸಾಕಿದ್ದು ಇದೇ ಯಡಿಯೂರಪ್ಪ, ಈಗ ನೋಡಿದರೆ ಡಾ.ಅಂಬೇಡ್ಕರ್ ಬಗ್ಗೆ ಯಡ್ಡಿಗೆ ಎಂತಹ ಭಯಂಕರ ಗೌರವ ಮತ್ತು (ನಕಲಿ) ಪ್ರೀತಿ ಉದ್ಭವಿಸಿದೆ ನೋಡಿ!

ನಿಜವಾಗಿ ಡಾ.ಅಂಬೇಡ್ಕರರು ಹೇಯ ಮನುವಾದ ಮತ್ತು ಮನುಸ್ಮೃತಿಯನ್ನು ಧಿಕ್ಕರಿಸಿದ್ದರು. ಆದರೆ ಈಗ ಬಿಜೆಪಿ ಪಕ್ಷದ ಒಬ್ಬ ಪಕ್ಕಾ ಜಾತಿವಾದಿಯು ಆ ಮನುವಾದಿ ಪಕ್ಷದ ರಾಜ್ಯಾಧ್ಯಕ್ಷನಾಗಿ ಮನುಸ್ಮೃತಿಯ ಮೇಲೆ ಕೈಯಿಟ್ಟು ಪ್ರಮಾಣ ವಚನ ಸ್ವೀಕರಿಸುವ ವಿಧಿಯನ್ನು ಡಾ. ಅಂಬೇಡ್ಕರರ ಜಯಂತಿಯಂದೇ ಮಾಡಿರುವುದು ನಿಜವಾಗಿ ಡಾ.ಅಂಬೇಡ್ಕರರಿಗೆ ಅವಮಾನ ಮಾಡಿದಂತೆ. ಏಪ್ರಿಲ್ ಮೊದಲ ವಾರದಲ್ಲಿ ಯಡ್ಡಿಯನ್ನು ರಾಜ್ಯದ ಬಿಜೆಪಿ ಅಧ್ಯಕ್ಷರನ್ನಾಗಿ ಘೋಷಿಸಿದಾಗ ಕೊನೆಗೆ ಹಳೆಯ ಹೆಂಡತಿಯ ಪಾದವೇ ಗತಿ ಎಂದು ಪತ್ರಿಕೆಗಳು ಬರೆದಿದ್ದವು. ಹಳೆಯ ಹೆಂಡತಿ ನೀತಿಗೆಟ್ಟವಳಾಗಿದ್ದರೂ ಮತಿಗೆಟ್ಟವಳಾಗಿದ್ದರೂ ಅವಳ ಕಾಲು ಹಿಡಿಯುವ ಗಂಡ (ಬಿಜೆಪಿ) ಸಹ ನೀತಿಗೆಟ್ಟವ ಮತಿಗೆಟ್ಟವ ಎಂದು ಜನರು ಆಡಿಕೊಳ್ಳುವುದು ಸಹಜ.

ಇನ್ನು ಹೋದಲ್ಲೆಲ್ಲಾ ನಾವು ಯಡ್ಡಿಯ ಎತ್ತಿದ ಕೈಯ ಎರಡು ಬೆರಳು ನೋಡುತ್ತಿರಬೇಕಾಗುತ್ತದೆ. ಇದೇ ಯಡ್ಡಿ ಜೈಲಿಗೆ ಹೋಗುವಾಗಲೂ ತನ್ನ ಎರಡು ಬೆರಳು ಎತ್ತಿ ತೋರಿಸಿದ್ದರು ಮತ್ತು ಬೇಲ್ ಪಡೆದು ಜೈಲಿನಿಂದ ಹೊರಬರುವಾಗಲೂ ಅವರು ವಿಜಯದ ಸಂಕೇತವಾದ ಎರಡು ಬೆರಳು ಎತ್ತಿ ಹಿಡಿದಿದ್ದರು. ಭ್ರಷ್ಟಾಚಾರದ ಆರೋಪದಲ್ಲಿ ಜೈಲಿಗೆ ಹೋಗುವುದು ಮತ್ತು ಜೈಲಿನಿಂದ ಬೇಲ್ ಪಡೆದು ಹೊರಬರುವುದು ಯಾವ ತರಹದ ವಿಜಯವಾಗಿತ್ತು ಎಂದು ಜನರಿಗೆ ಅರ್ಥವಾಗಿರಲಿಲ್ಲ. ಯಡ್ಡಿಯ ಎತ್ತಿದ ಎರಡು ಬೆರಳು ನಮಗೆ ನಮ್ಮ ಹಳ್ಳಿಯ ಪ್ರಾಥಮಿಕ ಶಾಲೆಯ ಶೌಚಾಲಯ ನೆನಪಿಸುತ್ತದೆ. ಕಾರಣ ನಾವು ಚಿಕ್ಕವರಾಗಿದ್ದಾಗ ನಮ್ಮ ಶಾಲೆಯಲ್ಲಿ ಶೌಚಾಲಯಕ್ಕೆ ಹೋಗಲು ಹೀಗೆ ಎರಡು ಬೆರಳು ಎತ್ತಿ ತೋರಿಸಿ ನಮ್ಮ ಶಿಕ್ಷಕರ ಅನುಮತಿ ಪಡೆಯುತ್ತಿದ್ದೆವು.

ಮುಖ್ಯಮಂತ್ರಿ, ಸಿದ್ದರಾಮಯ್ಯರ ಕಿರಿಯ ಪುತ್ರ ಡಾ.ಯತೀಂದ್ರ, ನಿರ್ದೇಶಕರಾಗಿರುವ ಸಂಸ್ಥೆಗೆ ಬೆಂಗಳೂರು ಸರ್ಕಾರಿ ವೈದ್ಯಕೀಯ ಕಾಲೇಜಿನ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಡಯಾಗ್ನಾಸ್ಟಿಕ್ ಲ್ಯಾಬ್ ಸ್ಥಾಪಿಸಲು ಅವಕಾಶ ನೀಡಿರುವುದನ್ನು



ಪ್ರಶ್ನಿಸಿ ಬಿಜೆಪಿ ದೊಡ್ಡ ವಿವಾದ ಸೃಷ್ಟಿಸಿದೆ. ಆದರೆ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಎಲ್ಲಾ ಸರಕಾರಿ ಟೆಂಡರ್‌ಗಳೂ ಯಡ್ಡಿಯ ಎರಡನೇ ಮಗ ವಿಜಯೇಂದ್ರ ಮತ್ತು ಅಳಿಯ ಸೋಹನ್ ಕುಮಾರ್ ಇವರಿಬ್ಬರ ಮಧ್ಯಸ್ಥಿಕೆಯಲ್ಲಿಯೇ ಇತ್ಯರ್ಥ ಆಗುತ್ತಿದ್ದದ್ದು ಬಿಜೆಪಿಯವರು ಮರೆತಂತೆ ಕಾಣುತ್ತದೆ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಅವರ ಮಗ ವಿಜಯೇಂದ್ರ ತಮಿಳುನಾಡಿನ ಒಂದು ಕಳ್ಳೇಪುರಿ ಮಾರುವ ಅಂಗಡಿಯಾದ 'ಕ್ರಿಸ್ಪಿ ಫ್ರಾಯ್ಡ್ ಗ್ರಾಂ' ಎಂಬವರಿಗೆ ಕರ್ನಾಟಕದ ಎಲ್ಲಾ ಅಂಗನವಾಡಿಗಳಿಗೆ ಪೌಷ್ಟಿಕ ಆಹಾರ ಪೂರೈಸುವ ಗುತ್ತಿಗೆ ಕೊಟ್ಟಿದ್ದರು. ಈ ಗುತ್ತಿಗೆಯ ಮೊತ್ತ ರೂ. 3,000 ಕೋಟಿ ರೂಪಾಯಿ. ಇದರಲ್ಲಿ ಯಡ್ಡಿಯ ಮಗನಿಗೆ 10% ಕಮಿಷನ್ ಸಿಕ್ಕರೂ ಮೊತ್ತ ಎಷ್ಟಾಗುತ್ತದೆ ಲೆಕ್ಕ ಹಾಕಿ. ಅಂಗನವಾಡಿಯೇನು ಕಿರಾಣಿ ಅಂಗಡಿಯಲ್ಲ, ಅದು ಹಳ್ಳಿಯ ಬಡವರ ಎಳೆ ಮಕ್ಕಳಿಗೆ ಹಾಗೂ ಬಡ ಗರ್ಭಿಣಿ ಹೆಂಗಸರಿಗೆ ಸರಕಾರದ ವೆಚ್ಚದಲ್ಲಿ ಪೌಷ್ಟಿಕ ಆಹಾರ ಒದಗಿಸುವ ಒಂದು ಪ್ರಮುಖ ಸಮಾಜ ಕಲ್ಯಾಣ ಯೋಜನೆ. ಆದರೆ ಯಡ್ಡಿಯ ಮಗ ವಿಜಯೇಂದ್ರನಿಂದಾಗಿ ಆ ತಮಿಳುನಾಡಿನ ಕಳಪೆ ಆಹಾರ ತಿಂದ ಸಾವಿರಾರು ಬಡಮಕ್ಕಳ ಆರೋಗ್ಯ ಹಾಳಾಗಿ ಕೆಲವು ಮಕ್ಕಳು ಸತ್ತವು ಹಾಗೂ ನೂರಾರು ಬಡ ಮಹಿಳೆಯರಿಗೆ ಗರ್ಭಪಾತವಾಯಿತು. ಹೀಗೆ ಲಕ್ಷಾಂತರ ಬಡ ಮಹಿಳೆಯರ ಮತ್ತು ಸಣ್ಣ ಮಕ್ಕಳ ಜೀವದೊಂದಿಗೆ ಆಟವಾಡಿದ ಯಡ್ಡಿಯ ಮಗ ವಿಜಯೇಂದ್ರನಿಗೆ ಯಾವುದೇ ಶಿಕ್ಷೆ ಆಗಲೇ ಇಲ್ಲ. ಯಾವುದೋ ನಿಸ್ಸಹಾಯಕ ಸರಕಾರಿ ಅಧಿಕಾರಿಗಳನ್ನು ಈ ಪ್ರಕರಣದಲ್ಲಿ ಬಲಿ ಕೊಡಲಾಯಿತು. ಬೆಣ್ಣೆ ತಿಂದ ವಿಜಯೇಂದ್ರ ಪಾರಾದ, ಆದರೆ ಬಾಯಿಗೆ ಮಸೆ ಒರೆಸಿಕೊಂಡ ಸರಕಾರಿ ಅಧಿಕಾರಿಗಳು ಕೆಲಸ ಕಳೆದುಕೊಂಡರು. ಇದಕ್ಕೆ ಹೋಲಿಸಿದರೆ ಸಿದ್ದು ಮಗ ಡಾ.ಯತೀಂದ್ರನ ಸರಕಾರಿ ಆಸ್ಪತ್ರೆಯ ಲ್ಯಾಬ್ ಗುತ್ತಿಗೆಯಲ್ಲಿ ನಿಯಮ ಬಾಹಿರ ಅಥವಾ ಬಡಜನತೆಯ ಜೀವಕ್ಕೆ ಅಪಾಯವಾಗುವಂತಹದ್ದು ಏನೇನೂ ಇರಲಿಲ್ಲ, ಅಷ್ಟೇ ಅಲ್ಲ ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಇನ್ನೂ ಹಲವಾರು ದೊಡ್ಡ ಯೋಜನೆಗಳ ಫೈಲ್ ಕೊನೆಯ ಸ್ಟೇಜಿನಲ್ಲಿ ಮುಖ್ಯಮಂತ್ರಿಗಳ ಅನುಮೋದನೆ ಅಥವಾ ಮಂಜೂರಾತಿಗೆ ಅವರ ಚೇಂಬರಿಗೆ ಹೋಗುತ್ತಿದ್ದವು. ಆದರೆ ಆ ಫೈಲುಗಳು ಯಡ್ಡಿಯ ಪೂರ್ಣ ಹಸ್ತಾಕ್ಷರದ ಬದಲು ಒಂದು ಸಣ್ಣ ಇನಿಷಿಯಲ್ ಹೊತ್ತು ಮಂಜೂರಾಗಿ ಹೊರಬರುತ್ತಿದ್ದವು. ಆದರೆ ಈ ಮಂಜೂರಾತಿಯ ಸಣ್ಣ ಇನಿಷಿಯಲ್ ಹಾಕುತ್ತಿದ್ದವರು ಯಡ್ಡಿ ಆಗಿರದೇ ಅವರ ಕುಟುಂಬದ ಸದಸ್ಯರೇ ಫೋರ್ಜರಿ ಮಾಡುತ್ತಿದ್ದರು ಎಂಬ ಆರೋಪಗಳಿದ್ದವು. ದುರದೃಷ್ಟವಶಾತ್ ಲೋಕಾಯುಕ್ತ ಸಂತೋಷ್ ಹೆಗ್ಡೆಯವರು ಯಡ್ಡಿಯ ವಿರುದ್ಧದ ಬೇರೆ ಎಲ್ಲಾ ಆರೋಪಗಳ ತನಿಖೆ ಮಾಡಿದರಾದರೂ ಸರಕಾರಿ ಫೈಲುಗಳಲ್ಲಿ ಮಂಜೂರಾತಿ ಕೊಡುವಾಗ ಮುಖ್ಯಮಂತ್ರಿಗಳು ತಮ್ಮ ಪೂರ್ಣ ಹಸ್ತಾಕ್ಷರ ಯಾಕೆ ಹಾಕಲಿಲ್ಲ ಎಂದು ವಿಚಾರಣೆ ಮಾಡಲೇ ಇಲ್ಲ. ಬೇರೆ ಯಾರೋ ಯಡ್ಡಿಯ ಸಣ್ಣ ಇನಿಷಿಯಲ್ಲನ್ನು ಫೋರ್ಜರಿ ಮಾಡಿ ಅತ್ಯಂತ ಮುಖ್ಯ ಫೈಲುಗಳಿಗೆ ಮುಖ್ಯಮಂತ್ರಿಯೇ ಮಂಜೂರಾತಿ ಕೊಟ್ಟಂತೆ ಸನ್ನಿವೇಶ ಸೃಷ್ಟಿಸಿದ ಆರೋಪಗಳು ಕೊನೆಗೂ ಲೋಕಾಯುಕ್ತರಿಂದ ತನಿಖೆ ಆಗಲೇ ಇಲ್ಲ. ಭಾರತದ ಯಾವುದೇ ರಾಜ್ಯದ ಮುಖ್ಯಮಂತ್ರಿಯೂ ಪ್ರಮುಖ ವಿಷಯಗಳ ಮಂಜೂರಾತಿ ಅಥವಾ ಅನುಮೋದನೆ ನೀಡುವಾಗ ಫೈಲ್ ಮೇಲೆ ತನ್ನ ಪೂರ್ಣ ಹಸ್ತಾಕ್ಷರ ಮಾಡಲೇಬೇಕಾದುದು ಕಾನೂನುಪ್ರಕಾರ ಕಡ್ಡಾಯ. ಆದರೆ ಯಡ್ಡಿಯ ಆಡಳಿತದಲ್ಲಿ ಕೇವಲ ಸಣ್ಣ ಇನಿಷಿಯಲ್ಲಿನಿಂದಲೇ ದೊಡ್ಡ ದೊಡ್ಡ ಮಂಜೂರಾತಿಗಳು ನಡೆದುಹೋಗುತ್ತಿದ್ದ ರಹಸ್ಯ ಲೋಕಾಯುಕ್ತರು ಬಯಲುಗೊಳಿಸಲೇಇಲ್ಲ. ಇಲ್ಲದಿದ್ದರೆ ಯಡ್ಡಿಯ ಮಕ್ಕಳ ಇನ್ನೂ ಎಷ್ಟೋ ಕರ್ಮಕಾಂಡಗಳು ಹೊರಬರುತ್ತಿದ್ದವು. ಸಿಂಡಿಕೇಟ್ ಬ್ಯಾಂಕಿನಲ್ಲಿ ಸಾಧಾರಣ ಗುಮಾಸ್ತನಾಗಿದ್ದ ಯಡ್ಡಿಯ ಅಳಿಯ ಸೋಹನ್‌ಕುಮಾರ್ ಭ್ರಷ್ಟಾಚಾರ ಮಾಡದೇ ಪ್ರಾಮಾಣಿಕವಾಗಿ ಕೋಟ್ಯಾಧಿಪತಿಯಾದ ರಹಸ್ಯವೇನೆಂದು ಹೇಳಿದರೆ ಅದನ್ನು ಅನುಸರಿಸಿ ತಾವೂ ಪ್ರಾಮಾಣಿಕ ಕೋಟ್ಯಾಧೀಶರಾಗಲು ಆ ಬ್ಯಾಂಕಿನ ಎಲ್ಲಾ ಗುಮಾಸ್ತರು ತುದಿಗಾಲಲ್ಲಿ ನಿಂತಿದ್ದಾರಂತೆ.

-ರಾಮಕೃಷ್ಣ ಕುಲಾಲ್, ಬೆಂಗಳೂರು

ಅಂಕೋಲಾದ 'ಮಯೂರ ನಾಯಕ ಅರಮನೆ ಆವರಣದಲ್ಲಿ ಪತ್ರಕರ್ತ ರಮೇಶ್ ಮೇಲೆ ನಡೆದ ಹಲ್ಲೆ' ಪ್ರಕರಣಕ್ಕೆ ಸಂಬಂಧಿಸಿ ಪ್ರಕಟವಾದ ಸುದ್ದಿಯಲ್ಲಿ ಸಂಗಾತಿ ರಂಗಭೂಮಿಯ ಎಲ್ಲ ಕಾರ್ಯಕ್ರಮಗಳಿಗೆ ಮಯೂರ ನಾಯಕ ಪ್ರಾಯೋಜಕರಾಗಿ ನೆರವು ನೀಡುತ್ತಿದ್ದರು ಎಂದು ಪ್ರಕಟವಾಗಿದೆ. ಆದರೆ ವಾಸ್ತವ ಸಂಗತಿ ಏನೆಂದರೆ ಮಯೂರ ನಾಯಕನಿಂದ ಸಂಗಾತಿ ರಂಗಭೂಮಿ ಯಾವುದೇ ಕಾರ್ಯಕ್ರಮಗಳಿಗೆ ನೆರವು ಪಡೆದದ್ದು ಇರುವುದಿಲ್ಲ. 2014 ನವೆಂಬರ್ 1ರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಸ್ಮರಣಿಕೆ ಮಾಡಿಸಿಕೊಟ್ಟಿದ್ದು ಬಿಟ್ಟರೆ ಬೇರೆ ಯಾವ ಕಾರ್ಯಕ್ರಮಕ್ಕೆ ನೆರವು ಪಡೆದದ್ದು ಇರುವುದಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇನೆ ಹಾಗೂ ಸುದ್ದಿಗೆ ಸಂಬಂಧಿಸಿ ವಿವರಣೆ ನೀಡಲು ಆತನ ಜತೆಗೆ ಅವಲತ್ತುಕೊಂಡಿದ್ದು ಇರುವುದಿಲ್ಲ, ಘಟನೆ ನಡೆದ ದಿನ ನನ್ನ ಜತೆ ಜಗದೀಶ ನಾಯಕ ಮಾಸ್ತರ ಒಬ್ಬರೇ ಬಂದವರಲ್ಲ, ಗೋಪಾಲಕೃಷ್ಣ ನಾಯಕ ಎಂಬುವವರೂ ಕೂಡ ಇದ್ದರು.

-ಕೆ. ರಮೇಶ್, ಅಂಕೋಲಾ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 11-05-2016 RNI No. KARKAN2000

ಧೈರ್ಯವಂತೆ ನಿಖಿತಾ

ದರ್ಶನ್ ಪ್ರಕರಣದ ನಂತರ ನಿಖಿತಾ ತುಕ್ರಾಲ್ ಕನ್ನಡ ಚಿತ್ರಗಳನ್ನು ಒಪ್ಪಿಕೊಳ್ಳಲಿಲ್ಲ, ಅವರನ್ನು ಮತ್ತೆ ಕರ್ನಾಟಕಕ್ಕೆ ಕರೆತರುವ ಪ್ರಯತ್ನ ಯಾರೂ ಮಾಡಲಿಲ್ಲ, ಬಹುದಿನಗಳ ನಂತರ ನಿಖಿತಾ ಬೆಂಗಳೂರಿನಲ್ಲಿ ಕಾಣಿಸಿಕೊಂಡಿದ್ದಾರೆ. ಕಾಮಿಡಿ ಕಲಾವಿದ ಚಿಕ್ಕಣ್ಣ ಜತೆ 'ತಲೆ ಬಾಚ್ಕೊಳ್ಳಿ ಪೌಡ್ರು ಹಾಕ್ಕೊಳ್ಳಿ' ಅನ್ನುವ ಚಿತ್ರದಲ್ಲಿ ನಟಿಸಿದ್ದಾರೆ. ಈ ಚಿತ್ರವು ಮೇ 6ರಂದು ರಾಜ್ಯಾದ್ಯಂತ ರಿಲೀಸ್ ಆಗುತ್ತಿದೆ. ಹೀಗಾಗಿ ಪ್ರಮೋಷನ್‌ಗಾಗಿ



ನಿಖಿತಾ ಬೆಂಗಳೂರಿನಲ್ಲೇ ಬೀಡುಬಿಟ್ಟಿದ್ದಾರೆ. ದರ್ಶನ್ ವಿವಾದದ ನಂತರ ನಿಖಿತಾರನ್ನು ಬಲವಂತವಾಗಿ ಬೆಂಗಳೂರಿನಿಂದ ಕಳುಹಿಸಲಾಗಿತ್ತು, ಕನ್ನಡ ಸಿನಿಮಾದಲ್ಲಿ ನಟಿಸದಂತೆ ನೋಡಿಕೊಳ್ಳಲಾಗಿತ್ತು. ಈಗ ಮತ್ತೆ ಬೆಂಗಳೂರಿಗೆ ಬರುವ ಮೂಲಕ ವಿರೋಧಿಗಳಿಗೆ ಸೆಡ್ಡು ಹೊಡೆದಿದ್ದಾರೆ ನಿಖಿತಾ. ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲೇ ನೆಲೆಯೂರುವುದಾಗಿ ಹೇಳಿಕೊಂಡಿದ್ದಾರೆ. ಸದ್ಯ ಅವರು ಎರಡು ಚಿತ್ರಗಳಲ್ಲಿ ನಟಿಸುತ್ತಿದ್ದಾರೆ. ಅದರಲ್ಲಿ ಉಪೇಂದ್ರ ಮತ್ತು ಸುದೀಪ್ ಕಾಂಬಿನೇಷನ್‌ನ ಚಿತ್ರ ಕೂಡ ಒಂದು. ಈ ಚಿತ್ರವೇ ನಿಖಿತಾಗೆ ಧೈರ್ಯ ತಂದಿದೆಯಂತೆ. ಅಲ್ಲದೇ ಮೊನ್ನೆಯಷ್ಟೇ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ. ಈ ಚಿತ್ರಕ್ಕೆ ಅನಿರುದ್ಧ ನಾಯಕ. ಒಂದೂವರೆ ವರ್ಷಗಳ ಕಾಲ ಮಾನಸಿಕ ಹಿಂಸೆ ಅನುಭವಿಸಿದ ಈ ನಟಿ ಇಂದು ಮತ್ತೆ ಸಿಡಿದೆದ್ದಿದ್ದಾರೆ. ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲು ಮುಂದಾಗಿದ್ದಾರೆ.

ನಿಖಿಲ್‌ಗೆ ತಂದೆ ಕೊಟ್ಟ ದುಬಾರಿ ಗಿಫ್ಟ್

ಪುತ್ರ ನಿಖಿಲ್‌ಗಾಗಿ ಭಾರೀ ಮೊತ್ತದ ಗಿಫ್ಟ್ ಕೊಟ್ಟಿದ್ದಾರೆ ಕುಮಾರಸ್ವಾಮಿ. ಮಗನ ಚಿತ್ರವು ಅದ್ದೂರಿಯಾಗಿ ಮೂಡಿಬರಲೆಂದು, ವೆಪನ್ ಕ್ಯಾಮೆರಾವನ್ನು ಉಡುಗೊರೆಯಾಗಿ ನೀಡಿದ್ದಾರಂತೆ. ಸಾಮಾನ್ಯವಾಗಿ ಈ ಕ್ಯಾಮೆರಾವನ್ನು ಹಾಲಿವುಡ್‌ನಲ್ಲಿ ಬಳಸಲಾಗುತ್ತದೆ. ಇದೇ ಮೊದಲ ಬಾರಿಗೆ ಕನ್ನಡ ಚಿತ್ರದಲ್ಲಿ ಇದು ಬಳಕೆ ಆಗುತ್ತಿದೆ. "ಈ ಕ್ಯಾಮೆರಾ ಇನ್ನೂ ಬಾಲಿವುಡ್‌ಗೂ ಬಂದಿಲ್ಲ, ಇದನ್ನು ಮುಂಗಡವಾಗಿ ಕಾಯ್ದಿರಿಸಿದರೆ ಮಾತ್ರ ಸಿಗುತ್ತದೆ. ಹೀಗಾಗಿ ಮುಂಗಡವಾಗಿ ಕಾಯ್ದಿರಿಸಿ, ನನ್ನ ತಂದೆ ನನ್ನ ಹುಟ್ಟುಹಬ್ಬಕ್ಕೆ ಇದನ್ನು



ತರಿಸಿಕೊಟ್ಟಿದ್ದಾರೆ. ವಿದೇಶಿ ತೆರಿಗೆ ನಿಯಮಗಳನ್ನು ದಾಟಿ ಬರಲು ಹೆಚ್ಚಿನ ಸಮಯ ಬೇಕಾಯಿತು" ಅಂದಿದ್ದಾರೆ ನಿಖಿಲ್. ಈ ಕ್ಯಾಮರಾದಿಂದ ಆಗಲೇ ಚಿತ್ರೀಕರಣವನ್ನೂ ಪ್ರಾರಂಭಿಸಿದ್ದಾರಂತೆ. ಐವತ್ತಕ್ಕೂ ಹೆಚ್ಚು ದಿನಗಳ ಕಾಲ ಶೂಟಿಂಗ್ ಆಗಿದೆ. ಔಟ್‌ಪುಟ್ ಕೂಡ ಚೆನ್ನಾಗಿಯೇ ಮೂಡಿಬಂದಿದೆಯಂತೆ. ಹೀಗಾಗಿ ನಿಖಿಲ್ ಖುಷಿಯಲ್ಲಿದ್ದಾರೆ. ಅಂದುಕೊಂಡಂತೆ ಆದರೆ, ಈ ಚಿತ್ರ ಜೂನ್‌ನಲ್ಲಿ ತೆರೆಕಾಣಲಿದೆ. ಮಾತಿನ ಭಾಗದ ಬಹುತೇಕ ಚಿತ್ರೀಕರಣ ಮುಗಿದಿದೆ. ಸಾಹಸ ಸನ್ನಿವೇಶಗಳನ್ನು ಸದ್ಯ ಶೂಟ್ ಮಾಡುತ್ತಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ ಹಾಡುಗಳ ಶೂಟಿಂಗ್‌ಗೆ ಪ್ಲಾನ್ ಮಾಡಿದ್ದಾರಂತೆ ನಿರ್ದೇಶಕರು.

ಕೋಪಗೊಂಡಿದ್ದಾರೆ ಗಣೇಶ್



ಗಣೇಶ್ ಕೋಪಗೊಂಡಿದ್ದಾರೆ. 'ಸ್ಟೈಲ್‌ಕಿಂಗ್' ಚಿತ್ರದ ನಿರ್ದೇಶಕ ಪಿ.ಸಿ.ಶೇಖರ್ ವಿರುದ್ಧ ಹರಿಹಾಯ್ದಿದ್ದಾರೆ. ಗೋಲ್ಡನ್ ಸ್ಟಾರ್‌ಗೆ ಈ ಪರಿ ಸಿಟ್ಟು ಬರಲು ಕಾರಣ ಶೇಖರ್ ವರ್ತನೆ ಎನ್ನುವುದು ಗುಟ್ಟಾಗಿ ಉಳಿದಿಲ್ಲ, 'ಸ್ಟೈಲ್‌ಕಿಂಗ್' ಚಿತ್ರ ಎಂಟು ತಿಂಗಳ ಹಿಂದೆಯೇ ರಿಲೀಸ್ ಆಗಬೇಕಿತ್ತು, ಈ ಕುರಿತು ನಿರ್ದೇಶಕರು ಪ್ರಚಾರ ಕೂಡ ಮಾಡಿದ್ದರು. ಆದರೆ ಅದು ಆಗಲಿಲ್ಲ, ಆನಂತರ ಎರಡ್ಮೂರು ಬಾರಿ ರಿಲೀಸ್ ಡೇಟ್ ಮುಂದೆ ಹೋಯಿತು. ಮೊನ್ನೆಯಷ್ಟೇ ಮೇ 6ಕ್ಕೆ ಸಿನಿಮಾ ಬಿಡುಗಡೆ ಮಾಡುವುದಾಗಿ ಶೇಖರ್ ಹೇಳಿದ್ದರು. ಈಗ ಅದೂ ಆಗುತ್ತಿಲ್ಲ, ಹೀಗಾಗಿ ಗಣೇಶ್ ಕೋಪ ಮಾಡಿಕೊಂಡಿದ್ದಾರೆ. ಮುಂದಿನ ಚಿತ್ರಗಳಿಗೆ ತೊಂದರೆ ಮಾಡಿದರೆ, ಅದರ ಪರಿಣಾಮ ಬೇರೆ ರೀತಿ ಆಗಿರುತ್ತದೆ ಎಂದು ಖಡಕ್ಕಾಗಿಯೇ ಉತ್ತರ ಕೊಟ್ಟಿದ್ದಾರಂತೆ. ಮೇ 20ಕ್ಕೆ 'ಜೂಮ್' ಚಿತ್ರ ರಿಲೀಸ್ ಆಗುತ್ತಿದೆ. ಆನಂತರ 'ಪಟಾಕಿ' ತೆರೆ ಕಾಣಬೇಕು. 'ಮುಂಗಾರು ಮಳೆ 2' ಕೂಡ ಬಿಡುಗಡೆಯ ಹಾದಿಯಲ್ಲಿದೆ. ಈ ಮೂರು ಚಿತ್ರಗಳು ರಿಲೀಸ್ ಆಗುವವರೆಗೂ ಹೊಸ ಸಿನಿಮಾ ಒಪ್ಪಿಕೊಳ್ಳುವುದು ಅಸಾಧ್ಯ, ಇದು ಕೂಡ ಗಣೇಶ್ ಕೋಪಕ್ಕೆ ಕಾರಣವಾಗಿದೆಯಂತೆ.

ಯು ಟರ್ನ್ ಹೊಡೆದ ಸಮಂತಾ

ಪವನ್ ಕುಮಾರ್ ನಿರ್ದೇಶನದಲ್ಲಿ ಮೂಡಿಬಂದಿರುವ 'ಯು ಟರ್ನ್' ಚಿತ್ರ ತೆಲುಗಿಗೆ ರೀಮೇಕ್ ಆಗಲಿದೆ ಅನ್ನುವ ಸುದ್ದಿ ಹಬ್ಬಿತ್ತು, ಈ ಚಿತ್ರವನ್ನು ಬೆಂಗಳೂರಿಗೆ ಬಂದು ನೋಡಿಕೊಂಡುಹೋಗಿದ್ದ ನಟಿ ಸಮಂತಾ ಅವರೇ ನಿರ್ಮಾಣ ಮಾಡಲಿದ್ದಾರೆಂದು ಪವನ್ ಹೇಳಿದ್ದರು. ಈಗ ಸಮಂತಾ ಯೂ ಟರ್ನ್ ಹೊಡೆದಿದ್ದಾರೆ. ಈ ಚಿತ್ರದ ನಿರ್ಮಾಣದಿಂದ ಅವರು ಹಿಂದೆ ಸರಿದಿದ್ದಾರೆ. ಸಮಂತಾ ಜತೆ ನಟ ನಾಗಚೈತನ್ಯ ಕೂಡ ಸಿನಿಮಾ ವೀಕ್ಷಿಸಿದ್ದರು. ತೆಲುಗು ಹಾಗೂ ತಮಿಳು ಭಾಷೆಗೆ ಇದನ್ನು ರೀಮೇಕ್ ಮಾಡಲು ಉತ್ಸಾಹ ತೋರಿದ್ದರು. ಆನಂತರ ಕೈ ಎತ್ತಲು ಕಾರಣವೇನು ಅಂತ ಗೊತ್ತಾಗಿಲ್ಲ,



ಗಾಂಧಿನಗರದಲ್ಲಿ ಹಬ್ಬಿರುವ ಸುದ್ದಿಯ ಪ್ರಕಾರ 'ಲೂಸಿಯಾ' ಚಿತ್ರ ಬೇರೆ ಭಾಷೆಯಲ್ಲಿ ಹಣ ಗಳಿಸಲಿಲ್ಲ. ಅಲ್ಲಿನ ಪ್ರೇಕ್ಷಕರು ಅದನ್ನು ತೆಗೆದುಕೊಳ್ಳಲಿಲ್ಲ, ಈ ವಿಷಯ ಗೊತ್ತಾಗಿ ಯು ಟರ್ನ್ ಹೊಡೆದಿದ್ದಾರೆ ಎನ್ನಲಾಗುತ್ತಿದೆ.

ಈ ಹಿಂದೆಯೂ ಪವನ್‌ಗೆ ಇಂಥದ್ದೊಂದು ಅನುಭವ ಆಗಿದೆ. 'ಲೂಸಿಯಾ' ಚಿತ್ರವನ್ನು ತಮಿಳು ಮತ್ತು ತೆಲುಗಿಗೆ ಇವರೇ ನಿರ್ದೇಶನ ಮಾಡಲಿದ್ದಾರೆ ಅನ್ನುವ ಸುದ್ದಿಯಾಗಿತ್ತು, ಪವನ್ ಕೂಡ ಅಲ್ಲಿಗೆ ಹೋಗಲು ರೆಡಿ ಆಗಿದ್ದಾರೆ. ಕೊನೆಯ ಕ್ಷಣದಲ್ಲಿ ಎಲ್ಲವೂ ಬದಲಾಯಿತು.

ಪೂನಂಗೆ ಒಂದು ಕೋಟಿ

ಬಾಲಿವುಡ್ ನಟಿ ಪೂನಂ ಪಾಂಡೆಗೆ ಕೊಟ್ಟ ಸಂಭಾವನೆ ಸ್ಯಾಂಡಲ್‌ವುಡ್‌ನಲ್ಲಿ ಸಂಚಲನವುಂಟುಮಾಡಿದೆ. ಇನ್ನೂ ಹೆಸರಿಡದ ಚಿತ್ರಕ್ಕೆ ನಿರ್ದೇಶಕ ಕಂ ನಿರ್ಮಾಪಕ ಯುವರಾಜ್ ಭಾರೀ ಮೊತ್ತವನ್ನೇ ಕೊಟ್ಟಿದ್ದಾರಂತೆ. ಕನ್ನಡದ ಸ್ಟಾರ್ ನಟಿಯರು ತೆಗೆದುಕೊಳ್ಳುವ ಸಂಭಾವನೆಯಷ್ಟೇ ಆ ಮೊತ್ತ ಇದೆ ಅನ್ನುವುದು ಮಾತ್ರ ಅಚ್ಚರಿಯ ಸಂಗತಿ.

ಪೂನಂ ಪಾಂಡೆ ಕನ್ನಡದಲ್ಲಿ ಕಾಣಿಸಿಕೊಳ್ಳುವುದು ಹೊಸದೇನೂ ಅಲ್ಲ, ಹಳ್ಳಿಹೈದ ರಾಜೇಶ್ ನಟನೆಯ 'ಲವ್ ಇಸ್ ಪಾಯಿಸನ್' ಚಿತ್ರದ ಹಾಡೊಂದರಲ್ಲಿ ಇವರು ಕಾಣಿಸಿಕೊಂಡಿದ್ದರು. ಈ ಹಾಡಿಗೆ ಹೆಜ್ಜೆ ಹಾಕಲು ಪೂನಂ ಬರೋಬ್ಬರಿ ಇಪ್ಪತ್ತೈದು ಲಕ್ಷ ತೆಗೆದುಕೊಂಡಿದ್ದರು. ಹೀಗಾಗಿ ಈ ಚಿತ್ರಕ್ಕಾಗಿ ಪಾಂಡೆಗೆ ಒಂದು ಕೋಟಿ ರೂಪಾಯಿ ನೀಡಲಾಗಿದೆಯಂತೆ.



ಕನ್ನಡದ ನಟಿಯರಲ್ಲಿ ಹೆಚ್ಚು ಸಂಭಾವನೆ ತೆಗೆದುಕೊಳ್ಳುತ್ತಿದ್ದವರು ರಮ್ಯಾ. ಚಿತ್ರವೊಂದಕ್ಕೆ ಅವರು 20 ರಿಂದ 30 ಲಕ್ಷ ತೆಗೆದುಕೊಳ್ಳುತ್ತಿದ್ದರು. ಆನಂತರ ಬಂದ ನಟಿಯರು ಇಪ್ಪತ್ತನ್ನೂ ದಾಟಿಲ್ಲ, ಆದರೆ, ಬಾಲಿವುಡ್ ನಟಿಗೆ ಭಾರೀ ಮೊತ್ತ ಕೊಟ್ಟಿದ್ದು ಚರ್ಚೆಗೆ ಗ್ರಾಸವಾಗಿದೆ. ಇಷ್ಟೊಂದು ದುಡ್ಡು ಸುರಿದಿದ್ದಕ್ಕೆ ಕಾರಣವೂ ಇದೆಯಂತೆ. ಇದು ರೋಮ್ಯಾಂಟಿಕ್ ಥ್ರಿಲ್ಲರ್ ಕತೆ ಆಗಿದೆಯಂತೆ. ಅಲ್ಲದೇ ಚಿತ್ರದಲ್ಲಿ ಪೂನಂ ಹಾಟ್ ಆಗಿ ಕಾಣಿಸಿಕೊಳ್ಳಬೇಕಂತೆ. ಹೀಗಾಗಿ ಪೂನಂ ಪರ್ಸ್ ತುಂಬಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com